
ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಮೈಕಪ್ಪಿನ ಕೀಳರಿಮೆಯನ್ನು ಮೇಕಪ್ಪಿನ ಬಲದಿಂದ ಮೆಟ್ಟಿ ನಿಲ್ಲುವ ಮನೋಭಾವವನ್ನೇ ಅಲುಗಾಡಿಸಿದ ಪ್ರಶ್ನೆಯೊಂದಿದೆ...



ಜೆಡಿಎಸ್– ಕೋಡಿಹಳ್ಳಿ ಬೆಂಬಲಿಗರ ಮಾರಾಮಾರಿ 7

ಅಡುಗೆ ಎಣ್ಣೆಗಳ ಮೇಲಿನ ಆಮದು ಸುಂಕ ಇಳಿಕೆ ಪರಿಣಾಮ

ಕೋವಿಡ್: ತಗ್ಗಿದ ಕಲಿಕೆಯ ಆಸಕ್ತಿ 3A

ಕುಸಿಯುತ್ತಿದೆ ಕೊಬ್ಬರಿ ಧಾರಣೆ 8

ಬಾಲಕನಿಗೆ ಪ್ರಯಾಣ ನಿರಾಕರಣೆ: ಇಂಡಿಗೊಗೆ ₹ 5 ಲಕ್ಷ ದಂಡ

ನವದೆಹಲಿ (ಪಿಟಿಐ): ರಾಂಚಿ ವಿಮಾನ ನಿಲ್ದಾಣದಲ್ಲಿ ಅಂಗವಿಕಲ ಬಾಲಕನಿಗೆ ವಿಮಾನ ಪ್ರಯಾಣಕ್ಕೆ ಅವಕಾಶ ನಿರಾಕರಿಸಿದ್ದ ಪ್ರಕರಣಕ್ಕೆ ಸಂಬಂಧಿಸಿ ಇಂಡಿಗೊ ಏರ್‌ಲೈನ್ಸ್‌ಗೆ ₹ 5 ಲಕ್ಷ ದಂಡ ವಿಧಿಸಲಾಗಿದೆ ಎಂದು ನಾಗರಿಕ ವಿಮಾನಯಾನ ಮಹಾ ನಿರ್ದೇಶನಾಲಯ (ಡಿಜಿಸಿಎ) ಶನಿವಾರ ತಿಳಿಸಿದೆ.

‘ಮಾನಸಿಕ ಅಸ್ವಸ್ಥ ಬಾಲಕನ ವಿಷಯದಲ್ಲಿ ಇಂಡಿಗೊ ಏರ್‌ಲೈನ್ಸ್ ಸಿಬ್ಬಂದಿಯಿಂದ ಲೋಪವಾಗಿರುವುದು ಕಂಡು ಬಂದಿದೆ’ ಎಂದು ಡಿಜಿಸಿಎ ಪ್ರಕಟಣೆಯಲ್ಲಿ ತಿಳಿಸಿದೆ.

ಮೇ 7ರಂದು ರಾಂಚಿಯಿಂದ ಹೈದರಾಬಾದ್‌ಗೆ ಹೊರಟಿದ್ದ ವಿಮಾನದಲ್ಲಿ ಪ್ರಯಾಣಿಸಲು ಬಾಲಕನಿಗೆ ಅವಕಾಶ ನಿರಾಕರಿಸಲಾಗಿತ್ತು. ಈ ಹಿನ್ನೆಲೆಯಲ್ಲಿ, ಬಾಲಕನ ಪಾಲಕರು ಸಹ ಪ್ರಯಾಣವನ್ನು ರದ್ದುಗೊಳಿಸಿದ್ದರು.

ಸಂಕ್ಷಿಪ್ತ ಸುದ್ದಿ

ಆಮದು ರಸಗೊಬ್ಬರ: ರೈತರಿಗೆ ಕೇವಲ ₹300ಕ್ಕೆ -ಪ್ರಧಾನಿ

ಗಾಂಧಿನಗರ (ಪಿಟಿಐ): ‘ಆಮದು ಮಾಡಿಕೊಳ್ಳುವ 50 ಕೆ.ಜಿ ಯೂರಿಯಾಕ್ಕೆ ₹ 3,500 ದರ ಇದೆ. ಅದನ್ನು ನಾವು ರೈತರಿಗೆ ₹ 300ಕ್ಕೆ ನೀಡುತ್ತಿದ್ದೇವೆ. ಅಂದರೆ ಉಳಿದ ₹ 3,200 ಅನ್ನು ಸರ್ಕಾರ ಭರಿಸುತ್ತಿದೆ’ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

‘ಇಫ್ಕೊ’ ವತಿಯಿಂದ ಜಿಲ್ಲೆಯಲ್ಲಿ ಆರಂಭಿಸಲಾದ ನ್ಯಾನೊ ಯೂರಿಯಾ ಘಟಕವನ್ನು ಶನಿವಾರ ವರ್ಚುವಲ್ ರೂಪದಲ್ಲಿ ಉದ್ಘಾಟಿಸಿದ ಅವರು, ಕೋವಿಡ್ ಮತ್ತು ಉಕ್ರೇನ್ ಯುದ್ಧದ ಪರಿಣಾಮ ರಸಗೊಬ್ಬರ ಬೆಲೆ ಏರಿಕೆಯಾಗಿದೆ. ಆದರೆ ದೇಶದಲ್ಲಿ ರಸಗೊಬ್ಬರದ ಕೊರತೆ ಎದುರಾಗದಂತೆ ಸರ್ಕಾರ ನೋಡಿಕೊಳ್ಳುತ್ತಿದೆ ಎಂದರು.

ದೇಶದಲ್ಲಿ ಇನ್ನೂ ಎಂಟು ಕಡೆಗಳಲ್ಲಿ ನ್ಯಾನೊ ಯೂರಿಯಾ ಘಟಕಗಳನ್ನು ಸ್ಥಾಪಿಸಲಾಗುವುದು. ಇದರಿಂದ ವಿದೇಶಿ ಯೂರಿಯಾದ ಅವಲಂಬನೆ ತಪ್ಪಲಿದೆ ಎಂದರು.

ನ್ಯಾನೊ ತಂತ್ರಜ್ಞಾನ ಯೂರಿಯಾಕ್ಕೆ ಮಾತ್ರ ಸೀಮಿತವಲ್ಲ, ಇತರ ರಸಗೊಬ್ಬರಗಳಿಗೂ ಇದನ್ನು ಅಳವಡಿಸಲಾಗುವುದು. ಈ ಮೂಲಕ ರೈತರಿಗೆ ಇನ್ನಷ್ಟು ಅನುಕೂಲವಾಗಲಿದೆ ಎಂದರು.

ಮಹಾರಾಷ್ಟ್ರದಲ್ಲಿ ಒಮೈಕ್ರಾನ್ ಹೊಸ ಉಪತಳಿ ಪತ್ತೆ



ಮುಂಬೈ (ಪಿಟಿಐ): ಮೊದಲ ಬಾರಿಗೆ ಮಹಾರಾಷ್ಟ್ರದಲ್ಲಿ ನಾಲ್ವರಿಗೆ ಒಮೈಕ್ರಾನ್ ರೂಪಾಂತರ ತಳಿ ಬಿ.ಎ. 4 ಮತ್ತು ಇದರ ಉಪತಳಿ ಬಿ.ಎ.5 ಸೋಂಕಿನ ಮೂರು ಪ್ರಕರಣಗಳು ದೃಢಪಟ್ಟಿವೆ ಎಂದು ರಾಜ್ಯ ಆರೋಗ್ಯ ಇಲಾಖೆಯ ಅಧಿಕಾರಿಯೊಬ್ಬರು ಶನಿವಾರ ತಿಳಿಸಿದ್ದಾರೆ.

ಇವರೆಲ್ಲರಿಗೂ ಸೌಮ್ಯ ಲಕ್ಷಣಗಳಿವೆ. ಎಲ್ಲರೂ ಮನೆಯಲ್ಲೇ ಇದ್ದು, ಚಿಕಿತ್ಸೆ ಪಡೆಯುತ್ತಿದ್ದಾರೆ.

‘ಪುಣೆಯಿಂದ ಬಂದಿದ್ದ ಏಳು ರೋಗಿಗಳಲ್ಲಿ ಒಮೈಕ್ರಾನ್ ಉಪತಳಿಗಳ ಸೋಂಕು ಪತ್ತೆಯಾಗಿದೆ. ಫರೀದಾಬಾದ್‌ನ ಭಾರತೀಯ ಜೈವಿಕ ದತ್ತಾಂಶ ಕೇಂದ್ರದ ಸಂಶೋಧನೆ ಸೋಂಕನ್ನು ದೃಢಪಡಿಸಿದೆ’ ಎಂದು ಅಧಿಕಾರಿ ಮಾಹಿತಿ ನೀಡಿದರು.

ಚಿನಕುರಳಿ

ಪ್ರಕಾಶ್ ಶೆಟ್ಟಿ



ಶಿಗ್ಗಾವಿ, ರಾಮಥಾಳ ಯೋಜನೆ ವಿಫಲ,‘ಪೂರಿಗಾಲಿ’ ಕಾಮಗಾರಿ ಕುಂಠಿತ

‘ಹಳ್ಳಹಿಡಿದ’ ಹನಿ ನೀರಾವರಿ

• ಎಂ.ಎನ್.ಯೋಗೇಶ್

ಮಂಡ್ಯ: ವಿಶ್ವದಲ್ಲೇ ಮೊದಲು, ರಾಷ್ಟ್ರದಲ್ಲೇ ಮೊದಲು ಎಂಬ ಘೋಷಣೆಯೊಂದಿಗೆ ಜಾರಿಗೆ ಬಂದ ಮಹತ್ವಾಕಾಂಕ್ಷಿ ಹನಿ–ತುಂತುರು ನೀರಾವರಿ ಯೋಜನೆಗಳು ಆರಂಭಿಕ ಹಂತದಲ್ಲೇ ವಿಫಲಗೊಂಡಿವೆ. ‘ಇಸ್ರೇಲ್ ಮಾದರಿ’ ಎಂಬುದು ಕೇವಲ ಮಾತಿಗೆ ಸೀಮಿತವಾಗಿದೆ. ಭ್ರಷ್ಟಾಚಾರ, ಕಮಿಷನ್ ದಂಧೆಯಿಂದಾಗಿ ‘ಹನಿಗೂಡಿದರೆ ಹಳ್ಳ, ತೆನೆಗೂಡಿದರೆ ರಾಶಿ’ ಗಾದೆ ಕೂಡ ಸುಳ್ಳಾಗಿದೆ.

ರೈತನ ಭೂಮಿಯ ಪೈರಿನ ಬುಡಕ್ಕೆ ನೇರವಾಗಿ ನೀರು ಹಾಯಿಸುವ ವೈಜ್ಞಾನಿಕ ಹನಿ– ತುಂತುರು ನೀರಾವರಿ ಪರಿಕಲ್ಪನೆ ಹಲವು ರಾಜ್ಯ, ರಾಷ್ಟ್ರಗಳಲ್ಲಿ ಯಶಸ್ವಿಯಾಗಿದೆ. ಹರಿವ ನೀರಾವರಿಯ (ಫ್ಲೋ ಇರಿಗೇಷನ್) ನೀರಿನ ಅಪವ್ಯಯ ತಪ್ಪಿಸಿ ಕಡಿಮೆ ನೀರಿನಲ್ಲಿ ಹೆಚ್ಚು ಭೂಮಿಗೆ ನೀರು ಹನಿಸುವ ಸೂಕ್ಷ್ಮ, ವೈಜ್ಞಾನಿಕ ವ್ಯವಸ್ಥೆ ಈ ಯೋಜನೆಯ ವಿಶೇಷ. ಗಣಕೀಕೃತ, ಸ್ವಯಂ ಚಾಲಿತ ವ್ಯವಸ್ಥೆ ಮೂಲಕ ನಾಲೆಯ ಕೊನೆ ಭಾಗಕ್ಕೂ ಸಮಸ್ಯೆಯಾಗದೇ, ಒಂದು ಗುಂಟೆ ಕೂಡ ಬಿಡದೇ ನೀರು ಕಳುಹಿಸುವ ವ್ಯವಸ್ಥೆ ಇದು.

ಒಳನೋಟ

ಹರಿಯದ ನೀರು: ಹಣ ಪೋಲು

ಪ್ರತಿಕ್ರಿಯಿಸಿ: 9606038256
feedback@prajavani.co.in

ಕೃಷಿ, ತೋಟಗಾರಿಕೆ ಇಲಾಖೆಯಲ್ಲಿ ಸಿಗುವ ಶೇ 90 ಸಹಾಯಧನದೊಂದಿಗೆ ರೈತರು ಸ್ವತಃ ಈ ಯೋಜನೆ ಅಳವಡಿಸಿಕೊಂಡು ಲಾಭ ಕಂಡಿದ್ದಾರೆ. ಆದರೆ, ಸರ್ಕಾರ ಜಾರಿಗೊಳಿಸಿದ ಸಮಗ್ರ ಹನಿ ನೀರಾವರಿ ಯೋಜನೆಗಳು ವಿಫಲಗೊಂಡಿವೆ.

‘ಶಿಗ್ಗಾವಿ ಏತ ನೀರಾವರಿ’ ಯೋಜನೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಕನಸಿನ ಕೂಸು ಎಂದೇ ಬಿಂಬಿತವಾಗಿತ್ತು. ಇಸ್ರೇಲ್ ಮಾದರಿಯಲ್ಲಿ ಜಾರಿಗೊಳಿಸಲಾದ ದೇಶದ ಮೊದಲ ಹನಿ–ತುಂತುರು ಮಾದರಿ ಯೋಜನೆ ಎಂದೇ ಪ್ರಸಿದ್ಧಿ ಪಡೆದಿತ್ತು.

6ನೇ ಪುಟ ನೋಡಿ
ಇನ್ನಷ್ಟು ಸುದ್ದಿಗಳು 6



ಮಂಡ್ಯ ಜಿಲ್ಲೆ ಮಳವಳ್ಳಿ ತಾಲ್ಲೂಕು ಪೂರಿಗಾಲಿ ಹನಿ ನೀರಾವರಿ ಯೋಜನೆಗಾಗಿ ಸಂಗ್ರಹಿಸಿದ್ದ ಪೈಪ್‌ಗಳು 5 ವರ್ಷಗಳಿಂದ ಬಳಕೆಯಾಗದೆ ಹಾಳಾಗಿರುವುದು

ಪೈಪ್‌ಲೈನ್ ಮೂಲಕ ಪರ್ಯಾಯ ವ್ಯವಸ್ಥೆ



ಹನಿ ನೀರಾವರಿ ಅಥವಾ ತುಂತುರು ನೀರಾವರಿ ಯೋಜನೆಗಳು ನಿರೀಕ್ಷಿತ ಫಲಿತಾಂಶ ನೀಡಿಲ್ಲ ಎಂಬುದು ನಿಜ. ಇವು ರೈತನ ಹೊಲಗಳಿಗೆ ಮಿತವ್ಯಯವಾಗಿ ನೀರು ಒದಗಿಸಬೇಕು ಎಂಬ ಸದುದ್ದೇಶದಿಂದ ಮಾಡಲಾದ ಯೋಜನೆಗಳು. ಆದರೆ ಈ ಯೋಜನೆಗಳು ಉದ್ದೇಶಿತ ಫಲ ನೀಡಲಿಲ್ಲ ಎಂಬ ಕಾರಣಕ್ಕೆ ನಾನು ಜಲಸಂಪನ್ಮೂಲ ಸಚಿವನಾದ ಮೇಲೆ ಸರ್ಕಾರದ ಮಟ್ಟದಲ್ಲಿ ನಿರ್ದಿಷ್ಟವಾದ ನಿರ್ಣಯವೊಂದನ್ನು ಕೈಗೊಂಡು ಹನಿ ಮತ್ತು ತುಂತುರು ನೀರಾವರಿ ಬದಲಿಗೆ ಪೈಪ್ ಲೈನ್ ಮೂಲಕ ರೈತನ ಹೊಲಕ್ಕೆ ಒಂದು ಔಟ್‌ಲೆಟ್ ವ್ಯವಸ್ಥೆ ಕಲ್ಪಿಸಲು ನಿರ್ಧರಿಸಲಾಗಿದೆ. ತನ್ಮೂಲಕ ಯೋಜನಾ ವೆಚ್ಚದಲ್ಲಿ ಶೇ 40 ರಷ್ಟು ಕಡಿತಗೊಳಿಸಲು ಯೋಜಿಸಲಾಗಿದೆ.

ಗೋವಿಂದ ಕಾರಜೋಳ, ಜಲಸಂಪನ್ಮೂಲ ಸಚಿವ

ಅಂಗನವಾಡಿಗೆ ಕಳಪೆ ಆಹಾರ ಪೂರೈಸಬೇಡಿ: ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಮಗ್ರ ಮಕ್ಕಳ ಅಭಿವೃದ್ಧಿ ಯೋಜನೆಯ (ಐಸಿಡಿಎಸ್) ಮೂಲಕ ರಾಜ್ಯದ ಎಲ್ಲ ಅಂಗನವಾಡಿ ಕೇಂದ್ರಗಳಿಗೆ ಪೂರೈಸುತ್ತಿರುವ ಕಳಪೆ ಗುಣಮಟ್ಟದ ಆಹಾರವನ್ನು ಕೂಡಲೇ ಸ್ಥಗಿತಗೊಳಿಸಬೇಕು’ ಎಂದು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶಿಸಿದೆ.

ಈ ಸಂಬಂಧ ಬಾಗಲಕೋಟೆಯ ಸಂಗೀತಾ ಗದಗಿನ ಮತ್ತು ಇತರರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಈ ತೀರ್ಪು ನೀಡಿದೆ.

‘ಪರಿಷ್ಕೃತ ಪೌಷ್ಟಿಕಾಂಶ ಮತ್ತು ಆಹಾರ ಮಾನದಂಡಗಳಿಗೆ ಅನುಗುಣವಾಗಿಲ್ಲದ ಆಹಾರ ಉತ್ಪನ್ನಗಳನ್ನು ಯಾವುದೇ ಕಾರಣಕ್ಕೂ ಅಂಗನವಾಡಿ ಕೇಂದ್ರಗಳಿಗೆ ಪೂರೈಕೆ ಮಾಡಬಾರದು. ಕೇಂದ್ರ ಸರ್ಕಾರದ ಪರಿಷ್ಕೃತ ಮಾನದಂಡಗಳ ಪ್ರಕಾರವೇ ಗುಣಮಟ್ಟದ ಆಹಾರ ಪೂರೈಸಬೇಕು. ಈ ದಿಸೆಯಲ್ಲಿ ಎಲ್ಲ ಕ್ರಮ ಕೈಗೊಳ್ಳಬೇಕು. ಐಸಿಡಿಎಸ್ ಯೋಜನೆಯನ್ನು ರಾಜ್ಯದಾದ್ಯಂತ ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕು’ ಎಂದು ನ್ಯಾಯಪೀಠವು ಆದೇಶಿಸಿದೆ.

‘ಅಂಗನವಾಡಿ ಕೇಂದ್ರಗಳಿಗೆ ಪೌಷ್ಟಿಕ ಆಹಾರ ತಯಾರಿಸಿ ಪೂರೈಸಲು ನಿಯೋಜಿಸಿರುವ ಮಹಿಳಾ ಪೂರಕ ಪೌಷ್ಟಿಕಾಂಶ ಉತ್ಪಾದನಾ ತರಬೇತಿ ಕೇಂದ್ರಗಳು, ಪೌಷ್ಟಿಕ ಆಹಾರದ ಗುಣಮಟ್ಟವನ್ನು ಕಾಯ್ದುಕೊಳ್ಳುವಲ್ಲಿ ಬಿಐಎಸ್ (ಭಾರತೀಯ ಗುಣಮಟ್ಟ ಮಾನಕ ಬ್ಯೂರೊ) ಪ್ರಮಾಣೀಕರಿಸಿದ ಅಥವಾ ಪರವಾನಗಿ ಪಡೆದ ಮಹಿಳಾ ಸ್ವ-ಸಹಾಯ ಗುಂಪುಗಳ ಸಹಾಯ ಪಡೆಯವುದನ್ನು ಕಡ್ಡಾಯಗೊಳಿಸಿ ಕೇಂದ್ರ ಅಧಿಸೂಚನೆ ಹೊರಡಿಸಿದೆ. ಈ ಅಧಿಸೂಚನೆಯ ಅನುಸಾರ ರಾಜ್ಯ ಸರ್ಕಾರ ಚಾಚೂ ತಪ್ಪದೆ ನಡೆದುಕೊಳ್ಳಬೇಕು’ ಎಂದು ತೀರ್ಪಿನಲ್ಲಿ ವಿವರಿಸಲಾಗಿದೆ.

ಕೋವಿಡ್-19ರ ಸಾಂಕ್ರಾಮಿಕದ ಕಾರಣದಿಂದಾಗಿ ಐಸಿಡಿಎಸ್ ಯೋಜನೆಯ ಫಲಾನುಭವಿಗಳ ಸ್ಥಿತಿ ಹದಗೆಟ್ಟಿದೆ. ಆದ್ದರಿಂದ ಫಲಾನು-ಭವಿಗಳಿಗೆ ಪೌಷ್ಟಿಕಾಂಶದ ಆಹಾರ ಪೂರೈಕೆಯನ್ನು ಇನ್ನಷ್ಟು ವಿಳಂಬ ಮಾಡಬಾರದು ಎಂದು ನ್ಯಾಯಪೀಠ ಕಟ್ಟುನಿಟ್ಟಿನ ತಾಕೀತು ಮಾಡಿದೆ.

ಐಸಿಡಿಎಸ್ ಯೋಜನೆಯನ್ನು ಕೇಂದ್ರ ಸರ್ಕಾರ 1975ರ ಅಕ್ಟೋಬರ್ 2ರಂದು ಜಾರಿಗೆ ತಂದಿದ್ದು, ಇದರ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಮಾರ್ಗದರ್ಶಿ ಸೂತ್ರಗಳನ್ನು ರೂಪಿಸಿದೆ. ಅರ್ಜಿದಾರರ ಪರವಾಗಿ ಹಿರಿಯ ವಕೀಲರಾದ ಲಕ್ಷ್ಮಿ ಅಯ್ಯಂಗಾರ್ ಮತ್ತು ಎ.ಎಸ್. ಪೊನ್ನಣ್ಣ ವಾದ ಮಂಡಿಸಿದ್ದರು.

ಚಕ್ರತೀರ್ಥ ವಜಾಕ್ಕೆ ಒಕ್ಕಲಿಗರ ಸಂಘ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಷ್ಟ್ರಕವಿ ಕುವೆಂಪು ಅವರ ಬಗ್ಗೆ ಹಗುರವಾಗಿ ಮಾತನಾಡಿ ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟಿರುವ ಪಠ್ಯಪುಸ್ತಕಗಳ ಪರಿಷ್ಕರಣಾ ಸಮಿತಿ ಅಧ್ಯಕ್ಷ ರೋಹಿತ್ ಚಕ್ರತೀರ್ಥ ಅವರನ್ನು ಆ ಸ್ಥಾನದಿಂದ ವಜಾಗೊಳಿಸಬೇಕು’ ಎಂದು ರಾಜ್ಯ ಒಕ್ಕಲಿಗರ ಸಂಘ ಒತ್ತಾಯಿಸಿದೆ.

‘ನಾಡಗೀತೆಗೆ ಅವಮಾನ ಮಾಡುವುದೆಂದರೆ ನಾಡಿನ ಸರ್ವರಿಗೆ ಮತ್ತು ಸರ್ಕಾರಕ್ಕೆ ಮಾಡುವ ಅವಮಾನ. ಚಕ್ರತೀರ್ಥ ವಿರುದ್ಧ ಕ್ರಮ ಕೈಗೊಳ್ಳ-ದಿದ್ದರೆ ಕುವೆಂಪು ಅಭಿಮಾನಿಗಳು, ಸಾಹಿತಿಗಳು ಬೀದಿಗಳಿದು ಹೋರಾಟ ಮಾಡಲಿದ್ದಾರೆ. ಅದಕ್ಕೆ ಸರ್ಕಾರವೇ ಹೊಣೆಯಾಗಬೇಕಾಗುತ್ತದೆ’ ಎಂದು ಸಂಘದ ಅಧ್ಯಕ್ಷ ಸಿ.ಎನ್.ಬಾಲಕೃಷ್ಣ ಅವರು ಶನಿವಾರ ಸುದ್ದಿಗೋಷ್ಠಿಯಲ್ಲಿ ಎಚ್ಚರಿಸಿದರು.

‘ನಾಡಿನ ಆರೂವರೆ ಕೋಟಿ ಕನ್ನಡಿಗರು ಸ್ವೀಕರಿಸಿರುವ ನಾಡಗೀತೆಯನ್ನು ತಿರುಚಿ ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟಿರುವುದು ಸರಿಯಲ್ಲ. ಜಗದ ಕವಿ, ಯುಗದ ಕವಿ ಎಂದು ಖ್ಯಾತಿ ಪಡೆದ ಕುವೆಂಪು ಬಗ್ಗೆ ಕೀಳು-ಮಟ್ಟದಲ್ಲಿ ಮಾತನಾಡಿರುವುದು ಖಂಡನೀಯ. ಇದು ಯಾರೂ ಒಪ್ಪು-ವಂತದ್ದಲ್ಲ’ ಎಂದು ಹೇಳಿದರು.

7ನೇ ಪುಟ ನೋಡಿ

ಕ್ರಮ ಕೈಗೊಳ್ಳಿ: ಆದಿಚುಂಚನಗಿರಿ ಸ್ವಾಮೀಜಿ

ಬೆಂಗಳೂರು: ‘ರಾಷ್ಟ್ರಕವಿ ಕುವೆಂಪು ಅವರನ್ನು ಅಸಂಸದೀಯ ಭಾಷೆಯಲ್ಲಿ ನಿಂದಿಸಿ ಲೇಖನ ಬರೆದಿರುವ ಮತ್ತು ನಾಡಗೀತೆ ತಿರುಚಿ ಬರೆದಿರುವವರ ವಿರುದ್ಧ ಮಾಹಿತಿ ತಂತ್ರಜ್ಞಾನ ಕಾಯ್ದೆ ಅಡಿಯಲ್ಲಿ ಕ್ರಮ ಕೈಗೊಳ್ಳಬೇಕು’ ಎಂದು ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಒತ್ತಾಯಿಸಿದ್ದಾರೆ.

‘ಸರ್ಕಾರವು ಕಾನೂನು ಮತ್ತು ವ್ಯಕ್ತಿ ಸ್ವಾತಂತ್ರ್ಯದ ಮೇಲೆ ದಾಳಿ ಮಾಡುವವರನ್ನು ಕ್ಷಮಿಸುವುದಿಲ್ಲ ಎನ್ನುವ ಸಂದೇಶ ರವಾನಿಸಬೇಕು’ ಎಂದಿದ್ದಾರೆ.

ತ್ವರಿತವಾಗಿ ಗುಂಡಿ ಮುಚ್ಚಲು ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯ ಮತ್ತು ಉಪಮುಖ್ಯ ರಸ್ತೆಗಳಲ್ಲಿನ ಗುಂಡಿಗಳನ್ನು ಆದ್ಯತೆ ಮೇರೆಗೆ ತ್ವರಿತಗತಿಯಲ್ಲಿ ಮುಚ್ಚುವಂತೆ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ರಸ್ತೆ ಗುಂಡಿ ಮತ್ತು ಮಳೆ ಮುಂಜಾಗ್ರತಾ ಕ್ರಮಗಳಿಗೆ ಸಂಬಂಧಿಸಿದಂತೆ ನಡೆದ ವರ್ಚುವಲ್ ಸಭೆಯಲ್ಲಿ ಮಾತನಾಡಿದ ಅವರು, ‘ಫಿಕ್ಸ್ ಮೈ ಸ್ಟ್ರೀಟ್ ಆ್ಯಪ್ ಮೂಲಕ ರಸ್ತೆಗಳನ್ನು ಈಗಾಗಲೇ ಗುರುತಿಸಲಾಗಿದೆ. ಆಯಾ ವಲಯ ವ್ಯಾಪ್ತಿಯ ಪ್ರಮುಖ ರಸ್ತೆಗಳನ್ನು ಗುಂಡಿ ರಹಿತ ಮಾಡಬೇಕು’ ಎಂದರು.

ಈವರೆಗೆ ಗುರುತಿಸಿರುವ ಗುಂಡಿಗಳನ್ನು ಕೂಡಲೇ ಮುಚ್ಚಲು ವಲಯಗಳ ಮುಖ್ಯ ಎಂಜಿನಿಯರ್‌ಗಳು ಪಾಲಿಕೆಯ ಬಿಸಿ ಡಾಂಬರು ಜಲ್ಲಿ ಮಿಶ್ರಣ ಘಟಕದ ಜತೆ ಸಮನ್ವಯ ಸಾಧಿಸಿ ಅಗತ್ಯ ಡಾಂಬರ್ ಪಡೆಯಬೇಕು ಎಂದು ಸೂಚಿಸಿದರು.

ಆ ಘಟಕದಿಂದ ಬರುವ ಡಾಂಬರ್ ಪ್ರಮಾಣವನ್ನು ಸರಿಯಾಗಿ ಪರಿಶೀಲಿಸಬೇಕು ಎಂದು ತಿಳಿಸಿದರು.

3A ಪುಟ ನೋಡಿ

ನಗರದಲ್ಲಿ 72 ಪ್ರವಾಹ ತಾಣ

ನಗರದಲ್ಲಿ ಗುರುತಿಸಿರುವ 72 ಪ್ರವಾಹ ತಾಣಗಳ ಪೈಕಿ 27 ಅತಿ ಸೂಕ್ಷ್ಮ ಹಾಗೂ 45 ಸೂಕ್ಷ್ಮ ತಾಣಗಳಿವೆ. ಆ ಪ್ರದೇಶದಲ್ಲಿ ಪ್ರವಾಹ ಆಗದಂತೆ ತಡೆಯಲು ಕ್ರಮ ಕೈಗೊಳ್ಳಬೇಕು. ರಾಜಕಾಲುವೆಗಳನ್ನು ಸಂಪೂರ್ಣವಾಗಿ ಹೂಳೆತ್ತುವ ಕಾರ್ಯ ಆಗಬೇಕು. ಮುನ್ನೆಚ್ಚರಿಕಾ ಕ್ರಮವಾಗಿ ಮರಳು ಮೂಟೆಗಳನ್ನು ಲಭ್ಯ ಇಟ್ಟು-ಕೊಳ್ಳಬೇಕು. ಪರ್ಯಾಯ ಮಾರ್ಗದಲ್ಲಿ ನೀರು ಹರಿದು ಹೋಗಲು ಪೈಪ್ ಅಳವಡಿಸಬೇಕು ಎಂದು ತುಷಾರ್ ಗಿರಿನಾಥ್ ಅವರು ರಾಜಕಾಲುವೆ ವಿಭಾಗದ ಮುಖ್ಯ ಎಂಜಿನಿಯರ್‌ಗೆ ಸೂಚನೆ ನೀಡಿದರು.

ಪಾಲಿಕೆಯ ಎಲ್ಲಾ ವಾರ್ಡ್‌ಗಳಲ್ಲೂ ರಸ್ತೆ ಬದಿ ಚರಂಡಿಗಳಲ್ಲಿ ಹೂಳೆತ್ತುವ ಕೆಲಸ ಮಾಡಬೇಕು. ರಸ್ತೆ ಬದಿ ಸಂಗ್ರಹವಾಗಿರುವ ಮಣ್ಣು, ಮಳೆ ನೀರು ಚರಂಡಿಗಳನ್ನು ಸ್ವಚ್ಛಗೊಳಿಸಬೇಕು. ರಸ್ತೆಗಳ ಮೇಲೆ ಬೀಳುವ ನೀರು ಸರಾಗವಾಗಿ ಹರಿದು ಹೋಗುವಂತೆ ಮಾಡಬೇಕು. ರಸ್ತೆಗಳಲ್ಲಿ ನೀರು ನಿಲ್ಲುವ ಬಗ್ಗೆ ಸಂಚಾರ ಪೊಲೀಸರು ನೀಡಿರುವ ಮಾಹಿತಿ ಆಧರಿಸಿ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದರು.

60 ಲಕ್ಷಕ್ಕೂ ಹೆಚ್ಚು ಹುದ್ದೆ ಖಾಲಿ: ವರುಣ್ ಗಾಂಧಿ ಕಿಡಿ

ನವದೆಹಲಿ (ಪಿಟಿಐ): ನಿರುದ್ಯೋಗ ವಿಷಯದಲ್ಲಿ ಕೇಂದ್ರದ ವಿರುದ್ಧ ಮತ್ತೆ ಧ್ವನಿ ಎತ್ತಿರುವ ಬಿಜೆಪಿಯ ಸಂಸದ ವರುಣ್ ಗಾಂಧಿ, ದೇಶದಲ್ಲಿ ಮೂರು ದಶಕಗಳಲ್ಲೇ ನಿರುದ್ಯೋಗ ಉತ್ತುಂಗದಲ್ಲಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿವಿಧ ಇಲಾಖೆಗಳಲ್ಲಿ ಮಂಜೂರಾದ 60 ಲಕ್ಷಕ್ಕೂ ಹೆಚ್ಚು ಸರ್ಕಾರಿ ಹುದ್ದೆಗಳು ಖಾಲಿ ಉಳಿದಿವೆ ಎಂದು ಹೇಳಿದ್ದಾರೆ. 5

‘ಸಿದ್ದರಾಮಯ್ಯ ದ್ರಾವಿಡರೇ, ಆರ್ಯರೇ’

ಬೆಂಗಳೂರು: ವಿರೋಧಪಕ್ಷ ನಾಯಕರಾದ ಸಿದ್ದರಾಮಯ್ಯ ಅವರು ದ್ರಾವಿಡರೇ ಅಥವಾ ಆರ್ಯರೇ ಎಂಬುದನ್ನು ಮೊದಲು ಸ್ಪಷ್ಟಪಡಿಸಲಿ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸವಾಲು ಹಾಕಿದ್ದಾರೆ. 7



ಪೀಣ್ಯ ಕೈಗಾರಿಕೆ ವಲಯದ ಪ್ರತಿನಿಧಿಗಳ ಜತೆ ನಡೆದ ಸಭೆಯಲ್ಲಿ ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಪಿ. ರಾಜೇಂದ್ರ ಚೋಳನ್ ಮಾತನಾಡಿದರು

ವಿದ್ಯುತ್ ವಿನಾಯಿತಿ ಸೌಲಭ್ಯ ವಿಸ್ತರಣೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೈಗಾರಿಕೆ ವಲಯಕ್ಕೆ ನೀಡುತ್ತಿರುವ ರಿಯಾಯಿತಿ ದರದ ವಿದ್ಯುತ್ ಸೌಲಭ್ಯಗಳನ್ನು ಕನಿಷ್ಠ 5 ರಿಂದ 10 ವರ್ಷಗಳ ಅವಧಿಗೆ ವಿಸ್ತರಿಸಬೇಕು ಎಂದು ಪೀಣ್ಯ ಕೈಗಾರಿಕೆ ವಲಯದ ಪ್ರತಿನಿಧಿಗಳು ಬೆಸ್ಕಾಂಗೆ ಮನವಿ ಮಾಡಿದ್ದಾರೆ.

ಪೀಣ್ಯ ಕೈಗಾರಿಕೆ ವಲಯದ ಪ್ರತಿನಿಧಿಗಳ ಜತೆ ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಪಿ. ರಾಜೇಂದ್ರ ಚೋಳನ್ ಮತ್ತು ಹಿರಿಯ ಅಧಿಕಾರಿಗಳು ಮಂಗಳವಾರ ನಡೆಸಿದ ಸಭೆಯಲ್ಲಿ ಉದ್ಯಮಗಳು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಚರ್ಚಿಸಲಾಯಿತು.

ಪೀಣ್ಯ ವಲಯದ ಉಪವಿಭಾಗ-4ರಲ್ಲಿ ವಿದ್ಯುತ್ ವ್ಯತ್ಯಯದ ಸಮಸ್ಯೆಯನ್ನು ಸರಿಪಡಿಸಲಾಗಿದೆ. ಪೀಣ್ಯ ಕೈಗಾರಿಕೆ ಪ್ರದೇಶಗಳಿಗೆ ಈಗ ತಡೆರಹಿತ ವಿದ್ಯುತ್ ನೀಡಲು ಕ್ರಮ ಕೈಗೊಳ್ಳಲಾಗಿದೆ. ಹಾಗೆಯೇ ಕುಂಬಳಗೋಡು ವಲಯದ ವಿದ್ಯುತ್ ಸಮಸ್ಯೆಯನ್ನು ಸರಿಪಡಿಸಲಾಗಿದೆ ಎಂದು ಬೆಸ್ಕಾಂ ಅಧಿಕಾರಿಗಳು ಸಭೆಯಲ್ಲಿ ವಿವರಿಸಿದರು.

ಪೀಣ್ಯ ಕೈಗಾರಿಕೋದ್ಯಮಿಗಳು ಎದುರಿಸುತ್ತಿರುವ ಮೀಟರ್ ಪರೀಕ್ಷೆ (ಎಂಟಿ) ಮತ್ತು ವಿಚಕ್ಷಣ ದಳ ಸಿಬ್ಬಂದಿಯಿಂದಾಗುತ್ತಿರುವ ಸಮಸ್ಯೆಗಳ ಪರಿಹಾರಕ್ಕೆ ಆಂತರಿಕ ಸಮಿತಿಯೊಂದನ್ನು ರಚಿಸುವುದಾಗಿ ರಾಜೇಂದ್ರ ಚೋಳನ್ ಭರವಸೆ ನೀಡಿದರು.

ಬೆಸ್ಕಾಂ ನಿರ್ದೇಶಕ (ತಾಂತ್ರಿಕ) ಅವರ ಅಧ್ಯಕ್ಷತೆಯ ಸಮಿತಿಯಲ್ಲಿ ಪೀಣ್ಯ ಕೈಗಾರಿಕೆ ವಲಯದ ಪ್ರತಿನಿಧಿಗಳು ಸದಸ್ಯರಾಗಿರುತ್ತಾರೆ. ಕೈಗಾರಿಕೆ ವಲಯದ ಪ್ರತಿನಿಧಿಗಳು ಎದುರಿಸುತ್ತಿರುವ ಸಮಸ್ಯೆಗಳ ಶಾಶ್ವತ ಪರಿಹಾರಕ್ಕೆ ಈ ಸಮಿತಿ ಸಹಕಾರಿಯಾಗಲಿದೆ ಎಂದು ತಿಳಿಸಿದರು.

ಪದವಿಪೂರ್ವ ಕಾಲೇಜುಗಳಲ್ಲಿ ಸ್ಪರ್ಧಾತ್ಮಕ ಪರೀಕ್ಷೆ ಹೆಸರಿನಲ್ಲಿ ದುಬಾರಿ ಶುಲ್ಕ

‘ಇಂಟಿಗ್ರೇಟೆಡ್ ಕೋಚಿಂಗ್’ ದಂಧೆಗೆ ಇಲ್ಲ ಕಡಿವಾಣ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪದವಿಪೂರ್ವ ಕಾಲೇಜುಗಳಲ್ಲಿ 'ಇಂಟಿಗ್ರೇಟೆಡ್ ಕೋಚಿಂಗ್' ಪದ್ಧತಿ ಜಾರಿಗೊಳಿಸುವ ಮೂಲಕ ವಿದ್ಯಾರ್ಥಿಗಳಿಂದ ದುಬಾರಿ ಶುಲ್ಕ ಪಡೆಯಲಾಗುತ್ತಿದೆ.

ಇಂಟಿಗ್ರೇಟೆಡ್ ಕೋಚಿಂಗ್‌ಗೆ ಅವಕಾಶ ಇಲ್ಲ ಎಂದು ಪದವಿಪೂರ್ವ ಶಿಕ್ಷಣ ಇಲಾಖೆ ನಿಯಮಾವಳಿ ರೂಪಿಸಿದೆ. ಆದರೆ, ಈ ನಿಯಮಕ್ಕೆ ಕವಡೆ ಕಾಸಿನ ಕಿಮ್ಮತ್ತು ಇಲ್ಲದಂತಾಗಿದೆ.

ವಿದ್ಯಾರ್ಥಿಗಳಿಗೆ ಹೊರೆಯಾಗುತ್ತಿರುವುದರಿಂದ ರಾಜ್ಯ ಸರ್ಕಾರವು ನಿಗದಿಪಡಿಸಿದ ಪಠ್ಯಕ್ರಮವನ್ನು ಮಾತ್ರ ಕಾಲೇಜುಗಳಲ್ಲಿ ಬೋಧಿಸಬೇಕು ಮತ್ತು ಸರ್ಕಾರ ನಿಗದಿಪಡಿಸಿದ ನಿಯಮಗಳನ್ನು ಉಲ್ಲಂಘಿಸಿದರೆ ಮಾನ್ಯತೆಯನ್ನು ರದ್ದುಪಡಿಸಬೇಕಾಗುತ್ತದೆ ಎನ್ನುವ ಎಚ್ಚರಿಕೆಯನ್ನು ಇಲಾಖೆ ನೀಡಿದೆ. ಈ ಬಗ್ಗೆ ಇಲಾಖೆಯು ಹೊರಡಿಸಿರುವ ವಿದ್ಯಾರ್ಥಿಗಳ ದಾಖಲಾತಿ ಮಾರ್ಗಸೂಚಿಯಲ್ಲಿಯೂ ಸ್ಪಷ್ಟವಾಗಿ ವಿವರ ನೀಡಿದೆ. ಆದರೆ, ಇಲಾಖೆಯು ಯಾವುದೇ ರೀತಿಯ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳುತ್ತಿಲ್ಲ.

ಪಠ್ಯದ ಜತೆ ನೀಟ್, ಜೆಇಇ ಮತ್ತು ಸಿಇಟಿಗೆ ತರಬೇತಿ ನೀಡುವ 'ಇಂಟಿಗ್ರೇಟೆಡ್ ಕೋಚಿಂಗ್' ವ್ಯವಸ್ಥೆಯನ್ನು ಬಹುತೇಕ ಖಾಸಗಿ ಕಾಲೇಜುಗಳಲ್ಲಿ ಅಳವಡಿಸಿಕೊಳ್ಳಲಾಗಿದೆ. ಕೆಲವು ಕಾಲೇಜುಗಳು ಈ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ನೀಡುವ ಸಂಸ್ಥೆಗಳ ಜತೆ ಒಪ್ಪಂದ ಮಾಡಿಕೊಂಡಿವೆ. ಈ ಸಂಸ್ಥೆಗಳ ಬೋಧಕರು ವಿದ್ಯಾರ್ಥಿಗಳಿಗೆ ತರಬೇತಿ ನೀಡುತ್ತಾರೆ. ಇತ್ತೀಚೆಗೆ ಕೆಲವು ಕಾಲೇಜುಗಳಲ್ಲಿ ಯುಪಿಎಸ್‌ಸಿ ಪರೀಕ್ಷೆಗಳಿಗೆ ತರಬೇತಿ ನೀಡುವುದಾಗಿ ವಿದ್ಯಾರ್ಥಿಗಳ ಮನವೊಲಿಸಿ ಹಣ ಕೀಳುತ್ತಾರೆ ಎನ್ನುವ ಆರೋಪಗಳಿವೆ.

‘ಇಂಟಿಗ್ರೇಟೆಡ್ ಕೋಚಿಂಗ್’ ಇರುವ ಕಾಲೇಜುಗಳಲ್ಲಿ ವರ್ಷಕ್ಕೆ ₹1.25 ಲಕ್ಷದಿಂದ ₹3 ಲಕ್ಷದವರೆಗೆ ವಿದ್ಯಾರ್ಥಿಗಳಿಂದ ವಸೂಲಿ ಮಾಡಲಾಗುತ್ತದೆ. ಇದು ವಿವಿಧ ಪರೀಕ್ಷೆಗಳ ಅನುಸಾರ ಪ್ಯಾಕೇಜ್ ರೂಪದಲ್ಲಿ ಶುಲ್ಕ ಪಡೆಯಲಾಗುತ್ತದೆ' ಎಂದು ಖಾಸಗಿ ಕಾಲೇಜಿನ ಪ್ರಾಂಶುಪಾಲರೊಬ್ಬರು ತಿಳಿಸಿದರು.

ಕಾಲೇಜುಗಳು ಈ ವ್ಯವಸ್ಥೆಗಾಗಿ ಅಳವಡಿಸಲು ತಮ್ಮದೇ ಆದ ವೇಳಾಪಟ್ಟಿಯನ್ನು ರೂಪಿಸಿಕೊಂಡಿವೆ. ಬಹುತೇಕ ಕಾಲೇಜುಗಳಲ್ಲಿ ಬೆಳಿಗ್ಗೆ 7ಗಂಟೆಯಿಂದ ಪಾಠಪ್ರವಚನಗಳು ಆರಂಭವಾಗುತ್ತವೆ. ಕೆಲವು ಕಾಲೇಜುಗಳಲ್ಲಿ ಸಂಜೆ ವೇಳೆಯಲ್ಲಿ ಹೆಚ್ಚುವರಿಯಾಗಿ ಎರಡರಿಂದ ಮೂರು ಗಂಟೆಗಳ ಕಾಲ ತರಗತಿಗಳನ್ನು ನಡೆಸಲಾಗುತ್ತದೆ.

‘ಸರ್ಕಾರಿ ಕಾಲೇಜುಗಳಲ್ಲಿ ಮಾತ್ರ ಈ ರೀತಿಯ ವ್ಯವಸ್ಥೆ ಇಲ್ಲ. ಸರ್ಕಾರಿ ನಿಯಮಗಳಂತೆ ಅತಿ ಕಡಿಮೆ ಶುಲ್ಕ ಪಡೆಯಲಾಗುತ್ತದೆ. ಸ್ಪರ್ಧಾತ್ಮಕ ಪರೀಕ್ಷೆಯ ಬಗ್ಗೆ ಈಗಿರುವ ಅಧ್ಯಾಪಕರೇ ಪಠ್ಯಗಳ ಜತೆ, ಜತೆಗೆ ಬೋಧಿಸುತ್ತಾರೆ. ಆದರೆ, ಸರ್ಕಾರಿ ಕಾಲೇಜುಗಳಲ್ಲಿ ಅಧ್ಯಾಪಕರ ಕೊರತೆಯನ್ನು ನೀಗಿಸಬೇಕು. ಉತ್ತಮ ಅಧ್ಯಾಪಕರನ್ನು ನೇಮಿಸಿದರೆ ಉತ್ತಮ ಫಲಿತಾಂಶವೂ ದೊರೆಯುತ್ತದೆ. ಸರ್ಕಾರ ಈ ನಿಟ್ಟಿನಲ್ಲಿ ಚಿಂತನೆ ನಡೆಸಬೇಕು’ ಎಂದು ಸರ್ಕಾರಿ ಕಾಲೇಜಿನ ಪ್ರಾಂಶುಪಾಲರೊಬ್ಬರು ಹೇಳುತ್ತಾರೆ.

‘ಕೆಲವು ಪಿ.ಯು ಕಾಲೇಜುಗಳಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗೆ ತರಬೇತಿ ಪಡೆಯುವುದನ್ನು ಕಡ್ಡಾಯಗೊಳಿಸಲಾಗಿದೆ. ಇದರಿಂದ, ಮಕ್ಕಳಿಗೆ ಹೊರೆಯಾಗುತ್ತಿದೆ. ಬೆಳಿಗ್ಗೆಯಿಂದ ಸಂಜೆಯವರೆಗೂ ಕಾಲೇಜುಗಳಲ್ಲಿ ಇರಬೇಕು. ಶಿಕ್ಷಣ ಇಲಾಖೆ ಈ ಬಗ್ಗೆ ಕ್ರಮಕೈಗೊಳ್ಳಬೇಕು’ ಎಂದು ಪೋಷಕರೊಬ್ಬರು ಹೇಳುತ್ತಾರೆ.

ಇಲಾಖೆ ಮಾರ್ಗಸೂಚಿಗಳು

- ಪದವಿಪೂರ್ವ ಕಾಲೇಜುಗಳಲ್ಲಿ ಸಿಇಟಿ, ಎಐಇಇ, ಇಂಟಿಗ್ರೇಟೆಡ್ ಕೋರ್ಸ್, ಬ್ರಿಡ್ಜ್ ಕೋರ್ಸ್ ಇತ್ಯಾದಿ ಹೆಸರಿನಲ್ಲಿ ಕಾನೂನು ಬಾಹಿರವಾಗಿ ನಿಗದಿಪಡಿಸಿದ ಶುಲ್ಕಕ್ಕಿಂತ ಹೆಚ್ಚು ಪಡೆದು, ಇತರೆ ಸಂಘ-ಸಂಸ್ಥೆಗಳು ಅಥವಾ ಇತರೆ ಸಂಪನ್ಮೂಲ ವ್ಯಕ್ತಿಗಳೊಂದಿಗೆ ಸೇರಿ ಬೋಧನೆ ಮಾಡುವುದು ಕಂಡು ಬಂದಲ್ಲಿ ಅಂತಹ ಕಾಲೇಜುಗಳ ಮಾನ್ಯತೆ ರದ್ದುಪಡಿಸಲಾಗುವುದು. ಜತೆಗೆ, ಈ ಸಂಸ್ಥೆಗಳ ಪ್ರಾಂಶುಪಾಲರ ಮತ್ತು ಆಡಳಿತ ಮಂಡಳಿಯ ಮೇಲೆ ಕಾನೂನು ಕ್ರಮ ಜರುಗಿಸಲಾಗುವುದು.
- ನಿಗದಿಪಡಿಸಿದ ಪಠ್ಯಕ್ರಮವನ್ನು ಹೊರತುಪಡಿಸಿ ಇತರೆ ಯಾವುದೇ ಪಠ್ಯಕ್ರಮ ಅಥವಾ ಪಠ್ಯಕ್ರಮವನ್ನು ಬೋಧಿಸುವುದು ಕಾನೂನುಬಾಹಿರ. ಅಂತಹ ಸಂಸ್ಥೆಗಳ ಪ್ರಾಂಶುಪಾಲರು ಮತ್ತು ಆಡಳಿತ ಮಂಡಳಿಯ ಮೇಲೆ ನಿಯಮಾನುಸಾರ ಕಾನೂನು ಕ್ರಮ ಜರುಗಿಸಲಾಗುವುದು.
- ಪದವಿಪೂರ್ವ ಕಾಲೇಜುಗಳು ಯಾವುದೇ ಬೇರೆ ಸಂಸ್ಥೆ ಅಥವಾ ಬೇರೆ ಆಡಳಿತ ಮಂಡಳಿ ಅಥವಾ ಕೋಚಿಂಗ್ ನೀಡುವ ಸಂಸ್ಥೆಗಳೊಂದಿಗೆ ಪರಸ್ಪರ ವಿನಿಯಮದೊಂದಿಗೆ ಆ ಸಂಸ್ಥೆಯ ಹೆಸರನ್ನು ತಮ್ಮ ಕಾಲೇಜಿನ ಜತೆ ಬಳಕೆ ಮಾಡಿ ಯಾವುದೇ ರೀತಿ ಶೈಕ್ಷಣಿಕ ಚಟುವಟಿಕೆ ನಡೆಸತಕ್ಕದ್ದಲ್ಲ.
- ಪದವಿಪೂರ್ವ ಶಿಕ್ಷಣ ಇಲಾಖೆಯು ಮುದ್ರಿಸಿರುವ ಪಠ್ಯಪುಸ್ತಕವನ್ನು ಹೊರತುಪಡಿಸಿ, ಯಾವುದೇ ಇತರೆ ಪುಸ್ತಕಗಳನ್ನು ಬೋಧಿಸಲು ಅವಕಾಶ ಇಲ್ಲ. ಬೇರೆ ಪಠ್ಯ ವಸ್ತುವನ್ನು ಖರೀದಿಸಲು ವಿದ್ಯಾರ್ಥಿಗಳಿಗೆ ಅಥವಾ ಪೋಷಕರಿಗೆ ಒತ್ತಡ ಹೇರುವುದು ಕಾನೂನುಬಾಹಿರ.

ಸುದ್ದಿ 2 ನಿಮಿಷ

ತಪ್ಪೊಪ್ಪಿಗೆ ಆಧರಿಸಿ ಅಪರಾಧ ನಿರ್ಣಯಿಸಬಾರದು: ‘ಸುಪ್ರೀಂ’

ನವದೆಹಲಿ: ‘ಕೊಲೆಯ ಅಪರಾಧವನ್ನು ಹೆಚ್ಚುವರಿ ನ್ಯಾಯಾಂಗ ತಪ್ಪೊಪ್ಪಿಗೆಯ ಆಧಾರದ ಮೇಲೆ ಮಾತ್ರ ನಿರ್ಧರಿಸಬಾರದು. ಏಕೆಂದರೆ ಅದು ದುರ್ಬಲ ಸಾಕ್ಷ್ಯವಾಗಿರುತ್ತದೆ. ಅದು ಸ್ವಾಭಾವಿಕವಾದ ಪುರಾವೆಗಳಿಂದ ಸಂಪೂರ್ಣ ದೃಢೀಕರಿಸಲ್ಪಡದ ಹೊರತು ಅಪರಾಧ ನಿರ್ಣಯದಲ್ಲಿ ಪರಿಗಣಿಸಬಾರದು’ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ನ್ಯಾಯಮೂರ್ತಿಗಳಾದ ಡಿ.ವೈ.ಚಂದ್ರಚೂಡ್ ಮತ್ತು ಬೇಲಾ ಎಂ.ತ್ರಿವೇದಿ ಅವರಿದ್ದ ಪೀಠವು, ಅಂತರ್ಜಾತಿ ವಿವಾಹವಾದ ದಂಪತಿಯ ಹತ್ಯೆಗೆ ಸಂಬಂಧಿಸಿದ ಪ್ರಕರಣದಲ್ಲಿ ಛತ್ತೀಸಗಡ ವ್ಯಕ್ತಿಗೆ ವಿಧಿಸಿದ್ದ ಶಿಕ್ಷೆ ರದ್ದುಪಡಿಸುವಾಗ, ಕಾನೂನಿನ ಸ್ಥಿತಿಗತಿಯನ್ನು ಈ ರೀತಿ ವಿಶ್ಲೇಷಿಸಿ, ಸೂಕ್ತ ಸಾಕ್ಷ್ಯಾಧಾರಗಳ ಕೊರತೆಯಿಂದ ಆರೋಪಿಯನ್ನು ಬಿಡುಗಡೆ ಮಾಡಿತು.



‘ಹೆಚ್ಚುವರಿ ನ್ಯಾಯಾಂಗ ತಪ್ಪೊಪ್ಪಿಗೆಯು ಸ್ವತಃ ದುರ್ಬಲ ಸಾಕ್ಷಿ ಎನಿಸಿದೆ. ಇದನ್ನು ಹೆಚ್ಚಿನ ಮುತುವರ್ಜಿಯಿಂದ ಪರೀಕ್ಷಿಸಬೇಕು. ಅದು ಸತ್ಯವಾಗಿರಬೇಕು ಮತ್ತು ಆತ್ಮವಿಶ್ವಾಸ ಪ್ರೇರೇಪಿಸಬೇಕು. ಅದು ಸಮಂಜಸವಾದ ಸಂದರ್ಭಗಳ ಸರಪಳಿಯಿಂದ ಬೆಂಬಲಿತವಾಗಿದ್ದರೆ ಮತ್ತು ಇತರ ಪ್ರಾಸಿಕ್ಯೂಷನ್ ಪುರಾವೆಗಳಿಂದ ದೃಢೀಕರಿಸಲ್ಪಟ್ಟಿದ್ದರೆ ಹೆಚ್ಚುವರಿ ನ್ಯಾಯಾಂಗದ ತಪ್ಪೊಪ್ಪಿಗೆಗೆ ಹೆಚ್ಚಿನ ವಿಶ್ವಾಸಾರ್ಹತೆ ಮತ್ತು ಸಾಕ್ಷ್ಯದ ಮೌಲ್ಯವಿರುತ್ತದೆ’ ಎಂದು ಪೀಠ ಹೇಳಿದೆ.

‘ರೈತರಿಗೆ ಸಹಾಯಧನ ತಲುಪಿಸಿ’

ಬೆಂಗಳೂರು: ರಸಗೊಬ್ಬರಕ್ಕೆ ನೀಡುವ ಸಹಾಯ ಧನವನ್ನು ನೇರವಾಗಿ ರೈತರಿಗೆ ನೀಡಬೇಕು ಎಂದು ಭಾರತೀಯ ಕಿಸಾನ್ ಸಂಘ ಆಗ್ರಹಿಸಿದೆ.

ಕೇಂದ್ರ ಸರ್ಕಾರ ರಸಗೊಬ್ಬರ ಸಹಾಯಧನವನ್ನು ಹೆಚ್ಚಿಸಲು ಮುಂದಾಗಿದೆ. ಇದರಿಂದಾಗಿ ದೇಶಕ್ಕೆ ಮತ್ತಷ್ಟು ಹೊರೆಯಾಗಲಿದೆ ಹಾಗೂ ರಸಾಯನಿಕ ಕಂಪನಿಗಳಿಗೆ ಹೆಚ್ಚು ಅನುಕೂಲವಾಗಲಿದೆ ಎಂದು ಸಂಘದ ಕರ್ನಾಟಕ ದಕ್ಷಿಣ ಪ್ರಾಂತ ಪ್ರಧಾನ ಕಾರ್ಯದರ್ಶಿ ಹಾಡ್ಯ ರಮೇಶ್‌ರಾಜು ದೂರಿದ್ದಾರೆ.

ಒಂದು ಎಕರೆ ಕಬ್ಬು ಬೆಳೆಗೆ ಕನಿಷ್ಠ 20 ಚೀಲ ರಸಗೊಬ್ಬರ ಬಳಸಲಾಗುತ್ತಿದೆ. ಅಂದರೆ, 20 ಚೀಲಕ್ಕೆ ಸರಾಸರಿ ₹40 ಸಾವಿರದಿಂದ ₹50 ಸಾವಿರ ರೈತರ ಹೆಸರಿನಲ್ಲಿ ಕಂಪನಿಗಳ ಪಾಲಾಗುತ್ತಿದೆ. ಇದರ ಬದಲು ರಸಗೊಬ್ಬರವನ್ನು ಮುಕ್ತ ಮಾರುಕಟ್ಟೆಯಲ್ಲಿ ವಿತರಿಸಿ ಸಹಾಯಧನವನ್ನು ರೈತರಿಗೆ ನೇರವಾಗಿ ಕೃಷಿ ಉತ್ಪನ್ನಗಳ ಮಾನದಂಡದ ಆಧಾರದ ಮೇಲೆ ನೀಡಬೇಕು ಎಂದು ಆಗ್ರಹಿಸಿದ್ದಾರೆ.

ಈ ರೀತಿಯ ಕ್ರಮಗಳಿಂದ ದುಬಾರಿ ರಸಗೊಬ್ಬರ ಬದಲಾಗಿ ನೈಸರ್ಗಿಕ ಕೃಷಿಯತ್ತ ರೈತರು ಒಲವು ತೋರುತ್ತಾರೆ. ಆಗ ಸಮಾಜಕ್ಕೂ ವಿಷಮುಕ್ತ ಆಹಾರ ದೊರೆಯುತ್ತದೆ ಎಂದು ತಿಳಿಸಿದ್ದಾರೆ.

ಅಸ್ಥಿಮಜ್ಜೆ ಕಸಿಗೆ ಸಿಗದ ಅನುದಾನ

ಆರ್ಥಿಕ ನೆರವಿಗೆ ದಾನಿಗಳನ್ನು ಕೋರಿದ ಕಿದ್ವಾಯಿ ಸಂಸ್ಥೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯಲ್ಲಿ ನಡೆಸಲಾಗುತ್ತಿರುವ ಅಸ್ಥಿಮಜ್ಜೆ ಕಸಿಗೆ ಬೇಡಿಕೆ ಹೆಚ್ಚಾಗಿದೆ. ಈ ಕಸಿಗೆ ಸರ್ಕಾರವು ಅನುದಾನ ಬಿಡುಗಡೆ ಮಾಡದಿರುವುದರಿಂದ ಸಂಸ್ಥೆಯು ದಾನಿಗಳ ಮೊರೆ ಹೋಗಿದೆ.



ಡಾ.ಸಿ. ರಾಮಚಂದ್ರ

ಸಂಸ್ಥೆಯ ಈ ಘಟಕಕ್ಕೆ ಕಳೆದ ಫೆಬ್ರುವರಿಯಲ್ಲಿ ಚಾಲನೆ ನೀಡಲಾಗಿತ್ತು. ಖಾಸಗಿ ಆಸ್ಪತ್ರೆಗಳಲ್ಲಿ ₹ 50 ಲಕ್ಷದವರೆಗೂ ವೆಚ್ಚವಾಗುವ ಅಸ್ಥಿಮಜ್ಜೆ (ಬೋನ್ ಮ್ಯಾರೊ) ಕಸಿ ಶಸ್ತ್ರಚಿಕಿತ್ಸೆಯನ್ನು ಬಡತನ ರೇಖೆಗಿಂತ ಕೆಳಗಿನ (ಬಿಪಿಎಲ್) ಕುಟುಂಬದವರಿಗೆ ಈ ಘಟಕದ ಮೂಲಕ ಉಚಿತವಾಗಿ ಒದಗಿಸಲಾಗುತ್ತಿದೆ. ಸದ್ಯ ಸಂಸ್ಥೆಯೇ ಕಸಿಯ ವೆಚ್ಚವನ್ನು ಭರಿಸುತ್ತಿದೆ. ಈ ಕಸಿಗೆ ಈಗಾಗಲೇ 25 ಮಂದಿ ಹೆಸರು ನೋಂದಾಯಿಸಿದ್ದಾರೆ.

‘ರಾಜ್ಯ ಸರ್ಕಾರವು 2018 ರಲ್ಲಿ ಬಿಪಿಎಲ್ ಕುಟುಂಬಗಳಿಗಾಗಿ ರಾಜ್ಯ ಅಂಗಾಗ ಕಸಿ ಯೋಜನೆ ಆರಂಭಿಸಿದೆ. ಅಸ್ಥಿಮಜ್ಜೆ ಕಸಿಗೆ ‘ಆಯುಷ್ಮಾನ್ ಭಾರತ-ಆರೋಗ್ಯ ಕರ್ನಾಟಕ’ ಯೋಜನೆಯಡಿ ಹಾಗೂ ರಾಷ್ಟ್ರೀಯ ಆರೋಗ್ಯ ನಿಧಿಯಿಂದ ಅನುದಾನ ಒದಗಿಸುವಂತೆ ಸುವರ್ಣ ಆರೋಗ್ಯ ಟ್ರಸ್ಟ್‌ಗೆ ಮನವಿ ಸಲ್ಲಿಸಲಾಗಿದೆ. ಶೀಘ್ರದಲ್ಲೆ ಅನುಮತಿ ದೊರೆಯುವ ನಿರೀಕ್ಷೆಯಿದೆ’ ಎಂದು ಸಂಸ್ಥೆಯ ನಿರ್ದೇಶಕ ಡಾ.ಸಿ.ರಾಮಚಂದ್ರ ತಿಳಿಸಿದ್ದಾರೆ.

ಆರ್ಥಿಕ ನೆರವಿಗೆ ಮನವಿ: ‘ಬಡ ವರ್ಗದ ಕ್ಯಾನ್ಸರ್ ರೋಗಿಗಳಿಗೆ ದುಬಾರಿ ವೆಚ್ಚದ ಈ ಕಸಿಯ ವೆಚ್ಚ ಪಾವತಿಸಲು ಸಾಧ್ಯವಾಗುವುದಿಲ್ಲ. ಹೀಗಾಗಿ, ದಾನಿಗಳು ಆರ್ಥಿಕ ನೆರವು ನೀಡಲು ಮುಂದೆ ಬರಬೇಕು. ಈಗಾಗಲೇ ಸಂಸ್ಥೆಯಲ್ಲಿ ಸೇವೆ ಸಲ್ಲಿಸುತ್ತಿರುವ ವೈದ್ಯೆ ಡಾ.ಎನ್. ಲಲಿತಾ ₹ 10 ಲಕ್ಷ ದೇಣಿಗೆ ನೀಡಿದ್ದಾರೆ’ ಎಂದು ಮಾಹಿತಿ ನೀಡಿದ್ದಾರೆ.

‘ಅಸ್ಥಿಮಜ್ಜೆ ಕಸಿಯಲ್ಲಿ ರೋಗಿಯ ದೇಹದಲ್ಲಿ ಸಕ್ರಿಯವಾಗಿರುವ ಕ್ಯಾನ್ಸರ್ ಕಣಗಳನ್ನು ನಾಶಗೊಳಿಸಿ, ಅವರದೇ ದೇಹದ ಆರೋಗ್ಯ ಅಂಗದ ಒಂದಿಷ್ಟು ಮಜ್ಜೆಯನ್ನು ತೆಗೆಯಲಾಗುತ್ತದೆ. ಕ್ಯಾನ್ಸರ್ ಕಣಗಳು ನಾಶವಾದ ಜಾಗದಲ್ಲಿ ಕಸಿ ಮಾಡಲಾಗುತ್ತದೆ. ವಯಸ್ಕರ ಜತೆಗೆ ಮಕ್ಕಳಲ್ಲಿಯೂ ಕ್ಯಾನ್ಸರ್ ಪ್ರಕರಣಗಳು ವರ್ಷದಿಂದ ವರ್ಷಕ್ಕೆ ಹೆಚ್ಚಳವಾಗುತ್ತಿವೆ. ಈ ರೋಗ ಹಾಗೂ ತಪಾಸಣೆ ಬಗ್ಗೆ ಇನ್ನಷ್ಟು ಜಾಗೃತಿ ಮೂಡಿಸಬೇಕು. ಕ್ಯಾನ್ಸರ್ ಕೋಶಗಳನ್ನು ಎಷ್ಟು ಬೇಗ ಪತ್ತೆ ಮಾಡುತ್ತೇವೆಯೋ ಅಷ್ಟು ಬೇಗ ಗುಣಪಡಿಸಲು ಸಾಧ್ಯ’ ಎಂದರು.

ಆರ್ಥಿಕ ನೆರವಿಗೆ ಬ್ಯಾಂಕ್ ವಿವರ

ಬ್ಯಾಂಕ್ ಹೆಸರು: ಕೆನರಾ ಬ್ಯಾಂಕ್ (ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ಶಾಖೆ)
ಖಾತೆ ದಾರರ ಹೆಸರು: ಬಿಎಂಟಿ ಕಾರ್ಪಸ್ ಫಂಡ್
ಬ್ಯಾಂಕ್ ಖಾತೆ ಸಂಖ್ಯೆ: 8409101103548
ಐಎಫ್‌ಎಸ್‌ಸಿ ಸಂಖ್ಯೆ: CNRB 0008409
ಎಂಐಸಿಆರ್ ಸಂಖ್ಯೆ: 560015171

ವಕೀಲರ ಸಮುದಾಯಕ್ಕೆ ಮಿಹೀರ್ ದೇಸಾಯಿ ಮನವಿ

‘ಜನಪರ ಹೋರಾಟಗಳ ಬೆನ್ನಿಗೆ ನಿಲ್ಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅಲ್ಪಸಂಖ್ಯಾತರು, ದಮನಿದಲಿತರು, ಮಹಿಳೆಯರ ಧ್ವನಿಯನ್ನು ಹತ್ತಿಕ್ಕುವ ಪ್ರಭುತ್ವದ ವಿರುದ್ಧದ ಹೋರಾಟದಲ್ಲಿ ವಕೀಲರು ಕೋರ್ಟ್ ಒಳಗೆ ಮಾತ್ರವಲ್ಲದೆ ಹೊರಗೂ ಕೂಡ ತಮ್ಮ ಪಾತ್ರ ನಿರ್ವಹಣೆಗೆ ಸಜ್ಜಾಗಬೇಕು’ ಎಂದು ಬಾಂಬೆ ಹೈಕೋರ್ಟ್ ಹಿರಿಯ ವಕೀಲ ಮಿಹೀರ್ ದೇಸಾಯಿ ಅಭಿಪ್ರಾಯಪಟ್ಟರು.

ಶನಿವಾರ ಇಲ್ಲಿ ನಡೆದ ‘ನ್ಯಾಯಕ್ಕಾಗಿ ಅಖಿಲ ಭಾರತ ವಕೀಲರ ಸಂಘ’ದ (ಎಐಎಲ್‌ಎಜೆ) ಮೊದಲನೇ ರಾಷ್ಟ್ರೀಯ ಸಮ್ಮೇಳನದಲ್ಲಿ ‘ಫ್ಯಾಸಿಸಂ ದಾಳಿ ಎದುರಿಸುವುದರಲ್ಲಿ ವಕೀಲರ ಪಾತ್ರ’ದ ಕುರಿತು ಅವರು ಮಾತನಾಡಿದರು.

‘ದೇಶದಾದ್ಯಂತ ಪ್ರಜಾಪ್ರಭುತ್ವದ ಮೇಲೆ ನಿರಂತರ ದಾಳಿ ನಡೆಯುತ್ತಿದೆ. ಸರ್ವಾಧಿಕಾರ ವಿಜೃಂಭಿಸುತ್ತಿದ್ದು ಹಿಂದೂ ರಾಷ್ಟ್ರ ಸ್ಥಾಪನೆಗೆ ಪ್ರಯತ್ನಿಸಲಾಗುತ್ತಿದೆ. ಭಾಷೆ, ಸಂಸ್ಕೃತಿಗಳ ಬಹುತ್ವವನ್ನು ಹತ್ತಿಕ್ಕಲಾಗುತ್ತಿದೆ’ ಎಂದು ಅವರು ಆತಂಕ ವ್ಯಕ್ತಪಡಿಸಿದರು.

‘ಅಲ್ಪಸಂಖ್ಯಾತರನ್ನು ಗುರಿಯಾಗಿಸಿಕೊಂಡು ಕಾನೂನು ರೂಪಿಸಲಾಗುತ್ತಿದೆ. ಪ್ರಭುತ್ವದ ವಿರುದ್ಧದ ದನಿಯನ್ನು ಅಡಗಿಸಲಾಗುತ್ತಿದೆ. ಕೃಷಿ, ಜಿಎಸ್‌ಟಿಯಂತಹ ಕಾನೂನುಗಳ ಮುಖಾಂತರ ಸರ್ವಾಧಿಕಾರಿ ಧೋರಣೆ ಅನುಸರಿಸಲಾಗುತ್ತಿದೆ. ವಕೀಲರು ತಮ್ಮ ಸಾಮಾಜಿಕ ಜವಾಬ್ದಾರಿಯ ಮುಖಾಂತರ ಇಂತಹ ಅಪಾಯಕಾರಿ ಸನ್ನಿವೇಶವನ್ನು ಸಮರ್ಥವಾಗಿ ಎದುರಿಸಬೇಕಿದೆ’ ಎಂದರು.

‘ವಕೀಲರು ಜನಪರ ಚಳವಳಿಗಳ ಭಾಗವಾಗಬೇಕು. ಚಳವಳಿಗಳು ಏನು ಹೇಳುತ್ತಿವೆ, ಚಳವಳಿಕಾರರ ದನಿಯ ಆಶಯಗಳೇನು ಎಂಬುದನ್ನು ಅರಿಯಬೇಕು. ಹೋರಾಟಗಾರರು ಜೈಲಿನಲ್ಲಿದ್ದರೆ ಅವರಿಗೆ ಜಾಮೀನು ಕೊಡಿಸುವ ಪ್ರಕ್ರಿಯೆಗಳಿಂದ ಹಿಡಿದು ಅವರ ಪರವಾಗಿ ನ್ಯಾಯ ದೊರಕಿಸಲು ಎಲ್ಲ ಪ್ರಯತ್ನ ಮಾಡಬೇಕು. ಸಂವಿಧಾನದ ಮೌಲ್ಯಗಳು, ಮಾನವ ಹಕ್ಕುಗಳ ರಕ್ಷಣೆಯನ್ನು ತಮ್ಮ ವಾದ ಸರಣಿಯಲ್ಲಿ ಇನ್ನೂ ಹೆಚ್ಚಿನ ರೀತಿಯಲ್ಲಿ ಸೇರ್ಪಡೆ ಮಾಡುವ ಮುಖಾಂತರ ಆಶಾದಾಯಕವಾಗಿ ಹೋರಾಟಗಾರರ ಬೆನ್ನಿಗೆ ನಿಲ್ಲಬೇಕು’ ಎಂದರು.

ಕಾರ್ಯಕ್ರಮದಲ್ಲಿ ‘ನ್ಯಾಯಕ್ಕಾಗಿ ಅಖಿಲ ಭಾರತ ವಕೀಲರ ಸಂಘ’ದ ರಾಷ್ಟ್ರ ಸಂಚಾಲಕಿ ಮೈತ್ರೇಯಿ ಕೃಷ್ಣನ್ ಮತ್ತು ಕ್ಲಿಫ್ಟನ್ ಡಿ ರೊಜಾರಿಯೊ ಇದ್ದರು.



ಗಾಳಿ ಮೇಲಿನ ಶಾಲೆಯಲ್ಲಿ ಮಕ್ಕಳು ಪಾಠ ಕಲಿಯುತ್ತಿರುವುದು

ಗಾಲಿ ಮೇಲೆ ಮನೆ ಬಾಗಿಲಿಗೆ ಶಾಲೆ

ಬೆಂಗಳೂರು: ಬಿಬಿಎಂಪಿ ದಕ್ಷಿಣ ವಲಯ ವ್ಯಾಪ್ತಿಯ ಕೊಳೆಗೇರಿ ಮಕ್ಕಳ ವಿದ್ಯಾಭ್ಯಾಸಕ್ಕೆ ರೂಪಿಸಿರುವ ‘ಮನೆ ಬಾಗಿಲಿಗೆ ಶಾಲೆ’ ವಾಹನಕ್ಕೆ ಬಿಬಿಎಂಪಿ ಗುರುವಾರ ಚಾಲನೆ ನೀಡಿತು.

ಫ್ರೀಥಿಂಕಿಂಗ್ ಫೌಂಡೇಷನ್ ಸಹಭಾಗಿತ್ವದಲ್ಲಿ ಅನುಷ್ಠಾನಕ್ಕೆ ತಂದಿರುವ ಈ ಶಾಲೆಗೆ ಬಿಬಿಎಂಪಿ ಸಹಾಯಕ ಆಯುಕ್ತ(ಶಿಕ್ಷಣ) ಉಮೇಶ್ ಅವರು ಚಾಲನೆ ನೀಡಿದರು.

‘ನಗರದ ಕೊಳೆಗೇರಿಗಳಲ್ಲಿ ವಾಸಿಸುವ ಮಕ್ಕಳ ಆರಂಭಿಕ ಕಲಿಕೆಗೆ ಇದು ಅನುಕೂಲ ಆಗಲಿದೆ. ಬೇರೆಲ್ಲಾ ವಲಯಗಳಲ್ಲೂ ಈಗಾಗಲೇ ಈ ಕಾರ್ಯಕ್ರಮ ಜಾರಿಯಲ್ಲಿದೆ’ ಎಂದು ಅವರು ಹೇಳಿದರು.

‘ಪ್ರತಿ ಬಸ್‌ನಲ್ಲಿ 50 ವಿದ್ಯಾರ್ಥಿಗಳು ಕುಳಿತು ಪಾಠ- ಪ್ರವಚನ ಕಲಿಯಲು ಆಸನದ ವ್ಯವಸ್ಥೆ ಮಾಡಲಾಗಿದೆ. ಇದರೊಂದಿಗೆ ಎಲ್ಲ ಕಲಿಕಾ ಸಾಮಗ್ರಿಗಳನ್ನು ಬಸ್ಸಿನಲ್ಲಿ ಇರಿಸಲಾಗಿದೆ. ಈ ಶಾಲೆಯಲ್ಲಿ ಇಬ್ಬರು ಶಿಕ್ಷಕಿಯರು, ಒಬ್ಬರು ಡಿ ಗ್ರೂಪ್ ನೌಕರರು ಇರಲಿದ್ದಾರೆ’ ಎಂದು ವಿವರಿಸಿದರು.

‘ಶೇಷಶಾಸ್ತ್ರಿ ಗುರುತಿಸದ ರಾಜ್ಯ ಸರ್ಕಾರ’

ಬೆಂಗಳೂರು: ‘ರಾಷ್ಟ್ರಮಟ್ಟದಲ್ಲಿ ಹೆಸರು ಮಾಡಿರುವ ಸಂಶೋಧಕ ಡಾ.ಆರ್. ಶೇಷಶಾಸ್ತ್ರಿ ಅವರನ್ನು ರಾಜ್ಯ ಸರ್ಕಾರ ಹಾಗೂ ಇಲ್ಲಿನ ಅಕಾಡೆಮಿಗಳು ಗುರುತಿಸದಿರುವುದು ಅಪಚಾರ’ ಎಂದು ಕನ್ನಡ ಗೆಳೆಯರ ಬಳಗ ತಿಳಿಸಿದೆ.

‘ಡಾ.ಆರ್. ಶೇಷಶಾಸ್ತ್ರಿ ಅವರಿಗೆ ತೆಲುಗಿನ ಪ್ರತಿಷ್ಠಿತ ‘ಸುರವರಂ ಪ್ರತಾಪರೆಡ್ಡಿ ಪುರಸ್ಕಾರ’ ದೊರೆತಿದೆ. ಹೈದರಾಬಾದಿನಲ್ಲಿ ಶನಿವಾರ ನಡೆಯುವ ಸಮಾರಂಭದಲ್ಲಿ ಈ ಪುರಸ್ಕಾರ ಪ್ರದಾನ ಮಾಡಲಾಗುತ್ತದೆ. ಶೇಷಶಾಸ್ತ್ರಿ ಅವರ ‘ಕರ್ನಾಟಕದ ವೀರಗಲ್ಲುಗಳು’ ಸಂಶೋಧನಾ ಗ್ರಂಥ ದೇಶದ ಇನ್ನಾವ ಭಾಷೆಯಲ್ಲೂ ಬಂದಿಲ್ಲ. ಅವರ ಶಾಸನ ಶಾಸ್ತ್ರ ಪರಿಚಯ ಅಪೂರ್ವ ಕೃತಿ. ತೆಲುಗಿನಿಂದ ಕನ್ನಡಕ್ಕೆ, ಕನ್ನಡದಿಂದ ತೆಲುಗಿಗೆ ಹಲವು ಶ್ರೇಷ್ಠ ಕೃತಿಗಳನ್ನು ಅವರು ಅನುವಾದ ಮಾಡಿದ್ದಾರೆ. ಈಗಲಾದರೂ ಅವರನ್ನು ರಾಜ್ಯ ಸರ್ಕಾರ ಗೌರವಿಸುವ ಕೆಲಸ ಮಾಡಲಿ’ ಎಂದು ಬಳಗದ ಸಂಚಾಲಕ ರಾ.ನಂ. ಚಂದ್ರಶೇಖರ್ ಪ್ರಕಟಣೆಯಲ್ಲಿ ಆಗ್ರಹಿಸಿದ್ದಾರೆ.

ಚಪ್ಪಲಿ ಏಟು: ವಕೀಲೆಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಾಂತೇಶ ಚೊಳಚಗುಡ್ಡ ಎಂಬುವವರಿಗೆ ಸಾರ್ವಜನಿಕ ಸ್ಥಳದಲ್ಲಿ ಅವಾಚ್ಯ ಶಬ್ದಗಳಿಂದ ನಿಂದಿಸಿ ಚಪ್ಪಲಿಯಿಂದ ಹೊಡೆದ ಘಟನೆಗೆ ಸಂಬಂಧಿಸಿದಂತೆ ಬಾಗಲಕೋಟೆಯ ವಕೀಲೆ ಸಂಗೀತಾ ಶಿಕ್ಕೇರಿ ಅವರಿಗೆ ರಾಜ್ಯ ವಕೀಲರ ಪರಿಷತ್ ವಿವರಣೆ ಕೇಳಿ ನೋಟಿಸ್ ನೀಡಿದೆ.

ರಾಜ್ಯ ವಕೀಲರ ಪರಿಷತ್‌ನ ಕಾರ್ಯದರ್ಶಿ ಪುಟ್ಟೇಗೌಡ ಈ ಸಂಬಂಧ ಇದೇ 26ರಂದು ನೋಟಿಸ್ ಜಾರಿಗೊಳಿಸಿದ್ದು, ಈ ನೋಟಿಸ್ ತಲುಪಿದ 7 ದಿನಗಳ ಒಳಗಾಗಿ ನಿಮ್ಮ ಅಂದಿನ ಘಟನೆಯಲ್ಲಿ ತೋರಿದ ನಡವಳಿಕೆಗಾಗಿ ವಿವರಣೆ ನೀಡಬೇಕು ಎಂದು ಸೂಚಿಸಿದೆ.

ಇದೇ 14ರಂದು ಬಾಗಲಕೋಟೆಯ ವಕೀಲೆ ಸಂಗೀತಾ ಶಿಕ್ಕೇರಿ ಅವರಿಗೆ ಮಹಾಂತೇಶ ಚೊಳಚುಗುಡ್ಡ ಕಾಲಿನಿಂದ ಒದೆಯುತ್ತಿರುವುದು ವಿಡಿಯೊದಲ್ಲಿ ದಾಖಲಾಗಿ ಸಾಮಾಜಿಕ ಮಾಧ್ಯಮಗಳು ಹಾಗೂ ಪತ್ರಿಕೆಗಳಲ್ಲಿ ಸಾಕಷ್ಟು ವೈರಲ್ ಆಗಿತ್ತು.

ವಕೀಲೆಯೊಬ್ಬರ ಮೇಲೆ ನಡೆದಂತಹ ಈ ಘಟನೆಯನ್ನು ರಾಜ್ಯ ವಕೀಲರ ಸಂಘ ಮತ್ತು ಪರಿಷತ್ ತೀವ್ರವಾಗಿ ಖಂಡಿಸಿದ್ದವು. ಆದರೆ, ಕೆಲ ದಿನಗಳ ಬಳಿಕ ಇದಕ್ಕೆ ತದ್ವಿರುದ್ಧವಾಗಿ ಸಂಗೀತಾ ಶಿಕ್ಕೇರಿ ಅವರು ಮಹಾಂತೇಶ ಅವರಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿ ತಮ್ಮ ಚಪ್ಪಲಿಯಿಂದ ಹೊಡೆದ ವಿಡಿಯೊ ದೃಶ್ಯಗಳು ಬಯಲಾಗಿದ್ದವು.

‘ನಿಮ್ಮ ನಡವಳಿಕೆ ವಕೀಲರ ಕಾಯ್ದೆ–1961ಕ್ಕೆ ವಿರುದ್ಧವಾಗಿದೆ. ಉದಾತ್ತವಾದ ವಕೀಲಿ ವೃತ್ತಿಯ ಘನತೆಗೆ ತಮ್ಮ ನಡವಳಿಕೆ ತಕ್ಕುದ್ದಲ್ಲ. ಇದನ್ನು ಒಪ್ಪಲು ಸಾಧ್ಯವಿಲ್ಲ’ ಎಂದು ನೋಟಿಸ್‌ನಲ್ಲಿ ತಿಳಿಸಲಾಗಿದೆ.



ಚಿತ್ರಕಲಾ ಪ್ರದರ್ಶನ

ಕರ್ನಾಟಕ ಚಿತ್ರಕಲಾ ಪರಿಷತ್ತಿನಲ್ಲಿ ಆಯೋಜಿಸಿರುವ ‘ದಿ ನೇಚರ್ ವಿಥಿನ್’ ಚಿತ್ರಕಲಾ ಪ್ರದರ್ಶನದಲ್ಲಿ ಕಲಾವಿದ ಡಿ.ಎಸ್. ಚೌಗಲೆ (ಬಲಗಡೆಯವರು) ತಮ್ಮ ಕಲಾಕೃತಿಗಳ ಬಗ್ಗೆ ಕಲಾಸಕ್ತರಿಗೆ ಮಾಹಿತಿ ನೀಡಿದರು. ಪ್ರದರ್ಶನ ಮೇ 31ರವರೆಗೆ ನಡೆಯಲಿದೆ –ಪ್ರಜಾವಾಣಿ ಚಿತ್ರ

ನಗರದಲ್ಲಿ ಇಂದು

ಪ್ರೇರಣಾ ಸಮಾರಂಭ: ಸಾನ್ನಿಧ್ಯ: ಈಶ್ವರಾನಂದಪುರಿ ಸ್ವಾಮೀಜಿ, ಯೋಗೇಶ್ವಾರಾನಂದ ಸ್ವಾಮೀಜಿ, ಉದ್ಘಾಟನೆ: ಯುವರಾಜ ಯಶವಂತ ರಾವ್ ಹೋಳ್ಕರ್, ಆಯೋಜನೆ: ಕಾಳಿದಾಸ್ ಹೆಲ್ತ್ ಆ್ಯಂಡ್ ಎಜುಕೇಷನ್ ಟ್ರಸ್ಟ್, ಸ್ಥಳ: ಸಾಯಿ ಕಲಾ ಮಂದಿರ, ಕೋದಂಡ ರಾಮ ದೇವಸ್ಥಾನ ಸಂಕೀರ್ಣ, ಕಾಚರಕನಹಳ್ಳಿ, ಬೆಳಿಗ್ಗೆ 10

ಪಂ.ಎ. ಚಂದ್ರಶೇಖರ ಗವಾಯಿ ಪುಣ್ಯ ಸ್ಮರಣೆ: ಅತಿಥಿಗಳು: ವೈ.ಕೆ. ಮುದ್ದುಕೃಷ್ಣ, ಬಲವಂತರಾವ್ ಪಾಟೀಲ, ನಂದಕುಮಾರ ಕುರುಡಿ, ಅಧ್ಯಕ್ಷತೆ: ಮುದ್ದುಮೋಹನ್, ಆಯೋಜನೆ: ಪಂ.ಎ. ಚಂದ್ರಶೇಖರ ಗವಾಯಿ ಅವರ ಪುಣ್ಯ ಸ್ಮರಣೆ ಸಂಗೀತೋತ್ಸವ ಸಮಿತಿ, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಸವನಗುಡಿ, ಬೆಳಿಗ್ಗೆ 10

‘ಸಿರಿಬೆಳಗು’ ಪ್ರಶಸ್ತಿ ಪ್ರದಾನ: ಹಂಸಲೇಖ, ಪ್ರಶಸ್ತಿ ಪುರಸ್ಕೃತರು: ತೀ.ನಂ. ಶಂಕರನಾರಾಯಣ, ದಳವಾಯಿ ಚಿತ್ತಪ್ಪ, ಅತಿಥಿಗಳು: ಡಿ.ಎನ್. ಮುನಿಕೃಷ್ಣ, ಕೆ. ಕೃಷ್ಣ, ರಾಜಣ್ಣ, ಗೌರವಾರ್ಪಣೆ: ಎಂ.ವಿ. ಅಶೋಕ್, ಟಿ.ಕೆ. ದೊಡ್ಡಣ್ಣ, ಅಧ್ಯಕ್ಷತೆ: ಮಲ್ಲಿಕಾರ್ಜುನ ಕಲಮರಹಳ್ಳಿ, ಆಯೋಜನೆ: ನಾಡೋಜ ಸಿರಿಯಜ್ಜಿ ಸಾಂಸ್ಕೃತಿಕ ಪ್ರತಿಷ್ಠಾನ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 10.30

ನಾಡಲ್ಲಿ ಏಕದಾರಿ ಬೆಳಕು ಮತ್ತು ತತ್ವಪದ ಗಾಯನ ಸಮಾರಂಭ: ಉದ್ಘಾಟನೆ: ಎಸ್. ಸೋಮಶೇಖರ್, ಅಧ್ಯಕ್ಷತೆ: ಕಲಾವತಿ ಮಂಜುನಾಥ, ಆಯೋಜನೆ: ಮಲೈಮಹದೇಶ್ವರ ಸಾಂಸ್ಕೃತಿಕ ಸೇವಾ ಟ್ರಸ್ಟ್, ಸ್ಥಳ: ಏಕದಾರಿ ರಾಮಯ್ಯ ರಸ್ತೆ, ಕೆಂಚನಪಾಳ್ಯ, ಬೆಳಿಗ್ಗೆ 10.30

ಆರ್.ಎಚ್. ದೇಶಪಾಂಡೆ ಸ್ಮಾರಕ ದತ್ತಿ ಉಪನ್ಯಾಸ: ‘ಜಾನಪದ ಅಧ್ಯಯನದಲ್ಲಿ ಹೊಸ ಸಾಧ್ಯತೆಗಳು’ ಉಪನ್ಯಾಸ: ಡಾ.ಎಸ್.ಪಿ. ಮಹಾಲಿಂಗೇಶ್ವರ; ‘ಜಾನಪದ ಕಲೆಗಳ ಅಳಿವು ಉಳಿವು’, ಉಪನ್ಯಾಸ: ಡಾ. ರಾಮು ಮೂಲಗಿ, ಆಯೋಜನೆ ಹಾಗೂ ಸ್ಥಳ: ದಿ ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಬೆಳಿಗ್ಗೆ 11

8ನೇ ಸಾಮಾನ್ಯ ಸಮ್ಮೇಳನ: ಉದ್ಘಾಟನೆ: ನ್ಯಾ.ಎಚ್.ಎನ್. ನಾಗಮೋಹನ್ ದಾಸ್, ಮುಖ್ಯ ಅತಿಥಿ: ಶ್ರೀಕಾಂತ್ ಮಿಶ್ರಾ, ಅಧ್ಯಕ್ಷತೆ: ಅಶೋಕ್ ತಿವಾರಿ, ಆಯೋಜನೆ: ಆಲ್ ಇಂಡಿಯಾ ಇನ್ಶುರೆನ್ಸ್ ಪೆನ್ಶನರ್ಸ್ ಅಸೋಸಿಯೇಷನ್, ಸ್ಥಳ: ಸಿಟಿ ಸೆಂಟಾರ್ ಹೋಟೆಲ್, ಜಿ.ಟಿ. ರಸ್ತೆ, ಬೆಳಿಗ್ಗೆ 11

ಕೆ.ಬಿ. ಫೌಂಡೇಷನ್ ಪ್ರಾರಂಭೋತ್ಸವ ಹಾಗೂ ಪತ್ರಕರ್ತ ರು. ಬಸಪ್ಪ ಅವರ 80ನೇ ಹುಟ್ಟುಹಬ್ಬ: ಉದ್ಘಾಟನೆ: ಟಿ. ತಿಮ್ಮೇಗೌಡ, ಅಧ್ಯಕ್ಷತೆ: ಬಿ.ಎ. ನಂಜುಂಡಸ್ವಾಮಿ, ಅತಿಥಿಗಳು: ಅ.ಚ. ಶಿವಣ್ಣ, ಪಿ.ರುದ್ರಪ್ಪ, ಎನ್. ರಾಮನಾಥ್, ಆಯೋಜನೆ: ಕೃಷ್ಣಮೂರ್ತಿ ಬಸಪ್ಪ ಫೌಂಡೇಷನ್, ಸ್ಥಳ: ಎಸ್.ಜೆ.ಆರ್.ಸಿ. ಸಭಾಂಗಣ, ಆನಂದರಾವ್ ವೃತ್ತ, ಬೆಳಿಗ್ಗೆ 11

ಯಕ್ಷಗಾನ ಪ್ರದರ್ಶನ: ಪ್ರಸಂಗ: ‘ರುರು–ಪ್ರಮದ್ವಾರಾ’, ಆಯೋಜನೆ: ‘ಸು’ದರ್ಶನ ಮೈಯಾಸ್ ಯಕ್ಷಗಾನ, ಕರ್ಣಾಟಕ ಬ್ಯಾಂಕ್, ಪದ್ಮಕಮಲ ಟ್ರಸ್ಟ್, ಸ್ಥಳ: ಡಾ.ಎಚ್.ಎನ್. ಕಲಾಕ್ಷೇತ್ರ, ನ್ಯಾಷನಲ್ ಕಾಲೇಜು, ಜಯನಗರ

ಗುರುವಂದನೆ: ವಿಧುಶೇಖರ ಭಾರತೀ ಸ್ವಾಮೀಜಿ, ನೇತೃತ್ವ: ಅಶೋಕ ಹಾರನಹಳ್ಳಿ, ಆಯೋಜನೆ: ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ, ಸ್ಥಳ: ಭಾರತೀತೀರ್ಥ ಸಭಾ ಭವನ, ಶಂಕರಮಠದ ಆವರಣ, ಶಂಕರಪುರ, ಸಂಜೆ 5



ವಿಧುಶೇಖರ ಭಾರತೀ ಸ್ವಾಮೀಜಿ

16ನೇ ವಾರ್ಷಿಕೋತ್ಸವ ಸಂಗೀತ ಸಂಭ್ರಮ: ಸರೋದ್: ಇಂದ್ರಾಯುಧ ಮಜುಂದಾರ್, ತಬಲಾ: ದೇಬಜಿತ್ ಪಟಿಟುಂಡಿ, ಗಾಯನ: ಪದ್ಮಾ ತಲವಲ್ಕರ್, ಹಾರ್ಮೋನಿಯಂ: ರವೀಂದ್ರ ಕಾಟೋತಿ, ತಬಲಾ: ಉದಯರಾಜ್ ಕರ್ಪೂರ, ಆಯೋಜನೆ: ಸಪ್ತಕ, ಸ್ಥಳ: ಚೌಡಯ್ಯ ಸಭಾಭವನ, ಮಲ್ಲೇಶ್ವರ, ಸಂಜೆ 5

ನೃತ್ಯೋತ್ಸವ: ಈಶಾ ಪಿ., ನಿಧಿ ಸುಭಾಷ್, ಮೊಹುಲ್ ಮುಖರ್ಜಿ, ದೇಬಾಶಿಷ್ ಪಟ್ನಾಯಕ್ ಲೀನಾ ಮೊಹಾಂತಿ, ಅತಿಥಿ: ವೈ.ಕೆ. ಸಂಧ್ಯಾ ಶರ್ಮಾ, ಆಯೋಜನೆ: ನೃತ್ಯಾಂಕುರ ಫೌಂಡೇಷನ್, ಸ್ಥಳ: ಆರ್ಟ್‌ಖೋಜ್, ಜೆ.ಪಿ.ನಗರ, ಸಂಜೆ 6

‘ಜಾಂಬವತಿ ಕಲ್ಯಾಣ’ ಯಕ್ಷಗಾನ: ಹಿಮ್ಮೇಳ: ಕೊಳಗಿ ಕೇಶವ ಹೆಗಡೆ, ಎ.ಪಿ. ಪಾಟಕ್, ಗಣೇಶ ಗಾಂವಕರ್, ನಾರಾಯಣ ಹೆಬ್ಬಾರ್, ಮುಮ್ಮೇಳ: ದತ್ತಮೂರ್ತಿ ಭಟ್, ಪ್ರಶಾಂತ ವರ್ಧನ್, ಚಂದ್ರಣ್ಣ ಜೈಪುರ, ವೆಂಕಟೇಶ ಹೆಗಡೆ ಬಗರಿಮಕ್ಕಿ, ನವ್ಯ ಡಿ. ಭಟ್, ನಾಗಪತಿ ಹೆಗಡೆ, ಆಯೋಜನೆ: ನಾಟ್ಯಶ್ರೀ ಕಲಾ ತಂಡ ಶಿವಮೊಗ್ಗ, ಸ್ಥಳ: ಮಾರುತಿ ಬಡಾವಣೆ ಆಟದ ಮೈದಾನ, ವಸಂತಪುರ, ಸಂಜೆ 6.30



ಕೊಳಗಿ ಕೇಶವ ಹೆಗಡೆ

ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ 99.04 ಅಂಕ ಗಳಿಸಿದ ವಂದೇ ಮಾತರಂ ಶಾಲೆಯ ಅನುಷಾ ಮತ್ತು ಸಹಪಾಠಿಗಳಿಗೆ ಅಭಿನಂದನಾ ಸಮಾರಂಭ: ಅತಿಥಿಗಳು: ಶಾಸಕ ರವಿಸುಬ್ರಹ್ಮಣ್ಯ, ಕೊಳಲುವಾದಕ ಎಚ್.ಎಸ್.ವೇಣುಗೋಪಾಲ, ಅದಮ್ಯ ಚೇತನ ಸಂಸ್ಥಾಪಕಿ ತೇಜಸ್ವಿನಿ ಅನಂತಕುಮಾರ್, ಸ್ಥಳ: ವಂದೇ ಮಾತರಂ ಶಾಲೆಯ ಎದುರು, ಬೆಳಿಗ್ಗೆ 10

ಜೆಡಿಎಸ್ ಬಿಟ್ಟಿಲ್ಲ: ಶಾಸಕ ಶ್ರೀನಿವಾಸ್

ಹಾಗಲವಾಡಿ: 'ನಾನು ಜೆಡಿಎಸ್ ಬಿಟ್ಟಿರುವುದಾಗಿ ಎಂದೂ, ಎಲ್ಲೂ ಹೇಳಿಲ್ಲ. ಇನ್ನೊಬ್ಬರನ್ನು ತಂದು ಜೆಡಿಎಸ್ ಅಭ್ಯರ್ಥಿ ಎಂದು ಘೋಷಿಸಿದವರನ್ನೇ ಕೇಳಬೇಕು. ಕಾರ್ಯಕರ್ತರಲ್ಲಿ ಗೊಂದಲಬೇಡ' ಎಂದು ಗುಬ್ಬಿ ಜೆಡಿಎಸ್ ಶಾಸಕ ಶ್ರೀನಿವಾಸ್ ಹೇಳಿದ್ದಾರೆ.

'ಗುಬ್ಬಿ ಕ್ಷೇತ್ರದಲ್ಲಿ ಹಾಲಿ ಶಾಸಕರಿದ್ದರೂ ಇನ್ನೊಬ್ಬರನ್ನು ಅಭ್ಯರ್ಥಿ ಎಂದು ಘೋಷಿಸಿ ಗೊಂದಲ ಸೃಷ್ಟಿಸಿದ ಮುಖಂಡರೇ ನನಗೆ ಕರೆಮಾಡಿ ಮಾತಾಡಲು ಕರೆಯುತ್ತಿದ್ದಾರೆ. ಕುಳಿತು ಮಾತನಾಡಿದರೆ ತಿಳಿಯುತ್ತದೆ' ಎಂದರು.

'ಇಂಡಿಯಾಸ್ ಸನ್ಸ್' ಸಾಕ್ಷ್ಯಚಿತ್ರ ಪ್ರದರ್ಶನ

ಬೆಂಗಳೂರು: ನಗರದ ಬಸವನ ಗುಡಿಯ ಎನ್.ಆರ್. ಕಾಲೋನಿಯ ಡಾ.ಸಿ. ಅಶ್ವತ್ಥ್ ಕಲಾ ಭವನದಲ್ಲಿ ಮೇ 29ರಂದು 'ಇಂಡಿಯಾಸ್ ಸನ್ಸ್' ಸಾಕ್ಷ್ಯಚಿತ್ರ ಪ್ರದರ್ಶನ ನಡೆಯಲಿದೆ.

ಮಧ್ಯಾಹ್ನ 3.30ಕ್ಕೆ ಮತ್ತು ಸಂಜೆ 7ಕ್ಕೆ ಸಾಕ್ಷ್ಯಚಿತ್ರ ಪ್ರದರ್ಶನವಿದೆ. ದೀಪಿಕಾ ನಾರಾಯಣ ಭಾರದ್ವಾಜ್ ಮತ್ತು ನೀರಜ ಕುಮಾರ್ ಅವರು ಈ ಸಾಕ್ಷ್ಯ ಚಿತ್ರವನ್ನು ನಿರ್ದೇಶಿಸಿದ್ದಾರೆ.

ಅತ್ಯಾಚಾರ ಕಾನೂನುಗಳ ದುರುಪಯೋಗದ ಕುರಿತು ನೈಜಚಿತ್ರಣವನ್ನು ಈ ಸಾಕ್ಷ್ಯಚಿತ್ರ ಬಿಂಬಿಸಿದೆ ಎಂದು ದೀಪಿಕಾ ಭಾರದ್ವಾಜ್ ತಿಳಿಸಿದ್ದಾರೆ.

ನಿಧನ ವಾರ್ತೆ

ಪತ್ರಿಕಾ ವಿತರಕ ರಾಮಪ್ಪ


ರಾಮಪ್ಪ

ಬೆಂಗಳೂರು: ವಿಜಯನಗರ ಭಾಗದ ಪತ್ರಿಕಾ ವಿತರಕ ರಾಮಪ್ಪ (85) ಅವರು ಶುಕ್ರವಾರ ರಾತ್ರಿ ನಿಧನರಾದರು.

ಅತ್ತಿಬೆಲೆ ನರಸಾಪುರದ ರಾಮಪ್ಪ, 35 ವರ್ಷದಿಂದ ಪತ್ರಿಕಾ ವಿತರಕ ಕೆಲಸ ಮಾಡುತ್ತಿದ್ದರು. ಅವರಿಗೆ ಪತ್ನಿ ಹಾಗೂ ಇಬ್ಬರು ಪುತ್ರರು ಇದ್ದಾರೆ.

ಎಂ.ಎಸ್.ವೆಂಕಟೇಶಯ್ಯ


ವೆಂಕಟೇಶಯ್ಯ

ಬೆಂಗಳೂರು: ಕೆ.ಜಿ. ನಗರ ಲಕ್ಷ್ಮಿಪುರದ ವಿಕ್ರಮಾದಿತ್ಯ ರಸ್ತೆ ನಿವಾಸಿ ಎಂ.ಎಸ್. ವೆಂಕಟೇಶಯ್ಯ (72) ಅವರು ಶನಿವಾರ ನಿಧನ ಹೊಂದಿದರು.

ಅವರಿಗೆ ಪತ್ನಿ ಹಾಗೂ ಇಬ್ಬರು ಪುತ್ರಿಯರಿದ್ದಾರೆ.

'ನಾಡಿನ ಅನಾಮಧೇಯ ಹೋರಾಟಗಾರರ ಪುಸ್ತಕ ರಚನೆ'

ಅಮೃತ ಭಾರತಿಗೆ ಕನ್ನಡದಾರತಿ ಅಭಿಯಾನಕ್ಕೆ ಸಿ.ಎಂ ಬೊಮ್ಮಾಯಿ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡ ಕನ್ನಡ ನಾಡಿನ ಅನಾಮಧೇಯ ಹೋರಾಟಗಾರರನ್ನು ಗುರುತಿಸಿ, ಅವರ ಇತಿಹಾಸವನ್ನು ಪುಸ್ತಕದ ರೂಪದಲ್ಲಿ ಆ.15ರಂದು ಲೋಕಾರ್ಪಣೆ ಮಾಡಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವ ಅಂಗವಾಗಿ ಬೆಂಗಳೂರು ನಗರ ಜಿಲ್ಲೆ ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ನಗರದಲ್ಲಿ ಶನಿವಾರ ಹಮ್ಮಿಕೊಂಡ 'ಅಮೃತ ಭಾರತಿಗೆ ಕನ್ನಡದಾರತಿ' ಅಭಿಯಾನ ಉದ್ಘಾಟಿಸಿ ಅವರು ಮಾತನಾಡಿದರು. 'ಸ್ವಾತಂತ್ರ್ಯ ಹೋರಾಟದಲ್ಲಿ ಅನಾಮಧೇಯ ಜನರು ಆಸ್ತಿಪಾಸ್ತಿ, ಜೀವ ಕಳೆದುಕೊಂಡಿದ್ದಾರೆ. ಸ್ವದೇಶಿ ಚಳವಳಿಯಲ್ಲಿ ಮನೆಯಲ್ಲಿದ್ದ ಮಹಿಳೆಯರೂ ಬೀದಿಗೆ ಬಂದು ಹೋರಾಡಿದರು. ಸ್ವಾತಂತ್ರ್ಯ ಹೋರಾಟಕ್ಕೆ ಕನ್ನಡ ನಾಡಿನ ಕೊಡುಗೆ ದೊಡ್ಡ ಪ್ರಮಾಣದಲ್ಲಿ ಇದೆ. ಹೊಸ ಚಿಂತನೆಯೊಂದಿಗೆ ಕರ್ನಾಟಕ ಕಟ್ಟುವ ಮೂಲಕ ದೇಶಕ್ಕೆ ದೊಡ್ಡ ಕೊಡುಗೆ ನೀಡಬೇಕು' ಎಂದು ಹೇಳಿದರು.

ಶಾಸಕ ದಿನೇಶ್ ಗುಂಡೂರಾವ್, 'ನಮ್ಮ ಮಕ್ಕಳಿಗೆ ಸ್ವಾತಂತ್ರ್ಯ ಸಂಗ್ರಾಮದ ವಿಚಾರವನ್ನು ಹೆಚ್ಚಿನ ರೀತಿಯಲ್ಲಿ ತಿಳಿಸಬೇಕು. ದೇಶವು ಜಗತ್ತಿನಲ್ಲಿ ಆಕರ್ಷಣೆಯಾಗಲು ಇಲ್ಲಿನ ಬಹುತ್ವ ಪ್ರಮುಖ ಕಾರಣ. ವಿವಿಧ ಸಂಪ್ರದಾಯ, ಭಾಷೆ, ಜನಾಂಗ ಸೇರಿದಂತೆ ವೈವಿಧ್ಯವನ್ನು ಕಾಣಲು ಸಾಧ್ಯ. ಪ್ರಜಾಪ್ರಭುತ್ವದ ವ್ಯವಸ್ಥೆ ನಮ್ಮನ್ನು ಕಾಪಾಡಿಕೊಂಡು ಬಂದಿದೆ. ನಮ್ಮ ರಾಜ್ಯದಲ್ಲಿ ನಡೆದ ಹೋರಾಟಗಳ ಬಗ್ಗೆ ಮಾಹಿತಿ ತಿಳಿಸುತ್ತಿರುವುದು ಉತ್ತಮಕಾರ್ಯ. ಸಮಾಜವನ್ನು ಒಗ್ಗೂಡಿಸಿ, ಮುಂದೆ ಸಾಗಲು ಅಮೃತ ಮಹೋತ್ಸವ ಕಾರಣ ಆಗಬೇಕು' ಎಂದು ತಿಳಿಸಿದರು.

ಸಂಸದ ಪಿ.ಸಿ. ಮೋಹನ್, 'ನಾಡಿನ ಬಹಳಷ್ಟು ಜನ ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಾಣ ತ್ಯಾಗ ಮಾಡಿದ್ದಾರೆ. ಯುವ ಪೀಳಿಗೆಗೆ ಸ್ವಾತಂತ್ರ್ಯ ಹೋರಾಟದ ಬಗ್ಗೆ ನೆನಪಿಸಬೇಕು. ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದ ಕನ್ನಡಿಗರ ಬಗ್ಗೆ ಶಾಲಾ ಪಠ್ಯಪುಸ್ತಕದಲ್ಲಿ ಸೇರಿಸಬೇಕು. ಬ್ರಿಟಿಷರ ಹೆಸರುಗಳಿರುವ ನಗರದ ರಸ್ತೆಗಳಿಗೆ ಕನ್ನಡಿಗರ ಹೆಸರು ಇಡಬೇಕು' ಎಂದು ಆಗ್ರಹಿಸಿದರು.

ಇದಕ್ಕೂ ಮೊದಲು ಸ್ವರಸಿಂಚನ ಕಲಾ ಬಳಗದ ಪದ್ಮಿನಿ ಓಕ್ ಹಾಗೂ ಸಂಗಡಿಗರಿಂದ ದೇಶಭಕ್ತಿ ಗೀತೆಗಳ ಗಾಯನ, ಸಪ್ತಸ್ವರ ಆರ್ಟ್ ಆ್ಯಂಡ್ ಕ್ರಿಯೇಷನ್ಸ್‌ನಿಂದ ನೃತ್ಯ ಕಾರ್ಯಕ್ರಮ ನಡೆಯಿತು.


ಅಮೃತ ಭಾರತಿಗೆ ಕನ್ನಡದಾರತಿ ಅಭಿಯಾನದ ಭಾಗವಾಗಿ ಸ್ವಯಂಸೇವಕರು ತ್ರಿವರ್ಣ ಧ್ವಜ ಹಿಡಿದು ಪಥಸಂಚಲನ ನಡೆಸಿದರು – ಪ್ರಜಾವಾಣಿ ಚಿತ್ರ

'ರಾಷ್ಟ್ರಭಕ್ತಿಯ ಪಠ್ಯಪುಸ್ತಕ ಅಗತ್ಯ'

'ಶಾಲಾ ಪಠ್ಯಪುಸ್ತಕವನ್ನು 70 ವರ್ಷಗಳಿಂದ ಅರಾಷ್ಟ್ರೀಯಗೊಳಿಸುವ ಪ್ರಯತ್ನ ನಡೆದಿದೆ. ಈಗ ಪರಿಷ್ಕರಣೆಯ ಬಗ್ಗೆ ಚರ್ಚೆ ನಡೆಯುತ್ತಿದೆ. ರಾಷ್ಟ್ರ ಭಕ್ತಿ ಬೆಳೆಸುವ, ದೇಶಾಭಿಮಾನ ಮೂಡಿಸುವ ಪಠ್ಯಪುಸ್ತಕ ಅಗತ್ಯ. ಅಪ್ಪ–ಅಮ್ಮನನ್ನು ಅನಾಥಾಶ್ರಮಗಳಿಗೆ ಕಳಿಸುವ, ಮಕ್ಕಳನ್ನು ಬೀದಿಗೆ ಕಳುಹಿಸುವ ಪಠ್ಯಪುಸ್ತಕ ಬೇಕಾಗಿಲ್ಲ. ಮನುಷ್ಯರನ್ನು ಮನುಷ್ಯರನ್ನಾಗಿಸುವ ಪಠ್ಯಪುಸ್ತಕ ಬೇಕು. ಅಂತಹ ಪಠ್ಯಪುಸ್ತಕವನ್ನು ಸರ್ಕಾರ ತರಬೇಕು' ಎಂದು ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಬಿ.ವಿ. ವಸಂತ್ ಕುಮಾರ್ ತಿಳಿಸಿದರು.

ವ್ಯವಸ್ಥಾಪಕನ ಮೇಲೆ ಸಿಟ್ಟು: ಕಳ್ಳತನ

ಬೆಂಗಳೂರು: ಕೆಲಸಕ್ಕಿದ್ದ ಕಂಪನಿ ವ್ಯವಸ್ಥಾಪಕನ ಮೇಲಿನ ಸಿಟ್ಟಿಗಾಗಿ, ಕಂಪನಿಯ ಲ್ಯಾಪ್‌ಟಾಪ್‌ಗಳನ್ನು ಕಳ್ಳತನ ಮಾಡಿದ್ದ ಆರೋಪದಡಿ ಸಯ್ಯದ್ ಮೊಹಮ್ಮದ್ (30) ಎಂಬುವರನ್ನು ಕೋರಮಂಗಲ ಪೊಲೀಸರು ಬಂಧಿಸಿದ್ದಾರೆ.

'ಚಾಮರಾಜಪೇಟೆ ನಿವಾಸಿ ಸಯ್ಯದ್, ಕೋರಮಂಗಲ 5ನೇ ಹಂತದಲ್ಲಿರುವ ವೇಕ್‌ಫಿಟ್ ಇನೋವೇಷನ್ಸ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ. ಈತನಿಂದ ₹ 2 ಲಕ್ಷ ಮೌಲ್ಯದ 8 ಲ್ಯಾಪ್‌ಟಾಪ್ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಕಂಪನಿ ವ್ಯವಸ್ಥಾಪಕ, ಹೆಚ್ಚು ಕೆಲಸ ನಿರ್ವಹಿಸುವಂತೆ ಆರೋಪಿಗೆ ಹೇಳುತ್ತಿದ್ದರು. ಇದೇ ವಿಚಾರವಾಗಿ ಇಬ್ಬರ ನಡುವೆ ಮಾತಿನ ಚಕಮಕಿ ನಡೆದು, ವೈಷಮ್ಯ ಮೂಡಿತ್ತು. ವ್ಯವಸ್ಥಾಪಕನಿಗೆ ಬುದ್ಧಿ ಕಲಿಸಲು ಆರೋಪಿ, ಪರಿಚಯಸ್ಥ ಬಾಲಕರೊಂದಿಗೆ ಸೇರಿ ಲ್ಯಾಪ್‌ಟಾಪ್ ಕಳ್ಳತನ ಮಾಡಿದ್ದ. ಕಳ್ಳತನದ ಆರೋಪ ವ್ಯವಸ್ಥಾಪಕನ ಮೇಲೆ ಬರುವಂತೆ ಸಂಚು ರೂಪಿಸಿದ್ದ.'

'ಲ್ಯಾಪ್‌ಟಾಪ್ ಕಳ್ಳತನ ಬಗ್ಗೆ ಪ್ರಕರಣ ದಾಖಲಾಗುತ್ತಿದ್ದಂತೆಯೇ ಕಂಪನಿ ಹಾಗೂ ಸುತ್ತಮುತ್ತಲಿನ ಸಿ.ಸಿ. ಟಿ.ವಿ ಕ್ಯಾಮೆರಾ ದೃಶ್ಯಗಳನ್ನು ಪರಿಶೀಲಿಸಲಾಗಿತ್ತು. ಆರೋಪಿ ಸಯ್ಯದ್ ಸುಳಿವು ಸಿಕ್ಕಿತ್ತು' ಎಂದೂ ತಿಳಿಸಿದರು.

ಚಕ್ರತೀರ್ಥಗೆ ಪೊಲೀಸ್ ಭದ್ರತೆ

ಬೆಂಗಳೂರು: ಶಾಲಾ ಪಠ್ಯ ಪುಸ್ತಕ ಪರಿಷ್ಕರಣೆ ವಿಚಾರವಾಗಿ ರಾಜ್ಯದಲ್ಲಿ ಪರ–ವಿರೋಧ ಚರ್ಚೆ ನಡೆಯುತ್ತಿದ್ದು, ಪಠ್ಯ ಪುಸ್ತಕ ಪರಿಷ್ಕರಣಾ ಸಮಿತಿ ಅಧ್ಯಕ್ಷ ರೋಹಿತ್ ಚಕ್ರತೀರ್ಥ ಅವರಿಗೆ ಹೆಚ್ಚಿನ ಭದ್ರತೆ ನೀಡುವಂತೆ ಗುಪ್ತಚರ ಇಲಾಖೆ, ಪೊಲೀಸರಿಗೆ ಸಲಹೆ ನೀಡಿದೆ.

'ರೋಹಿತ್ ಅವರು ಹಲವು ಕಾರ್ಯಕ್ರಮಗಳಲ್ಲಿ ಭಾಗ ವಹಿಸುತ್ತಿದ್ದಾರೆ. ಅಲ್ಲೆಲ್ಲ ಪ್ರತಿಭಟನೆಗಳು ಹಾಗೂ ಅಹಿತಕರ ಘಟನೆಗಳು ನಡೆಯುವ ಸಾಧ್ಯತೆ ಇದೆ. ಹೀಗಾಗಿ, ಕಾರ್ಯಕ್ರಮ ಸ್ಥಳದಲ್ಲಿ ಭದ್ರತೆ ನೀಡಲು ಕ್ರಮ ಕೈಗೊಳ್ಳಿ' ಎಂದು ಗುಪ್ತಚರ ಅಧಿಕಾರಿಗಳು ಹೇಳಿರುವುದಾಗಿ ಗೊತ್ತಾಗಿದೆ.

ಈ ಬಗ್ಗೆ ಪ್ರತಿಕ್ರಿಯಿಸಿದ ಪೊಲೀಸ್ ಅಧಿಕಾರಿಯೊಬ್ಬರು, 'ಕಾರ್ಯಕ್ರಮ ನಡೆಯುವ ವ್ಯಾಪ್ತಿಯಲ್ಲಿರುವ ಠಾಣೆ ಪೊಲೀಸರೇ ರೋಹಿತ್ ಅವರಿಗೆ ಭದ್ರತೆ ನೀಡಲಿದ್ದಾರೆ' ಎಂದರು.

'ರೋಹಿತ್ ಅವರು ಪಾಲ್ಗೊಳ್ಳುವ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ಪಡೆದು, ಅಲ್ಲೆಲ್ಲ ಭದ್ರತೆಗೆ ಕ್ರಮ ಕೈಗೊಳ್ಳಲಾಗಿದೆ. ಅಗತ್ಯವಿರುವ ಕಡೆ ನುರಿತ ಸಿಬ್ಬಂದಿಯನ್ನು ಭದ್ರತೆಗೆ ನಿಯೋಜಿಸಲಾಗುತ್ತಿದೆ. ಇದು ಮುಂಜಾಗ್ರತಾ ಕ್ರಮವಷ್ಟೇ' ಎಂದೂ ತಿಳಿಸಿದರು.

ನಗರದ ಸಾವಿರ ಕಡೆ ಪುಸ್ತಕಗಳ ರ್‍ಯಾಕ್ ಇರಿಸಲು ಯೋಜನೆ

'ಹೋಟೆಲ್, ಮಾಲ್‌ಗಳಲ್ಲೂ ಸಿಗಲಿದೆ ಕನ್ನಡ ಪುಸ್ತಕ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಫಿ ಶಾಪ್, ಹೋಟೆಲ್, ರೆಸ್ಟೋರೆಂಟ್, ಔಷಧ ಮಳಿಗೆ, ಆಸ್ಪತ್ರೆ, ಮಾಲ್, ಕಾರ್ಪೊರೇಟ್ ಕಂಪನಿಗಳ ಕಚೇರಿಗಳು ಸೇರಿದಂತೆ ವಿವಿಧೆಡೆ ಕನ್ನಡ ಪುಸ್ತಕಗಳು ದೊರೆಯಲಿವೆ.

ವೀರಲೋಕ ಬುಕ್ಸ್ ಪ್ರೈ. ಲಿ. ಸಂಸ್ಥೆಯು ನಗರದಲ್ಲಿ ಸಾವಿರ ಕಡೆ ಪುಸ್ತಕಗಳ ರ್‍ಯಾಕ್ ಇರಿಸಲು ಮುಂದಾಗಿದೆ. ಕಾರ್ಪೊರೇಟ್ ಶೈಲಿಯಲ್ಲಿ ಕನ್ನಡ ಪುಸ್ತಕಗಳಿಗೆ ಪ್ರಚಾರ ನೀಡಿ, ಓದುಗರಿದ್ದಲ್ಲಿಯೇ ಪುಸ್ತಕ ಒದಗಿಸಲು ಯೋಜನೆ ರೂಪಿಸಿದೆ. ಈ ಸಂಬಂಧ ನಿಗದಿತ ಮಳಿಗೆ ಹಾಗೂ ಕೇಂದ್ರಗಳ ಮುಖ್ಯಸ್ಥರ ಜತೆಗೆ ಪುಸ್ತಕ ಸಂಸ್ಥೆ ಒಪ್ಪಂದ ಮಾಡಿಕೊಳ್ಳುತ್ತಿದೆ.

ಪುಸ್ತಕದ ರ್‍ಯಾಕ್‌ನಲ್ಲಿ ಪ್ರಕಟಗೊಂಡ ಹೊಸ ಕನ್ನಡದ ಪುಸ್ತಕಗಳು ಲಭ್ಯವಿರಲಿದ್ದು, ಆಸ್ತಕರು ಅಲ್ಲಿಯೇ ಹಣ ಪಾವತಿಸಿ ಪುಸ್ತಕ ಖರೀದಿಸಬಹುದಾಗಿದೆ. ಈ ವ್ಯವಸ್ಥೆಗೆ ಜೂ.8 ರಂದು ಚಾಲನೆ ದೊರೆಯಲಿದೆ.

ಪುಸ್ತಕಗಳ ಮಾರಾಟಕ್ಕೆ ಸಂಸ್ಥೆಯು ಕಾಲ್ ಸೆಂಟರ್ ಅನ್ನು ಕೂಡ ಸಿದ್ಧಪಡಿಸಿದ್ದು, 11 ಲಕ್ಷ ಮಂದಿಯ ಮೊಬೈಲ್ ದೂರವಾಣಿ ಸಂಖ್ಯೆಯನ್ನು ಸಂಗ್ರಹಿಸಿದೆ. ಈ ಸಂಖ್ಯೆಗೆ ಕರೆ ಮಾಡಿ, ಪ್ರಕಟಗೊಂಡ ಕನ್ನಡದ ಹೊಸ ಪುಸ್ತಕಗಳ ಬಗ್ಗೆ ತಿಳಿಸಲಾಗುತ್ತದೆ. ಪುಸ್ತಕ ಖರೀದಿಸಲು ಇಚ್ಛಿಸಿದಲ್ಲಿ, ಮನೆಗೆ ತಲುಪಿಸಲಾಗುತ್ತದೆ. ಹಣ ಪಾವತಿ ಮೊಬೈಲ್ ಆ್ಯಪ್‌ಗಳ ಮೂಲಕ ಪುಸ್ತಕದ ದರ ಪಾವತಿಸಬಹುದಾಗಿದೆ.

ಓದುಗರ ಸಂಖ್ಯೆ ಹೆಚ್ಚಳ: 'ಕಟ್ಟ ಕಡೆಯ ಓದುಗನಿಗೂ ಅವನಿದ್ದ ಕಡೆಯೇ ಪುಸ್ತಕ ದೊರೆಯುವಂತೆ ಮಾಡಬೇಕು ಎನ್ನುವುದು ನಮ್ಮ ಉದ್ದೇಶ. ಓದುವ ಸಂಸ್ಕೃತಿಯನ್ನು ಹೆಚ್ಚಿಸುವ ಕೈಂಕರ್ಯಕ್ಕೆ ಮುಂದಾಗಿದ್ದೇವೆ. ನಗರದ ವಿವಿಧೆಡೆ ಪುಸ್ತಕಗಳ ರ್‍ಯಾಕ್ ಇರಿಸಲಾಗುತ್ತದೆ. ಕಾಲ್ ಸೆಂಟರ್ ಸಹ ಪ್ರಾರಂಭಿಸಲಾಗುತ್ತಿದೆ. ಸಿನಿಮಾ ಪೋಸ್ಟರ್‌ಗಳ ಮಾದರಿಯಲ್ಲಿಯೇ ಪುಸ್ತಕಗಳ ಪೋಸ್ಟರ್‌ಗಳನ್ನೂ ಪ್ರದರ್ಶಿಸಲಾಗುತ್ತದೆ' ಎಂದು ಸಂಸ್ಥೆಯ ಮುಖ್ಯಸ್ಥ ವೀರಕಪುತ್ರ ಶ್ರೀನಿವಾಸ್ ತಿಳಿಸಿದರು.

'ಪ್ರತಿ ಲೇಖಕರಿಗೆ 500ರಿಂದ 10 ಸಾವಿರ ಓದುಗರನ್ನು ಒದಗಿಸಿಕೊಡುವ ಗುರಿಯನ್ನು ಹಾಕಿಕೊಳ್ಳಲಾಗಿದೆ. ಕನ್ನಡ ಪುಸ್ತಕೋದ್ಯಮ ಬೆಳೆಯಬೇಕು ಎನ್ನುವುದು ನಮ್ಮ ಉದ್ದೇಶ' ಎಂದು ವಿವರಿಸಿದರು.

ಪರಪ್ಪನ ಅಗ್ರಹಾರ ಜೈಲಿನಲ್ಲಿ ಐಟಿಐ ಕಾಲೇಜು

ಬೆಂಗಳೂರು: ನಗರದ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ಕೈದಿಗಳಿಗೆ ವೃತ್ತಿಪರ ತರಬೇತಿ ನೀಡುವ ಉದ್ದೇಶದಿಂದ ಹೊಸದೊಂದು ಐಟಿಐ ಕಾಲೇಜು ಆರಂಭಿಸಲು ಚಿಂತನೆ ನಡೆದಿದ್ದು, ಈ ಸಂಬಂಧ ಕಾರಾಗೃಹ ಇಲಾಖೆ ಅಧಿಕಾರಿಗಳು ಗೃಹ ಇಲಾಖೆಗೆ ಪ್ರಸ್ತಾವ ಸಲ್ಲಿಸಿದ್ದಾರೆ.

'ಕೈದಿಗಳು, ಜೈಲಿಗೆ ಬಂದು ವರ್ಷಾನುಗಟ್ಟಲೇ ಶಿಕ್ಷೆ ಅನುಭವಿಸುತ್ತಾರೆ. ಶಿಕ್ಷೆ ಅವಧಿ ಮುಗಿಸಿ ಬಿಡುಗಡೆಯಾದ ನಂತರ ಅವರ ಭವಿಷ್ಯ ಸಹ ಉತ್ತಮವಾಗಿರಬೇಕು. ಹೀಗಾಗಿ, ಶಿಕ್ಷೆ ಅವಧಿಯಲ್ಲೇ ವೃತ್ತಿಪರ ತರಬೇತಿ ನೀಡಲು ಯೋಚಿಸಲಾಗಿದೆ' ಎಂದು ಕಾರಾಗೃಹ ಅಧಿಕಾರಿಯೊಬ್ಬರು ಹೇಳಿದರು.

'ಯೋಗ, ಟೈಲರಿಂಗ್, ಬೇಕರಿ ಉತ್ಪನ್ನಗಳ ತಯಾರಿಕೆ ಸೇರಿದಂತೆ ವಿವಿಧ ತರಬೇತಿಗಳನ್ನು ಈಗಾಗಲೇ ಕೈದಿಗಳಿಗೆ ನೀಡಲಾಗುತ್ತಿದೆ. ಆದರೆ, ಅವುಗಳೆಲ್ಲವೂ ತಾತ್ಕಾಲಿಕ ಮಾತ್ರ. ಕೈದಿ ಪರಿಪೂರ್ಣವಾಗಿ ವೃತ್ತಿಪರವಾಗುವಂತೆ ನೋಡಿಕೊಳ್ಳಲು ಹೊಸದೊಂದು ತರಬೇತಿ ಕಾಲೇಜು ಅಗತ್ಯವಿರುವುದಾಗಿ ಪ್ರಸ್ತಾವದಲ್ಲಿ ತಿಳಿಸಲಾಗಿದೆ' ಎಂದೂ ವಿವರಿಸಿದರು.


'ಜೈಲಿಗೆ ಬರುವ ಬಹುತೇಕರು, ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿ ಪೂರ್ಣಗೊಳಿಸಿರುತ್ತಾರೆ. ಅದಕ್ಕೂ ಮುನ್ನವೇ ಶಾಲೆ ಬಿಟ್ಟವರೂ ಇರುತ್ತಾರೆ. ಕೆಲವರು ಪದವಿ ಅರ್ಧಕ್ಕೆ ಮೊಟಕುಗೊಳಿಸಿರುತ್ತಾರೆ. ಇಂಥವರನ್ನು ಗಮನದಲ್ಲಿಟ್ಟುಕೊಂಡು ಹೊಸ ಕಾಲೇಜಿನ ರೂಪುರೇಷೆ ಸಿದ್ಧಪಡಿಸಲಾಗಿದೆ. ಕಾಲೇಜಿನಲ್ಲಿ 6 ತಿಂಗಳು ಹಾಗೂ ವರ್ಷದ ಕೋರ್ಸ್ ಇರಲಿದೆ. ಪ್ರಸ್ತಾವಕ್ಕೆ ಒಪ್ಪಿಗೆ ಸಿಕ್ಕ ಬಳಿಕ, ತಜ್ಞರ ಸಹಾಯದಿಂದ ಪಠ್ಯಕ್ರಮ ಸಿದ್ಧಪಡಿಸಲಾಗುವುದು' ಎಂದೂ ಹೇಳಿದರು.

'ರಾಜ್ಯದ ಹಲವೆಡೆ ಐಟಿಐ ಕಾಲೇಜುಗಳು ವಿದ್ಯಾರ್ಥಿಗಳ ಕೊರತೆಯಿಂದ ಮುಚ್ಚಿವೆ. ಅಂಥ ಕಾಲೇಜುಗಳ ಪೈಕಿ, ಒಂದು ಕಾಲೇಜನ್ನು ಪರಪ್ಪನ ಅಗ್ರಹಾರ ಕಾರಾಗೃಹಕ್ಕೆ ಸ್ಥಳಾಂತರಿಸುವ ಬಗ್ಗೆಯೂ ಪ್ರಸ್ತಾವದಲ್ಲಿ ಉಲ್ಲೇಖಿಸಲಾಗಿದೆ.'

ಮಕ್ಕಳ ವರ್ತನೆಯಲ್ಲಿ ಬದಲಾವಣೆ ಕುರಿತು ಚೈಲ್ಡ್‌ಲೈನ್‌ಗೆ ಕರೆ

ಕೋವಿಡ್: ತಗ್ಗಿದ ಕಲಿಕೆಯ ಆಸಕ್ತಿ

• ರಶ್ಮಿ ಬೇಲೂರು



ಬೆಂಗಳೂರು: ಕುಗ್ಗಿದ ಹಾಸ್ಯಪ್ರವೃತ್ತಿ, ಕಲಿಕೆಯತ್ತ ನಿರಾಸಕ್ತಿ, ಹೆಚ್ಚಿದ ಆಕ್ರಮಣಕಾರಿ ವರ್ತನೆ, ಅಶಿಸ್ತು, ಅತಿಯಾದ ಭಾವನಾತ್ಮಕತೆ, ಸುಳ್ಳು ಹೇಳುವುದು, ಅತಿ ಸೂಕ್ಷ್ಮತೆ...

– ಇವು ಕೋವಿಡ್‌ನಿಂದ ಎಳೆಯ ಮಕ್ಕಳಲ್ಲಿ ಆಗಿರುವ ಬದಲಾವಣೆಗಳು. ಮೇ 16ರಿಂದ ಶಾಲಾ ತರಗತಿಗಳು ಆರಂಭವಾದ ಬಳಿಕ ಮಕ್ಕಳ ಜತೆ ಒಡನಾಡುವ ಶಿಕ್ಷಕರು ಎಳೆಯರಲ್ಲಿ ಕೋವಿಡ್ ಪರಿಣಾಮಗಳು ತಂದಿರುವ ಈ ಬದಲಾವಣೆಗಳನ್ನು ಗುರುತಿಸಿ, ಪಟ್ಟಿ ಮಾಡಿದ್ದಾರೆ.

ಮಕ್ಕಳ ವರ್ತನೆಯಲ್ಲಿ ಆಗಿರುವ ತೀವ್ರವಾದ ಬದಲಾವಣೆಗಳನ್ನು ಕಂಡಿರುವ ಶಿಕ್ಷಕರು, ಈ ಕುರಿತು ಶಾಲಾ ಆಡಳಿತ ಮಂಡಳಿ ಪ್ರತಿನಿಧಿಗಳು ಮತ್ತು ಪೋಷಕರ ಜತೆ ಮಾಹಿತಿ ಹಂಚಿಕೊಂಡಿದ್ದಾರೆ. 13ರಿಂದ 14 ವರ್ಷದ ಮಕ್ಕಳಲ್ಲೂ ಹಾಸ್ಯಪ್ರವೃತ್ತಿ ದೂರವಾಗುತ್ತಿರುವುದು ಶಿಕ್ಷಕರನ್ನು ಚಿಂತೆಗೆ ದೂಡಿದೆ.

'ಐದನೇ ತರಗತಿಯ ಕೊಠಡಿಯಲ್ಲಿ ಹಾಸ್ಯಚಟಾಕಿ ಹಾರಿಸಿದರೆ ಶೇಕಡ 80ರಷ್ಟು ಮಕ್ಕಳಿಂದ ನಗುವೇ ಬರಲಿಲ್ಲ. ಈ ಬೆಳವಣಿಗೆ ನನಗೆ ಆಘಾತ ಉಂಟುಮಾಡಿದೆ. 11 ವರ್ಷಗಳಿಂದ ಶಿಕ್ಷಕಿಯಾಗಿದ್ದೇನೆ. ಹಿಂದೆ ಯಾವತ್ತೂ ಈ ರೀತಿಯ ಬೆಳವಣಿಗೆಯನ್ನು ನಾನು ಕಂಡಿರಲಿಲ್ಲ' ಎನ್ನುತ್ತಾರೆ ಬೆಂಗಳೂರು ದಕ್ಷಿಣ ವಿಭಾಗದ ಅನುದಾನ ರಹಿತ ಶಾಲೆಯೊಂದರ ಶಿಕ್ಷಕಿ ವೀಣಾ ರಾವ್.

'ಮಕ್ಕಳು ತೀರಾ ಭಾವನಾತ್ಮಕವಾಗಿ ವರ್ತಿಸುತ್ತಿದ್ದಾರೆ. ಸೃಜನಶೀಲ ಚಟುವಟಿಕೆಗಳತ್ತಲೂ ಆಸಕ್ತಿ ಇಲ್ಲ. ವಿದ್ಯಾರ್ಥಿಯೊಬ್ಬ ತನ್ನ ಪಾಳಿ ಬಂದಾಗ ಅಳುತ್ತಾ ನಿಂತಿದ್ದನ್ನು ಕಂಡು ಗಾಬರಿಯಾಗಿದ್ದೇನೆ' ಎನ್ನುತ್ತಾರೆ ಮತ್ತೊಂದು ಶಾಲೆಯ ಶಿಕ್ಷಕರೊಬ್ಬರು.

> ಮಕ್ಕಳ ವರ್ತನೆಗಳಲ್ಲಿ ಆಗಿರುವ ಬದಲಾವಣೆಗಳಿಂದ ಪೋಷಕರು ಅಸಹಾಯಕ ಸ್ಥಿತಿಗೆ ತಲುಪಿದ್ದಾರೆ. ಮಕ್ಕಳನ್ನು ಮರಳಿ ಕಲಿಕೆಯ ದಾರಿಗೆ ತರಲು ಶಿಕ್ಷಕರು ಹರಸಾಹಸಪಡುತ್ತಿದ್ದಾರೆ
>
> **ಡಿ. ಶಶಿಕುಮಾರ್**
> ಕ್ಯಾಮ್ಸ್ ಪ್ರಧಾನ ಕಾರ್ಯದರ್ಶಿ

'ಮಕ್ಕಳ ವರ್ತನೆಯಲ್ಲಿ ಬದಲಾವಣೆ ಆಗುತ್ತಿರುವ ಕುರಿತು ಚೈಲ್ಡ್‌ಲೈನ್ ಸಹಾಯವಾಣಿಗೆ ಹಲವು ಕರೆಗಳು ಬಂದಿದ್ದವು. ಈ ಕಾರಣಕ್ಕಾಗಿಯೇ ಕೋವಿಡ್ ನಂತರದ ದಿನಗಳಲ್ಲಿ ಶಾಲೆಗಳಲ್ಲಿ ಮಕ್ಕಳಿಗೆ ಆಪ್ತ ಸಮಾಲೋಚನೆ ನಡೆಸುವ ವ್ಯವಸ್ಥೆ ಮಾಡುವಂತೆ ಸರ್ಕಾರಕ್ಕೆ ಮನವಿ ಮಾಡಿದ್ದೆವು' ಎಂದು ಮಕ್ಕಳ ಹಕ್ಕುಗಳ ಕಾರ್ಯಕರ್ತ ನಾಗಸಿಂಹ ಜಿ. ರಾವ್ ಹೇಳಿದರು.

ಸುದ್ದಿ 2 ನಿಮಿಷ

ಟ್ಯಾಂಕರ್ ಮಾಲೀಕರಿಗೆ ಎಚ್ಚರಿಕೆ

ಬೆಂಗಳೂರು: ಟ್ಯಾಂಕರ್ ವಾಹನ ಚಾಲಕರಿಂದ ಮೇಲಿಂದ ಮೇಲೆ ಅಪಘಾತಗಳು ಸಂಭವಿಸುತ್ತಿದ್ದು, ಸಂಚಾರ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ಟ್ಯಾಂಕರ್ ಮಾಲೀಕರಿಗೆ ಪೊಲೀಸರು ಖಡಕ್ ಎಚ್ಚರಿಕೆ ನೀಡಿದ್ದಾರೆ.

ಎಚ್‌ಎಸ್‌ಆರ್ ಲೇಔಟ್ ಸಂಚಾರ ಠಾಣೆ ವ್ಯಾಪ್ತಿಯ ಸರ್ಜಾಪುರ ರಸ್ತೆಯಲ್ಲಿ ಇತ್ತೀಚೆಗೆ ಟ್ಯಾಂಕರ್ ವಾಹನ ಮೈ ಮೇಲೆ ಹರಿದು ಬಾಲಕ ಮೃತಪಟ್ಟಿದ್ದ. ಇದರಿಂದ ಎಚ್ಚೆತ್ತಿದ್ದ ಪೊಲೀಸರು, ಟ್ಯಾಂಕರ್‌ಗಳ ವಿರುದ್ಧ ಶುಕ್ರವಾರ ವಿಶೇಷ ಕಾರ್ಯಾಚರಣೆ ನಡೆಸಿ 258 ಪ್ರಕರಣ ದಾಖಲಿಸಿಕೊಂಡಿದ್ದರು.

ನಗರದ ಬೆಳ್ಳಂದೂರಿನಲ್ಲಿ ಶುಕ್ರವಾರ ಟ್ಯಾಂಕರ್ ಮಾಲೀಕರ ಸಭೆ ನಡೆಸಿದ ಪೊಲೀಸರು, ಸಂಚಾರ ನಿಯಮಗಳ ಬಗ್ಗೆ ತಿಳಿವಳಿಕೆ ಮೂಡಿಸಿದರು.

'ಚಾಲನಾ ಪರವಾನಗಿ ಚಾಲ್ತಿಯಲ್ಲಿರುವ ಚಾಲಕರು ಮಾತ್ರ ಟ್ಯಾಂಕರ್ ಚಲಾಯಿಸಬೇಕು. ಸಮವಸ್ತ್ರ ಧರಿಸಿರಬೇಕು. ಸಂಚಾರ ನಿಯಮಗಳನ್ನೆಲ್ಲ ಪಾಲಿಸಬೇಕು. ಅಡ್ಡಾದಿಡ್ಡಿಯಾಗಿ ಟ್ಯಾಂಕರ್ ಚಲಾಯಿಸಿ, ಅಪಘಾತವನ್ನುಂಟು ಮಾಡಿದರೆ ಕಠಿಣ ಕ್ರಮ ಎದುರಿಸಬೇಕಾಗುತ್ತದೆ' ಎಂದೂ ಪೊಲೀಸರು ಎಚ್ಚರಿಸಿದರು.



ಪ್ರತ್ಯೇಕ ಅಪಘಾತ ಪ್ರಕರಣ: ಟೆಕಿ ಸೇರಿ ಇಬ್ಬರ ಸಾವು

ಬೆಂಗಳೂರು: ನಗರದಲ್ಲಿ ಶುಕ್ರವಾರ ರಾತ್ರಿ ಸಂಭವಿಸಿದ ಪ್ರತ್ಯೇಕ ಅಪಘಾತಗಳಲ್ಲಿ ಇಬ್ಬರು ಮೃತಪಟ್ಟಿದ್ದಾರೆ.

'ಸಾಫ್ಟ್‌ವೇರ್ ಎಂಜಿನಿಯರ್ (ಟೆಕಿ) ಶ್ರೀಕಾಂತ್ (23) ಹಾಗೂ ಖಾಸಗಿ ಕಂಪನಿಯೊಂದರ ವ್ಯವಸ್ಥಾಪಕ ಸನ್ಮಿತ್ (34) ಮೃತರು. ಎರಡೂ ಅಪಘಾತಗಳ ಬಗ್ಗೆ ಬನಶಂಕರಿ ಹಾಗೂ ಚಿಕ್ಕಜಾಲ ಸಂಚಾರ ಠಾಣೆಗಳಲ್ಲಿ ಪ್ರತ್ಯೇಕ ಪ್ರಕರಣಗಳು ದಾಖಲಾಗಿವೆ' ಎಂದು ಪೊಲೀಸರು ಹೇಳಿದರು.

ಮರಕ್ಕೆ ಗುದ್ದಿದ್ದ ಬೈಕ್: 'ವಿದ್ಯಾಪೀಠ ನಿವಾಸಿ ಶ್ರೀಕಾಂತ್, ಶುಕ್ರವಾರ ರಾತ್ರಿ ಸ್ನೇಹಿತರ ಜೊತೆ ಪಾರ್ಟಿ ಮಾಡಿದ್ದರು. ನಂತರ, ಸ್ನೇಹಿತರೆಲ್ಲ ಪ್ರತ್ಯೇಕವಾಗಿ ಬೈಕ್‌ನಲ್ಲಿ ಹೊರಟಿದ್ದರು' ಎಂದು ಪೊಲೀಸರು ತಿಳಿಸಿದರು.

'ಶ್ರೀಕಾಂತ್ ಚಲಾಯಿಸುತ್ತಿದ್ದ ಬೈಕ್, ಬನಶಂಕರಿ ಬಿಡಿಎ ಕಾಂಪ್ಲೆಕ್ಸ್ ಬಳಿ ನಿಯಂತ್ರಣ ತಪ್ಪಿ ಮರಕ್ಕೆ ಡಿಕ್ಕಿ ಹೊಡೆದಿತ್ತು. ತೀವ್ರ ಗಾಯಗೊಂಡ ಶ್ರೀಕಾಂತ್ ರಸ್ತೆಯಲ್ಲೇ ನರಳುತ್ತಿದ್ದರು. ಅದೇ ಮಾರ್ಗವಾಗಿ ಬಂದ ಸ್ನೇಹಿತರು, ಶ್ರೀಕಾಂತ್ ಅವರನ್ನು ಸಮೀಪದ ಆಸ್ಪತ್ರೆಗೆ ಕರೆದೊಯ್ದಿದ್ದರು. ಅವರು ಮೃತಪಟ್ಟಿರುವುದಾಗಿ ವೈದ್ಯರು ತಿಳಿಸಿದರು' ಎಂದೂ ಪೊಲೀಸರು ಮಾಹಿತಿ ನೀಡಿದರು.

'ಮದ್ಯದ ಅಮಲಿನಲ್ಲಿ ಬೈಕ್ ಚಲಾಯಿಸಿದ್ದೇ ಅಪಘಾತಕ್ಕೆ ಕಾರಣವೆಂಬುದು ಗೊತ್ತಾಗಿದೆ. ಮೃತದೇಹದ ಮರಣೋತ್ತರ ಪರೀಕ್ಷೆ ನಡೆಸಿ, ಕುಟುಂಬಸ್ಥರಿಗೆ ಹಸ್ತಾಂತರಿಸಲಾಗಿದೆ' ಎಂದೂ ಪೊಲೀಸರು ಹೇಳಿದರು.

ಬೈಕ್ ಉರುಳಿ ಬಿದ್ದು ಸಾವು: ಚಿಕ್ಕಜಾಲ ಸಂಚಾರ ಠಾಣೆ ವ್ಯಾಪ್ತಿಯ ಮಾನ್ಯತಾ ಟೆಕ್‌ಪಾರ್ಕ್ 2ನೇ ಅಡ್ಡರಸ್ತೆ ಜಂಕ್ಷನ್‌ನಲ್ಲಿ ಬೈಕ್ ಉರುಳಿಬಿದ್ದು ಸನ್ಮಿತ್ ಮೃತಪಟ್ಟಿದ್ದಾರೆ.

'ಸನ್ಮಿತ್ ಅವರು ಕೆಲಸ ಮುಗಿಸಿಕೊಂಡು ಶುಕ್ರವಾರ ರಾತ್ರಿ 7.40ರ ಸುಮಾರಿಗೆ ಬೈಕ್‌ನಲ್ಲಿ ಹೊರಟಿದ್ದಾಗ ಈ ಅವಘಢ ಸಂಭವಿಸಿದೆ' ಎಂದೂ ಪೊಲೀಸರು ಹೇಳಿದರು.

₹ 6 ಲಕ್ಷ ಮೌಲ್ಯದ 54 ಸೈಕಲ್ ಜಪ್ತಿ

ಬೆಂಗಳೂರು: ಸಾರ್ವಜನಿಕ ಸ್ಥಳ ಹಾಗೂ ಮನೆ ಮುಂದೆ ನಿಲ್ಲಿಸುತ್ತಿದ್ದ ಸೈಕಲ್‌ಗಳನ್ನು ಕದಿಯುತ್ತಿದ್ದ ಆರೋಪದಡಿ ಬಾಲರಾಜ್ ಎಂಬುವರನ್ನು ಸುದ್ದಗುಂಟೆಪಾಳ್ಯ ಪೊಲೀಸರು ಬಂಧಿಸಿದ್ದಾರೆ.

'ಮದ್ಯವ್ಯಸನಿ ಆಗಿದ್ದ ಬಾಲರಾಜ್, ಮದ್ಯ ಖರೀದಿಗೆ ಹಣ ಹೊಂದಿಸಲು ಸೈಕಲ್ ಕದಿಯುತ್ತಿದ್ದನೆಂಬುದು ತನಿಖೆಯಿಂದ ಗೊತ್ತಾಗಿದೆ. ಈತನಿಂದ ₹ 6 ಲಕ್ಷ ಮೌಲ್ಯದ 54 ಸೈಕಲ್ ಜಪ್ತಿ ಮಾಡಲಾಗಿದೆ'. 'ಸುದ್ದಗುಂಟೆಪಾಳ್ಯದ ಮನೆಯೊಂದರ ಮುಂದೆ ನಿಲ್ಲಿಸಿದ್ದ ಸೈಕಲ್ ಕಳ್ಳತನ ಆಗಿತ್ತು. ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಾವಳಿ ಆಧರಿಸಿ ತನಿಖೆ ಕೈಗೊಂಡಾಗ ಆರೋಪಿ ಸಿಕ್ಕಿಬಿದ್ದ' ಎಂದು ಪೊಲೀಸರು ಹೇಳಿದರು.

'ಕದ್ದು ಸೈಕಲ್‌ಗಳನ್ನು ಆರೋಪಿ ಕೇವಲ ₹ 2 ಸಾವಿರ– ₹ 3 ಸಾವಿರಕ್ಕೆ ಮಾರುತ್ತಿದ್ದ. ಬಂದ ಹಣವನ್ನು ಮದ್ಯ ಖರೀದಿಗೆ ಖರ್ಚು ಮಾಡುತ್ತಿದ್ದ. ಹಣ ಖಾಲಿಯಾಗುತ್ತಿದ್ದಂತೆ ಪುನಃ ಕಳ್ಳತನಕ್ಕೆ ಇಳಿಯುತ್ತಿದ್ದ' ಎಂದೂ ಹೇಳಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭೇಟಿ

ಪಿಎಸ್‌ಐ ಅಭ್ಯರ್ಥಿಗಳ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: '545 ಪಿಎಸ್‌ಐ ನೇಮಕಾತಿಯ ಮರುಪರೀಕ್ಷೆ ಆದೇಶ ಹಿಂಪಡೆಯಬೇಕು ಹಾಗೂ ಪ್ರಾಮಾಣಿಕವಾಗಿ ಆಯ್ಕೆಯಾದ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಬೇಕು' ಎಂದು ಒತ್ತಾಯಿಸಿ ಕೆಲ ಅಭ್ಯರ್ಥಿಗಳು ನಗರದಲ್ಲಿ ಶನಿವಾರ ಪ್ರತಿಭಟನೆ ನಡೆಸಿದರು.

ಸ್ವಾತಂತ್ರ್ಯ ಉದ್ಯಾನದಲ್ಲಿ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಅಭ್ಯರ್ಥಿಗಳು ಹಾಗೂ ಅವರ ಪೋಷಕರು ಪಾಲ್ಗೊಂಡಿದ್ದರು. ಸಮತಾ ಸೈನಿಕ ದಳ ಪದಾಧಿಕಾರಿಗಳು ಪ್ರತಿಭಟನೆಗೆ ಬೆಂಬಲ ನೀಡಿದ್ದರು.

'ಪಿಎಸ್‌ಐ ನೇಮಕಾತಿ ಪರೀಕ್ಷೆಗೆಂದು ಹಲವು ವರ್ಷಗಳಿಂದ ಅಧ್ಯಯನ ನಡೆಸುತ್ತಿದ್ದೇವೆ. ಪ್ರಾಮಾಣಿಕವಾಗಿ ಪರೀಕ್ಷೆ ಬರೆದು ಆಯ್ಕೆಯಾದ ಅಭ್ಯರ್ಥಿಗಳಿಗೆ ಅನ್ಯಾಯ ಮಾಡಬೇಡಿ. ನೇಮಕಾತಿ ಆದೇಶ ನೀಡಿ. ಪರೀಕ್ಷೆಯಲ್ಲಿ ಅಕ್ರಮ ಎಸಗಿರುವ ಅಭ್ಯರ್ಥಿಗಳ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಿ' ಎಂದು ಪ್ರತಿಭಟನಕಾರರು ಆಗ್ರಹಿಸಿದರು.

ಮುಖ್ಯಮಂತ್ರಿ ಭೇಟಿ: ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಮನವಿ ಪತ್ರ ಸ್ವೀಕರಿಸಿದರು.

'ಪಿಎಸ್‌ಐ ನೇಮಕಾತಿ ಅಕ್ರಮ ಬಗ್ಗೆ ಸಮಗ್ರ ತನಿಖೆ ನಡೆಯುತ್ತಿದೆ. ತಪ್ಪಿತಸ್ಥರಿಗೆಲ್ಲ ಶಿಕ್ಷೆ ಖಂಡಿತ. ತನಿಖೆ ಪೂರ್ಣ ಆಗುವವರೆಗೂ ಅಭ್ಯರ್ಥಿಗಳು ಧೃತಿ ಕಳೆದುಕೊಳ್ಳಬಾರದು. ಸದ್ಯಕ್ಕೆ ಯಾವುದೇ ಭರವಸೆ ನೀಡಲಾಗದು' ಎಂದು ಬೊಮ್ಮಾಯಿ ಸಮಾಧಾನ ಹೇಳಿದರು.



'ಪಿಎಸ್‌ಐ ನೇಮಕಾತಿ ಮರುಪರೀಕ್ಷೆ ಆದೇಶ ಹಿಂಪಡೆಯಬೇಕು' ಎಂದು ಒತ್ತಾಯಿಸಿ ಕೆಲ ಅಭ್ಯರ್ಥಿಗಳು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಶನಿವಾರ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ

ಪಿಎಸ್‌ಐ ಅಕ್ರಮ: ಮತ್ತಷ್ಟು ಮಂದಿ ವಿಚಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಿಎಸ್‌ಐ ನೇಮಕಾತಿ ಅಕ್ರಮ ಪ್ರಕರಣ ಸಂಬಂಧ ಪೊಲೀಸ್ ನೇಮಕಾತಿ ವಿಭಾಗದ ಎಡಿಜಿಪಿ ಅಮ್ರಿತ್ ಪೌಲ್ ಅವರನ್ನು ವಿಚಾರಣೆ ನಡೆಸಿದ್ದ ಸಿಐಡಿ ಅಧಿಕಾರಿಗಳು, ಅವರ ಹೇಳಿಕೆ ಆಧರಿಸಿ ಮತ್ತಷ್ಟು ಮಂದಿ ವಿಚಾರಣೆ ನಡೆಸಲು ಮುಂದಾಗಿದ್ದಾರೆ.

ಪಿಎಸ್‌ಐ ನೇಮಕಾತಿ ಜವಾಬ್ದಾರಿ ವಹಿಸಿಕೊಂಡಿದ್ದ ವಿಭಾಗವೇ ಅಕ್ರಮದ ಕೇಂದ್ರವೆಂಬುದು ಸಿಐಡಿ ತನಿಖೆಯಿಂದ ಈಗಾಗಲೇ ಬಯಲಾಗಿತ್ತು. ವಿಭಾಗದ ಡಿವೈಎಸ್ಪಿ ಶಾಂತಕುಮಾರ್ ಹಾಗೂ ನೌಕರರನ್ನು ಸಿಐಡಿ ಅಧಿಕಾರಿಗಳು ಬಂಧಿಸಿದ್ದರು.

'ನೇಮಕಾತಿ ವಿಭಾಗ ನೌಕರರ ಕೃತ್ಯದಲ್ಲಿ ಎಡಿಜಿಪಿ ಪಾತ್ರವಿರುವ ಮಾಹಿತಿ ಇದೆ. ಅವರನ್ನು ಇತ್ತೀಚೆಗೆ ಎರಡು ದಿನ ವಿಚಾರಣೆ ನಡೆಸಲಾಗಿದೆ. ಪುನಃ ವಿಚಾರಣೆಗೆ ಬರುವಂತೆ ಶೀಘ್ರವೇ ನೋಟಿಸ್ ನೀಡಲಾಗುವುದು. ಈಗಾಗಲೇ ನೀಡಿರುವ ಹೇಳಿಕೆಯಲ್ಲಿ ಉಲ್ಲೇಖವಿರುವ ವ್ಯಕ್ತಿಗಳನ್ನೂ ವಿಚಾರಣೆ ಮಾಡಲಾಗುತ್ತಿದೆ' ಎಂದು ಸಿಐಡಿ ಮೂಲಗಳು ಹೇಳಿವೆ.

'ಪ್ರಕರಣ ಭೇದಿಸಲು ಹಲವು ವಿಶೇಷ ತಂಡಗಳನ್ನು ರಚಿಸಲಾಗಿದೆ. ಬೆಂಗಳೂರು ಹಾಗೂ ಹೊರ ಜಿಲ್ಲೆಗಳಲ್ಲೂ ಹಲವರನ್ನು ವಿಚಾರಣೆ ನಡೆಸಿ, ಮಾಹಿತಿ ಕಲೆಹಾಕಲಾಗುತ್ತಿದೆ. ಸೂಕ್ತ ಪುರಾವೆಗಳನ್ನು ಆಧಾರವಾಗಿಟ್ಟುಕೊಂಡು ಮುಂದಿನ ಕಾನೂನು ಕ್ರಮ ಕೈಗೊಳ್ಳಲಾಗುವುದು' ಎಂದೂ ತಿಳಿಸಿವೆ.

ಮಧ್ಯವರ್ತಿಗಳ ಮೇಲೆ ನಿಗಾ: 'ಕೆಲ ಪೊಲೀಸರು, ಕೆಲ ರಾಜಕಾರಣಿಗಳು ಹಾಗೂ ಇತರರು, ಪ್ರಕರಣದಲ್ಲಿ ಮಧ್ಯವರ್ತಿಗಳಾಗಿ ಕೆಲಸ ಮಾಡಿದ್ದಾರೆ. ಅಂಥವರ ಪಟ್ಟಿ ಸಿದ್ಧಪಡಿಸಲಾಗಿದ್ದು, ಅವರೆಲ್ಲರ ಮೇಲೆ ನಿಗಾ ವಹಿಸಲಾಗಿದೆ' ಎಂದೂ ಮೂಲಗಳು ಹೇಳಿವೆ.

ಕೆಜಿಎಫ್ ಬಾಬು ಮನೆಯಲ್ಲಿ ಇ.ಡಿ ಶೋಧ



ಯೂಸುಫ್ ಷರೀಫ್

ಬೆಂಗಳೂರು: ಕಾಂಗ್ರೆಸ್ ಮುಖಂಡ ಹಾಗೂ ರಿಯಲ್ ಎಸ್ಟೇಟ್ ಉದ್ಯಮಿ ಯೂಸುಫ್ ಷರೀಫ್ ಅಲಿಯಾಸ್ ಕೆಜಿಎಫ್ ಬಾಬು ಮನೆ, ಕಚೇರಿಗಳು ಹಾಗೂ ನಿಕಟವರ್ತಿಗಳ ಮನೆಗಳ ಮೇಲೆ ಶನಿವಾರ ದಾಳಿಮಾಡಿರುವ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು, ಶೋಧ ನಡೆಸಿದ್ದಾರೆ.

ಯೂಸುಫ್ ಷರೀಫ್ 2021ರ ಡಿಸೆಂಬರ್‌ನಲ್ಲಿ ನಡೆದ ವಿಧಾನ ಪರಿಷತ್ ಚುನಾವಣೆಯಲ್ಲಿ ಬೆಂಗಳೂರು ನಗರ ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದರು. ಆಗ, ₹ 1,744 ಕೋಟಿ ಮೌಲ್ಯದ ಆಸ್ತಿ ಘೋಷಿಸಿಕೊಂಡಿದ್ದರು. ಅಲ್ಲದೇ ತಮ್ಮ ಬಳಿ ಹಲವು ಸಾವಿರ ಕೋಟಿ ರೂಪಾಯಿ ಮೌಲ್ಯದ ಆಸ್ತಿ ಇದೆ ಎಂಬ ಹೇಳಿಕೆಗಳನ್ನು ನೀಡಿದ್ದರು.

ವಸಂತನಗರದಲ್ಲಿರುವ ಷರೀಫ್ ಮನೆ 'ರುಕ್ಸಾನಾ ಪ್ಯಾಲೇಸ್', ಉಮ್ರಾ ಡೆವಲಪರ್ಸ್ ಸೇರಿದಂತೆ ಅವರ ಒಡೆತನದ ಎಂಟು ರಿಯಲ್ ಎಸ್ಟೇಟ್ ಕಂಪನಿಗಳ ಕಚೇರಿಗಳು, ಕಂಪನಿಗಳ ವಹಿವಾಟು ನಿರ್ವಹಿಸುತ್ತಿರುವ ಕೆಲವು ನಿಕಟವರ್ತಿಗಳ ಮನೆ, ಕಚೇರಿಗಳ ಮೇಲೆ ಇ.ಡಿ ಅಧಿಕಾರಿಗಳು ದಾಳಿ ಮಾಡಿದ್ದು, ಶೋಧ ನಡೆಯುತ್ತಿದೆ ಎಂದು ಮೂಲಗಳು ತಿಳಿಸಿವೆ.

ಹಿಂದೆಯೂ ಹಲವು ಬಾರಿ ಇವರ ಮೇಲೆ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ದಾಳಿ ಮಾಡಿದ್ದರು. ತೆರಿಗೆ ವಂಚನೆ ಆರೋಪದಡಿ ವಿಚಾರಣೆಯೂ ನಡೆದಿತ್ತು. ವಿಧಾನ ಪರಿಷತ್ ಚುನಾವಣೆ ಬಳಿಕ ಒಮ್ಮೆ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಷರೀಫ್ ಮನೆಯಲ್ಲಿ ತಪಾಸಣೆ ನಡೆಸಿದ್ದರು. ಅದರ ಮುಂದುವರಿದ ಭಾಗವಾಗಿ ಇ.ಡಿ ತನಿಖೆ ಆರಂಭಿಸಿದೆ. ಪರಿಷತ್ ಚುನಾವಣೆಯಲ್ಲಿ ಸೋತ ಬಳಿಕ ಕೋಲಾರ ವಿಧಾನಸಭಾ ಕ್ಷೇತ್ರದಲ್ಲಿ ತಮ್ಮ ಚಟುವಟಿಕೆ ವಿಸ್ತರಿಸುವ ಪ್ರಯತ್ನ ಮುಂದುವರಿಸಿದ್ದರು. 2023ರ ಚುನಾವಣೆಯಲ್ಲಿ ಆ ಕ್ಷೇತ್ರದ ಟಿಕೆಟ್ ಪಡೆಯುವ ನಿರೀಕ್ಷೆ ಇಟ್ಟುಕೊಂಡಿದ್ದಾರೆ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಹಣಕಾಸು ಅಧಿಕಾರಿ, ವಿದ್ಯಾರ್ಥಿಗಳ ನಡುವೆ ಆರೋಪ, ಪ್ರತ್ಯಾರೋಪ

ಬೆಂಗಳೂರು ವಿ.ವಿ: ದೂರಿಗೆ ಪ್ರತಿದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಮೇ 27ರಂದು ನಡೆದ ಪ್ರತಿಭಟನೆ ಬಳಿಕ ದೂರು ಮತ್ತು ಪ್ರತಿ ದೂರುಗಳು ದಾಖಲಾಗಿವೆ.

ಹಣಕಾಸು ಅಧಿಕಾರಿ (ಪ್ರಭಾರ) ಆರ್. ಜಯಲಕ್ಷ್ಮಿ ಅವರು ನೀಡಿದ್ದ ದೂರಿಗೆ ಪ್ರತಿಯಾಗಿ 70ಕ್ಕೂ ಹೆಚ್ಚು ವಿದ್ಯಾರ್ಥಿಗಳು ದೂರು ನೀಡಿದ್ದಾರೆ.

'ಸಂಶೋಧನಾ ವಿದ್ಯಾರ್ಥಿಗಳಾದ ಲೋಕೇಶ್, ಸತೀಶ್ ಹಾಗೂ ಇತರರು ಮಹಿಳಾ ಅಧಿಕಾರಿಯನ್ನು ನಿಂದಿಸಿ ಸರ್ಕಾರಿ ಕೆಲಸಕ್ಕೆ ಅಡ್ಡಿಪಡಿಸಿ ಅಮಾನವೀಯವಾಗಿ ವರ್ತಿಸಿದ್ದಾರೆ' ಎಂದು ಹಣಕಾಸು ಅಧಿಕಾರಿ (ಪ್ರಭಾರ) ಆರ್. ಜಯಲಕ್ಷ್ಮಿ ದೂರು ನೀಡಿದ್ದಾರೆ.

'ಸುಮಾರು 50 ಮಂದಿ ಏಕಾಏಕಿ ನನ್ನ ಕಚೇರಿಗೆ ನುಗ್ಗಿ ಏಕವಚನದಲ್ಲಿ ಮಾತನಾಡಿ ನಿಂದಿಸಿದ್ದಾರೆ. ಮಹಿಳಾ ಅಧಿಕಾರಿಯ ಬಗ್ಗೆ ಕೀಳುಮಟ್ಟದಲ್ಲಿ ನಡೆದುಕೊಂಡಿರುತ್ತಾರೆ. ಈ ವಿದ್ಯಾರ್ಥಿಗಳು ಕುಲಪತಿ ಅವರಿಗೂ ಅವಮಾನ ಮಾಡಿದ್ದಾರೆ' ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

'ಈ ಪ್ರಕರಣ ಕುರಿತು ರಾಜ್ಯ ಮತ್ತು ಕೇಂದ್ರ ಮಹಿಳಾ ಆಯೋಗ ಹಾಗೂ ಮಾನವ ಹಕ್ಕುಗಳ ಆಯೋಗಕ್ಕೂ ದೂರು ನೀಡುತ್ತೇನೆ' ಎಂದು ಅವರು ತಿಳಿಸಿದ್ದಾರೆ.

ವಿದ್ಯಾರ್ಥಿಗಳ ದೂರು: ಹಣಕಾಸು ಅಧಿಕಾರಿ ವಿರುದ್ಧ ಜಯಲಕ್ಷ್ಮಿ ಅವರ ವಿರುದ್ಧ ವಿದ್ಯಾರ್ಥಿಗಳು ದೂರು ನೀಡಿದ್ದಾರೆ.

ಹಣಕಾಸು ಅಧಿಕಾರಿ ಮತ್ತು ಕುಲಪತಿ ಕೆ.ಆರ್. ವೇಣುಗೋಪಾಲ್ ಅವರು ದೌರ್ಜನ್ಯ ನಡೆಸುತ್ತಿದ್ದಾರೆ ಮತ್ತು ಕಾನೂನುಬಾಹಿರವಾಗಿ ಹಣಕಾಸು ವಹಿವಾಟು ನಡೆಸುತ್ತಿದ್ದಾರೆ ಎಂದು ದೂರಿದ್ದಾರೆ.

ಹಣಕಾಸು ಅಧಿಕಾರಿ ತಮ್ಮನ್ನು ನಿಂದಿಸಿದ್ದಾರೆ ಎಂದು ಸಂಶೋಧನಾ ವಿದ್ಯಾರ್ಥಿ ಲೋಕೇಶ್ ರಾಮ್ ದೂರಿದ್ದಾರೆ.

70 ವಿದ್ಯಾರ್ಥಿಗಳು ನೀಡಿದ ದೂರಿಗೆ ಸ್ವೀಕೃತಿಪತ್ರ ನೀಡಲಾಗಿದೆ.

ಗಾರ್ಮೆಂಟ್ಸ್ ನೌಕರ ಆತ್ಮಹತ್ಯೆ

ಬೆಂಗಳೂರು: ಗಾರ್ಮೆಂಟ್ಸ್ ಕಾರ್ಖಾನೆಯೊಂದರ ಗುಣಮಟ್ಟ ತಪಾಸಣೆ ನೌಕರ ನವೀನ್ ಕುಮಾರ್ (31) ಎಂಬುವರು ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದು, ಈ ಬಗ್ಗೆ ಆರ್‌ಎಂಸಿ ಯಾರ್ಡ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಆಂಧ್ರಪ್ರದೇಶದ ನವೀನ್‌ಕುಮಾರ್, ತಂದೆ– ತಾಯಿ ಜೊತೆ 18 ವರ್ಷಗಳಿಂದ ನಗರದಲ್ಲಿ ವಾಸವಿದ್ದರು. ಅವರ ಆತ್ಮಹತ್ಯೆ ಬಗ್ಗೆ ತಂದೆಯಿಂದ ಹೇಳಿಕೆ ಪಡೆದು ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಪೆಟ್ರೋಲ್ ಬಾಟಲಿ ಸಮೇತ ಪೀಣ್ಯ ಸರ್ಕಾರಿ ಐಟಿಐ ಕಾಲೇಜು ಆವರಣಕ್ಕೆ ಶುಕ್ರವಾರ ಮಧ್ಯಾಹ್ನ ನವೀನ್ ಬಂದಿದ್ದರು. ಮೈ ಮೇಲೆ ಪೆಟ್ರೋಲ್ ಸುರಿದುಕೊಂಡು, ಬೆಂಕಿ ಹಚ್ಚಿಕೊಂಡಿದ್ದರು.'

'ರಕ್ಷಣೆಗೆ ಹೋಗಿದ್ದ ಸ್ಥಳೀಯರು, ಮೈಗೆ ಹತ್ತಿಕೊಂಡಿದ್ದ ಬೆಂಕಿ ಆರಿಸಿ ಇಎಸ್‌ಐ ಆಸ್ಪತ್ರೆಗೆ ಕರೆದೊಯ್ದಿದ್ದರು. ಅಲ್ಲಿಂದ ಹೆಚ್ಚಿನ ಚಿಕಿತ್ಸೆಗಾಗಿ ನವೀನ್ ಅವರನ್ನು ಸಪ್ತಗಿರಿ ಆಸ್ಪತ್ರೆಗೆ ಕಳುಹಿಸಲಾಗಿತ್ತು. ಆದರೆ, ಚಿಕಿತ್ಸೆಗೆ ಸ್ಪಂದಿಸದೇ ಸಂಜೆ ನವೀನ್ ಅಸುನೀಗಿದರು' ಎಂದೂ ತಿಳಿಸಿದರು.

'ಎಡಗೈ ಸ್ವಾಧೀನ ಸಮಸ್ಯೆಯಿಂದ ಬಳಲುತ್ತಿದ್ದ ನವೀನ್, ಮಾನಸಿಕವಾಗಿ ಕುಗ್ಗಿದ್ದರು. ಮದುವೆಯಾಗಲು ಹುಡುಗಿ ಸಿಕ್ಕಿರಲಿಲ್ಲ. ತಂದೆಯೂ ಆರೋಗ್ಯ ಸಮಸ್ಯೆ ಎದುರಿಸುತ್ತಿದ್ದರು. ಇದರಿಂದ ನೊಂದು ನವೀನ್ ಆತ್ಮಹತ್ಯೆ ಮಾಡಿಕೊಂಡಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ' ಎಂದು ಹೇಳಿದರು.

'ಮೀಸಲಾತಿ ಕಲ್ಪಿಸದೆ ಚುನಾವಣೆ ನಡೆಸಬಾರದು'

ತುಮಕೂರು: ಹಿಂದುಳಿದ ವರ್ಗಗಳ ಆಯೋಗ ಸಿದ್ಧಪಡಿಸಿದ ಜಾತಿ ಗಣತಿಯ ವರದಿಯನ್ನು ಸರ್ಕಾರ ತಕ್ಷಣ ಸ್ವೀಕರಿಸಿ, ಅದರ ಆಧಾರದ ಮೇಲೆ ಸ್ಥಳೀಯ ಸಂಸ್ಥೆಗಳಲ್ಲಿ ರಾಜಕೀಯ ಮೀಸಲಾತಿ ಕಲ್ಪಿಸಬೇಕು. ಈ ಬಗ್ಗೆ ಸುಪ್ರೀಂ ಕೋರ್ಟ್‌ಗೆ ಸರಿಯಾಗಿ ಮನವರಿಕೆ ಮಾಡಿಕೊಡಬೇಕು. ಮೀಸಲಾತಿ ಕಲ್ಪಿಸದೆ ಚುನಾವಣೆ ನಡೆಸಬಾರದು ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಒತ್ತಾಯಿಸಿದ್ದಾರೆ.

ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಕುರುಬರ ಜಿಲ್ಲಾ ಮಟ್ಟದ ಜಾಗೃತಿ ಸಭೆಯಲ್ಲಿ ಮಾತನಾಡಿ, ಕೋರ್ಟ್ ಆದೇಶ ನೆಪ ಮಾಡಿಕೊಂಡು ಸ್ಥಳೀಯ ಸಂಸ್ಥೆಗಳಲ್ಲಿ ಹಿಂದುಳಿದ ವರ್ಗಗಳಿಗೆ ರಾಜಕೀಯ ಮೀಸಲಾತಿ ನಿಲ್ಲಿಸಲಾಗುತ್ತದೆ. ಇಂಥ ನೆಪ ಮುಂದಿಟ್ಟುಕೊಂಡು ಪರಿಶಿಷ್ಟರಿಗೂ ಮೀಸಲಾತಿ ನಿಲ್ಲಿಸುವ ಹುನ್ನಾರವನ್ನು ಬಿಜೆಪಿ ನಡೆಸಿದ್ದು, ಎಚ್ಚರಿಕೆಯಿಂದಿರಬೇಕು ಎಂದರು.

ಕುರುಬ ಸಮುದಾಯವನ್ನು ಎಸ್.ಟಿಗೆ ಸೇರಿಸಲು ಕೇಂದ್ರಕ್ಕೆ ಶಿಫಾರಸು ಮಾಡಲು ಬೇಕಾದ ಕುಲಶಾಸ್ತ್ರೀಯ ಅಧ್ಯಯನ ನಡೆಸುವ ಜವಾಬ್ದಾರಿಯನ್ನು ಮೈಸೂರು ವಿ.ವಿಗೆ ವಹಿಸಲಾಗಿದೆ. ಇದಕ್ಕೆ ಬೇಕಾದ ಹಣ ನೀಡಲಾಗಿದೆ. ಆದರೆ ಯಾವುದೇ ಪ್ರಗತಿಯಾಗಿಲ್ಲ. ಈವರೆಗೂ ವರದಿ ಸಿದ್ಧವಾಗಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಬೀದರ್, ಕಲಬುರಗಿ, ಯಾದಗಿರಿ ಭಾಗದ ಜಿಲ್ಲೆಗಳಲ್ಲಿರುವ ಕುರುಬರ ಕೆಲ ಪಂಗಡಗಳನ್ನು ಗೊಂಡ ಎಂದು ಕರೆಯಲಾಗುತ್ತಿದ್ದು, ಈ ಸಮುದಾಯಕ್ಕೆ ಎಸ್‌ಟಿ ಮೀಸಲಾತಿ ನೀಡಲುವಂತೆ ಕೇಂದ್ರಕ್ಕೆ ಶಿಫಾರಸು ಮಾಡಿದ್ದರೂ ಈವರೆಗೂ ಕ್ರಮ ಕೈಗೊಂಡಿಲ್ಲ. ಆ ಭಾಗದ ಸಮುದಾಯಕ್ಕೆ ಅನ್ಯಾಯವಾಗುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.



ಇತಿಹಾಸ ದರ್ಪಣ ಪ್ರಕಾಶನ, ಬೆಂಗಳೂರು ಹಿಸ್ಟೋರಿಯನ್ಸ್ ಸೊಸೈಟಿ, ಆಯೋಜಿಸಿದ್ದ ಇತಿಹಾಸ ಮತ್ತು ಸಮಕಾಲೀನ ಸವಾಲುಗಳು–ವಿಚಾರಗೋಷ್ಠಿ ಕಾರ್ಯಕ್ರಮದಲ್ಲಿ 'ಬೆಂಗಳೂರು ಪರಂಪರೆ' ಪುಸ್ತಕವನ್ನು ಪ್ರೊ.ಬರಗೂರು ರಾಮಚಂದ್ರಪ್ಪ ಶನಿವಾರ ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಬಿಡುಗಡೆ ಮಾಡಿದರು. ಕಸಾಪ ನಗರ ಅಧ್ಯಕ್ಷ ಪ್ರಕಾಶಮೂರ್ತಿ, ಡಾ.ಹಂ.ಗು. ರಾಜೇಶ್, ಇತಿಹಾಸ ಪ್ರಾಧ್ಯಾಪಕಿ ಡಾ.ಎಸ್.ಪಿ.ವಾಗೀಶ್ವರಿ, ಪ್ರೊ.ಎಸ್ ಚಂದ್ರಶೇಖರ್, ಪ್ರೊ. ಅಶ್ವಥ್ ನಾರಾಯಣ, ಬೆಂಗಳೂರು ಹಿಸ್ಟೋರಿಯನ್ಸ್ ಸೊಸೈಟಿಯ ಎಸ್.ಕೆ. ಅರುಣಿ ಇದ್ದಾರೆ. ಪ್ರಜಾವಾಣಿ ಚಿತ್ರ

ಸಿಸಿಐ ಆದೇಶಕ್ಕೆ ತಡೆ ಮುಂದುವರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಲಯನ್ಸ್ ಆಫ್ ಡಿಜಿಟಲ್ ಇಂಡಿಯಾ ಫೌಂಡೇಷನ್ (ಎಡಿಐಎಫ್) ಜತೆಗೆ ಗೋಪ್ಯ ಮಾಹಿತಿ ಹಂಚಿಕೊಳ್ಳುವಂತೆ ಗೂಗಲ್ ಸಂಸ್ಥೆಗೆ ಭಾರತೀಯ ಸ್ಪರ್ಧಾ ಆಯೋಗ (ಸಿಸಿಐ) ಹೊರಡಿಸಿದ್ದ ಆದೇಶಕ್ಕೆ ನೀಡಲಾಗಿದ್ದ ಮಧ್ಯಂತರ ತಡೆ ಆದೇಶವನ್ನು ಹೈಕೋರ್ಟ್ ವಿಸ್ತರಿಸಿದೆ.

ಸಿಸಿಐ ಆದೇಶವನ್ನು ಪ್ರಶ್ನಿಸಿ ಗೂಗಲ್ ಇಂಡಿಯಾ ಪ್ರೈವೇಟ್ ಲಿಮಿಟೆಡ್, ಗೂಗಲ್ ಎಲ್‌ಎಲ್‌ಸಿ ಮತ್ತು ಗೂಗಲ್ ಐರ್ಲೆಂಡ್ ಲಿಮಿಟೆಡ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಸ್. ಜಿ.ಪಂಡಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತು.

ತ್ವರಿತವಾಗಿ ಗುಂಡಿ ಮುಚ್ಚಲು ಮುಖ್ಯ ಆಯುಕ್ತರ ಸೂಚನೆ

ಒಂದನೇ ಪುಟದಿಂದ

ಜತೆಗೆ ಗುಣಮಟ್ಟ ಕಾಪಾಡಿಕೊಂಡು ರಸ್ತೆ ಗುಂಡಿಗಳನ್ನು ಮುಚ್ಚಬೇಕು. ರಸ್ತೆ ಗುಂಡಿ ಬಿದ್ದ ಸ್ಥಳವನ್ನು ಸ್ವಚ್ಛಗೊಳಿಸಿ ಹಸಿ ಜೆಲ್ಲಿ ಮಿಶ್ರಣ ಹಾಕಿದ ನಂತರವೇ ಡಾಂಬರ್ ಹಾಕಬೇಕು. ಈ ಕಾರ್ಯವನ್ನು ಹಗಲು-ರಾತ್ರಿ ಖುದ್ದು ಪರಿಶೀಲನೆ ನಡೆಸಬೇಕು ಎಂದು ವಲಯ ಆಯುಕ್ತರು ಮತ್ತು ಜಂಟಿ ಆಯುಕ್ತರಿಗೆ ತಿಳಿಸಿದರು.

ಬಿಸಿ ಡಾಂಬರ್ ಜಲ್ಲಿ ಮಿಶ್ರಣ ಘಟಕದಿಂದ ಎಲ್ಲ ವಲಯಗಳಿಗೂ ಪ್ರತಿನಿತ್ಯ 25 ಲಾರಿ ಲೋಡ್‌ಗಳಷ್ಟು ಡಾಂಬರ್ ಕಡ್ಡಾಯವಾಗಿ ಕಳುಹಿಸಬೇಕು. ಅದನ್ನು ವಲಯ ಆಯುಕ್ತರು ಮೇಲ್ವಿಚಾರಣೆ ಮಾಡಬೇಕು ಎಂದು ಸೂಚನೆ ನೀಡಿದರು.

'ಜಲಮಂಡಳಿ, ಬೆಸ್ಕಾಂ, ಗ್ಯಾಸ್ ಅಥಾರಿಟಿ ಆಫ್ ಇಂಡಿಯಾ ಸಂಸ್ಥೆಯ(ಗೇಲ್) ಸೇರಿ ಬೇರೆ ಬೇರೆ ಇಲಾಖೆಗಳ ಕಾಮಗಾರಿಗಳಿಗೆ ಸಂಬಂಧಿಸಿದ ಸಾಮಗ್ರಿಗಳನ್ನು ಸಾರ್ವಜನಿಕ ಸ್ಥಳ, ರಸ್ತೆ ಬದಿ ಅಥವಾ ಪಾದಚಾರಿ ಮಾರ್ಗಗಳಲ್ಲಿ ಹಾಕಲಾಗುತ್ತಿದೆ. ಇದರಿಂದ ಸಾರ್ವಜನಿಕರು ಹಾಗೂ ವಾಹನಗಳ ಸಂಚಾರಕ್ಕೆ ಸಮಸ್ಯೆಯಾಗುತ್ತಿದೆ. ಈ ರೀತಿಯ ಸ್ಥಳಗಳನ್ನು ಗುರುತಿಸಿ ಕೂಡಲೇ ಪಾಲಿಕೆಯ ವಶಕ್ಕೆ ಪಡೆಯಬೇಕು. ಸಂಬಂಧಪಟ್ಟ ಗುತ್ತಿಗೆದಾರರಿಗೆ ದಂಡ ವಿಧಿಸಬೇಕು' ಎಂದು ತಿಳಿಸಿದರು.

'ಎಲ್ಲರಿಗೂ ಕೈಗೆಟುಕುವ ದರದಲ್ಲಿ ಆರೋಗ್ಯ ಸೇವೆ'





ಭೋಪಾಲ್ (ಪಿಟಿಐ): ವಿಶ್ವದಲ್ಲೇ ಭಾರತವು ಎಲ್ಲರಿಗೂ ಕೈಗೆಟುಕುವಂತೆ ಉತ್ತಮ ಆರೋಗ್ಯ ಸೌಕರ್ಯವನ್ನು ನೀಡುತ್ತಿದೆ ಎಂದು ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಉತ್ತಮ ಆರೋಗ್ಯ ಚಿಕಿತ್ಸೆಯ ಸೇವೆ ಪಡೆಯಲು ವಿಶ್ವದ ನಾನಾ ದೇಶಗಳ ನಾಗರಿಕರು ವಿಶೇಷವಾಗಿ ಭಾರತ ಸುತ್ತಮುತ್ತಲಿನ ಪ್ರಜೆಗಳು ಭಾರತಕ್ಕೆ ಬರುತ್ತಾರೆ. ಅಲ್ಲದೆ ಭಾರತವು ವೈದ್ಯಕೀಯ ಪ್ರವಾಸೋದ್ಯಮದಲ್ಲಿ ಅತಿವೇಗವಾಗಿ ಬೆಳೆಯುತ್ತಿದೆ ಎಂದು ಹೇಳಿದ್ದಾರೆ.

ಶನಿವಾರ ಇಲ್ಲಿ ಆರ್‌ಎಸ್‌ಎಸ್ ಬೆಂಬಲಿತ ಆರೋಗ್ಯ ಭಾರತಿ ಹಮ್ಮಿಕೊಂಡಿದ್ದ 'ಒಂದು ದೇಶ, ಒಂದೇ ಆರೋಗ್ಯ ವ್ಯವಸ್ಥೆ' ಕುರಿತು 'ಆರೋಗ್ಯ ಮಂಥನ' ಸಮಾವೇಶವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಭಾರತದಲ್ಲಿ ಇಂದು ವಿಶ್ವದಲ್ಲೇ ಅತಿ ಕಡಿಮೆ ದರಕ್ಕೆ ಉತ್ತಮ ಆರೋಗ್ಯ ಸೌಕರ್ಯಗಳು ಸಿಗುತ್ತವೆ. ವಿಶೇಷವಾಗಿ ದೆಹಲಿಯಲ್ಲಿ ಸ್ಥಳೀಯರಿಗಿಂತಲೂ ವಿದೇಶದಿಂದ ಬಂದವರೇ ಹೆಚ್ಚಿನ ಸಂಖ್ಯೆಯಲ್ಲಿ ಚಿಕಿತ್ಸೆ ಪಡೆಯುವುದನ್ನು ಕಾಣಬಹುದು ಎಂದರು.

ಕಾರ್ಡ್ ರಸ್ತೆಯ ಬಸವೇಶ್ವರನಗರ ಜಂಕ್ಷನ್‌ನಲ್ಲಿ ಮೇಲ್ಸೇತುವೆ ನಿರ್ಮಾಣಕ್ಕೆ ಕಂಬಗಳನ್ನು ಅಳವಡಿಸಿರುವುದು (ಎಡಚಿತ್ರ). ಕಾಮಗಾರಿ ನಡೆಯುತ್ತಿರುವ ದೃಶ್ಯ —ಪ್ರಜಾವಾಣಿ ಚಿತ್ರಗಳು/ಎಂ.ಎಸ್.ಮಂಜುನಾಥ್

ಬಸವೇಶ್ವರನಗರ ಜಂಕ್ಷನ್: ಬೇರೆ ಕಂಪನಿಯ ಪಾಲಾದ ಗುತ್ತಿಗೆ: ಟೆಂಡರ್‌ಗೆ ಮುನ್ನವೇ ಅರ್ಧಕ್ಕೂ ಹೆಚ್ಚು ಕಾಮಗಾರಿ ಪೂರ್ಣ

ಗೊಂದಲದ ಗೂಡಾದ ಮೇಲ್ಸೇತುವೆ

• ವಿಜಯಕುಮಾರ್ ಎಸ್.ಕೆ.

ಪ್ರಜಾವಾಣಿ ವಿಶೇಷ

ಬೆಂಗಳೂರು: ಪಶ್ಚಿಮ ಕಾರ್ಡ್ ರಸ್ತೆಯ ಬಸವೇಶ್ವನಗರ ಜಂಕ್ಷನ್ ಮೇಲ್ಸೇತುವೆ ಕಾಮಗಾರಿ ಗೊಂದಲದ ಗೂಡಾಗಿದೆ. ಟೆಂಡರ್ ಪ್ರಕ್ರಿಯೆಗೆ ಮುನ್ನವೇ ಅರ್ಧಕ್ಕೂ ಹೆಚ್ಚು ಕಾಮಗಾರಿಯನ್ನು ಇಲ್ಲಿ ಈ ಮೊದಲು ಮೇಲ್ಸೇತುವೆ ಕಾಮಗಾರಿ ನಿರ್ವಹಿಸಿದ್ದ ಗುತ್ತಿಗೆದಾರ ಪೂರ್ಣಗೊಳಿಸಿದ್ದರು. ಟೆಂಡರ್ ಕರೆದ ಬಳಿಕ ಗುತ್ತಿಗೆ ಬೇರೆ ಕಂಪನಿಯ ಪಾಲಾಗಿದೆ.

ಪಶ್ಚಿಮ ಕಾರ್ಡ್ ರಸ್ತೆಯಲ್ಲಿ ಅಲ್ಲಲ್ಲಿ ಮೇಲ್ಸೇತುವೆ ನಿರ್ಮಿಸುವ ಕಾಮಗಾರಿಗಳು 6 ವರ್ಷಗಳಿಂದ ನಡೆಯುತ್ತಿವೆ. ಇಲ್ಲಿನ ಮೇಲ್ಸೇತುವೆಗಳ ವಿನ್ಯಾಸವನ್ನು ಪದೇ ಪದೇ ಬದಲಾಯಿಸಲಾಗಿತ್ತು. ಈಗ ಟೆಂಡರ್ ಪ್ರಕ್ರಿಯೆ ನಂತರದ ಬೆಳವಣಿಗೆಯಿಂದಾಗಿ ಬಸವೇಶ್ವನಗರ ಜಂಕ್ಷನ್ ಮೇಲ್ಸೇತುವೆ ನಿರ್ಮಾಣ ಯೋಜನೆ ಮತ್ತಷ್ಟು ವಿಳಂಬವಾಗುವ ಆತಂಕ ಎದುರಾಗಿದೆ.

ಇಲ್ಲಿ ಮೇಲ್ಸೇತುವೆಗಳ ನಿರ್ಮಾಣಕ್ಕೆ ಒಟ್ಟು ₹ 89.86 ಕೋಟಿ ವೆಚ್ಚದ ಆರಂಭಿಕ ಯೋಜನೆಗೆ 2015ರ ಫೆ. 11ರಂದು ಅನುಮೋದನೆ ನೀಡಲಾಗಿತ್ತು. ಈ ಪೈಕಿ ಮಂಜುನಾಥನಗರದ ಮುಖ್ಯರಸ್ತೆ ಕೂಡುವಲ್ಲಿನ ಮೇಲ್ಸೇತುವೆ 2018ರ ಆ. 27ರಂದು ಲೋಕಾರ್ಪಣೆಗೊಂಡಿತು. ಈ ನಡುವೆ, ಶಿವನಗರ 8ನೇ ಮತ್ತು 1ನೇ ಮುಖ್ಯ ರಸ್ತೆ ಕೂಡುವಲ್ಲಿ ಇಂಟಿಗ್ರೇಟೆಡ್ ಅಂಡರ್‌ಪಾಸ್‌ಗೆ ಸಾರ್ವಜನಿಕರಿಂದ ಆಕ್ಷೇಪ ವ್ಯಕ್ತವಾಯಿತು. ಆಗ ಕೆಳಸೇತುವೆ ಬದಲಿಗೆ ಮೇಲ್ಸೇತುವೆ ನಿರ್ಮಿಸಲು ಯೋಜನೆ ಪರಿಷ್ಕರಿಸಲಾಯಿತು. ಪ್ಯಾಕೇಜ್‌ನ ಮೊತ್ತ ₹ 89.86 ಕೋಟಿಯಿಂದ ₹ 112.07 ಕೋಟಿಗೆ ಹೆಚ್ಚಿಸಲಾಯಿತು. ಈ ಕಾಮಗಾರಿ ಮುಕ್ತಾಯಗೊಂಡು 2021ರ ಅ. 4ರಂದು ವಾಹನ ಸಂಚಾರಕ್ಕೆ ಮುಕ್ತಗೊಂಡಿತು.

ಯಶವಂತಪುರ ಕಡೆಯಿಂದ ವಿಜಯನಗರ ತನಕ ಸಿಗ್ನಲ್ ರಹಿತ ರಸ್ತೆಯನ್ನಾಗಿ ಮಾಡಲು 72ನೇ ಅಡ್ಡರಸ್ತೆಗೆ ಮೇಲ್ಸೇತುವೆ ಅಗತ್ಯವಿದೆ ಎಂದು ಈಗಿನ ಸಚಿವ ವಿ.ಸೋಮಣ್ಣ ಅವರು 2018ರ ಆಗಸ್ಟ್ 6ರಂದು ಮುಖ್ಯಮಂತ್ರಿಯವರಿಗೆ ಮತ್ತು ನಗರಾಭಿವೃದ್ಧಿ ಸಚಿವರಿಗೆ ಪತ್ರ ಬರೆದಿದ್ದರು. ಅಲ್ಲದೇ ಎಂ.ವೆಂಕಟರಾವ್ ಇನ್‌ಫ್ರಾ ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿಗೇ ಕಾಮಗಾರಿ ವಹಿಸುವಂತೆ ಕೋರಿದ್ದರು. ₹33.71 ಕೋಟಿ ಮೊತ್ತದ ಯೋಜನೆ ರೂಪಿಸಿ ಅದನ್ನೂ ಮೂಲ ಪ್ಯಾಕೇಜ್‌ನಲ್ಲಿ ಸೇರ್ಪಡೆ ಮಾಡಲಾಯಿತು. ಆಗ ಯೋಜನೆ ಮೊತ್ತ ₹ 145.78 ಕೋಟಿಗೆ ಹೆಚ್ಚಿತು. ಟೆಂಡರ್ ನಡೆಸದೆ ಅದೇ ಗುತ್ತಿಗೆದಾರರಿಗೆ ಕಾಮಗಾರಿ ವಹಿಸಲು ನಿರ್ಧರಿಸಲಾಯಿತು.

ಮತ್ತೊಮ್ಮೆ ಪರಿಷ್ಕರಣೆ: ಶಿವನಗರ ಮೇಲ್ಸೇತುವೆ ಕಾಮಗಾರಿ ಉದ್ಘಾಟನೆಗೆ (2021ರ ಅ.4ರಂದು) ಬಂದಿದ್ದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ವಿ.ಸೋಮಣ್ಣ ಮತ್ತು ಶಾಸಕ ಎಸ್.ಸುರೇಶ್‌ಕುಮಾರ್ ಅವರು ಮನವಿ ಸಲ್ಲಿಸಿ, ಬಸವೇಶ್ವರನಗರದ ಮುಖ್ಯರಸ್ತೆ ಕೂಡುವಲ್ಲಿಯೂ ದ್ವಿಮುಖ ಸಂಚಾರದ ಮೇಲ್ಸೇತುವೆ ನಿರ್ಮಿಸುವಂತೆ ಕೋರಿದ್ದರು. ₹23.62 ಕೋಟಿ ವೆಚ್ಚದಲ್ಲಿ ಹೆಚ್ಚುವರಿ ಮೇಲ್ಸೇತುವೆ ನಿರ್ಮಿಸಲು ಅದಕ್ಕೂ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ(ಕೆಟಿಪಿಪಿ) ವಿನಾಯಿತಿ ಪಡೆಯುವ ಪ್ರಯತ್ನ ನಡೆಯಿತು. ಅನುಮೋದನೆಗೆ ಮುನ್ನವೇ ಕಾಮಗಾರಿ ಆರಂಭಿಸಲಾಗಿತ್ತು. ನಿಯಮ ಮೀರಿ ಕಾಮಗಾರಿ ನಡೆಸುತ್ತಿರುವ ಬಗ್ಗೆ 'ಪ್ರಜಾವಾಣಿ'ಯಲ್ಲಿ ವಿಶೇಷ ವರದಿ ಪ್ರಕಟವಾದ ಬಳಿಕ ಟೆಂಡರ್ ನಡೆಸಿಯೇ ಕಾಮಗಾರಿ ನಿರ್ವಹಿಸಲು ಸರ್ಕಾರ ಆದೇಶ ಹೊರಡಿಸಿತು.

ಬಳಿಕ ಒಂದೆಡೆ ಟೆಂಡರ್ ಪ್ರಕ್ರಿಯೆ ನಡೆಯುತ್ತಿದ್ದರೆ, ಇನ್ನೊಂದೆಡೆ ಎಂ.ವೆಂಕಟರಾವ್ ಇನ್‌ಫ್ರಾ ಪ್ರಾಜೆಕ್ಟ್ಸ್ ಕಂಪನಿ ಕಾಮಗಾರಿ ಮುಂದುವರಿಸುತ್ತಲೇ ಇತ್ತು. ಕೊನೆಗೂ ಗುತ್ತಿಗೆಯನ್ನು ಕಡಿಮೆ ಮೊತ್ತ ದಾಖಲಿಸಿದ್ದ ಆರ್‌ಪಿಪಿ ಕನ್‌ಸ್ಟ್ರಕ್ಷನ್‌ಗೆ ವಹಿಸುವ ಅನಿವಾರ್ಯ ಬಿಬಿಎಂಪಿಗೆ ಬಂದಿದೆ.

ಇದೆಲ್ಲದರ ನಡುವೆ ಮೇಲ್ಸೇತುವೆ ನಿರ್ಮಾಣಕ್ಕೆ ಐದು ಕಂಬಗಳನ್ನು ಎಂ.ವೆಂಕಟರಾವ್ ಇನ್‌ಫ್ರಾ ಪ್ರಾಜೆಕ್ಟ್ಸ್ ಕಂಪನಿ ನಿರ್ಮಿಸಿದೆ. ಕಾಮಗಾರಿ ಈಗಲೂ ಮುಂದುವರಿದಿದೆ.

'ಜನ ಪರಿತಪಿಸಬೇಕಾಗುತ್ತದೆ'

ಕಾರ್ಯಾದೇಶ ಪಡೆಯದೆ ಕೆಲಸ ಮಾಡಿದರೆ ಮುಂದೆ ಗುತ್ತಿಗೆದಾರರ ಜತೆಗೆ ಈ ಭಾಗದಲ್ಲಿ ಸಂಚಾರ ಮಾಡುವ ಸಾಮಾನ್ಯ ಜನರೂ ಪರಿತಪಿಸಬೇಕಾಗುತ್ತದೆ. ಸಮಗ್ರ ಯೋಜನೆ ರೂಪಿಸದ ಪರಿಣಾಮ ಕಾಮಗಾರಿ 6 ವರ್ಷಗಳ ಬಳಿಕವೂ ಪೂರ್ಣಗೊಂಡಿಲ್ಲ. ಯೋಜನೆಯ ವಿವರ ಒಳಗೊಂಡ ಫಲಕವನ್ನು ಸ್ಥಳದಲ್ಲಿ ಎಲ್ಲಿಯೂ ಪ್ರದರ್ಶಿಸಿಲ್ಲ. ಜನ ಇದೆಲ್ಲವನ್ನೂ ಪ್ರಶ್ನೆ ಮಾಡದಿದ್ದರೆ ಅರಾಜಕತೆ ಮುಂದುವರಿಯುತ್ತಲೇ ಇರುತ್ತದೆ. ಪ್ರಶ್ನೆ ಮಾಡುವುದನ್ನು ಜನ ರೂಢಿಸಿಕೊಳ್ಳಬೇಕು.

ಆದರ್ಶ ಅಯ್ಯರ್, ಜನಾಧಿಕಾರ ಸಂಘರ್ಷ ಪರಿಷತ್

ಹಲವು ಪಶ್ನೆ; ಬಿಬಿಎಂಪಿ ಅಧಿಕಾರಿಗಳ ಬಳಿ ಉತ್ತರವಿಲ್ಲ

ಕಾರ್ಯಾದೇಶ ಪಡೆಯದೆ ನಿರ್ವಹಿಸಿರುವ ಕಾಮಗಾರಿಗೆ ಬಿಬಿಎಂಪಿ ಬಿಲ್ ಪಾವತಿಸುವುದೇ ಎಂಬ ಪ್ರಶ್ನೆ ಈಗ ಉದ್ಭವವಾಗಿದೆ.

ಅನುಮತಿಯೇ ಇಲ್ಲದೆ ನಿರ್ವಹಿಸಿರುವ ಕಾಮಗಾರಿಗೆ ಗುಣಮಟ್ಟಕ್ಕೆ ಯಾರು ಹೊಣೆ, ಈ ಕಂಪನಿ ಬಿಲ್ ಸಲ್ಲಿಸಿದರೆ ಪಾವತಿಸಲು ಬಿಬಿಎಂಪಿಗೆ ಸಾಧ್ಯವಿದೆಯೇ? ಗುತ್ತಿಗೆ ಬೇರೆಯವರ ಪಾಲಾಗಿದ್ದರೂ ಕಾಮಗಾರಿ ನಿರ್ವಹಿಸಲು ಧೈರ್ಯ ನೀಡುತ್ತಿರುವ ಶಕ್ತಿಗಳು ಯಾವುವು ಎಂಬ ಹತ್ತು ಹಲವು ಪ್ರಶ್ನೆಗಳು ಎದ್ದಿವೆ.

ಅರ್ಧದಷ್ಟು ನಿರ್ವಹಿಸಿರುವ ಕಾಮಗಾರಿಯನ್ನು ಆರ್‌ಪಿಪಿ ಕನ್‌ಸ್ಟ್ರಕ್ಷನ್ ಕಂಪನಿ ಮುಂದುವರಿಸಲು ಒಪ್ಪದಿದ್ದರೆ ಕಾಮಗಾರಿ ನನೆಗುದಿಗೆ ಬೀಳುವ ಸಾಧ್ಯತೆ ಇದೆ. ವರ್ಷಗಟ್ಟಲೆ ಕಾಮಗಾರಿ ಸ್ಥಗಿತಗೊಂಡರೆ ಯಾರು ಹೊಣೆ ಎಂಬ ಪ್ರಶ್ನೆಗಳಿಗೆ ಬಿಬಿಎಂಪಿ ಅಧಿಕಾರಿಗಳ ಬಳಿ ಉತ್ತರವಿಲ್ಲ.

ಈ ಕುರಿತು ಪ್ರತಿಕ್ರಿಯೆ ಪಡೆಯಲು ಬಿಬಿಎಂಪಿ ಮುಖ್ಯ ಎಂಜಿನಿಯರ್ ಎಂ.ಲೋಕೇಶ್ ಅವರನ್ನು 'ಪ್ರಜಾವಾಣಿ' ಸಂಪರ್ಕಿಸಿತು. 'ಕಾರ್ಯದ ಒತ್ತಡದಲ್ಲಿದ್ದೇನೆ, ಸ್ವಲ್ಪ ಸಮಯದ ಬಳಿಕ ವಿವರಿಸುತ್ತೇನೆ' ಎಂದು ಹೇಳಿದರು. ಮತ್ತೆ ಹಲವು ಬಾರಿ ಕರೆ ಮಾಡಿದರೂ ಸ್ವೀಕರಿಸಲಿಲ್ಲ.

ಸುದ್ದಿ 2 ನಿಮಿಷ

ಮೈಷುಗರ್ ಬಾಕಿ ಪಾವತಿಗೆ ಸಿ.ಎಂ ಗೆ ಮನವಿ

ಬೆಂಗಳೂರು: ಮಂಡ್ಯದ ಮೈಸೂರು ಸಕ್ಕರೆ ಕಂಪನಿಗೆ(ಮೈಷುಗರ್) ಬಿಡುಗಡೆ ಮಾಡಲು ಬಾಕಿ ಇರುವ ₹ 46.25 ಕೋಟಿಯನ್ನು ಕೂಡಲೇ ಬಿಡುಗಡೆ ಮಾಡಿ ಕಬ್ಬು ನುರಿಯುವ ಕೆಲಸಕ್ಕೆ ಚಾಲನೆ ಕೊಡಿಸಬೇಕು ಎಂದು ವಿಧಾನಪರಿಷತ್ತಿನ ಕಾಂಗ್ರೆಸ್ ಸದಸ್ಯ ದಿನೇಶ್ ಗೂಳಿಗೌಡ ಅವರು ಮುಖ್ಯಮಂತ್ರಿಗೆ ಮನವಿ ಸಲ್ಲಿಸಿದ್ದಾರೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಶನಿವಾರ ಭೇಟಿ ಮಾಡಿದ ದಿನೇಶ್, 'ಈ ಹಿಂದೆ ₹3.75 ಕೋಟಿ ಬಿಡುಗಡೆ ಮಾಡಲಾಗಿದೆ. ಉಳಿದ ಹಣವನ್ನು ಕೊಡಿಸಿ' ಎಂದೂ ಕೋರಿದರು.

'ಬಾಕಿ ಹಣವನ್ನು ಶೀಘ್ರವೇ ಬಿಡುಗಡೆ ಮಾಡಿಸುವುದಾಗಿ ಮುಖ್ಯಮಂತ್ರಿ ಭರವಸೆ ನೀಡಿದರು' ಎಂದು ದಿನೇಶ್ ತಿಳಿಸಿದ್ದಾರೆ.



ಮಂಡ್ಯ ಜಿಲ್ಲೆಯ ಜನರ ಜೀವನಾಧಾರವಾಗಿರುವ ಮೈಷುಗರ್ ಪುನಾರಂಭ ಹಾಗೂ ಪುನಶ್ಚೇತನಕ್ಕಾಗಿ ಈ ಸಾಲಿನ ಬಜೆಟ್‌ನಲ್ಲಿ ₹ 50 ಕೋಟಿ ಮೀಸಲಿಡಲಾಗಿದೆ. ಮೊದಲ ಹಂತದಲ್ಲಿ ₹ 15 ಕೋಟಿ ಬಿಡುಗಡೆಗೊಳಿಸಲಾಗುವುದು ಎಂಬ ಆಶ್ವಾಸನೆಯನ್ನು ಸರ್ಕಾರ ನೀಡಿತ್ತು. ಕಾರ್ಖಾನೆಯಲ್ಲಿ ಸಾಕಷ್ಟು ತಾಂತ್ರಿಕ ಹಾಗೂ ಆಡಳಿತಾತ್ಮಕ ತೊಂದರೆಗಳು ಇವೆ. ಕಾರ್ಖಾನೆ ಆರಂಭವಾಗದೆ ಸುಮಾರು 2 ವರ್ಷಗಳು ಕಳೆದಿವೆ. ಯಂತ್ರಗಳ ದುರಸ್ತಿಯಾಗಬೇಕಿದ್ದು ಹೊಸ ಯಂತ್ರೋಪಕರಣಗಳು ಅಥವಾ ಬಿಡಿಭಾಗಗಳು ಬೇಕಿರುತ್ತವೆ. ಮೂಲಭೂತ ಸೌಲಭ್ಯ ಒದಗಿಸಬೇಕಿದೆ. ಈ ಎಲ್ಲಾ ಪ್ರಕ್ರಿಯೆಗೆ ಈಗ ಬಿಡುಗಡೆ ಮಾಡಿರುವ ₹3.75 ಕೋಟಿ ರೂಪಾಯಿ ಯಾವುದಕ್ಕೂ ಸಾಲದಾಗಿದೆ. ಬ್ಯಾಂಕ್ ಮೂಲಕ ದುಡಿಮೆ ಬಂಡವಾಳಕ್ಕೆ ವ್ಯವಸ್ಥೆ ಮಾಡಲಾಗುವುದು ಎಂದು ನೀಡಿದ್ದ ಭರವಸೆಯೂ ಈಡೇರಿಲ್ಲ ಎಂದರು.

ನಾಳೆ 'ರೈತ ಚಳವಳಿ ಆತ್ಮಾವಲೋಕನ'

ಮೈಸೂರು: 'ಸಾಮೂಹಿಕ ನಾಯಕತ್ವದ ರಾಜ್ಯ ರೈತ ಸಂಘ, ಹಸಿರು ಸೇನೆ ವತಿಯಿಂದ ಮೇ 30ರಂದು ಬೆಳಿಗ್ಗೆ 10ಕ್ಕೆ ಬೆಂಗಳೂರಿನ ಗಾಂಧಿಭವನದಲ್ಲಿ ರೈತ ಚಳವಳಿ– ಆತ್ಮಾವಲೋಕನ ಹಾಗೂ ಸ್ಪಷ್ಟೀಕರಣ ಸಭೆ ಆಯೋಜಿಸಲಾಗಿದೆ' ಎಂದು ಸಂಘದ ರಾಜ್ಯ ಮಾಧ್ಯಮ ಕಾರ್ಯದರ್ಶಿ ಮಂಜು ಕಿರಣ್ ತಿಳಿದರು.

'ಸಾರಿಗೆ ನಿಗಮಗಳ ನೌಕರರ ಮುಷ್ಕರ ವಾಪಸ್‌ಗಾಗಿ ಹಣ ಪಡೆದಿರುವ ಆರೋಪಗಳು ಕೋಡಿಹಳ್ಳಿ ಚಂದ್ರಶೇಖರ್ ವಿರುದ್ಧ ಕೇಳಿಬಂದಿದೆ. ಆರೋಪದ ಕುರಿತು ಚರ್ಚೆ ನಡೆಸಿ ಮುಂದಿನ ನಡೆ ಕೈಗೊಳ್ಳಲು ಸಭೆ ತೀರ್ಮಾನಿಸಲಿದೆ' ಎಂದು ಶನಿವಾರ ಇಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

'ಸಭೆಯಲ್ಲಿ ಚುಕ್ಕಿ ನಂಜುಂಡ ಸ್ವಾಮಿ, ರಾಕೇಶ್ ಟಿಕಾಯತ್, ಯುದ್ಧವೀರ್ ಸಿಂಗ್, ಕವಿತಾ ಕುರುಗಂಟಿ ಭಾಗವಹಿಸಲಿದ್ದಾರೆ. ಮಹತ್ವದ ನಿರ್ಧಾರ ಕೈಗೊಳ್ಳಲಿದ್ದು, ಜನತೆಗೆ ಮಾಹಿತಿ ನೀಡಲಾಗುವುದು' ಎಂದರು.

ರಾಜ್ಯ ಸಂಚಾಲಕ ವಿದ್ಯಾಸಾಗರ್ ರಾಮೇಗೌಡ, ಮುಖಂಡರಾದ ಇಮ್ಮಾವು ರಘು, ವೆಂಕಟೇಶ್, ಕೃಷ್ಣೇ ಗೌಡ ಎಂದರು.

ಜಿಲ್ಲಾ ಮಟ್ಟದ ಕುರುಬರ ಜಾಗೃತಿ ಸಮಾವೇಶದಲ್ಲಿ ಒಗ್ಗಟ್ಟಿನ ಮಂತ್ರ

ಕುರುಬರನ್ನು ಮರೆತಿಲ್ಲ: ಸಿದ್ದರಾಮಯ್ಯ ಅಭಯ

ಪ್ರಜಾವಾಣಿ ವಾರ್ತೆ

ತುಮಕೂರು: 'ನಾನು ಕುರುಬ ಜನಾಂಗದಲ್ಲಿ ಹುಟ್ಟಿದ್ದೇನೆ. ಈ ಸಮುದಾಯವನ್ನು ಮರೆತಿಲ್ಲ. ಜನಾಂಗಕ್ಕೆ ನ್ಯಾಯ ಕೊಡಿಸುವ ಕೆಲಸಮಾಡುತ್ತಿದ್ದೇನೆ. ನೀವು ನನ್ನ ಜತೆಯಲ್ಲಿರಿ. ಅಧಿಕಾರ ಇರಲಿ, ಇಲ್ಲದಿರಲಿ ನಿಮಗಾಗಿ ಹೋರಾಡುತ್ತೇನೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ನೆರೆದಿದ್ದ ಸಮುದಾಯಕ್ಕೆ ವಾಗ್ದಾನ ಮಾಡಿದರು.

ನಗರ ಕಾಳಿದಾಸ ಕಾಲೇಜು ಮೈದಾನದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಜಿಲ್ಲಾ ಮಟ್ಟದ ಕುರುಬರ ಜಾಗೃತಿ ಸಮಾವೇಶ ಉದ್ಘಾಟಿಸಿ ಮಾತನಾಡಿದರು.

'ಕುರುಬರಿಗೆ ಏನು ಮಾಡಿದ್ದೇನೆ ಎಂದು ರಾಜಕೀಯ ವಿರೋಧಿಗಳು ಪ್ರಶ್ನಿಸುತ್ತಾರೆ. ನಾನು ಕುರುಬನಾಗಿ ಹುಟ್ಟಿದ್ದು, ಜನಾಂಗಕ್ಕೆ ನ್ಯಾಯ ಒದಗಿಸುವ ಕೆಲಸ ಮಾಡಿದ್ದೇನೆ. ನಿಮ್ಮ ಪಾಲು ನಿಮಗೆ ಕೊಡಿಸಿದ್ದೇನೆ. ಸಾಮಾಜಿಕ ನ್ಯಾಯದಿಂದ ವಂಚಿತರಾಗಿರುವ ಇತರೆ ಹಿಂದುಳಿದ ಸಮುದಾಯಗಳಿಗೂ ನ್ಯಾಯ ಕೊಡಿಸುವುದು ನನ್ನ ಜವಾಬ್ದಾರಿಯಾಗಿದೆ. ಧ್ವನಿ ಇಲ್ಲದ ಜಾತಿ, ಸಮುದಾಯದ ಜನರಿಗೂ ಶಕ್ತಿಯಾಗಿ ಕೆಲಸ ಮಾಡುತ್ತಿದ್ದೇನೆ. ಇದು ನನ್ನ ಜವಾಬ್ದಾರಿ, ಕರ್ತವ್ಯ ಸಹ ಆಗಿದೆ. ಸಾಮಾಜಿಕ ನ್ಯಾಯ ಕೊಡಿಸುವಲ್ಲಿ ಯಾವುದೇ ರಾಜಿ ಮಾಡಿಕೊಳ್ಳುವುದಿಲ್ಲ' ಎಂದು ತಮ್ಮನ್ನು ಟೀಕಿಸುವವರಿಗೆ ವೇದಿಕೆ ಮೂಲಕ ಉತ್ತರ ನೀಡಿದರು.

ಕಾಂಗ್ರೆಸ್ ಬೆಂಬಲಿಸಿ: ಬಿಜೆಪಿ, ಜೆಡಿಎಸ್ ಪಕ್ಷದವರು ಹಿಂದುಳಿದ ವರ್ಗದವರನ್ನು ಮುಖ್ಯಮಂತ್ರಿ ಮಾಡುವುದಿಲ್ಲ. ಆ ಪಕ್ಷಗಳಲ್ಲಿ ಸಾಮಾಜಿಕ ನ್ಯಾಯ ಸಿಗುವುದಿಲ್ಲ. ಅವರ ಮಾತನ್ನು ಕೇಳಬೇಡಿ. ಮುಂದಿನ ಚುನಾವಣೆಯಲ್ಲಿ ನನ್ನ ಜತೆ ನಿಂತು ಕಾಂಗ್ರೆಸ್‌ಗೆ ಮತ ಹಾಕಬೇಕು. ಮತ್ತೊಮ್ಮೆ ಅಧಿಕಾರಕ್ಕೆ ಬಂದರೆ ನಿಮಗೆ ಒಳ್ಳೆಯದಾಗುತ್ತದೆ' ಎಂದು ಸಲಹೆ ಮಾಡಿದರು.

ವಿಧಾನ ಪರಿಷತ್ ಮಾಜಿ ಸದಸ್ಯ ಎಚ್.ಎಂ.ರೇವಣ್ಣ ಅವರು, 'ಪರಿಶಿಷ್ಟರು, ಹಿಂದುಳಿದವರಿಗೆ ಒಂದಾದ ಮೇಲೆ ಒಂದು ಕಷ್ಟವನ್ನು ಬಿಜೆಪಿಯವರು ಕೊಡುತ್ತಲೇ ಇದ್ದಾರೆ. ಈ ಸಮುದಾಯಗಳಿಗೆ ಸಿಗುತ್ತಿದ್ದ ಸೌಲಭ್ಯಗಳನ್ನು ಕಡಿತ ಮಾಡಲಾಗಿದೆ. ಸ್ಥಳೀಯ ಸಂಸ್ಥೆಗಳಲ್ಲಿ ರಾಜಕೀಯ ಮೀಸಲಾತಿ ನೀಡುವ ವಿಚಾರದಲ್ಲೂ ಗೊಂದಲ ಸೃಷ್ಟಿಸಿ, ಲಾಭ ಮಾಡಿಕೊಳ್ಳುವ ಪ್ರಯತ್ನ ನಡೆದಿದೆ' ಎಂದು ಆರೋಪಿಸಿದರು.

ಡಿಸಿಸಿ ಬ್ಯಾಂಕ್ ಅಧ್ಯಕ್ಷ ಕೆ.ಎನ್. ರಾಜಣ್ಣ, 'ಪರಿಶಿಷ್ಟರು, ಹಿಂದುಳಿದವರಿಗೆ ನೀಡುತ್ತಿರುವ ಮೀಸಲಾತಿ ತೆಗೆಯುವ ಪ್ರಯತ್ನ ನಡೆದಿದೆ. ಒಂದು ವೇಳೆ ಮೀಸಲಾತಿ ನಿಲ್ಲಿಸಿದರೆ ರಾಜ್ಯದಲ್ಲಿ ಕ್ರಾಂತಿಯಾಗಲಿದೆ' ಎಂದು ಎಚ್ಚರಿಸಿದರು.

ವೇದಿಕೆಯಲ್ಲಿ ಮಾಜಿ ಶಾಸಕ ಜೆಡಿಎಸ್‌ನ ಸುರೇಶ್‌ಬಾಬು ಹೆಸರು ಹೇಳದಿರುವುದಕ್ಕೆ ಅವರ ಬೆಂಬಲಿಗರು ಆಕ್ಷೇಪ ವ್ಯಕ್ತಪಡಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಅವರು, 'ಕಾಂಗ್ರೆಸ್‌ಗೆ ಬಂದು ಸ್ಪರ್ಧೆ ಮಾಡಲು ಸುರೇಶ್‌ಬಾಬುಗೆ ಹೇಳಿ. ಸಿದ್ದರಾಮಯ್ಯ ಹಿಂದೆ ಇರುವವರ ಹೆಸರನ್ನು ಮಾತ್ರ ಹೇಳಲಾಗುತ್ತದೆ. ಅವರ ಜತೆಗೆ ಇರದಿದ್ದರೆ ಯಾರ ಹೆಸರನ್ನೂ ಹೇಳುವುದಿಲ್ಲ. ಕೂಗಾಡುವುದರಲ್ಲಿ ಅರ್ಥವಿಲ್ಲ. ಸಿದ್ದರಾಮಯ್ಯ ಯಾವ ಪಕ್ಷದಲ್ಲಿ ಇದ್ದರೂ ಕುರುಬರು ಬೆಂಬಲಿಸಬೇಕು' ಎಂದರು.

ಶಾಸಕ ಬೈರತಿ ಸುರೇಶ್, 'ಸಿದ್ದರಾಮಯ್ಯ ಮತ್ತೆ ಮುಖ್ಯಮಂತ್ರಿಯಾಗಬೇಕು. ಅವರ ಜತೆಯಲ್ಲಿ ಇದ್ದವರಿಗೆ ಮಾತ್ರ ಸಮುದಾಯದ ಬೆಂಬಲ ಇರುತ್ತದೆ. ಆಗಸ್ಟ್ 3ರಂದು ದಾವಣಗೆರೆಯಲ್ಲಿ 10 ಲಕ್ಷ ಜನರನ್ನು ಸೇರಿಸಿ ಸಿದ್ದರಾಮಯ್ಯ ಹುಟ್ಟುಹಬ್ಬ ಆಚರಿಸಲಾಗುತ್ತದೆ' ಎಂದು ಅವರು ಹೇಳಿದರು.



ತುಮಕೂರಿನಲ್ಲಿ ಶನಿವಾರ ಕುರುಬರ ಜಾಗೃತಿ ಸಮಾವೇಶವನ್ನು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಉದ್ಘಾಟಿಸಿದರು. ಶಾಸಕ ವೆಂಕಟರಮಣಪ್ಪ, ಮುಖಂಡರಾದ ಎಚ್.ಎಂ.ರೇವಣ್ಣ, ಕೆ.ಎನ್.ರಾಜಣ್ಣ, ಟಿ.ಬಿ.ಜಯಚಂದ್ರ, ರಾಮಚಂದ್ರಪ್ಪ, ಮೈಲಪ್ಪ, ಕೆಂಪರಾಜು ಮೊದಲಾದವರು ಉಪಸ್ಥಿತರಿದ್ದರು

'ಕುರುಬರಿಗೆ ಬಿಜೆಪಿಯಿಂದ ಅನ್ಯಾಯ'

ಬಿಜೆಪಿ ನೇತೃತ್ವದ ಸರ್ಕಾರದಿಂದ ಕುರುಬ ಸಮುದಾಯಕ್ಕೆ ಸಾಕಷ್ಟು ಅನ್ಯಾಯವಾಗಿದೆ. ಇದನ್ನು ನೋಡಿಕೊಂಡು ಸುಮ್ಮನೆ ಕುಳಿತುಕೊಳ್ಳಬಾರದು ಎಂದು ರಾಜ್ಯ ಕುರುಬರ ಸಂಘದ ಮಾಜಿ ಪ್ರಧಾನ ಕಾರ್ಯದರ್ಶಿ ರಾಮಚಂದ್ರಪ್ಪ ಸಮುದಾಯದ ಜನರನ್ನು ಎಚ್ಚರಿಸಿದರು.

'ನಮಗೆ ಆಗಿರುವ ಅನ್ಯಾಯದ ಕೂಗನ್ನು ಮುಟ್ಟಿಸಬೇಕಿದೆ. ಸಮುದಾಯದ ವಿದ್ಯಾರ್ಥಿಗಳಿಗೆ ನೀಡುತ್ತಿದ್ದ ವಿದ್ಯಾರ್ಥಿ ವೇತನ ನಿಲ್ಲಿಸಲಾಗಿದೆ. ಹಿಂದುಳಿದ ವರ್ಗಗಳ ಮಕ್ಕಳಿಗೆ ಅನುಕೂಲವಾಗಿದ್ದ ವಿದ್ಯಾಸಿರಿ ಯೋಜನೆ ಮುಂದುವರಿಸಿಲ್ಲ. ಗಂಗಾ ಕಲ್ಯಾಣ, ಕುರುಬ ಸಮುದಾಯ ಭವನ ನಿರ್ಮಾಣಕ್ಕೆ ಅನುದಾನ ಕೊಡುತ್ತಿಲ್ಲ. ನಮಗೆ ಸಿಗುತ್ತಿದ್ದ ಸೌಲಭ್ಯಗಳನ್ನು ಕಿತ್ತುಕೊಳ್ಳುತ್ತಿದೆ. ಇದೇ ಪರಿಸ್ಥಿತಿ ಮುಂದುವರಿದು, ನಾವು ಸಹ ನಿರ್ಲಕ್ಷ್ಯಿಸಿದರೆ 70 ವರ್ಷ ಹಿಂದಕ್ಕೆ ಹೋಗುತ್ತೇವೆ. ಈ ಬಗ್ಗೆ ಜಾಗೃತಿ ಮೂಡಿಸುವ ಸಲುವಾಗಿ ಸಮಾವೇಶ ನಡೆಸುತ್ತಿದ್ದೇವೆ' ಎಂದರು. ಬಿಜೆಪಿ ಸರ್ಕಾರದಿಂದಾಗಿ ಹಿಂದುಳಿದವರಿಗೆ ರಾಜಕೀಯ ಮೀಸಲಾತಿಗೂ ಕಂಟಕ ಬಂದಿದೆ. ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಸೇರಿದಂತೆ ಸ್ಥಳೀಯ ಸಂಸ್ಥೆಗಳಲ್ಲಿ ರಾಜಕೀಯ ಮೀಸಲಾತಿ ಸಿಗದಂತೆ ಮಾಡುವ ಹುನ್ನಾರ ನಡೆದಿದೆ. ಮುಂದಿನ ದಿನಗಳಲ್ಲಿ ಪರಿಶಿಷ್ಟರು, ಹಿಂದುಳಿದವರಿಗೆ ಮೀಸಲಾತಿ ಇಲ್ಲವಾಗಿಸುತ್ತಾರೆ. ಅದಕ್ಕಾಗಿ ಹೋರಾಟ ನಡೆಸಬೇಕು ಎಂದರು.

'ಸಮುದಾಯದ ಶಕ್ತಿ ಪ್ರದರ್ಶನ'

ದಶಕಗಳ ನಂತರ ನಗರದಲ್ಲಿ ಕುರುಬ ಸಮುದಾಯದ ಶಕ್ತಿ ಪ್ರದರ್ಶನ ನಡೆಯಿತು. ಒಗ್ಗಟ್ಟಿನ ಮೂಲಕ ತಮ್ಮ 'ಶಕ್ತಿ' ತೋರ್ಪಡಿಸಿದರು. ಸಮಾವೇಶ ಸಂಘಟಿಸಿ ಜಿಲ್ಲೆಯಲ್ಲಿ ಒಟ್ಟುಗೂಡಿಸುವ ಪ್ರಯತ್ನ ಕಂಡುಬಂತು. ಸಮಾವೇಶದಿಂದ ಒಂದು 'ಸಂದೇಶ' ರವಾನಿಸಲಾಯಿತು.

ಜಿಲ್ಲೆಯ ಎಲ್ಲಾ ತಾಲ್ಲೂಕು, ವಿವಿಧೆಡೆಗಳಿಂದಲೂ ಜನರು ಬಂದಿದ್ದರು. ಕಾರ್ಯಕ್ರಮ ನಡೆದ ಕಾಳಿದಾಸ ಕಾಲೇಜು ಆವರಣ ಭರ್ತಿಯಾಗಿ ಹೊರಗೂ ಜನರು ನಿಂತಿದ್ದರು. 2005ರಲ್ಲಿ ನಡೆದ ಅಹಿಂದ ಸಮಾವೇಶವನ್ನು ಹೊರತುಪಡಿಸಿದರೆ, ಈಗ ಕುರುಬರ ಜಾತಿ ಸಮಾವೇಶ ಸಂಘಟಿಸಲಾಗಿತ್ತು. ಮುಂದಿನ ಚುನಾವಣೆಯ ಪ್ರಚಾರಕ್ಕೆ ಮುನ್ನುಡಿ ಬರೆದಂತಿತ್ತು.



ಪ್ರಶಸ್ತಿ ಪ್ರದಾನ

ಕರ್ನಾಟಕ ತೆಲುಗು ಅಕಾಡೆಮಿಯು ನಗರದಲ್ಲಿ ತೆಲುಗು ನಟ ಎನ್.ಟಿ. ರಾಮರಾವ್ ಅವರ ಜನ್ಮಶತಮಾನೋತ್ಸವವನ್ನು ಶನಿವಾರ ಆಚರಿಸಿತು. ತೋಟಗಾರಿಕೆ ಸಚಿವ ಮುನಿರತ್ನ ಅವರು 'ಡಾ.ಎನ್.ಟಿ. ರಾಮರಾವ್ ಶತಮಾನೋತ್ಸವ ಪ್ರಶಸ್ತಿ'ಯನ್ನು ನಟಿ ಸಾಹುಕಾರ್ ಜಾನಕಿ ಅವರಿಗೆ ಪ್ರದಾನ ಮಾಡಿದರು. ಅಕಾಡೆಮಿಯ ಸಂಸ್ಥಾಪನಾಧ್ಯಕ್ಷ ಎ. ರಾಧಾಕೃಷ್ಣ ರಾಜು, ಅಧ್ಯಕ್ಷ ಆರ್.ವಿ. ಹರೀಶ್, ಕಾರ್ಯನಿರತ ಅಧ್ಯಕ್ಷ ಆರ್. ಉಮಾಪತಿ ನಾಯ್ಡು, ಉಪಾಧ್ಯಕ್ಷ ಐ. ಲಕ್ಷ್ಮಿ ರೆಡ್ಡಿ ಹಾಗೂ ಪ್ರಧಾನ ಕಾರ್ಯದರ್ಶಿ ಕೆ.ಎನ್. ನರಸಿಂಹಮೂರ್ತಿ ಇದ್ದಾರೆ.

ಬಾಲಕನಿಂದ ವಾಹನ ಚಾಲನೆ: ಪೋಷಕರಿಗೆ ₹ 20 ಸಾವಿರ ದಂಡ

ಪ್ರಜಾವಾಣಿ ವಾರ್ತೆ

ಬೇಲೂರು: ವಾಹನ ಚಾಲನೆ ಮಾಡಿದ ಬಾಲಕನ ಪೋಷಕರಿಗೆ ಇಲ್ಲಿನ ಜೆಎಂಎಫ್‌ಸಿ ನ್ಯಾಯಾಲಯ ₹ 20 ಸಾವಿರ ದಂಡ ವಿಧಿಸಿದ್ದಲ್ಲದೇ, ಬಾಲಕನಿಗೆ ನ್ಯಾಯಾಲಯದಲ್ಲೇ ದಿನವಿಡೀ ನಿಲ್ಲುವ ಶಿಕ್ಷೆಯನ್ನು ಗುರುವಾರ ನೀಡಿತ್ತು.

ಹಳೇಬೀಡು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ 2021ರಲ್ಲಿ ಪ್ರಕರಣ ದಾಖಲಾಗಿದ್ದು ಮೇ 26 ರಂದು ವಿಚಾರಣೆ ಪೂರ್ಣಗೊಳಿಸಿ ಬಾಲಕನ ತಂದೆ ಕುಮಾರ್ ಅವರಿಗೆ ದಂಡ ವಿಧಿಸಲಾಗಿದೆ.

ಸಿನಿಮಾ ಪ್ರಭಾವದಿಂದ 40 ಕಾರು ಕಳ್ಳತನ: ಆರೋಪಿಗಳ ಬಂಧನ

ನವದೆಹಲಿ (ಪಿಟಿಐ): ಹಾಲಿವುಡ್‌ನ 'ದಿ ಫಾಸ್ಟ್ ಅಂಡ್ ಫ್ಯೂರಿಯಸ್' ಸಿನಿಮಾದಿಂದ ಪ್ರೇರಿತರಾಗಿ, ಸ್ಕ್ಯಾನರ್, ಜಿಪಿಎಸ್ ಜಾಮರ್‌ಗಳಂತಹ ಅತ್ಯಾಧುನಿಕ ಸಾಧನಗಳನ್ನು ಬಳಸಿಕೊಂಡು 40ಕ್ಕೂ ಹೆಚ್ಚು ಐಷಾರಾಮಿ ಕಾರುಗಳನ್ನು ಕದ್ದಿದ್ದ ಕಳ್ಳರನ್ನು ಪೊಲೀಸರು ಬಂಧಿಸಿದ್ದಾರೆ.

ಮನೀಷ್ ರಾವ್ (42), ಜಗದೀಪ್ ಶರ್ಮಾ (43) ಹಾಗೂ ಆಸ್ ಮಹಮದ್ (40) ಎಂಬುವವರು ಬಂಧಿತ ಆರೋಪಿಗಳು. ಮನೀಷ್ ಹಾಗೂ ಜಗದೀಪ್ ನವದೆಹಲಿಯ ಉತ್ತಮ್ ನಗರದ ನಿವಾಸಿಗಳಾದರೆ, ಆಸ್ ಉತ್ತರ ಪ್ರದೇಶದ ಮೀರತ್‌ನ ನಿವಾಸಿ ಎಂದು ನೈರುತ್ಯ ವಿಭಾಗದ ಉಪ ಪೊಲೀಸ್ ಆಯುಕ್ತ ಮನೋಜ್ ಸಿ. ತಿಳಿಸಿದ್ದಾರೆ.

ಈ ಬಗ್ಗೆ ಮಾಹಿತಿ ನೀಡಿರುವ ಮನೋಜ್, 'ಕದ್ದ ಕಾರನ್ನು ಮಾರಾಟ ಮಾಡುವ ವೇಳೆ ಮನೀಷ್ ಹಾಗೂ ಜಗದೀಪ್ ಅವರನ್ನು ಬಂಧಿಸಲಾಗಿದೆ. ಆ ಕಾರನ್ನು ಪಶ್ಚಿಮ ವಿಹಾರ ಬಡಾವಣೆಯಿಂದ ಆರೋಪಿಗಳು ಕಳ್ಳತನ ಮಾಡಿದ್ದರು. ಕದ್ದ ಕಾರುಗಳ ಪ್ರಮುಖ ಪೂರೈಕೆದಾರ ಆಸ್‌ನನ್ನು ಸಹ ಬಂಧಿಸಲಾಗಿದೆ' ಎಂದು ಹೇಳಿದರು.

'ಆರೋಪಿಗಳು ಕಾರುಗಳ ಬೀಗ ತೆರೆಯಲು ಸ್ಕ್ಯಾನರ್‌ಗಳನ್ನು ಉಪಯೋಗಿಸುತ್ತಿದ್ದರು. ಕಾರಿನಲ್ಲಿ ಜಿಪಿಎಸ್ ಅಳವಡಿಸಿದ್ದರೆ ಅದನ್ನು ನಿಷ್ಕ್ರಿಯಗೊಳಿಸಲು ಜಾಮರ್‌ಗಳನ್ನು ಬಳಸುತ್ತಿದ್ದರು. ಅವರ ಬಳಿಯಿಂದ ಸೆನ್ಸಾರ್ ಕಿಟ್, ಮ್ಯಾಗ್ನೆಟ್, ಎಲ್‌ಎನ್‌ಟಿ ಕೀಗಳು ಹಾಗೂ ಎಂಟು ರಿಮೋಟ್ ಕಾರುಗಳನ್ನು ವಶಪಡಿಸಿಕೊಳ್ಳಲಾಗಿದೆ' ಎಂದು ಮನೋಜ್ ತಿಳಿಸಿದ್ದಾರೆ.

9 ರಾಜ್ಯಗಳಲ್ಲಿ ಸದ್ಗುರು ಒಬ್ಬಂಟಿಯಾಗಿ ಬೈಕ್ ಪ್ರಯಾಣ

ದೇಶದಲ್ಲಿ 'ಮಣ್ಣು ಉಳಿಸಿ' ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯೂರೋಪ್ ಮತ್ತು ಮಧ್ಯಪ್ರಾಚ್ಯದ 26 ದೇಶಗಳನ್ನು ಸುತ್ತಿರುವ ಸದ್ಗುರು ಜಗ್ಗಿ ವಾಸುದೇವ ಅವರ ಬೈಕ್ ಪ್ರಯಾಣವು ಭಾರತದ 9 ರಾಜ್ಯಗಳಲ್ಲಿ 25 ದಿನಗಳವರೆಗೆ ಮುಂದುವರಿಯಲಿದೆ.

2022ರ ಮಾರ್ಚ್ 21ರಂದು ಸದ್ಗುರು ಜಗ್ಗಿ ವಾಸುದೇವ ಅವರು 'ಮಣ್ಣು ಉಳಿಸಿ' ಅಭಿಯಾನದ ಅಂಗವಾಗಿ ಈ ಪ್ರವಾಸ ಆರಂಭಿಸಿದ್ದರು. ಈ ತಿಂಗಳ ಅಂತ್ಯಕ್ಕೆ ಸದ್ಗುರು ಅವರು ಗುಜರಾತಿನ ಜಾಮನಗರ್‌ದಲ್ಲಿ ಪ್ರವಾಸ ಕೈಗೊಳ್ಳಲಿದ್ದಾರೆ.

ಮಣ್ಣಿನ ಅವನತಿಯನ್ನು ತಡೆದು ಅದರ ಪುನರುಜ್ಜೀವನಕ್ಕೆಗೊಳ್ಳುವ ನಿಟ್ಟಿನಲ್ಲಿ ಜಾಗೃತಿ ಮೂಡಿಸುವುದು ಈ ಅಭಿಯಾನದ ಉದ್ದೇಶವಾಗಿದೆ. ಈ ಅಭಿಯಾನವು ಎಲ್ಲ ದೇಶಗಳ ಜನತೆಯಲ್ಲಿ ಅರಿವು ಮೂಡಿಸಿ, ಸರ್ಕಾರಗಳು ಭೂಸ್ನೇಹಿ ಕಾರ್ಯ ನೀತಿಗಳನ್ನು ರೂಪಿಸಿ ತಮ್ಮ ದೇಶದ ಮಣ್ಣಿನ ರಕ್ಷಣೆ ಮಾಡುವಂತೆ ಪ್ರೋತ್ಸಾಹಿಸುವ ಉದ್ದೇಶ ಹೊಂದಿದೆ. ತಮ್ಮ ಪ್ರವಾಸದುದ್ದಕ್ಕೂ ಸದ್ಗುರು ಅವರು ಸಾರ್ವಜನಿಕ ಕಾರ್ಯಕ್ರಮಗಳನ್ನು ನಡೆಸಿ, ರಾಜಕೀಯ ನಾಯಕರು, ವಿಜ್ಞಾನಿಗಳು, ಮಾಧ್ಯಮ ಪ್ರತಿನಿಧಿಗಳು, ಸಾರ್ವಜನಿಕರು ಮತ್ತು ಚುನಾಯಿತ ನಾಯಕರ ಜೊತೆ ಮಾತುಕತೆ ನಡೆಸುತ್ತಿದ್ದಾರೆ.

'ಎಲ್ಲ ದೇಶಗಳ ಕಾರ್ಯನೀತಿಯಲ್ಲಿ ಪರಿವರ್ತನೆಯಾಗದಿದ್ದರೆ ಮಣ್ಣು ರಕ್ಷಿಸಿಕೊಳ್ಳುವುದು ಸಾಧ್ಯವಿಲ್ಲ' ಎಂದು ಪ್ಯಾರಿಸ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಸದ್ಗುರು ಅವರು ಹೇಳಿದ್ದರು.

100 ದಿನಗಳಲ್ಲಿ 30 ಸಾವಿರ ಕಿಲೋ ಮೀಟರ್‌ಗಳ ದೂರ ಕೈಗೊಂಡಿರುವ ಸದ್ಗುರು ಅವರ ಪ್ರಯಾಣವು ಲಂಡನ್‌ನಿಂದ ಆರಂಭವಾಗಿತ್ತು. ಅಭಿಯಾನವು ಪ್ರಾರಂಭವಾದ ನಂತರ, 74 ರಾಷ್ಟ್ರಗಳು ಮಣ್ಣು ರಕ್ಷಿಸುವ ಕಾರ್ಯಗಳನ್ನು ಕೈಗೊಳ್ಳಲು ಒಪ್ಪಿಕೊಂಡಿವೆ ಎಂದು ಪ್ರಕಟಣೆ ತಿಳಿಸಿದೆ.



ಮಣ್ಣು ಉಳಿಸಿ ಅಭಿಯಾನದ ಅಂಗವಾಗಿ ವಿಶ್ವ ಪರ್ಯಟನೆ ಮುಗಿಸಿ ಭಾರತಕ್ಕೆ ಹಿಂತಿರುಗುತ್ತಿರುವ ಸದ್ಗುರು ಜಗ್ಗಿ ವಾಸುದೇವ ಅವರಿಗೆ ಅಭಿಮಾನಿಗಳು ಬೆಂಗಳೂರಿನಲ್ಲಿ ವಿವಿಧ ಸಾಂಸ್ಕೃತಿಕ ಕಲಾತಂಡಗಳೊಂದಿಗೆ ಸ್ವಾಗತ ಕೋರಿದರು

ಸಾರ್ವಜನಿಕ ಶೌಚಾಲಯಗಳ ಅನೈರ್ಮಲ್ಯವೇ ದೊಡ್ಡ ಸಮಸ್ಯೆ

ನವದೆಹಲಿ (ಪಿಟಿಐ): ಕೊಳಕು ಸಾರ್ವಜನಿಕ ಶೌಚಾಲಯಗಳು, ಸರಿಯಾಗಿ ನಿದ್ದೆಯಾಗದಿರುವುದು ಮತ್ತು ಸ್ನಾಯುಗಳ ಸೆಳೆತ ಋತುಚಕ್ರದ ವೇಳೆ ಮಹಿಳೆಯರನ್ನು ಕಾಡುವ ಪ್ರಮುಖ ಸಂಗತಿಗಳು ಎಂದು ಅಧ್ಯಯನವೊಂದು ತಿಳಿಸಿದೆ.

ಮೇ 28ರ 'ಮುಟ್ಟಿನ ನೈರ್ಮಲ್ಯ ದಿನ'ದ ಅಂಗವಾಗಿ ಫೆಮಿನೈನ್ ಹೈಜಿನ್ ಬ್ರಾಂಡ್ 'ಎವರ್‌ಟೀನ್' ಈ ಸಮೀಕ್ಷೆ ನಡೆಸಿದೆ. ಇದರಲ್ಲಿ 35 ನಗರಗಳ 18–35 ವರ್ಷ ವಯೋಮಾನದ ಸುಮಾರು 6,000 ಮಹಿಳೆಯರು ಪಾಲ್ಗೊಂಡಿದ್ದರು.

ಶೇ 62.2ರಷ್ಟು ಮಹಿಳೆಯರು ಸಾರ್ವಜನಿಕ ಶೌಚಾಲಯಗಳಲ್ಲಿ ಸ್ಯಾನಿಟರಿ ಪ್ಯಾಡ್ ಬದಲಾಯಿಸುವುದೇ ಇಲ್ಲ ಎಂದು ತಿಳಿಸಿದ್ದಾರೆ. ಶೇ 74.6ರಷ್ಟು ಮಹಿಳೆಯರು ಸಾರ್ವಜನಿಕ ಶೌಚಾಲಯಗಳಲ್ಲಿ ಸ್ಯಾನಿಟರಿ ಪ್ಯಾಡ್ ಬದಲಾಯಿಸುವ ಅಗತ್ಯಬಿದ್ದರೆ ಇರಿಸುಮುರಿಸು ಅನುಭವಿಸುವುದಾಗಿ ತಿಳಿಸಿದ್ದಾರೆ.

ಶೇ 88.3ರಷ್ಟು ಮಂದಿ ಸಾರ್ವಜನಿಕ ಶೌಚಾಲಯಗಳು ಗುಪ್ತಾಂಗ ಸೋಂಕಿಗೆ ಮೂಲ ಕಾರಣ ಎಂದು ಭಾವಿಸಿದ್ದಾಗಿ ಹೇಳಿದ್ದಾರೆ ಎಂದು ಸಮೀಕ್ಷೆ ತಿಳಿಸಿದೆ.

ಶೇ 53.2ರಷ್ಟು ಮಹಿಳೆಯರು ಮುಟ್ಟಾದ ಮೊದಲ 2 ದಿನ ಸರಿಯಾಗಿ ನಿದ್ದೆ ಮಾಡಲು ಸಾಧ್ಯವಾಗುವುದಿಲ್ಲ ಎಂದು ತಿಳಿಸಿದ್ದಾರೆ. ಶೇ 67.5ರಷ್ಟು ಮಹಿಳೆಯರು ನಿದ್ದೆ ಮಾಡುವಾಗ ಮುಟ್ಟಿನ ಕಲೆ ಕಾಣುತ್ತದೆ ಎಂಬ ಆತಂಕವಾಗುತ್ತದೆ ಎಂದು ಹೇಳಿದ್ದಾರೆ.

ಇನ್ನು ಶೇ 57.3ರಷ್ಟು ಮಹಿಳೆಯರು ಋತುಚಕ್ರದ ವೇಳೆ ತೀವ್ರ ಅಥವಾ ಸೌಮ್ಯ ಸ್ವರೂಪದ ಸ್ನಾಯು ಸೆಳೆತ ಕಾಡುತ್ತದೆ ಎಂದರೆ, ಶೇ 37.2 ರಷ್ಟು ಮಂದಿ ಆಗಾಗ ಸೌಮ್ಯ ಸ್ವರೂಪದಲ್ಲಿ ಮುಟ್ಟಿನ ನೋವು ಉಂಟಾಗುತ್ತದೆ ಎಂದು ತಿಳಿಸಿದ್ದಾರೆ.

ಬೆಂಗಳೂರು ರೇಸ್

ಇಂಪೀರಿಯಲ್ ಪವರ್ ಗೆಲ್ಲುವ ನಿರೀಕ್ಷೆ

ವಾರ್ ಹ್ಯಾಮರ್ ಮಿಲಿಯನ್ ಭಾನುವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಇಂಪೀರಿಯಲ್ ಪವರ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 1.30ಕ್ಕೆ ಪ್ರಾರಂಭವಾಗಲಿರುವ ದಿನದ ಒಂಬತ್ತು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಮೌಂಟ್ ವ್ಯೂ 1, ನಾಟಿ ಇನ್ ಬ್ಲೂ 4, ಮೆಗಾ ಸಕ್ಸಸ್ 2
2ನೇ ರೇಸ್: ಕೇಪ್ರಿ ಗರ್ಲ್ 5, ಶೀ ಹ್ಯಾಸ್ ಆಲ್ ಕ್ಲಾಸ್ 9, ಡಿವೈನ್ ಬ್ಲೆಸ್ಸಿಂಗ್ಸ್ 1
3ನೇ ರೇಸ್: ಕ್ರೌನ್ ಕನ್ಸರ್ಟ್ 9, ಫಾರೆಸ್ಟಿ 3, ಪ್ರಿನ್ಸ್ ಓ ವಾರ್ 5
4ನೇ ರೇಸ್: ಮಾರ್ಕೊ ಪೋಲೊ 9, ಕ್ವೀನ್ ರೆಗ್ನೆಂಟ್ 2, ಹೋಪ್ ಐಲ್ಯಾಂಡ್ 3
5ನೇ ರೇಸ್: ನಿಕೊಲಿನ 7, ಡಿಸ್ರಪ್ಟರ್ 1, ಆರೊವೆಟ್ಟೆ 5
6ನೇ ರೇಸ್: ಇಂಪೀರಿಯಲ್ ಪವರ್ 1, ಫಿಲಾಸಫಿ 5, ಒನ್ಸ್ ಯು ಗೋ ಬ್ಯಾಕ್ 2
7ನೇ ರೇಸ್: ಫಾರೆಸ್ಟ್ ಫ್ಲೇಮ್ 2, ಅಶ್ವ ಬ್ರಾವೊ 1, ಎಟರ್ನಲ್ ಬ್ಲೇಝ್ 4
8ನೇ ರೇಸ್: ರೊಮಾನ್ಸಾಯರ್ 4, ಇಂಪೀರಿಯಲ್ ಬ್ಲೂ 3, ಬಾಲ್ಟಿಮೋರ್ 2
9ನೇ ರೇಸ್: ಏಬಲ್ ಒನ್ 1, ಮಾರ್ಕ್ ಒನ್ 9, ಅಲೆಕ್ಸಿಸ್ ಜೋರ್ಬಾ 2

ಉತ್ತಮ ಬೆಟ್: ಕೇಪ್ರಿ ಗರ್ಲ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
4,5,6,7,8,9	1,2,3	4,5,6	7,8,9

ಪ್ರಜಾವಾಣಿ ಶೈಕ್ಷಣಿಕ ನೆರವು ನಿಧಿ

ಬಡ ವಿದ್ಯಾರ್ಥಿಗಳಿಗೆ ಉದಾರ ಕೊಡುಗೆ ನೀಡಿ

ಪ್ರಜಾವಾಣಿ- ಡೆಕ್ಕನ್ ಹೆರಾಲ್ಡ್ ಮಾತೃ ಸಂಸ್ಥೆ ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್ ಸ್ಥಾಪಿಸಿರುವ ಟ್ರಸ್ಟ್ ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತೀರ್ಣರಾದ ಅರ್ಹ ಬಡ ವಿದ್ಯಾರ್ಥಿಗಳಿಗೆ ಮುಂದಿನ ಶಿಕ್ಷಣಕ್ಕಾಗಿ ಧನ ಸಹಾಯ ಮಾಡುತ್ತಾ ಬಂದಿದೆ. ಸಾರ್ವಜನಿಕರು ಮತ್ತು ದಾನಿಗಳು ಸಂಸ್ಥೆಯ ಈ ಉದ್ದೇಶಕ್ಕೆ ನೆರವಾಗಬೇಕೆಂದು ಕೋರುತ್ತೇವೆ. ಚೆಕ್ ಅಥವಾ ಡಿ.ಡಿ. ರೂಪದಲ್ಲಿ ಹಣವನ್ನು **'Deccan Herald-Prajavani Relief Trust'** ಹೆಸರಿಗೆ ಕಳುಹಿಸಬಹುದು. ಹಣ ಸಂದಾಯ ಮಾಡಿದ ವಿವರ, ಹೆಸರು, ವಿಳಾಸ ಮತ್ತು ಮೊಬೈಲ್ ಸಂಖ್ಯೆಯನ್ನು **dept.finc@printersmysore.co.in** ಮೇಲ್ ಮುಖಾಂತರ ತಿಳಿಸಿ.

ಆನ್‌ಲೈನ್ ಅಥವಾ ಚೆಕ್ ಮೂಲಕವೂ ಹಣ ವರ್ಗಾಯಿಸುವ ಸೌಲಭ್ಯ ಇದೆ. (ವಿವರ ಕೆಳಗೆ ಕೊಡಲಾಗಿದೆ) ಒಂದು ಸಾವಿರ ರೂಪಾಯಿಗಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಈ ದೇಣಿಗೆಗೆ ಆದಾಯ ತೆರಿಗೆ ಸೆಕ್ಷನ್ 80 ಜಿ ಅನ್ವಯ ಶೇ 50 ರಷ್ಟು ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಕೆಳಗಿನ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ

https://bit.ly/3xFpoz4

ಬ್ಯಾಂಕ್‌ಗೆ ನೇರವಾಗಿ ಹಣ ಸಂದಾಯ ಮಾಡುವವರು ಕೆಳಗಿನ ವಿವರ ಬಳಸಿ

'Deccan Herald-Prajavani Relief Trust'
Canara Bank, Cantonment Branch
A/c no. - **0404101200385**
IFSC code - **CNRB0000404**
MICR Code - **560015009**

ಸೂಚನೆ
ದೇಣಿಗೆ ನೀಡುವವರು ಲಕೋಟೆ ಮೇಲೆ 'ಶೈಕ್ಷಣಿಕ ನೆರವಿಗೆ ಕೊಡುಗೆ' ಎಂದು ನಮೂದಿಸಲು ಮನವಿ.

ವಿಳಾಸ
ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್- ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ. 75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು – 560001

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2022ರ ಸಾಲಿನ ಎಸ್‌ಎಸ್‌ಎಲ್‌ಸಿಯಲ್ಲಿ ಅಧಿಕ ಅಂಕ ಗಳಿಸಿದ ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿ–ವಿದ್ಯಾರ್ಥಿನಿಯರು ಮಾತ್ರ ಈ ನೆರವು ಕೋರಿ ಮೇಲ್ಕಂಡ ವಿಳಾಸಕ್ಕೆ ಅರ್ಜಿ ಸಲ್ಲಿಸಬಹುದು. ಅರ್ಜಿಯಲ್ಲಿ ವಿಳಾಸ, ಮೊಬೈಲ್ ಸಂಖ್ಯೆ ಮತ್ತಿತರ ವಿವರಗಳಿರಬೇಕು. ಲಕೋಟೆ ಮೇಲೆ 'ಶೈಕ್ಷಣಿಕ ನೆರವಿಗೆ ಅರ್ಜಿ' ಎಂದು ಬರೆಯಬೇಕು. ಅರ್ಜಿಯ ಜೊತೆ ಖಾತೆ ಸಂಖ್ಯೆ, ಐಎಫ್‌ಎಸ್‌ಸಿ ನಂಬರ್ ಉಳ್ಳ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿಯನ್ನು ಸಲ್ಲಿಸಬೇಕು.

ವಿದ್ಯಾರ್ಥಿ ವೇತನ; ವಿದ್ಯಾರ್ಥಿಗಳ ಅನಿಸಿಕೆ

ಪುಸ್ತಕ ಖರೀದಿಸಿದೆ



'ಪ್ರಜಾವಾಣಿ'ಯು ನೀಡಿದ ವಿದ್ಯಾರ್ಥಿ ವೇತನದಿಂದ ನಾನು ಪುಸ್ತಕಗಳನ್ನು ಮತ್ತು ಬಟ್ಟೆಗಳನ್ನು ತೆಗೆದುಕೊಂಡೆ. ವಿದ್ಯಾಭ್ಯಾಸದ ವಿಚಾರವಾಗಿ ಸ್ವಲ್ಪ ಮಟ್ಟಿಗೆ ನಮ್ಮ ಕುಟುಂಬಕ್ಕೆ ಆರ್ಥಿಕ ಹೊರೆ ಕಡಿಮೆ ಆಯಿತು.

ಎನ್.ಎ.ಲಾವಣ್ಯ, ನಾರಸಿಂಹನಹಳ್ಳಿ, ಗೌರಿಬಿದನೂರು ತಾ.

ಸಮವಸ್ತ್ರ, ಪುಸ್ತಕ ಖರೀದಿ



'ಪ್ರಜಾವಾಣಿ' ನೀಡಿದ ಹಣದಲ್ಲಿ ನಾನು ಕಾಲೇಜಿನ ಸಮವಸ್ತ್ರದ ಜತೆಗೆ ಸಿಇಟಿಗೆ ಸಂಬಂಧಿಸಿದ ಪುಸ್ತಕಗಳನ್ನು ಖರೀದಿಸಿದೆ. ಸ್ವಲ್ಪ ಹಣವನ್ನು ಕಾಲೇಜು ಶುಲ್ಕ ಪಾವತಿಗೂ ಬಳಸಿದೆವು. ವಿದ್ಯಾರ್ಥಿ ವೇತನ ಅನುಕೂಲವಾಯಿತು. ಥ್ಯಾಂಕ್ಯೂ ಪ್ರಜಾವಾಣಿ.

ಸಿ.ಎ. ಬೃಂದಾ, ಮುದ್ದೇನಹಳ್ಳಿ, ಚಿಕ್ಕಬಳ್ಳಾಪುರ

60 ಲಕ್ಷಕ್ಕೂ ಹೆಚ್ಚು ಹುದ್ದೆ ಖಾಲಿ

ನಿರುದ್ಯೋಗದ ಉತ್ತುಂಗ: ವರುಣ್ ಗಾಂಧಿ ಕಿಡಿ

ನವದೆಹಲಿ (ಪಿಟಿಐ): ನಿರುದ್ಯೋಗ ವಿಷಯದಲ್ಲಿ ಕೇಂದ್ರದ ವಿರುದ್ಧ ಮತ್ತೆ ಧ್ವನಿ ಎತ್ತಿರುವ ಬಿಜೆಪಿಯ ಸಂಸದ ವರುಣ್ ಗಾಂಧಿ, ದೇಶದಲ್ಲಿ ಮೂರು ದಶಕಗಳಲ್ಲೇ ನಿರುದ್ಯೋಗ ಉತ್ತುಂಗದಲ್ಲಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿವಿಧ ಇಲಾಖೆಗಳಲ್ಲಿ ಮಂಜೂರಾದ 60 ಲಕ್ಷಕ್ಕೂ ಹೆಚ್ಚು ಸರ್ಕಾರಿ ಹುದ್ದೆಗಳು ಖಾಲಿ ಉಳಿದಿವೆ ಎಂದು ಹೇಳಿದ್ದಾರೆ.

ವಲಯವಾರು ಖಾಲಿ ಇರುವ ಹುದ್ದೆಗಳ ಪಟ್ಟಿಯನ್ನು ಅವರು ಟ್ವೀಟ್ ಮಾಡಿದ್ದಾರೆ.

'ಸರ್ಕಾರಿ ಹುದ್ದೆಗಳಿಗೆ ನೇಮಕಾತಿ ನಡೆಯದೆ ದೇಶದಾದ್ಯಂತ ಕೋಟ್ಯಂತರ ಯುವಕರು ಜುಗುಪ್ಸೆ ಮತ್ತು ಹತಾಶೆಗೆ ಒಳಗಾಗಿದ್ದಾರೆ. ಸರ್ಕಾರವೇ ನೀಡಿರುವ ಅಧಿಕೃತ ಮಾಹಿತಿ ಪ್ರಕಾರ ದೇಶದಾದ್ಯಂತ 60 ಲಕ್ಷಕ್ಕೂ ಅಧಿಕ ಮಂಜೂರಾದ ಹುದ್ದೆಗಳು ಖಾಲಿ ಇವೆ' ಎಂದು ಅವರು ಹೇಳಿದ್ದಾರೆ.

'ಮಂಜೂರಾದ ಈ ಹುದ್ದೆಗಳಿಗೆ ಹಂಚಿಕೆಯಾದ ಅನುದಾನ ಎಲ್ಲಿಗೆ ಹೋಯಿತು' ಎಂದು ಪ್ರಶ್ನಿಸಿರುವ ಅವರು, 'ಇದನ್ನು ತಿಳಿಯುವ ಹಕ್ಕು ದೇಶದ ಯುವಕರಿಗಿದೆ' ಎಂದು ಹೇಳಿದ್ದಾರೆ.

ಈ ವಾರದ ಆರಂಭದಲ್ಲಿಯೂ ಅವರು ಖಾಲಿ ಇರುವ ಸರ್ಕಾರಿ ಹುದ್ದೆಗಳ ವಿಷಯ ಪ್ರಸ್ತಾಪಿಸಿದ್ದರು. ಆಡಳಿತಾತ್ಮಕ ಅಸಮರ್ಥತೆಗೆ ಯುವಕರು ಬೆಲೆ ತೆರುತ್ತಿದ್ದಾರೆ ಎಂದು ಪ್ರತಿಪಾದಿಸಿದ್ದರು.

ತಮ್ಮದೇ ಪಕ್ಷದ ನೇತೃತ್ವದ ಕೇಂದ್ರ ಸರ್ಕಾರದ ಮೂರು ವಿವಾದಿತ ಕೃಷಿ ಕಾನೂನುಗಳ ವಿರುದ್ಧ ಪ್ರತಿಭಟಿಸುತ್ತಿದ್ದ ರೈತರನ್ನು ಪಿಲಿಬಿಟ್ ಕ್ಷೇತ್ರದ ಸಂಸದ ವರುಣ್ ಗಾಂಧಿ ಬಹಿರಂಗವಾಗಿ ಬೆಂಬಲಿಸಿದ್ದರು.

ಜನ ತಲೆತಗ್ಗಿಸುವಂಥ ಕೆಲಸ ಮಾಡಿಲ್ಲ: ಪ್ರಧಾನಿ ಮೋದಿ

ರಾಜ್‌ಕೋಟ್ (ಪಿಟಿಐ): 'ಎಂಟು ವರ್ಷಗಳ ಆಡಳಿತಾವಧಿಯಲ್ಲಿ ದೇಶದ ಜನರು ನಾಚಿಕೆಯಿಂದ ತಲೆತಗ್ಗಿಸುವಂತಹ ಯಾವುದೇ ಕೆಲಸವನ್ನು ನಾನು ಮಾಡಿಲ್ಲ' ಎಂದು ಪ್ರಧಾನಿ ನರೇಂದ್ರ ಮೋದಿ ಶನಿವಾರ ಹೇಳಿದರು.

ರಾಜ್‌ಕೋಟ್ ಜಿಲ್ಲೆಯ ಅಟ್ಕೋಟ್ ನಗರದಲ್ಲಿ ಶನಿವಾರ 200 ಹಾಸಿಗೆಯ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ದೇಶದ ಯಾವುದೇ ಪ್ರಜೆ ತಲೆತಗ್ಗಿಸುವಂತಹ ಕೆಲಸವನ್ನು ನಾನು ವೈಯಕ್ತಿಕವಾಗಿ ಮಾಡಿಲ್ಲ ಮತ್ತು ಇತರರಿಗೆ ಮಾಡಲು ಅವಕಾಶವನ್ನೂ ಕೊಟ್ಟಿಲ್ಲ' ಎಂದು ಅವರು ತಿಳಿಸಿದರು.

'ನಾವು ಈ ಎಂಟು ವರ್ಷಗಳ ಅವಧಿಯಲ್ಲಿ ಮಹಾತ್ಮ ಗಾಂಧಿ ಮತ್ತು ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಕನಸಿನಂತೆ ದೇಶವನ್ನು ಕಟ್ಟುವ ಕೆಲಸವನ್ನು ಪ್ರಾಮಾಣಿಕವಾಗಿ ಮಾಡಿದ್ದೇವೆ' ಎಂದು ಪ್ರಧಾನಿ ಹೇಳಿದರು.

'ಈ ಅವಧಿಯಲ್ಲಿ ಸರ್ಕಾರ ಬಡವರ ಉನ್ನತಿಗಾಗಿ ಶ್ರಮಿಸಿದೆ. ನಾವು ಬಡವರ ಪರವಾದ ವಿವಿಧ ಯೋಜನೆಗಳನ್ನು ರೂಪಿಸಿ, ಜಾರಿಗೊಳಿಸುವ ಮೂಲಕ ದೇಶದ ಬಡವರಿಗೆ ಸೇವೆ ಸಲ್ಲಿಸಿದ್ದೇವೆ. ಈ ಮೂಲಕ ಅವರ ಜೀವನ ಉತ್ತಮಗೊಳಿಸಲು ಪ್ರಯತ್ನಿಸಿದ್ದೇವೆ' ಎಂದರು.

ಕೋವಿಡ್–19ರ ಸಾಂಕ್ರಾಮಿಕದ ಸಂದರ್ಭದಲ್ಲಿ ಸರ್ಕಾರ ಬಡವರಿಗೆ ಆಹಾರ ಧಾನ್ಯಗಳನ್ನು ಒದಗಿಸಿದೆ. ಅಲ್ಲದೆ ದೇಶದ ಪ್ರತಿ ನಾಗರಿಕರಿಗೂ ಲಸಿಕೆಯನ್ನೂ ಹಾಕಿಸಿದ್ದೇವೆ ಎಂದು ಹೇಳಿದರು.

'ಮಹಾತ್ಮ ಗಾಂಧಿಯವರು ಬಡವರು, ದಲಿತರು, ಆದಿವಾಸಿಗಳು ಮತ್ತು ಮಹಿಳೆಯರು ಸಬಲೀಕರಣಗೊಳ್ಳುವ ಭಾರತವನ್ನು ಬಯಸಿದ್ದರು. ಸ್ವಚ್ಛ ಮತ್ತು ಸ್ವಸ್ಥ ಭಾರತ ಹಾಗೂ ಸ್ವದೇಶಿ ಆರ್ಥಿಕ ವ್ಯವಸ್ಥೆಯ ಕನಸನ್ನು ಅವರು ಕಂಡಿದ್ದರು. ಅದನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಸರ್ಕಾರ ಈ ಎಲ್ಲ ಕ್ಷೇತ್ರಗಳಲ್ಲೂ ಕಾರ್ಯ ನಿರ್ವಹಿಸುತ್ತಿದೆ' ಎಂದರು.

'ನಾನು ಬಡತನದ ಬಗ್ಗೆ ಪುಸ್ತಕಗಳನ್ನು ಓದಿ ಅಥವಾ ದೂರದರ್ಶನ ನೋಡಿ ತಿಳಿದುಕೊಂಡವನಲ್ಲ. ಬದಲಿಗೆ ಬಡತನದಲ್ಲಿಯೇ ಬೆಳೆದು ಬಂದವನು' ಎಂದು ಮೋದಿ ಇದೇ ವೇಳೆ ಹೇಳಿದರು.

ಯಾಸಿನ್ ಮಲಿಕ್‌ಗೆ ಶಿಕ್ಷೆ: ಒಐಸಿ ಹೇಳಿಕೆಗೆ ಭಾರತ ಟೀಕೆ

ನವದೆಹಲಿ (ಪಿಟಿಐ): ಕಾಶ್ಮೀರಿ ಪ್ರತ್ಯೇಕತಾವಾದಿ ನಾಯಕ ಯಾಸಿನ್ ಮಲಿಕ್ ಪ್ರಕರಣದಲ್ಲಿ ಕೋರ್ಟ್ ನೀಡಿರುವ ತೀರ್ಪಿನ ಹಿನ್ನೆಲೆಯಲ್ಲಿ ದೇಶದ ವಿರುದ್ಧ ಇಸ್ಲಾಮಿಕ್ ಸಹಕಾರ ಸಂಘಟನೆಯ ಶಾಶ್ವತ ಮಾನವ ಹಕ್ಕುಗಳ ಆಯೋಗ (ಒಐಸಿ-ಐಪಿಎಚ್‌ಆರ್‌ಸಿ) ಮಾಡಿರುವ ಟೀಕೆ ಒಪ್ಪಲಾಗದು ಎಂದು ಭಾರತ ತಿರುಗೇಟು ನೀಡಿದೆ.

'ಭಯೋತ್ಪಾದನೆ ವಿರುದ್ಧ ಇಡೀ ವಿಶ್ವವೇ ಹೋರಾಡುತ್ತಿದೆ. ಇಂಥ ಸನ್ನಿವೇಶದಲ್ಲಿ, ಭಾರತದ ವಿರುದ್ಧ ಆಯೋಗ ಮಾಡಿರುವ ಟೀಕೆಗಳನ್ನು ಇಸ್ಲಾಮಿಕ್ ಸಹಕಾರ ಸಂಘಟನೆಯು (ಒಐಸಿ) ಯಾವ ರೀತಿಯಲ್ಲೂ ಸಮರ್ಥನೆ ಮಾಡಿಕೊಳ್ಳಬಾರದು' ಎಂದು ವಿದೇಶಾಂಗ ಸಚಿವಾಲಯದ ವಕ್ತಾರ ಅರಿಂದಮ್ ಬಾಗ್ಚಿ ಹೇಳಿದ್ದಾರೆ.



ಅರಿಂದಮ್ ಬಾಗ್ಚಿ

'ಯಾಸಿನ್ ಮಲಿಕ್ ನಡೆಸಿದ್ದ ಭಯೋತ್ಪಾದನಾ ಕೃತ್ಯಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಎನ್‌ಐಎ ಕೋರ್ಟ್‌ಗೆ ಸಲ್ಲಿಸಲಾಗಿತ್ತು. ಈಗ, ಒಐಸಿ-ಐಪಿಎಚ್‌ಆರ್‌ಸಿ ನೀಡಿರುವ ಹೇಳಿಕೆಗಳು ಮಲಿಕ್‌ನ ಕೃತ್ಯಗಳಿಗೆ ಸೂಚ್ಯವಾಗಿ ಬೆಂಬಲ ನೀಡುವಂತಿವೆ' ಎಂದಿದ್ದಾರೆ.

ಉಗ್ರರಿಗೆ ಹಣಕಾಸು ನೆರವು ನೀಡಿದ ಪ್ರಕರಣದಲ್ಲಿ ಯಾಸಿನ್ ಮಲಿಕ್‌ಗೆ ಎನ್‌ಐಎ ವಿಶೇಷ ಕೋರ್ಟ್ ಇತ್ತೀಚೆಗೆ ಜೀವಾವಧಿ ಶಿಕ್ಷೆ ವಿಧಿಸಿತ್ತು.

ಮೇ 30– ಜೂನ್ 14: ಬಿಜೆಪಿ ಪ್ರಚಾರಾಂದೋಲನ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರದ 8ನೇ ವರ್ಷಾಚರಣೆ ಹಿನ್ನೆಲೆಯಲ್ಲಿ ಬಿಜೆಪಿಯು ಮೇ 30ರಿಂದ ಜೂನ್ 14ರ ವರೆಗೆ ದೇಶದಾದ್ಯಂತ ಬೃಹತ್ ಪ್ರಚಾರಾಂದೋಲನ ಹಮ್ಮಿಕೊಂಡಿದೆ.

'ಕೇಂದ್ರದ ಎಲ್ಲ ಸಚಿವರು, ಬಿಜೆಪಿ ನೇತೃತ್ವದ ರಾಜ್ಯಗಳ ಮಂತ್ರಿಗಳು, ಪಕ್ಷದ ಚುನಾಯಿತ ಪ್ರತಿನಿಧಿಗಳು ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು. ಬಡವರ ಕಲ್ಯಾಣಕ್ಕಾಗಿ ಕೇಂದ್ರ ಸರ್ಕಾರ ಜಾರಿಗೊಳಿಸಿರುವ ಯೋಜನೆಗಳು ಹಾಗೂ ಉತ್ತಮ ಆಡಳಿತದ ಬಗ್ಗೆ ಜನರಿಗೆ ಮಾಹಿತಿ ನೀಡುವರು' ಎಂದು ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅರುಣ್ ಸಿಂಗ್ ಶನಿವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.



ಅರುಣ್ ಸಿಂಗ್

'ಕೋವಿಡ್ ನಿಂದಾಗಿ ಅನಾಥರಾಗಿರುವ ಮಕ್ಕಳಿಗೆ ಪ್ರಧಾನಿ ಮೋದಿ ಅವರು ಮೇ 30ರಂದು ಪರಿಹಾರದ ಚೆಕ್‌ಗಳನ್ನು ವಿತರಿಸುವರು. ವಿದ್ಯಾರ್ಥಿವೇತನವನ್ನು ಅದೇ ದಿನ ಘೋಷಿಸುವರು' ಎಂದು ತಿಳಿಸಿದರು.

'ಸೇವೆ, ಉತ್ತಮ ಆಡಳಿತ, ಬಡವರ ಕಲ್ಯಾಣಕ್ಕಾಗಿ ಜಾರಿಗೊಳಿಸಿರುವ ಕಾರ್ಯಕ್ರಮಗಳು ಮೋದಿ ನೇತೃತ್ವದ ಸರ್ಕಾರದ ಆದ್ಯತೆಗಳಾಗಿವೆ. ಈ ಬಗ್ಗೆ ದೇಶದ ಪ್ರತಿ ಪ್ರಜೆಗೂ ಮಾಹಿತಿ ನೀಡಲು ಪ್ರಚಾರಾಂದೋಲನ ವೇಳೆ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು. ಇದಕ್ಕಾಗಿ ಈ ಅವಧಿಯಲ್ಲಿ ಬೂತ್‌ನಿಂದ ರಾಷ್ಟ್ರ ಮಟ್ಟದ ವರೆಗೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ. ಕೇಂದ್ರದ ಹಾಗೂ ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರಗಳ ಸಚಿವರು ಗ್ರಾಮಗಳಿಗೆ ಭೇಟಿ ನೀಡುವರು' ಎಂದರು. 'ರೈತರು, ಮಹಿಳೆಯರು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಒಬಿಸಿ ಹಾಗೂ ಅಲ್ಪಸಂಖ್ಯಾತರು ಸೇರಿ ಪ್ರತಿ ವರ್ಗಕ್ಕೂ ಒಂದು ದಿನ ಮೀಸಲಿರಿಸಲಾಗುವುದು' ಎಂದರು



ಸಂಕ್ಷಿಪ್ತ ಸುದ್ದಿ

ಮೂರನೇ ದಿನವೂ ಸಿಬಿಐಯಿಂದ ಕಾರ್ತಿ ವಿಚಾರಣೆ

ನವದೆಹಲಿ (ಪಿಟಿಐ): ಚೀನಾದ 263 ಮಂದಿಗೆ ವೀಸಾ ಕೊಡಿಸಲು ಲಂಚ ಪಡೆದಿದ್ದಾರೆ ಎಂಬ ಆರೋಪಕ್ಕೆ ಸಂಬಂಧಿಸಿ ಸಂಸದ ಕಾರ್ತಿ ಚಿದಂಬರಂ ಅವರನ್ನು ಸಿಬಿಐ ಅಧಿಕಾರಿಗಳು ಸತತ ಮೂರನೇ ದಿನವೂ ವಿಚಾರಣೆಗೆ ಒಳಪಡಿಸಿದರು.

ಶನಿವಾರ ಬೆಳಿಗ್ಗೆಯೇ ಕಾರ್ತಿ ಚಿದಂಬರಂ ಅವರು ಸಿಬಿಐ ಪ್ರಧಾನ ಕಚೇರಿಗೆ ಬಂದು, ವಿಚಾರಣೆ ಎದುರಿಸಿದರು.

ತಂದೆ ಪಿ.ಚಿದಂಬರಂ ಗೃಹ ಸಚಿವರಾಗಿದ್ದ ಅವಧಿಯಲ್ಲಿ, ಕಾರ್ತಿ ಅವರು 2011ರಲ್ಲಿ ಚೀನಾದ 263 ಮಂದಿಗೆ ವೀಸಾ ಕೊಡಿಸಿದ್ದರು. ಇದಕ್ಕಾಗಿ ಕಾರ್ತಿ ಮತ್ತು ಅವರ ಆಪ್ತ ಎಸ್.ಭಾಸ್ಕರ ರಾಮನ್ ₹50 ಲಕ್ಷ ಲಂಚ ಪಡೆದಿದ್ದಾರೆ ಎಂಬ ಆರೋಪವಿದೆ. ಈ ಸಂಬಂಧ ಕಾರ್ತಿ ಹಾಗೂ ಇತರರ ವಿರುದ್ಧ ಸಿಬಿಐ ಮೇ 14ರಂದು ಪ್ರಕರಣ ದಾಖಲಿಸಿಕೊಂಡಿತ್ತು.

424 ಗಣ್ಯರ ಭದ್ರತೆ ಹಿಂಪಡೆದ ಪಂಜಾಬ್ ಸರ್ಕಾರ

ಚಂಡಿಗಡ (ಪಿಟಿಐ): ಪಂಜಾಬ್‌ನಲ್ಲಿ 424 ಗಣ್ಯರಿಗೆ ನೀಡಿದ್ದ ಪೊಲೀಸ್ ಭದ್ರತೆಯನ್ನು ಮುಖ್ಯಮಂತ್ರಿ ಭಗವಂತ್ ಮಾನ್ ನೇತೃತ್ವದ ಎಎಪಿ ಸರ್ಕಾರ ಶನಿವಾರ ಹಿಂತೆಗೆದುಕೊಂಡಿದೆ.

ಭದ್ರತೆಯನ್ನು ಹಿಂತೆಗೆದುಕೊಂಡವರಲ್ಲಿ ಅನೇಕ ನಿವೃತ್ತ ಪೊಲೀಸ್ ಅಧಿಕಾರಿಗಳು, ಧಾರ್ಮಿಕ ಮುಖಂಡರು ಮತ್ತು ರಾಜಕೀಯ ನಾಯಕರು ಸೇರಿದ್ದಾರೆ ಎಂದು ಸರ್ಕಾರದ ಮೂಲಗಳು ತಿಳಿಸಿವೆ.

ಕಳೆದ ಏಪ್ರಿಲ್‌ನಲ್ಲಿ ಮಾಜಿ ಮುಖ್ಯಮಂತ್ರಿ ಚರಣ್‌ಜಿತ್ ಸಿಂಗ್ ಚನ್ನಿ, ಕ್ಯಾಪ್ಟನ್ ಅಮರಿಂದರ್ ಸಿಂಗ್ ಸೇರಿ ಮಾಜಿ ಸಚಿವರು, ಮಾಜಿ ಶಾಸಕರು ಮತ್ತು ಇತರ ನಾಯಕರು ಸೇರಿದಂತೆ 184 ಜನರ ಭದ್ರತೆಯನ್ನು ಹಿಂತೆಗೆದುಕೊಳ್ಳಲಾಗಿತ್ತು.



ಬಾಗಲಕೋಟೆ ಜಿಲ್ಲೆ ರಾಮಥಾಳ ಹನಿ ನೀರಾವರಿ: ಹಸಿರು ಹೊದೆಯಲಿಲ್ಲ ಕಪ್ಪು ನೆಲ

ಹನಿ ನೀರು, ಇಂಗದ ರೈತರ ಕಣ್ಣೀರು

• ವೆಂಕಟೇಶ ಜಿ.ಎಚ್

ಬಾಗಲಕೋಟೆ: 'ಎಲ್ಲ ಹಾಳು ಮಾಡಿ ಹತ್ತಿ ಬಿತ್ಯಾರ.. ಏನೂ ಉಳಿದಿಲ್ರಿ. ಸರಿಯಾಗ ಜಾರಿ ಆಗಿದ್ರ ಬಾಳಾ ಚಂದ ಯೋಜನಾ ಇದು.. ಆದರೆ, ಎಲ್ಲ ತಿಂದ ಹಾಕ್ಯಾರ.. ಇನ್ನೂ ನಮ್ ಹೊಲಕ್ಕ ನೀರು ಹನಿದಿಲ್ಲ ನೋಡ್ರಿ.. ಬರೀ ದಾಖಲೇಗ ಯೋಜನಾ ತೋರಿಸ್ಯಾರ..'

ಇಸ್ರೇಲ್ ಮಾದರಿ ಶ್ರೇಯದೊಂದಿಗೆ ನಾಲ್ಕು ವರ್ಷಗಳ ಹಿಂದೆ ರಾಷ್ಟ್ರದ ಗಮನ ಸೆಳೆದಿದ್ದ ಹುನಗುಂದ ತಾಲ್ಲೂಕಿನ ರಾಮಥಾಳ ಹನಿ ನೀರಾವರಿ ಯೋಜನೆ ವ್ಯಾಪ್ತಿಯ ಚಿತ್ತವಾಡಗಿಯ ರೈತ ಸಿದ್ದಣ್ಣ ಗದ್ದನಕೇರಿ 'ಪ್ರಜಾವಾಣಿ'ಯೊಂದಿಗೆ ಹಂಚಿಕೊಂಡ ನೋವಿನ ಅಭಿವ್ಯಕ್ತಿ ಇದು.



ಹುನಗುಂದ ತಾ. ವೀರಾಪುರದ ಬಳಿಯ ಹೊಲದಲ್ಲಿ ಬಳಕೆಯಾಗದೆ ಬಿದ್ದಿರುವ ಲ್ಯಾಟರಲ್ ಪೈಪ್‌ಗಳ ರಾಶಿ

ಚಿತ್ತವಾಡಗಿ ಮಾತ್ರವಲ್ಲ; ಯೋಜನೆ ವ್ಯಾಪ್ತಿಯ ಮರೋಳ, ಹುನಗುಂದ ಪಟ್ಟಣ, ಅಮರಾವತಿ, ವೀರಾಪುರ, ಬಿಂಜವಾಡಗಿ, ಘಟ್ಟಿಗನೂರು, ರಾಮವಾಡಗಿ, ಕಡಿವಾಲ, ಹಿರೇಬಾದವಾಡಗಿ ಸೇರಿ ಸಾವಿರಾರು ಎಕರೆ ಹೊಲಗಳಲ್ಲಿ ಬಳಕೆಯಾಗದ ಲ್ಯಾಟರಲ್ ಪೈಪ್‌ಗಳ ರಾಶಿಯೇ ಕಣ್ಣಿಗೆ ಬೀಳುತ್ತವೆ.

ಕಿತ್ತುಹೋದ ಸೋಲಾರ್ ಪ್ಯಾನಲ್, ಪಾಳು ಬಿದ್ದ ನಿಯಂತ್ರಣ ಕೊಠಡಿ, ಇನ್ನೂ ಹಸಿರು ಕಾಣದ ಕಪ್ಪು ನೆಲ, ರೈತರ ಅಸಹಾಯಕತೆ, ಆಕ್ರೋಶವು ಯೋಜನೆಯ ವೈಫಲ್ಯದ ಕಥನ ಬಿಚ್ಚಿಡುತ್ತವೆ.

ಏನಿದು ಹನಿ ನೀರಾವರಿ?:

ನಾರಾಯಣಪುರ ಜಲಾಶಯದ ಹಿನ್ನೀರನ್ನು ಮುಖ್ಯ ಕಾಲುವೆ ಮೂಲಕ ಜಾಕ್‌ವೆಲ್‌ಗೆ ತಂದು ಅಲ್ಲಿಂದ ಪೈಪ್‌ಲೈನ್ ಮೂಲಕ ರೈತರ ಹೊಲಗಳಿಗೆ ಹನಿಸುವುದು ಯೋಜನೆಯ ಉದ್ದೇಶ.

ಮಣ್ಣಿನಲ್ಲಿನ ತೇವಾಂಶ ಆಧರಿಸಿ, ಹೊಲದಲ್ಲಿನ ಬೆಳೆಗೆ ವೈಜ್ಞಾನಿಕವಾಗಿ ಅಗತ್ಯವಿರುವಷ್ಟು ನೀರನ್ನು ಸ್ವಯಂ ಚಾಲಿತವಾಗಿ ಹರಿಸಲಾಗುತ್ತದೆ. ಅದಕ್ಕಾಗಿ ಪ್ರತಿ 50 ಎಕರೆಗೆ ಒಂದು ಬ್ಲಾಕ್ ಗುರುತಿಸಿ ನಿಯಂತ್ರಣ ಕೊಠಡಿ ನಿರ್ಮಿಸಿ ಕಂಪ್ಯೂಟರ್ ಮೂಲಕ ನಿರ್ವಹಣೆಗೆ ವ್ಯವಸ್ಥೆ ಮಾಡಲಾಗಿದೆ.

ತಾಂತ್ರಿಕತೆಯಂತೆ ಯೋಜನೆ ಕೆಲಸ ಬರೋಬ್ಬರಿ ಆಗಿದೆ. ಆದರೆ, ಅದೆಲ್ಲವೂ ಕಳಪೆ ಇರುವುದರಿಂದ ಪೈಪ್‌ಲೈನ್‌ಗೆ (ಡ್ರಿಪ್) ಅಗತ್ಯವಿರುವಷ್ಟು ಒತ್ತಡ (ಪ್ರೆಷರ್) ದೊರೆಯದೆ ಹೊಲಗಳಿಗೆ ನೀರು ಹನಿಯುತ್ತಿಲ್ಲ. ಕೆಲವು ಕಡೆ ನೀರಿನ ಒತ್ತಡಕ್ಕೆ ಪೈಪ್‌ಗಳು ಒಡೆದಿವೆ. ಹಲವು ಕಡೆ ಲ್ಯಾಟರಲ್ ಪೈಪ್ ಇದೆ ಎಂಬುದೇ ರೈತರಿಗೆ ಗೊತ್ತಿಲ್ಲ. ನೀರು ಬಾರದೇ ಬಳಕೆಯ ಅಗತ್ಯವೇ ಬಿದ್ದಿಲ್ಲ. ಕೆಲವು ಕಡೆ ಕಳ್ಳರ ಪಾಲಾಗಿವೆ.

'ಒಂದೂವರೆ ಅಡಿ ಆಳಕ್ಕೆ ನೇಗಿಲು ಉಳುಮೆ ಮಾಡುವುದರಿಂದ ಪೈಪ್‌ಲೈನ್ ಕನಿಷ್ಠ 3 ಅಡಿ ಒಳಗೆ ಹಾಕಬೇಕಿತ್ತು. ಆದರೆ, ಗುತ್ತಿಗೆದಾರರು ರಾತ್ರೋರಾತ್ರಿ ಮೇಲೆಯೇ ಹಾಕಿ ಕೈ ತೊಳೆದುಕೊಂಡಿದ್ದಾರೆ. ಅವೆಲ್ಲ ಈಗ ಕಿತ್ತುಹೋಗಿವೆ. ಗ್ರಾಮಸ್ಥರು ಉರುವಲು ಕಟ್ಟಲು ಹಗ್ಗದ ರೀತಿ ಬಳಕೆ ಮಾಡಿಕೊಳ್ಳುತ್ತಿದ್ದಾರೆ' ಎಂದು ಸಿದ್ದಣ್ಣ ಗದ್ದನಕೇರಿ ಹೇಳುತ್ತಾರೆ.

'ವಾಸ್ತವವಾಗಿ 24 ಸಾವಿರ ಹೆಕ್ಟೇರ್‌ಗೆ ನೀರು ಹನಿಯಬೇಕಿತ್ತು. ಸರಿಯಾಗಿ ಸಾವಿರ ಎಕರೆಗೂ ಹಾಯ್ದಿಲ್ಲ. ಎನ್‌ಜಿಒಗಳ ಬಳಸಿ ಅಲ್ಲಲ್ಲಿ ಒಂದಷ್ಟು ಮಾದರಿ ತಾಕು ನಿರ್ಮಿಸಿದ್ದಾರೆ. ಹೊರಗಿನವರನ್ನು ಕರೆತಂದು ಅದನ್ನೇ ತೋರಿಸಿ ಯೋಜನೆ ಯಶಸ್ವಿಯಾಗಿದೆ ಎಂದು ಬಿಂಬಿಸಲಾಗುತ್ತಿದೆ' ಎಂದು ಸಾಮಾಜಿಕ ಹೋರಾಟಗಾರ ನಾಗರಾಜ ಹೊಂಗಲ್ ಆರೋಪಿಸುತ್ತಾರೆ.

'ಭಾಗಿದಾರರಲ್ಲಿ (ರೈತರಲ್ಲಿ) ಜಾಗೃತಿ ಮೂಡಿಸಿಲ್ಲ. ಇದು ಯೋಜನೆ ವೈಫಲ್ಯಕ್ಕೆ ಕಾರಣ. ಅದನ್ನು ಸರಿಪಡಿಸಲು ಈಗ ಧಾರವಾಡದ ನೀರು ಮತ್ತು ನೆಲ ನಿರ್ವಹಣಾ ಸಂಸ್ಥೆಗೆ (ವಾಲ್ಮಿ) ಹೊಣೆ ವಹಿಸಲಾಗಿದೆ. ಆದರೆ, ನೀರೇ ಇಲ್ಲದೆ ಯಾವ ಭಾಗಿದಾರಿಕೆ' ಎಂದು ಪ್ರಶ್ನಿಸುತ್ತಾರೆ.

'ಒಣ ಬೇಸಾಯದ ತೃಪ್ತಿ ಈಗಿಲ್ರಿ...'

'ಒಣ ಬೇಸಾಯದಲ್ಲಿದ್ದ ತೃಪ್ತಿ ನಮಗೆ ಈ ಹನಿ ನೀರಾವರಿ ಬಂದ ಮೇಲೆ ಉಳಿದಿಲ್ರಿ' ಎಂದು ಹುನಗುಂದದ ರೈತ ಮಹೇಶ ಬೆಳ್ಳಿಹಾಳ ಬೇಸರ ವ್ಯಕ್ತಪಡಿಸುತ್ತಾರೆ.

'ಇವರು (ಸರ್ಕಾರ) ರೈತರ ಭಾವನೆ, ಬದುಕಿನ ಜೊತೆಗೆ ಚೆಲ್ಲಾಟವಾಡಿದ್ದಾರೆ. ಹನಿ ನೀರಾವರಿ ಹೆಸರಿಗಷ್ಟೇ ಆಯ್ತು. ಜಾಕ್‌ವೆಲ್‌ನಿಂದ 500 ಮೀಟರ್ ಅಂತರದಲ್ಲಿ ನಮ್ಮದು 19 ಎಕರೆ ಹೊಲ ಇದೆ. ಅಲ್ಲಿಗೆ ಇನ್ನೂ ಹನಿ ನೀರು ಹರಿದಿಲ್ಲ. ಆದರೂ ಪ್ರತಿ ಎಕರೆಗೆ ₹1,200 ನೀರಾವರಿ ಕಂದಾಯ ಈಗ ಕಟ್ಟಬೇಕು. ಸದನ ಸಮಿತಿ, ಲೋಕಾಯುಕ್ತರು, ಕೆಬಿಜೆಎನ್‌ಎಲ್‌ನವರು ಬಂದು ನಮ್ಮ ಅಹವಾಲು ಆಲಿಸಿದರು. ಇನ್ನೂ ಸಮಸ್ಯೆ ಬಗೆಹರಿದಿಲ್ಲ' ಎಂದು ಅಳಲು ತೋಡಿಕೊಂಡರು.

ಕೆಬಿಜೆಎನ್‌ಎಲ್‌ನಿಂದ ಅನುಷ್ಠಾನ..

ಬಚಾವತ್ ತೀರ್ಪಿನ ಅನ್ವಯ ಕೃಷ್ಣಾ ಕೊಳ್ಳದ ನೀರಾವರಿ ಯೋಜನೆಗಳ 'ಎ' ಸ್ಕೀಮ್‌ನ ಅಡಿ 7.27 ಟಿಎಂಸಿ ಅಡಿ ನೀರನ್ನು ಬಳಕೆ ಮಾಡಿಕೊಳ್ಳಲು ಹನಿ ನೀರಾವರಿ ಯೋಜನೆಯನ್ನು ಕೃಷ್ಣಾ ಭಾಗ್ಯ ಜಲ ನಿಗಮ (ಕೆಬಿಜೆಎನ್‌ಎಲ್) ಅನುಷ್ಠಾನಗೊಳಿಸಿದೆ. ಜೈನ್ ಇರಿಗೇಶನ್ ಸಿಸ್ಟಮ್ ಹಾಗೂ ನೆಟಾಫಿಮ್ ಸಂಸ್ಥೆಗಳು ಯೋಜನೆ ಪೂರ್ಣಗೊಳಿಸಿವೆ.

> **ಇದು ಪ್ರಾಯೋಗಿಕ ಯೋಜನೆ. ಏನು ತಪ್ಪು ಆಗಿದೆ, ಹೇಗೆ ಸರಿಪಡಿಸಬೇಕೆಂದು ಮೇಲಿನ ಹಂತದಲ್ಲಿ ಚರ್ಚೆ ಆಗುತ್ತಿದೆ. ಸರ್ಕಾರ ನೇಮಿಸಿದ್ದ ಟಾಸ್ಕ್‌ಫೋರ್ಸ್‌ನಿಂದ ತನಿಖೆ ಪ್ರಗತಿಯಲ್ಲಿದೆ**
> **ರಾಜಾಭಕ್ಷ್ ಕಿತ್ತೂರು**
> ಎಇಇ, ಕೆಬಿಜೆಎನ್‌ಎಲ್, ಹುನಗುಂದ

ಅಂಕಿ ಅಂಶ ಹನಿ ನೀರಾವರಿ ಯೋಜನೆ

ಪೂರಿಗಾಲಿ ಯೋಜನೆ	
ಯೋಜನಾ ವೆಚ್ಚ ₹595 ಕೋಟಿ	
ನೀರಾವರಿ	25,342 ಎಕರೆ
ಗ್ರಾಮಗಳ ಸಂಖ್ಯೆ	51
ತುಂಬುವ ಕೆರೆಗಳು	16
ಶಿಗ್ಗಾವಿ ತುಂತುರು ನೀರಾವರಿ ಯೋಜನೆ	
ಯೋಜನಾ ವೆಚ್ಚ ₹238 ಕೋಟಿ	
ನೀರಿನ ಮೂಲ	ವರದಾ ನದಿ
ಗ್ರಾಮಗಳ ಸಂಖ್ಯೆ	22
26 ಸಾವಿರ ಎಕರೆ ಭೂಮಿಗೆ ನೀರಾವರಿ	
ರಾಮಥಾಳ ಯೋಜನೆ	
ಯೋಜನಾ ವೆಚ್ಚ ₹786 ಕೋಟಿ	
60 ಸಾವಿರ ಎಕರೆ ಭೂಮಿಗೆ ನೀರಾವರಿ	
ಗ್ರಾಮಗಳ ಸಂಖ್ಯೆ	55



ಹುನಗುಂದ ತಾಲ್ಲೂಕಿನ ವೀರಾಪುರ ಬಳಿ ಹೊಲದಲ್ಲಿ ಮುರಿದು ಹೋಗಿರುವ ಹನಿ ನೀರಾವರಿಯ ಪೈಪ್ ವ್ಯವಸ್ಥೆ
ಪ್ರಜಾವಾಣಿ ಚಿತ್ರ: ಸಂಗಮೇಶ ಹೂಗಾರ

ಬಹಿರಂಗಗೊಳ್ಳದ ತನಿಖಾ ವರದಿ...

'ಕಳಪೆ ಕಾಮಗಾರಿ ಕಾರಣ ನಮ್ಮಲ್ಲಿ ಹನಿ ನೀರಾವರಿ ಯೋಜನೆ ವಿಫಲಗೊಂಡಿದೆ' ಎಂದು ಮೂರು ವರ್ಷಗಳ ಹಿಂದೆ ಹುನಗುಂದ ಶಾಸಕ ದೊಡ್ಡನಗೌಡ ಪಾಟೀಲ ಅಧಿವೇಶನದಲ್ಲಿ ದನಿ ಎತ್ತಿದ್ದರು.

ಸಂಬಂಧಿಸಿದ ಕಂಪನಿಗಳ ಕಪ್ಪುಪಟ್ಟಿಗೆ ಸೇರಿಸಿ ಎಂದು ಒತ್ತಾಯಿಸಿದ್ದರು. ಸರ್ಕಾರ ಆಗ ತನಿಖೆಗೆ ಅಧಿಕಾರಿಗಳ ತಂಡ ನೇಮಿಸಿತ್ತು. ವರದಿ ಇನ್ನೂ ಬಹಿರಂಗಗೊಂಡಿಲ್ಲ.

ತೊಟ್ಟಿಲು ಬಿಟ್ಟೇಳದ 'ಕನಸಿನ ಕೂಸು'

2012ರಲ್ಲಿ ಸಮರ್ಪಣೆಗೊಂಡ ಶಿಗ್ಗಾವಿ ತುಂತುರು ನೀರಾವರಿ ಯೋಜನೆ

• ಸಿದ್ದು ಆರ್.ಜಿ.ಹಳ್ಳಿ

ಹಾವೇರಿ: ಕಡಿಮೆ ನೀರಿನಲ್ಲಿ ಹೆಚ್ಚು ಫಸಲು ಪಡೆಯುವ ಇಸ್ರೇಲ್ ಮಾದರಿಯ 'ದೇಶದ ಮೊಟ್ಟ ಮೊದಲ ಯೋಜನೆ' ಎಂದು ಬಿಂಬಿತವಾದ ₹238 ಕೋಟಿ ವೆಚ್ಚದ 'ಶಿಗ್ಗಾವಿ ತುಂತುರು ನೀರಾವರಿ ಯೋಜನೆ' ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಕನಸಿನ ಕೂಸು. ಆದರೆ, ಒಂದೆರಡು ವರ್ಷಗಳಲ್ಲೇ ಈ ಯೋಜನೆ ತೊಟ್ಟಿಲು ಬಿಟ್ಟೇಳದ ಸ್ಥಿತಿಗೆ ತಲುಪಿದೆ.

ಮುಖ್ಯಮಂತ್ರಿ ಕ್ಷೇತ್ರ 'ಶಿಗ್ಗಾವಿ–ಸವಣೂರು' ಡಾ.ನಂಜುಂಡಪ್ಪ ವರದಿ ಪ್ರಕಾರ ಅತಿ ಹಿಂದುಳಿದ ತಾಲ್ಲೂಕುಗಳು ಎಂಬ ಹಣೆಪಟ್ಟಿ ಹೊಂದಿದ್ದವು. ಬರಡಾದ ಭೂಮಿಗೆ 'ಹಸಿರು ಸೀರೆ' ಉಡಿಸಬೇಕು ಎಂಬ ಉದ್ದೇಶದಿಂದ, 2009ರಲ್ಲಿ ಜಲಸಂಪನ್ಮೂಲ ಸಚಿವರಾಗಿದ್ದ ಬಸವರಾಜ ಬೊಮ್ಮಾಯಿ, ವರದಾ ನದಿಯಿಂದ ಪೈಪುಗಳ ಮೂಲಕ ನೀರು ತಂದು ಕ್ಷೇತ್ರದ 22 ಹಳ್ಳಿಗಳ 26 ಸಾವಿರ ಎಕರೆಗೆ ತುಂತುರು ಪದ್ಧತಿಯಲ್ಲಿ ನೀರುಣಿಸುವ ಯೋಜನೆ ಕಾಮಗಾರಿಗೆ ಚಾಲನೆ ನೀಡಿದರು.

119 ಸಂಪುಗಳ ನಿರ್ಮಾಣ: ಶಿಗ್ಗಾವಿ ಏತ ನೀರಾವರಿ ಯೋಜನೆಯ ಮೊದಲ ಹಂತವಾದ ತುಂತುರು ನೀರಾವರಿ ಯೋಜನೆ 2012ರಲ್ಲಿ ರೈತರಿಗೆ ಸಮರ್ಪಣೆಯಾಯಿತು. ವರದಾ ನದಿಯಿಂದ ನೀರನ್ನು ಮೇಲೆತ್ತಿ, ಪೈಪ್‌ಲೈನ್ ಮೂಲಕ 6 ಡೆಲಿವರಿ ಚೇಂಬರ್ಸ್‌ಗಳಿಗೆ ಸಂಪರ್ಕ ಕಲ್ಪಿಸಿ, ಅಲ್ಲಿಂದ 119 ಸಂಪುಗಳಿಗೆ ನೀರನ್ನು ಪೂರೈಸಲಾಯಿತು. ಪ್ರತಿ ಸಂಪಿನಲ್ಲಿ 10 ಎಚ್‌.ಪಿ. ಸಾಮರ್ಥ್ಯದ ನಾಲ್ಕೈದು ಮೋಟರ್ ಅಳವಡಿಸಿ, ಅಲ್ಲಿಂದ ಪೈಪ್‌ಲೈನ್ ಮೂಲಕ ಕೃಷಿ ಜಮೀನುಗಳಿಗೆ ಸಂಪರ್ಕ ಕಲ್ಪಿಸಿ, 'ಸ್ಪ್ರಿಂಕ್ಲರ್' ಉಪಕರಣಗಳಿಂದ ಬೆಳೆಗಳಿಗೆ ನೀರುಣಿಸುವ 'ನೀಲನಕ್ಷೆ' ಅನುಷ್ಠಾನಗೊಳಿಸಲಾಯಿತು.

ಹಳ್ಳ ಹಿಡಿದ ಯೋಜನೆ: ಕರ್ನಾಟಕ ನೀರಾವರಿ ನಿಗಮದ ಅಧಿಕಾರಿಗಳ ಬೇಜವಾಬ್ದಾರಿ, ಗುತ್ತಿಗೆದಾರರ ಹೊಣೆಗೇಡಿತನ, ರೈತರ ಅಸಹಕಾರ ಹಾಗೂ ತಾಂತ್ರಿಕ ದೋಷಗಳಿಂದ ತುಂತುರು ನೀರಾವರಿ ಯೋಜನೆ ಆರಂಭದಲ್ಲೇ ಮುಗ್ಗರಿಸಿದೆ. ಅಗತ್ಯ ಸಿದ್ಧತೆಗಳಿಲ್ಲದೆ ಹಾಗೂ ರೈತರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ತರಾತುರಿಯಲ್ಲಿ ಯೋಜನೆ ಜಾರಿಗೊಳಿಸಿದ್ದರಿಂದ ಆರಂಭದಲ್ಲೇ ವರದಾ ನದಿ ತೀರದ ರೈತರ ವಿರೋಧ ಎದುರಿಸಬೇಕಾಯಿತು.

ಬೇಸಿಗೆಯಲ್ಲಿ ನೀರು ಸಿಗಲಿಲ್ಲ: 'ವರ್ಷದಲ್ಲಿ 6 ತಿಂಗಳು ಮಾತ್ರ ಹರಿಯುವ ವರದಾ ನದಿ ಬೇಸಿಗೆಯಲ್ಲಿ ಬತ್ತಿ ಹೋಗುತ್ತದೆ. ಬೇಸಿಗೆಯಲ್ಲಿ ಬೆಳೆಗಳಿಗೆ ನೀರು ಪೂರೈಸಲು ಅಗತ್ಯವಾಗಿದ್ದ ಡ್ಯಾಂ ನಿರ್ಮಿಸದೇ ಯೋಜನೆ ಜಾರಿಗೊಳಿಸಿದರು. ಹೀಗಾಗಿ, ರೈತರಿಗೆ ನೀರು ಸಿಗಲಿಲ್ಲ, ಮಳೆಗಾಲದಲ್ಲಿ ಪೈಪ್‌ಲೈನ್ ನೀರಿನ ಅಗತ್ಯ ರೈತರಿಗೆ ಕಂಡುಬರಲಿಲ್ಲ. ಇದರಿಂದ ಯೋಜನೆ ಫಲಪ್ರದವಾಗಲಿಲ್ಲ' ಎನ್ನುತ್ತಾರೆ ಬಂಕಾಪುರ ನೀರು ಬಳಕೆದಾರರ ಸಂಘದ ಸದಸ್ಯರು.

ದುರಸ್ತಿಗೆ ವಿಳಂಬ: 'ಪೈಪ್‌ಲೈನ್ ಅವೈಜ್ಞಾನಿಕವಾಗಿದ್ದರಿಂದ ಎತ್ತರದ ಪ್ರದೇಶಗಳಿಗೆ ನೀರು ಹೋಗುತ್ತಿರಲಿಲ್ಲ. ಕಟ್ಟ ಕಡೆಯ ರೈತನಿಗೆ ನೀರೇ ಸಿಗುತ್ತಿರಲಿಲ್ಲ. ನೀರಿನ ಒತ್ತಡ ಜಾಸ್ತಿಯಾಗಿ ಪೈಪ್ ಒಡೆದು, ಮೋಟರ್‌ಗಳು ಸುಟ್ಟು ಹೋದರೆ ಗುತ್ತಿಗೆದಾರರಾಗಿದ್ದ ಜೈನ್ ಕಂಪನಿಯವರು ಕೂಡಲೇ ಬಂದು ರಿಪೇರಿ ಮಾಡುತ್ತಿರಲಿಲ್ಲ. ಇದರಿಂದ ನೀರು ವೇಳಾಪಟ್ಟಿಯ ಪ್ರಕಾರ ಸಮರ್ಪಕವಾಗಿ ಹಂಚಿಕೆಯಾಗಲಿಲ್ಲ. ನೀರು ಹಂಚಿಕೆ 'ಸಿಕ್ಕವರಿಗೆ ಸೀರುಂಡೆ' ಎಂಬಂತಾಯಿತು' ಎಂದು ಬೇಸರಿಸುತ್ತಾರೆ ರೈತ ಶೇಖರಗೌಡ ಪಾಟೀಲ.

ಕೆರೆಗಳು ಭರ್ತಿ: 'ಶಿಗ್ಗಾವಿ ಏತ ನೀರಾವರಿಯಿಂದ ಶಿಗ್ಗಾವಿ ಮತ್ತು ಸವಣೂರು ತಾಲ್ಲೂಕಿನ 80ಕ್ಕೂ ಹೆಚ್ಚು ಕೆರೆಗಳು ಭರ್ತಿಯಾಗಿವೆ. ಇದರಿಂದ ಅಂತರ್ಜಲ ಮಟ್ಟ ಹೆಚ್ಚಿದೆ. ಕೊಳವೆಬಾವಿಗಳಲ್ಲಿ ನೀರು ವೃದ್ಧಿಯಾಗಿದೆ. ಜನರಿಗೆ ಕುಡಿಯುವ ನೀರು ಮತ್ತು ಜಾನುವಾರುಗಳ ಬಳಕೆಗೆ ಕೆರೆ ನೀರು ಬಳಕೆಯಾಗುತ್ತಿದೆ. ತುಂತುರು ನೀರಾವರಿ ವಿಫಲವಾದರೂ, ಕೆರೆ–ಕಟ್ಟೆಗಳು ತುಂಬಿರುವುದು ರೈತರಿಗೆ ಸಿಕ್ಕ ಸಮಾಧಾನಕರ ಬಹುಮಾನ' ಎನ್ನುತ್ತಾರೆ ಮುನವಳ್ಳಿ ಮತ್ತು ಕುಂದೂರು ರೈತರು.

'ತುಂತುರು ನೀರಾವರಿ ಯೋಜನೆ' ಸ್ಥಗಿತಗೊಂಡು ಏಳೆಂಟು ವರ್ಷ ಕಳೆದಿದ್ದರೂ ಅಸ್ತಿತ್ವದಲ್ಲಿದೆ ಎಂದು ಕರ್ನಾಟಕ ನೀರಾವರಿ ನಿಗಮದ ಅಧಿಕಾರಿಗಳು ನಂಬಿಸಲು ಪ್ರಯತ್ನಿಸುತ್ತಾರೆ. ಯೋಜನೆಯ ಪ್ರಗತಿಯ ವಿವರ ಕೇಳಿದರೆ, ಮಾಹಿತಿ ನೀಡಲು ನಿರಾಕರಿಸುತ್ತಾರೆ.



ಶಿಗ್ಗಾವಿ ತಾಲ್ಲೂಕಿನ ಬಂಕಾಪುರ ಸಮೀಪದ ಜಮೀನಿನಲ್ಲಿ ನಿರ್ಮಿಸಿರುವ 'ಶಿಗ್ಗಾವಿ ತುಂತುರು ನೀರಾವರಿ ಯೋಜನೆಯ' ಸಂಪು ಮಳೆ ನೀರಿನಿಂದ ತುಂಬಿರುವ ದೃಶ್ಯ –ಪ್ರಜಾವಾಣಿ ಚಿತ್ರ

ಕಳ್ಳರ ಪಾಲಾದ ಮೋಟರ್, ಪೈಪು

ಟ್ರ್ಯಾಕ್ಟರ್‌ನಲ್ಲಿ ಉಳುಮೆ ಮಾಡುವಾಗ ಚಾಲಕರ ನಿರ್ಲಕ್ಷ್ಯದಿಂದ 'ಸ್ಪ್ರಿಂಕ್ಲರ್'ಗಳು ಹಾಳಾದವು. ಇದರಿಂದ ಪೈಪ್‌ಲೈನ್‌ನಲ್ಲಿ ನೀರು ಸೋರಿಕೆಯಾಯಿತು. ನೀರು ಸಿಗದಿದ್ದ ರೈತರು ಪೈಪ್‌ಲೈನ್ ಒಡೆದು ತಮ್ಮ ಜಮೀನುಗಳಿಗೆ ನೀರು ತಿರುವಿಕೊಂಡರು. ಪೈಪ್‌ಲೈನ್ ಅಗೆದರೆ ಬೆಳೆ ಹಾಳಾಗುತ್ತದೆ ಎಂಬ ಕಾರಣಕ್ಕೆ ರೈತರು ಕೂಡ ರಿಪೇರಿ ಕೆಲಸಕ್ಕೆ ಅಡ್ಡಿಪಡಿಸಿದರು. ಕಾಲಕ್ರಮೇಣ ಸಂಪುಗಳಲ್ಲಿದ್ದ ಮೋಟರ್, ಸ್ಟಾರ್ಟರ್, ಪೈಪು, ಸ್ಪ್ರಿಂಕ್ಲರ್ ಕಳ್ಳರ ಪಾಲಾದವು. ಈಗ ಉಳಿದಿರುವುದು ರೈತರ ಜಮೀನಲ್ಲಿ ನಿರ್ಮಿಸಿದ 119 ಸಂಪುಗಳು ಮತ್ತು ಪಾಳುಬಿದ್ದ ಪಂಪ್‌ಹೌಸ್‌ಗಳು ಮಾತ್ರ.

ಪರಿಹಾರದಲ್ಲೂ ತಾರತಮ್ಯ

'ಎಕರೆಗೆ 25 ಕ್ವಿಂಟಲ್ ಹತ್ತಿ ಬೆಳೆಯುತ್ತಿದ್ದ ಫಲವತ್ತಾದ ಜಮೀನಿನಲ್ಲಿ 15 ಗುಂಟೆಯನ್ನು ತುಂತುರು ನೀರಾವರಿ ಯೋಜನೆಯ ಸಂಪು ನಿರ್ಮಾಣಕ್ಕಾಗಿ ಬಳಸಿಕೊಂಡರು. ₹5 ಲಕ್ಷ ಪರಿಹಾರ ಕೊಡುತ್ತೇವೆ ಎಂದು ನಂಬಿಸಿದ ಅಧಿಕಾರಿಗಳು ಕೊಟ್ಟಿದ್ದು ಕೇವಲ ₹29 ಸಾವಿರ. ರೈತ ಮುಖಂಡರಿಗೆ ರೊಕ್ಕ ತಿನಿಸಿದ್ರು. ದುಡ್ಡು ಹೊಡೆಯಲು ಕೆಲವು ಕಡೆ ಪೈಪ್‌ಮಾರ್ಗವನ್ನೇ ಬದಲಿಸಿದರು. ಒಟ್ಟಿನಲ್ಲಿ ಅಧಿಕಾರಿಗಳು ಮತ್ತು ಗುತ್ತಿಗೆದಾರರು ಪ್ಲ್ಯಾನ್ ಮಾಡಿ ಗವರ್ಮೆಂಟ್ ರೊಕ್ಕ ಹೊಡೆದ್ರು' ಎಂದು ಬಾಡ ಮತ್ತು ನಾರಾಯಣಪುರ ರೈತರು ದೂರಿದರು.

'ಹಳ್ಳಹಿಡಿದ' ಹನಿ ನೀರಾವರಿ

ಒಂದನೇ ಪುಟದಿಂದ

ಆದರೀಗ ಯೋಜನೆ ಸಂಪೂರ್ಣವಾಗಿ ನೆಲಕಚ್ಚಿದ್ದು ಪೈಪ್, ಇತರ ಉಪಕರಣಗಳನ್ನು ರೈತರೇ ಕಿತ್ತು ಹಾಕಿದ್ದಾರೆ. 'ರೈತರ ಅಸಹಕಾರ' ಹೆಸರಿನಲ್ಲಿ ಯೋಜನೆಯ ವೈಫಲ್ಯವನ್ನು ಅನ್ನದಾತನ ಹೆಗಲಿಗೆ ಕಟ್ಟಲಾಗಿದೆ.

ಬಾಗಲಕೋಟೆ ಜಿಲ್ಲೆ ಹುನುಗುಂದ ತಾಲ್ಲೂಕಿನ 'ರಾಮಥಾಳ ಹನಿ–ತುಂತುರು ನೀರಾವರಿ ಯೋಜನೆ' ಭ್ರಷ್ಟಾಚಾರದ ಕೂಪವಾಗಿದೆ. ಯೋಜನೆ ಉದ್ಘಾಟನೆಯಾಗಿ, ಗುತ್ತಿಗೆದಾರ ಕಂಪನಿ ನಿರ್ವಹಣೆ ಮಾಡಬೇಕಾಗಿದ್ದ ಐದು ವರ್ಷಗಳ ಅವಧಿಯೂ ಮುಗಿದಿದೆ. ಆದರೆ, ಇಂದಿಗೂ ಬಹುತೇಕ ರೈತರಿಗೆ ಹನಿ ನೀರಿನ ಪೈಪ್‌ಗಳೂ ಸಿಕ್ಕಿಲ್ಲ.

ಶಿಗ್ಗಾವಿ, ರಾಮಥಾಳ ಎರಡೂ ಯೋಜನೆ ವಿಫಲಗೊಂಡ ಉದಾಹರಣೆ ಕಣ್ಣ ಮುಂದಿದ್ದರೂ ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನಲ್ಲಿ 'ಪೂರಿಗಾಲಿ ಹನಿ ನೀರಾವರಿ' ಯೋಜನೆ ಆರಂಭಿಸಿದ್ದೇಕೆ ಎಂಬ ಪ್ರಶ್ನೆ ಸಹಜವಾಗಿ ಮೂಡು ತ್ತದೆ. 'ಅಲ್ಲಿ ವಾರ್ಷಿಕ ಒಂದು ಬೆಳೆಗೆ ಮಾತ್ರ ನೀರು ದೊರೆಯುತ್ತದೆ. ಆದರೆ, ಇಲ್ಲಿ ಮುಂಗಾರು, ಹಿಂಗಾರು ಎರಡಕ್ಕೂ ನೀರು ಸಿಗುತ್ತದೆ. ಹೀಗಾಗಿ ಇಲ್ಲಿ ವೈಫಲ್ಯದ ಪ್ರಶ್ನೆಯೇ ಇಲ್ಲ. ಜೊತೆಗೆ ಅಲ್ಲಿನ ತಪ್ಪುಗಳನ್ನು ಸರಿಪಡಿಸಿಕೊಂಡು ಜಾರಿಗೊಳಿಸಿದ್ದೇವೆ' ಎಂಬುದು ಕಾವೇರಿ ನೀರಾವರಿ ನಿಗಮದ ಉತ್ತರ.

ಬಿ.ಜಿ ಪುರ ಹೋಬಳಿಯ 51 ಗ್ರಾಮಗಳ 25 ಸಾವಿರ ಎಕರೆಗೆ ನೀರುಣಿಸುವ, 16 ಕೆರೆ ತುಂಬಿಸುವ ಈ ಯೋಜನೆ ಅಂದುಕೊಂಡಂತೆ ನಡೆದಿದ್ದರೆ 2018ರಲ್ಲೇ ಪೂರ್ಣಗೊಳ್ಳ ಬೇಕಾಗಿತ್ತು. ಸಿದ್ದರಾಮಯ್ಯ ಸರ್ಕಾರದ ಅವಧಿ ಮುಗಿದ ಕೂಡಲೇ ಯೋಜನೆಯೂ ಹಳ್ಳ ಹಿಡಿಯಿತು. ನಂತರ ಸಮ್ಮಿಶ್ರ ಸರ್ಕಾರ, ಬಿಜೆಪಿ ಸರ್ಕಾರ ಈ ಯೋಜನೆ ಜಾರಿಗೆ ಆಸಕ್ತಿ ತೋರದಿರುವುದು ರೈತರ ನಿರೀಕ್ಷೆಯನ್ನು ಹುಸಿಯಾಗಿಸಿದೆ.

ಶಿಗ್ಗಾವಿ, ರಾಮಥಾಳ ಯೋಜನೆಗಳ ವೈಫಲ್ಯಕ್ಕೆ ರೈತರ ಅರಿವಿನ ಕೊರತೆ ಕಾರಣ ಎಂಬ ಅಭಿಪ್ರಾಯ ವ್ಯಕ್ತವಾದ ಹಿನ್ನೆಲೆಯಲ್ಲಿ ಪೂರಿಗಾಲಿ ಯೋಜನೆ ವ್ಯಾಪ್ತಿಯ ರೈತರಿಗೆ ಜಾಗೃತಿ ಮೂಡಿಸಿ, ತರಬೇತಿಯನ್ನೂ ಕೊಡಿಸಲಾಗಿದೆ.

ಯೋಜನೆ ಉಸ್ತುವಾರಿ ಹೊತ್ತಿದ್ದ ಕಾಂಗ್ರೆಸ್‌ನ ಅಂದಿನ ಶಾಸಕ ಪಿ.ಎಂ. ನರೇಂದ್ರಸ್ವಾಮಿ ನೇತೃತ್ವದಲ್ಲಿ ಅಧಿಕಾರಿಗಳು, ರೈತರು ರಾಮಥಾಳ, ಶಿಗ್ಗಾವಿ ಯೋಜನೆಗಳ ಅಧ್ಯಯನ ಪ್ರವಾಸವನ್ನೂ ಮಾಡಿದ್ದಾರೆ. 'ಡ್ರಿಪ್ ಟು ಮಾರ್ಕೆಟ್' ಯೋಜನೆಯಡಿ ರೈತರ ಬೆಳೆಗಳಿಗೆ ಮಾರುಕಟ್ಟೆ ಕಲ್ಪಿಸುವ ವ್ಯವಸ್ಥೆಯೂ ಆಗಿದೆ. ಬೆಳೆ ಆಯ್ಕೆ, ಕೃಷಿ ಪದ್ಧತಿ ಬಗ್ಗೆ ಮಾರ್ಗದರ್ಶನ ಮಾಡಲು ಕೃಷಿ ತಜ್ಞರನ್ನೂ ನೇಮಿಸಲಾಗಿದೆ.

ಅತ್ಯಾಧುನಿಕ ಪಂಪ್‌ಹೌಸ್, ನೀರು ಸಂಗ್ರಹ ತೊಟ್ಟಿ, ಹೊಲಗಳಿಗೆ ಸಬ್ ಪೈಪ್‌ಲೈನ್ ಅಳವಡಿಕೆ ಸೇರಿದಂತೆ ಶೇ 80ರಷ್ಟು ಕಾಮಗಾರಿ ಕಾಂಗ್ರೆಸ್ ಅವಧಿಯಲ್ಲೇ ಪೂರ್ಣಗೊಂಡಿದೆ. ನಾಲ್ಕೂವರೆ ವರ್ಷಗಳಿಂದ ಮೇಲೇಳದ ಯೋಜನೆ ಸಂಪೂರ್ಣ ನನೆಗುದಿಗೆ ಬಿದ್ದಿದೆ.

2017ರಲ್ಲೇ ಸ್ಥಾಪಿಸಲಾಗಿದ್ದ ಸಲಕರಣೆಗಳ ಸಂಗ್ರಹಾಗಾರದಲ್ಲಿ ಅಪಾರ ಪ್ರಮಾಣದ ಯಂತ್ರೋಪಕರಣಗಳು, ಪೈಪ್‌ಗಳು ತುಕ್ಕು ಹಿಡಿಯುತ್ತಿವೆ. ಬಹುತೇಕ ಪೈಪ್‌ಗಳು ನಾಶವಾಗಿವೆ. ಸುಮಾರು 80 ಟ್ರಕ್‌ನಷ್ಟು ಸಲಕರಣೆಗಳು ಕಳವಾಗಿರುವ ಬಗ್ಗೆ ಎಫ್‌ಐಆರ್ ದಾಖಲಾಗಿದೆ.

ಹನಿ–ತುಂತುರು ನೀರಾವರಿ ಯೋಜನೆ ಶಿಗ್ಗಾವಿ, ರಾಮಥಾಳ, ಪೂರಿ ಗಾಲಿಗೆ ಮಾತ್ರ ಸೀಮಿತವಾದ ಯೋಜನೆಯಾಗಿರಲಿಲ್ಲ, ಇವು ಯಶಸ್ವಿಯಾಗಿದ್ದರೆ ರಾಜ್ಯದ ಇತರ ಜಿಲ್ಲೆಗಳಿಗೂ ವಿಸ್ತರಿಸುವ ಮುನ್ನೋಟ ರಾಜ್ಯ ಸರ್ಕಾರದ ಮುಂದಿತ್ತು.

ಕೋರ್ಟ್ ಪ್ರಕರಣ ಬಗೆಹರಿದಿದ್ದು, ಜುಲೈನಲ್ಲಿ ಕಾಮಗಾರಿ ಪೂರ್ಣಗೊಳ್ಳಲಿದೆ ಎಂದು ಕಾವೇರಿ ನೀರಾವರಿ ನಿಗಮದ ಮುಖ್ಯ ಎಂಜಿನಿಯರ್ ಶಂಕರೇಗೌಡ ತಿಳಿಸಿದರು.

ಒಬ್ಬರಿಗೆ ಕನಸು, ಇನ್ನೊಬ್ಬರಿಗೆ ಬೋಗಸ್!

'ಪೂರಿಗಾಲಿ ಹನಿ ನೀರಾವರಿ ಯೋಜನೆ ನನ್ನ ಕನಸಿನ ಕೂಸು, ರಾಜೀನಾಮೆ ಬೆದರಿಕೆ ಹಾಕಿ ಸಿದ್ದರಾಮಯ್ಯ ಅವರಿಂದ ಯೋಜನೆಯ ಮಂಜೂರಾತಿ ಪಡೆದಿದ್ದೆ' ಎಂದು ಮಾಜಿ ಶಾಸಕ ಪಿ.ಎಂ.ನರೇಂದ್ರಸ್ವಾಮಿ ಹೇಳುತ್ತಾರೆ.

'ಇದೊಂದು ಬೋಗಸ್ ಯೋಜನೆಯಾಗಿದ್ದು, ಜೇಬು ತುಂಬಿಸಿಕೊಳ್ಳಲು ಮಾಡಿದ್ದಾರೆ. ಕಪ್ಪುಪಟ್ಟಿಯಲ್ಲಿರುವ ಜೈನ್ ಇರಿಗೇಷನ್ ಕಂಪನಿಗೆ ಗುತ್ತಿಗೆ ಕೊಟ್ಟಿದ್ದೇ ಅನುಮಾನಾಸ್ಪದ. ತಡವಾಗಿದ್ದಕ್ಕೆ ಈಗ ಕಂಪನಿ ಹೆಚ್ಚುವರಿ ವೆಚ್ಚ ವಸೂಲಿ ಮಾಡುತ್ತದೆ. ಯೋಜನೆ ಜಾರಿಗೆ ಸದನದಲ್ಲಿ ಒತ್ತಾಯ ಮಾಡಿದ್ದೇನೆ' ಎಂದು ಹಾಲಿ ಶಾಸಕ ಕೆ.ಅನ್ನದಾನಿ ತಿಳಿಸಿದರು.

> **ನಮ್ಮ ಹೊಲಗಳಿಗೆ ಪೈಪ್‌ಲೈನ್ ಬಂದು ಐದು ವರ್ಷವಾಗಿದೆ. ನೀರು ಯಾವಾಗ ಬರುತ್ತದೆ ಗೊತ್ತಿಲ್ಲ. ಚುನಾವಣೆಗೆ ಮತ ಕೇಳಲು ಬಂದವರನ್ನು ಪ್ರಶ್ನಿಸುತ್ತೇವೆ.**
> **ರಾಚೇಗೌಡ,** ಕಲ್ಯಾಣಿ ಕೊಪ್ಪಲು

ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 29-5-1997

• **ಕಾಂಗ್ರೆಸ್ ಅಧ್ಯಕ್ಷತೆ: ಕೇಸರಿ ಪವಾರ್ ನಾಮಪತ್ರ ಸಲ್ಲಿಕೆ**

ನವದೆಹಲಿ, ಮೇ 28(ಪಿಟಿಐ)– ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ನಾಮಪತ್ರ ಸಲ್ಲಿಸಲು ಕೊನೆಯ ದಿನವಾಗಿದ್ದ ಇಂದು ಸೀತಾರಾಂ ಕೇಸರಿ ಮತ್ತು ಶರದ್ ಪವಾರ್ ಅವರು ನಾಮಪತ್ರ ಸಲ್ಲಿಸಿದರು. ಎ.ಆರ್. ಅಂತುಳೆ ತಮ್ಮ ನಾಮಪತ್ರ ವಾಪಸ್ ಪಡೆದಿರುವುದರಿಂದ ಚುನಾವಣೆ ಕಣ ತ್ರಿಕೋನ ಸ್ಪರ್ಧೆಯಿಂದ ಕಾವೇರಿದೆ. ಪಕ್ಷದ ಹಾಲಿ ಅಧ್ಯಕ್ಷ ಕೇಸರಿ ಅವರ ಪರವಾಗಿ ಉತ್ತರ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಜಿತೇಂದ್ರ ಪ್ರಸಾದ್ ಅವರು ಚುನಾವಣಾ ಅಧಿಕಾರಿ ಆಸ್ಕರ್ ಫರ್ನಾಂಡಿಸ್ ಅವರಲ್ಲಿ ನಾಮಪತ್ರ ಸಲ್ಲಿಸಿದರು.

ಶರದ್ ಪವಾರ್ ಅವರ ಪರ ಮಹಾರಾಷ್ಟ್ರ ಮತ್ತು ಮಧ್ಯ ಪ್ರದೇಶದ ವರು ನಾಮಪತ್ರಗಳನ್ನು ಸಲ್ಲಿಸಿದರು.

50 ವರ್ಷಗಳ ಹಿಂದೆ

ಸೋಮವಾರ, 29-5-1972

• **ದೇವಾಲಯಗಳ ಮುಂದೆ 'ಪೆರಿಯಾರ್' ಪಿಕೆಟಿಂಗ್**

ಮದ್ರಾಸ್, ಮೇ 28– 'ಸಾಮಾಜಿಕ ವ್ಯಾಧಿಗಳ' ನಿವಾರಣೆ ಮತ್ತು 'ಕಂದಾಚಾರದ' ನಿರ್ಮೂಲನಕ್ಕಾಗಿ ತಮಿಳುನಾಡಿನ ಏಳು ಮುಖ್ಯ ದೇವಾಲಗಳ ಪೈಕಿ ಆರರ ಮುಂದೆ 'ಅಹಿಂಸಾತ್ಮಕ' ಪಿಕೆಟಿಂಗ್ ಸಂಘಟಿಸುವುದಾಗಿ ದ್ರಾವಿಡಕಳಗಂ ನಾಯಕ ಇ.ವಿ.ರಾಮಸ್ವಾಮಿ ನಾಯಕರ್ ಅವರು ಇಂದು ಪ್ರಕಟಿಸಿದರು.

'ವಿಚಾರವಾದಿಗಳ ವೇದಿಕೆಯ' ಸಮ್ಮೇಳನದ ಮುಕ್ತಾಯ ಅಧಿವೇಶ ವನ್ನು ಉದ್ದೇಶಿಸಿ ಮಾತನಾಡಿದ ಅವರು, ತಾವು ಯಾವ ದಿನದಿಂದ ಚಳವಳಿ ಹೂಡುವರೆಂಬುದನ್ನು ತಿಳಿಸಲಿಲ್ಲವಾದರೂ ಇದಕ್ಕಾಗಿ ಆರು ತಿಂಗಳ ಕಾರ್ಯಕ್ರಮ ರೂಪಿಸಿ ನಾಯಕತ್ವ ವಹಿಸುವುದಾಗಿ ಹೇಳಿದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಭಾನುವಾರ ಮೇ 29, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ - ವಸಂತ ಋತು ತಿಥಿ: ವೈಶಾಖ ಕೃಷ್ಣ ಚತುರ್ದಶಿ ಗಂ. 14-56, ನಕ್ಷತ್ರ: ಕೃತ್ತಿಕಾ ಅಹೋರಾತ್ರ ಯೋಗ: ಅತಿಗಂಡ ಗಂ. 22-53, ಕರಣ: ಶಕುನಿ ಗಂ. 14-56, ವೃಷಭ ಮಾಸದ 14 ನೇ ದಿನ. ರಾಹುಕಾಲ: ಸಾಯಂಕಾಲ 04:30 – 06:00 ಸೂರ್ಯೋದಯ: 06-06 ಸೂರ್ಯಾಸ್ತ: 06-50
ಮುಸ್ಲಿಂ ದಿನಾಂಕ: 27 ಶವ್ವಾಲ್
ದಿನ ವಿಶೇಷ: ಫಲಹಾರಿಣಿ ಕಾಳಿಕಾ ಪೂಜಾ, ಅಸೇಷನ್ ಭಾನುವಾರ (ಕ್ರಿಶ್ಚಿಯನ್)
ಅದೃಷ್ಟ ಸಂಖ್ಯೆ: 3, 8

ಮೇಷ: ನೆಮ್ಮದಿಯ ವಿಷಯವೇನೆಂದರೆ ಧನಾಗಮದಲ್ಲಿ ಚಿಂತೆ ಇರದು. ದೀರ್ಘಕಾಲಿಕ ಕೆಲಸಗಳು ನಿಧಾನವಾಗಿ ಸಾಗಲಿವೆ. ಇಂದು ಹಳೇ ಬಾಕಿ ಸಂದಾಯ. ನಿಮ್ಮ ಸೃಜನಶೀಲತೆ ಪ್ರದರ್ಶಿಸಲು ಅವಕಾಶಗಳು ಒದಗುವುದು.

ವೃಷಭ: ಕುಟುಂಬದಲ್ಲಿ ನಿಮ್ಮ ನಿಲುವುಗಳೇನು ಎಂಬುದನ್ನು ಸ್ಪಷ್ಟ ಪಡಿಸಬೇಕಾಗುವುದು. ಮಕ್ಕಳಿಗಾಗಿ ಆಟಿಕೆ ವಸ್ತುಗಳ ಖರೀದಿ ಮಾಡುವಂತಾಗುವುದು. ದೈನಂದಿನ ಕೆಲಸ ಕಾರ್ಯದಲ್ಲಿ ಹೆಚ್ಚಿನ ಬದಲಾವಣೆ ಇಲ್ಲ.

ಮಿಥುನ: ಆಭರಣ ಅಥವಾ ಬಟ್ಟೆ ವ್ಯಾಪಾರಿಗಳು ಹೆಚ್ಚಿನ ಪ್ರಚಾರ ಪಡೆದುಕೊಳ್ಳಬಹುದು. ಪ್ರತಿಪಕ್ಷಗಳ ಆಪಾದನೆಗೆ ತೀಕ್ಷ್ಣ ಪ್ರತಿಕ್ರಿಯೆ ನೀಡುವಿರಿ. ನೆರೆ-ಹೊರೆಯವರೊಂದಿಗಿನ ಸಂಬಂಧ ಉತ್ತಮಗೊಳ್ಳುವುದು.

ಕರ್ಕಾಟಕ: ಗುತ್ತಿಗೆ ಕೆಲಸದ ವಿಪುಲ ಅವಕಾಶಗಳು ಒದಗಿ ಬರಲಿವೆ. ಮಗನ ನೂತನ ಕೆಲಸದ ವಿಚಾರವಾಗಿ ಆಪ್ತರೊಬ್ಬರಲ್ಲಿ ಹೇಳಿಕೊಳ್ಳುವಿರಿ. ಆದಾಯದಲ್ಲಿ ಹೆಚ್ಚಳವಿರುವುದು. ಕಂಕಣ ಬಲದ ಸಾಧ್ಯತೆ.

ಸಿಂಹ: ವ್ಯಾವಹಾರಿಕವಾಗಿ ಇರುವ ಹಳೆಯ ಬಾಕಿ ಮೊತ್ತ ಕೈ ಸೇರಲಿದೆ. ಹಿರಿಯರ ಆಶೀರ್ವಾದ, ಮಾರ್ಗದರ್ಶನದಿಂದ ಶುಭವಾಗುವುದು. ಶ್ರೀ ಮೂಕಾಂಬಿಕೆಯ ದರ್ಶನದಿಂದ ಕೆಲಸ ಕಾರ್ಯ ಸುಗಮ.

ಕನ್ಯಾ: ಇಂದು ಆರಂಭಿಸಿದ ಕಾರ್ಯಗಳು ಸೂಕ್ತ ಸಮಯದಲ್ಲಿ ಪೂರ್ಣಗೊಳ್ಳುವುದು. ಹಣದ ವಿಚಾರದಲ್ಲಿ ಮಿತ ವ್ಯಯಿಗಳಾಗುವಿರಿ. ಸಾಮಾಜಿಕ ವಲಯದಲ್ಲಿ ನಿಮ್ಮ ಸ್ಥಾನಮಾನ ಹೆಚ್ಚಲಿದೆ. ರಕ್ತದೊತ್ತಡ ನಿಯಂತ್ರಿಸಿಕೊಳ್ಳುವಿರಿ.

ತುಲಾ: ಅಧಿಕ ತಿರುಗಾಟದಿಂದ ಆಯಾಸ ಇದ್ದರೂ ಆದಾಯಕ್ಕೆ ಕೊರತೆ ಇಲ್ಲ. ನಾನಾ ಮೂಲಗಳಿಂದ ಧನ ಸಂಪಾದನೆಯಾಗುವ ಸಮಯ. ಪಾಲುದಾರಿಕೆಯಲ್ಲಿ ಒಮ್ಮತ ಮೂಡದೆ ಹಿಂದೆ ಸರಿಯುವಂತೆ ಆಗಲಿದೆ.

ವೃಶ್ಚಿಕ: ತಾಳ್ಮೆ ನಿಮ್ಮ ಮಂತ್ರವಾಗಿರಲಿ. ಹೊಸ ಯೋಜನೆ ಆರಂಭಿಸುವ ಮುನ್ನ ದೀರ್ಘಾಲೋಚನೆ ಮತ್ತು ಸಲಹೆ ಪಡೆದುಕೊಳ್ಳುವುದು ಅವಶ್ಯ. ಇದರಿಂದಾಗಿ ನಿಮ್ಮ ಭವಿಷ್ಯದ ದಿನಗಳು ಹರ್ಷದಾಯಕವಾಗುವುದು.

ಧನು: ನಿಮ್ಮ ಆರ್ಥಿಕ ಸ್ಥಿತಿ ಇನ್ನಷ್ಟು ಉತ್ತಮಗೊಳ್ಳುವ ಅವಕಾಶಗಳು ಬರಲಿದೆ. ಎಂಜಿನಿಯರಿಂಗ್ ಹಾಗೂ ಮೆಡಿಕಲ್ ವಿದ್ಯಾರ್ಥಿಗಳಿಗೆ ಹೆಚ್ಚಿನ ಶ್ರಮ ಅಗತ್ಯ. ಮಕ್ಕಳಿಗೆ ಜೀವನದ ಪಾಠ ಹೇಳುವಿರಿ.

ಮಕರ: ಆಕಸ್ಮಿಕ ಧನಲಾಭ. ಅನಾವಶ್ಯಕ ಖರ್ಚುಗಳಿಗೆ ಕಡಿವಾಣ ಹಾಕುವುದನ್ನು ಅಭ್ಯಾಸ ಮಾಡಿಕೊಳ್ಳಿರಿ. ಸಂಜೆಯ ಸಮಯದಲ್ಲಿ ಹೊಟ್ಟೆಗೆ ಸಂಬಂಧಿಸಿದ ಅನಾರೋಗ್ಯ. ನಿಮ್ಮಲ್ಲಿದ್ದ ಅನಿಶ್ಚಿತತೆಯ ಭಾವ ದೂರಾಗಲಿದೆ.

ಕುಂಭ: ಇಂದು ವ್ಯವಹರಿಸುವಾಗ ಪ್ರದರ್ಶಿಸಿದ ಬುದ್ಧಿವಂತಿಕೆ ಲಾಭಕ್ಕೆ ಕಾರಣವಾಗುವುದು. ಜೀವನ ಕ್ರಮದಲ್ಲಿ ಬದಲಾವಣೆ ಮಾಡಿಕೊಳ್ಳಬೇಕಾದ ಅನಿವಾರ್ಯತೆ ಇದೆ. ಮಾತಿನ ಮೇಲೆ ಹಿಡಿತ ಎಲ್ಲ ಸಮಸ್ಯೆಗಳಿಗೂ ಪರಿಹಾರ.


ಮೀನ: ದೇವರ ಕಾರ್ಯಗಳಿಗಾಗಿ ಪ್ರಯಾಣ. ಕುಟುಂಬದಲ್ಲಿ ಎಲ್ಲರ ಆರೋಗ್ಯವೂ ಉತ್ತಮವಾಗಿರುವುದು. ಸಿವಿಲ್ ಎಂಜಿನಿಯರುಗಳಿಗೆ ಹೆಚ್ಚು ಲಾಭದಾಯಕದ ದಿನ. ವೃತ್ತಿ ಹಾಗೂ ವೈಯಕ್ತಿಕ ಜೀವನ ತೃಪ್ತಿ ಎನಿಸಲಿದೆ.

ಪದಬಂಧ 4972

–ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಹಿಂದೆ ನಡೆದಿರುವ ಕಥೆ (4)
3.ಕೋಲನ್ನು ಹಿಡಿದಿದ್ದಕ್ಕೇ ಈ ಗದ್ದಲ! (4)
5.ಗುಣವಂತ ಹಿಡಿದಿರುವ ದೊಡ್ಡ ಮಡಕೆ (3)
6.ಅಂಧಕಾರ ಇಲ್ಲಿ ಕವಿದಿದೆ (3)
8.ವ್ಯಾಕರಣದಲ್ಲಿ ಗಂಡುಜಾತಿ ಸೂಚಕ ಶಬ್ದ (3)
9.ಸಂತತಿಯಲ್ಲಿರುವ ಸಾಧು ತಿರುಗಿದ್ದಾನಲ್ಲಾ? (2)
10.ಆನೆ ಕುದುರೆಗಳನ್ನು ಕಟ್ಟುವ ಜಾಗ (2)
11.ನಿರಾಕರಿಸುವಿಕೆ ಎಂದು ಹೀಗೆನ್ನಿ! (3)
12.ನೆಲ, ಬೆಟ್ಟ ಕೊರೆದು ಮಾಡಿದದಾರಿ (3)
14.ಪೌರ ತೋರುತ್ತಿರುವ ಶೌರ್ಯ! (3)
16.ಕೊನೆಗಿದ್ದ ಚಾರನಿಗೆ ಬಡಿದ ದುರದೃಷ್ಟ! (4)
17.ರಾಗವಿಸ್ತಾರ ನಿರೂಪಣೆ (4)

ಮೇಲಿಂದ ಕೆಳಕ್ಕೆ
1.ಅಭ್ಯುದಯ ಇಲ್ಲಿ ಕಾಣುತ್ತಿದೆ (3)
2.ನಡುಗುತ್ತಲೇ ಬೀರಿದ ಮಂದಹಾಸ (2)
3.ಮಹಿಷ ಇಲ್ಲಿಗೆ ಬಂದಿದೆಯಲ್ಲಾ? (2)
4.ಲವಂಗ ಮಾರುತ್ತಿರುವ ದುರಾಚಾರಿ (3)
7.ನೇತ್ತರು ಪ್ರವಹಿಸುವಿಕೆ (5)
8.ಹೀಗೆ ಮಾತಿನಲ್ಲಿ ನಯವಾಗಿ ಉಬ್ಬಿಸು! (5)
11.ಉಗುರಿನ ಮೊನೆ (3)
13.ಗಣಪತಿ ಇಲ್ಲಿ ಚಿಕ್ಕದಾಗಿದೆ! (3)
14.ನಾಗರೀಕನ ಹಕ್ಕು ಬಾಧ್ಯತೆಗಳನ್ನು ಪಡೆದವನು (2)
15.ದಾಖಲೆಗಳ ಕೊನೆಯಲ್ಲಿ ಸೇರಿಸುವ ವಿಶೇಷಾಂಶ (2)



4971ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 4.ಸತತ 7.ವಿದ್ರುಮ 9.ಪಾಯಸ 11.ಸಹಗಮನ 12.ಮರಣ 14.ಕಲಹ 16.ತಕಲಿ
ಮೇಲಿಂದ ಕೆಳಕ್ಕೆ: 1.ವಾಯಸ 2.ಉಚಿತ 3.ಕದ್ರು 5.ತಲೆಗಡಿಕ 6.ಕ್ಷಯ 7.ವಿಷಮ 8.ಮಸಣ 9.ಪಾನಕ 10.ಸನ್ನಾಹ 13.ರಣ 15.ಲಡಿ 16.ತರ್ಜನಿ 17.ಲಿಲಾವು

ಸುಡೊಕು 5358

			4			2		7
		4		3			5	
			1			8		3
		7		4				
3		2	9		1			
				6				2
1		8	3		4			5
	2					9	7	8
6		9		2			3	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5357ಸುಡೊಕು

8	4	5	1	2	6	7	9	3
6	2	9	5	3	7	1	4	8
1	3	7	9	8	4	6	2	5
2	7	8	4	9	1	5	3	6
5	9	3	6	7	8	2	1	4
4	1	6	2	5	3	8	7	9
7	6	4	8	1	9	3	5	2
9	5	1	3	6	2	4	8	7
3	8	2	7	4	5	9	6	1

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಸ್ಪಷ್ಟನೆ ನೀಡುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಆಗ್ರಹ

‘ಸಿದ್ದರಾಮಯ್ಯ ದ್ರಾವಿಡರೇ, ಆರ್ಯರೇ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿರೋಧಪಕ್ಷ ನಾಯಕರಾದ ಸಿದ್ದರಾಮಯ್ಯ ಅವರು ದ್ರಾವಿಡರೇ ಅಥವಾ ಆರ್ಯರೇ ಎಂಬುದನ್ನು ಮೊದಲು ಸ್ಪಷ್ಟಪಡಿಸಲಿ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸವಾಲು ಹಾಕಿದ್ದಾರೆ.

‘ಆರೆಸ್ಸೆಸ್‌ನವರೇನು ಭಾರತೀಯರೇ’ ಎಂದು ಸಿದ್ದರಾಮಯ್ಯ ಅವರು ಶುಕ್ರವಾರ ಪ್ರಶ್ನಿಸಿದ್ದರು. ಇದಕ್ಕೆ ಶನಿವಾರ ಪ್ರತಿಕ್ರಿಯಿಸಿದ ಬೊಮ್ಮಾಯಿ, ‘ಸಿದ್ದರಾಮಯ್ಯನವರ ಮೂಲ ಯಾವುದೆಂದು ಅವರು ಹೇಳಲಿ’ ಎಂದರು.

‘ನೆಹರೂ ಅವರನ್ನು ಮೋದಿಗೆ ಹೋಲಿಸಲು ಸಾಧ್ಯವೇ ಇಲ್ಲ’ ಎಂದು ಸಿದ್ದರಾಮಯ್ಯ ಹೇಳಿದ್ದಾರೆ. ನೆಹರೂ ಅವರನ್ನು ಹೋಲಿಸಲು ಸಾಧ್ಯವಿಲ್ಲ. ಏಕೆಂದರೆ ಚೀನಾವು ಭಾರತ ಗಡಿಯನ್ನು ಆಕ್ರಮಿಸಿದಾಗ ಯಾವುದೇ ಕ್ರಮವನ್ನು ತೆಗೆದುಕೊಳ್ಳದೇ ನೆಹರೂ ಅವರು ಗಡಿಭಾಗವನ್ನು ಬಿಟ್ಟುಕೊಟ್ಟಿದ್ದರು. ಆದರೆ ಪ್ರಧಾನಿ ನರೇಂದ್ರ ಮೋದಿಯವರು ಚೀನಾವು ಗಡಿಪ್ರದೇಶ ಆಕ್ರಮಿಸಲು ಬಂದಾಗ ಗಟ್ಟಿಯಾಗಿ ನಿಂತು ಆ ಪ್ರದೇಶವನ್ನು ಉಳಿಸಿಕೊಂಡವರು. ಪಾಕಿಸ್ತಾನದ ಜೊತೆಗೆ ರಾಜಿ ಮಾಡಿಕೊಳ್ಳಲಿಲ್ಲ. ಭಾರತದ ಅಖಂಡತೆ ಹಾಗೂ ಏಕತೆಯನ್ನು ಕಾಪಾಡಿದ್ದಾರೆ’ ಎಂದರು.

ಹಿಜಾಬ್– ಆದೇಶ ಪಾಲಿಸಿ:

ಮಂಗಳೂರಿನಲ್ಲಿ ಮತ್ತೆ ಎದ್ದಿರುವ ಹಿಜಾಬ್ ವಿವಾದದ ಬಗ್ಗೆ ಪ್ರತಿಕ್ರಿಯಿಸಿದ ಅವರು, ‘ಈ ವಿವಾದವನ್ನು ಸಿಂಡಿಕೇಟ್ ಸಭೆಯಲ್ಲಿ ಚರ್ಚೆ ನಡೆಸಿ ಬಗೆಹರಿಸಲಾಗಿದೆ. ಹಿಜಾಬ್ ವಿವಾದಕ್ಕೆ ಸಂಬಂಧಿಸಿದಂತೆ ನ್ಯಾಯಾಲಯ ತನ್ನ ತೀರ್ಪನ್ನು ನೀಡಿದೆ. ಎಲ್ಲರೂ ನ್ಯಾಯಾಲಯದ ಆದೇಶವನ್ನು ಪಾಲನೆ ಮಾಡಬೇಕು. ಪಿಯು ಕಾಲೇಜುಗಳಲ್ಲಿ ಸಿಡಿಸಿ (ಕಾಲೇಜು ಅಭಿವೃದ್ಧಿ ಸಮಿತಿ), ಸಿಡಿಸಿ ಇಲ್ಲದಿರುವ ಕಡೆ ಕಾಲೇಜಿನ ಆಡಳಿತ ಮಂಡಳಿ ಅಥವಾ ಕಾಲೇಜಿನ ಪ್ರಾಂಶುಪಾಲರ ಆದೇಶದಂತೆ ನಡೆಯಬೇಕು. ವಿಶ್ವವಿದ್ಯಾಲಯಗಳಲ್ಲಿ ಸಿಂಡಿಕೇಟ್ ನಿರ್ಣಯಗಳಂತೆ ನಡೆದುಕೊಳ್ಳಬೇಕು. ಸಿಂಡಿಕೇಟ್ ಕೂಡ ನ್ಯಾಯಾಲಯದ ಆದೇಶ ಪರಿಪಾಲನೆಗೆ ಒತ್ತು ನೀಡಬೇಕಾಗುತ್ತದೆ. ವಿದ್ಯಾರ್ಥಿಗಳು ಈ ವಿವಾದಗಳಲ್ಲಿ ಸಿಲುಕದೇ ವಿದ್ಯಾರ್ಜನೆಯ ಮೇಲೆ ಗಮನಹರಿಸಬೇಕು’ ಎಂದರು

ದಾಖಲೆಗಳ ಪರಿಶೀಲನೆ: ಪೀರ್ ಪಾಷಾ ದರ್ಗಾ ಹಾಗೂ ಅನುಭವ ಮಂಟಪದ ಬಗ್ಗೆ ಬರುತ್ತಿರುವ ಹೇಳಿಕೆಗಳ ಬಗ್ಗೆ ಪ್ರತಿಕ್ರಿಯಿಸಿದ ಬೊಮ್ಮಾಯಿ, ‘ಇಂತಹ ವಿಷಯಗಳು ತೀರ್ಮಾನವಾಗುವುದು ಹೇಳಿಕೆಗಳ ಆಧಾರದ ಮೇಲೆ ಅಲ್ಲ. ದಾಖಲೆಗಳ ಆಧಾರದ ಮೇಲೆ ಪರಿಶೀಲಿಸಬೇಕಾಗುತ್ತದೆ ಎಂದರು.

‘ಎಂಇಎಸ್ ಪುಂಡಾಟಿಕೆ ಸಹಿಸಲ್ಲ’

‘ಬೆಳಗಾವಿಯಲ್ಲಿ ಎಂಇಎಸ್ ನಡೆಸಿರುವ ಪುಂಡಾಟಿಕೆಯನ್ನು ಸರ್ಕಾರ ತೀವ್ರವಾಗಿ ಖಂಡಿಸುತ್ತದೆ. ಪೊಲೀಸರು ಸೂಕ್ತ ಕ್ರಮ ತೆಗೆದುಕೊಳ್ಳುತ್ತಿದ್ದಾರೆ’ ಎಂದು ಬೊಮ್ಮಾಯಿ ಹೇಳಿದರು.

‘ಯಾರೇ ಆದರೂ ಕಾನೂನನ್ನು ಕೈಗೆ ತೆಗೆದುಕೊಂಡರೆ ಸರ್ಕಾರ ಸಹಿಸುವುದಿಲ್ಲ ಎಂದು ಸ್ಪಷ್ಟ ಸಂದೇಶ ನೀಡಲಾಗಿದೆ. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆಗೆ ಧಕ್ಕೆ ತಂದರೆ ಹಾಗೂ ಕರ್ನಾಟಕದಲ್ಲಿ ಕನ್ನಡಿಗರಿಗೆ ತೊಂದರೆ ತಂದರೆ ಸರ್ಕಾರ ಉಗ್ರ ಕ್ರಮ ತೆಗೆದುಕೊಳ್ಳುತ್ತದೆ’ ಎಂದು ಅವರು ಎಚ್ಚರಿಸಿದರು.

‘ಆರ್‌ಎಸ್‌ಎಸ್ ಇಟಲಿ ಮೂಲದ್ದಲ್ಲ’

ಕೊಪ್ಪಳ: ‘ದೇಶಭಕ್ತ ಸಂಘಟನೆ ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರ್‌ಎಸ್‌ಎಸ್) ಇಟಲಿ ಮೂಲದ್ದಲ್ಲ. 70 ವರ್ಷ ಆಡಳಿತ ನಡೆಸಿದ ಕಾಂಗ್ರೆಸ್ ಮತ್ತು 5 ವರ್ಷ ಆಡಳಿತದಲ್ಲಿದ್ದ ಸಿದ್ದರಾಮಯ್ಯ ಸಂಘದ ಮೂಲ ತಿಳಿದುಕೊಂಡು ಏನಾದರೂ ಕ್ರಮ ಕೈಗೊಳ್ಳಬಹುದಿತ್ತು’ ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ.ನಾಗೇಶ ವ್ಯಂಗ್ಯವಾಡಿದರು.

ನಗರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಆರ್‌ಎಸ್‌ಎಸ್ ಮೂಲದ ಬಗ್ಗೆ ಮಾತನಾಡುವವರು ಇಷ್ಟು ವರ್ಷ ಏನು ಮಾಡಿದರು? ಆರ್‌ಎಸ್‌ಎಸ್ ದೇಶಕ್ಕೆ ಏನು ಸೇವೆ ಮಾಡಿದೆ ಎಂಬುದು ಎಲ್ಲರಿಗೂ ಗೊತ್ತಿದೆ’ ಎಂದರು.

‘ಸಿದ್ದರಾಮಯ್ಯ ಈಗ ಮಜಾವಾದಿ’

ಮಂಗಳೂರು: ‘ಸಮಾಜವಾದದ ಹೆಸರಿನಲ್ಲಿ ಅಧಿಕಾರಕ್ಕೆ ಬಂದ ಸಿದ್ದರಾಮಯ್ಯ, ಬಳಿಕ ಮಜಾವಾದಿಯಾಗಿ ಪರಿವರ್ತನೆಯಾಗಿದ್ದಾರೆ. ಸಮಾಜವನ್ನು ಒಡೆಯುವ, ಜಾತಿ ಸಂಘರ್ಷ, ಗಲಭೆ ಸೃಷ್ಟಿಸುವ ಮನಸ್ಸುಗಳೊಂದಿಗೆ ಕೈಜೋಡಿಸುತ್ತಿದ್ದಾರೆ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ, ಸಂಸದ ನಳಿನ್‌ಕುಮಾರ್ ಕಟೀಲ್ ಆರೋಪಿಸಿದರು.

ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ನೆಹರೂ ಸಂತಾನ ದೇಶವನ್ನು ನಾಶ ಮಾಡಿದರೆ, ಆರ್‌ಎಸ್‌ಎಸ್ ದೇಶವನ್ನು ಉದ್ಧಾರ ಮಾಡಿದೆ. ಅಧಿಕಾರ ಕಳೆದುಕೊಂಡ ಮೇಲೆ ಸಿದ್ದರಾಮಯ್ಯಗೆ ಮತಿಭ್ರಮಣೆ ಆಗಿದೆ. ಅಧಿಕಾರದ ಹುಚ್ಚಿನಲ್ಲಿ ಇತಿಹಾಸ, ಭಾರತೀಯತೆ ಎಲ್ಲವನ್ನೂ ಮರೆತಿದ್ದಾರೆ’ ಎಂದು ಟೀಕಿಸಿದರು.

‘ಆರೆಸ್ಸೆಸ್ ಪದಾಧಿಕಾರಿಗಳಲ್ಲಿ ದಲಿತ, ಹಿಂದುಳಿದವರ ಪ್ರಾತಿನಿಧ್ಯ ಎಷ್ಟು?’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹಿಂದೂಗಳೆಲ್ಲ ಒಂದು ಎಂದು ಕಂಠ ಶೋಷಣೆ ಮಾಡುತ್ತಿರುವ ಆರೆಸ್ಸೆಸ್ ತನ್ನ ಸಂಘಟನೆಯ ಪದಾಧಿಕಾರಿ ಹುದ್ದೆಗಳನ್ನು ಒಂದೇ ಜಾತಿಗೆ ಮೀಸಲಿಟ್ಟಿದ್ದು ಯಾಕೆ? ಆ ಸಂಘಟನೆಯ ಪದಾಧಿಕಾರಿಗಳಲ್ಲಿ ಎಷ್ಟು ಮಂದಿ ದಲಿತರು ಹಾಗೂ ಹಿಂದುಳಿದ ಜಾತಿಯವರಿದ್ದಾರೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪ್ರಶ್ನಿಸಿದ್ದಾರೆ.

ಈ ಬಗ್ಗೆ ಸರಣಿ ಟ್ವೀಟ್ ಮಾಡಿರುವ ಅವರು, ‘ಆರೆಸ್ಸೆಸ್ ಪ್ರತಿಪಾದನೆಯ ಹಿಂದೂ ಧರ್ಮದಲ್ಲಿ ದಲಿತರು, ಹಿಂದುಳಿದ ಜಾತಿಗಳ ಸ್ಥಾನವೇನು? ಆ ಸಂಘಟನೆಯು ಮೀಸಲಾತಿ, ಭೂಸುಧಾರಣೆಯನ್ನು ವಿರೋಧಿಸಿದ್ದು ಯಾಕೆ? ಇದರ ಫಲಾನುಭವಿಗಳು ಹಿಂದುಗಳಲ್ಲವೇ’ ಎಂದು ಕೇಳಿದ್ದಾರೆ.

‘ಆರೆಸ್ಸೆಸ್‌ನವರ ದೃಷ್ಟಿಯಲ್ಲಿ ಹಿಂದೂ ಧರ್ಮದ ವ್ಯಾಖ್ಯಾನ ಏನು? ಹಿಂದೂ ತಂದೆ- ತಾಯಿ ಹೊಟ್ಟೆಯಲ್ಲಿ ಹುಟ್ಟಿದರೆ ಸಾಕಾ ಅಥವಾ ಬೇರೆ ಏನಾದರೂ ಬೇಕಾ? ಹಿಂದೂ ಧರ್ಮದ ರಕ್ಷಣೆಗಾಗಿಯೇ ಅವತಾರ ಎತ್ತಿ ಬಂದಂತೆ ಮಾತನಾಡುತ್ತಿರುವ ಆರೆಸ್ಸೆಸ್ ನಾಯಕರು ಬೆಂಬಲಿಸುತ್ತಿರುವುದು ಮಾತ್ರ ಬಿಜೆಪಿಯನ್ನಷ್ಟೆ. ಆ ಪಕ್ಷದಲ್ಲಿರುವವರು ಮಾತ್ರ ಹಿಂದೂಗಳೇ’ ಎಂದು ಪ್ರಶ್ನಿಸಿದ್ದಾರೆ.

‘ಆರೆಸ್ಸೆಸ್ ದೃಷ್ಟಿಯಲ್ಲಿ ಹಿಂದೂ ಆಗಬೇಕಾದರೆ ಶೇ 40ರಷ್ಟು ಕಮಿಷನ್ ಹೊಡೆಯಬೇಕಾ? ಬ್ಲೂ ಫಿಲ್ಮ್ ನೋಡಬೇಕಾ? ಗಣಿ ಲೂಟಿ ಮಾಡಬೇಕಾ? ಚೆಕ್‌ನಲ್ಲಿ ದುಡ್ಡು ಪಡೆದು ಜೈಲಿಗೆ ಹೋಗಬೇಕಾ? ಏನು ಮಾಡಬೇಕು? ಹೇಳಿಬಿಡಿ. ಆರೆಸ್ಸೆಸ್ ನಾಯಕರೇ ರಿಮೋಟ್ ಕಂಟ್ರೋಲ್ ರಾಜಕೀಯ ಬಿಟ್ಟು ಬಿಡಿ. ನಿಮ್ಮ ತತ್ವ- ಸಿದ್ಧಾಂತದ ಬಗ್ಗೆ ಅಷ್ಟೊಂದು ವಿಶ್ವಾಸ ನಿಮಗಿದ್ದರೆ ಈ ಹಿಂಬಾಗಿಲ ರಾಜಕೀಯ ಮಾಡದೆ ನೇರವಾಗಿ ಚುನಾವಣೆಯಲ್ಲಿ ಸ್ಪರ್ಧಿಸಿ ಬಿಡಿ. ಗೆಲುವು ಕೋಮುವಾದದ್ದೋ? ಜಾತ್ಯತೀತತೆಯದ್ದೋ? ನೋಡಿಯೇ ಬಿಡೋಣ’ ಎಂದು ಸವಾಲು ಎಸೆದಿದ್ದಾರೆ.

‘ಹಿಂದೂ ಧರ್ಮದ ಅನಿಷ್ಠಗಳಾದ ಅಸ್ಪೃಶ್ಯತೆ, ಅಸಮಾನತೆ, ಮೂಢ ನಂಬಿಕೆ, ಕಂದಾಚಾರಗಳನ್ನು ಪ್ರಶ್ನಿಸಿದ ಮಾತ್ರಕ್ಕೆ ನನ್ನಂತಹವರು ಹಿಂದು ವಿರೋಧಿ ಆಗುವುದಾದರೆ? ಇದೇ ಕೆಲಸ ಮಾಡಿರುವ ಸ್ವಾಮಿ ವಿವೇಕಾನಂದ, ಕನಕದಾಸರು, ನಾರಾಯಣ ಗುರುಗಳನ್ನು ಏನೆಂದು ಕರೆಯುತ್ತೀರಿ’ ಎಂದು ಪ್ರಶ್ನಿಸಿದ್ದಾರೆ.

‘ಆರೆಸ್ಸೆಸ್ ನಾಯಕರೇ ನಿಮ್ಮ ಆತ್ಮಸಾಕ್ಷಿಯಾಗಿ ಹೇಳಿಬಿಡಿ. ನಿಮ್ಮ ನಿಷ್ಠೆ ರಾಷ್ಟ್ರಧ್ವಜಕ್ಕೋ? ಭಗವಾ ಧ್ವಜಕ್ಕೋ? ನಿಮ್ಮ ನಿಷ್ಠೆ ಸಂವಿಧಾನಕ್ಕೋ? ಮನುಸ್ಮೃತಿಗೋ? ನಿಮ್ಮ ನಿಷ್ಠೆ ಗಾಂಧೀಜಿಗೋ? ಗೋಡ್ಸೆಗೋ’ ಎಂದು ಪ್ರಶ್ನೆ ಮಾಡಿದ್ದಾರೆ.

> **ಆರೆಸ್ಸೆಸ್ ನಾಯಕರನ್ನು ನಾನು ಪ್ರಶ್ನಿಸಿದರೆ ಬಿಜೆಪಿ ನಾಯಕರು ಉತ್ತರಿಸುತ್ತಿದ್ದಾರೆ. ಇವರು ಯಾಕೆ ಎದೆ ಬಡಿದುಕೊಳ್ಳುತ್ತಿದ್ದಾರೆ. ಆರೆಸ್ಸೆಸ್ ನಾಯಕರಿಗೆ ಓದು ಬರಹ ಗೊತ್ತಿಲ್ಲವೇ? ಅವರೇ ಉತ್ತರಿಸಲಿ**
>
> **ಸಿದ್ದರಾಮಯ್ಯ,** ವಿಧಾನಸಭೆ ವಿರೋಧ ಪಕ್ಷದ ನಾಯಕ

ಜೆಡಿಎಸ್– ಕೋಡಿಹಳ್ಳಿ ಬೆಂಬಲಿಗರ ಮಾರಾಮಾರಿ

ಪ್ರಜಾವಾಣಿ ವಾರ್ತೆ



ಜೆಡಿಎಸ್ ಮತ್ತು ರೈತ ಸಂಘದ ಕಾರ್ಯಕರ್ತರನ್ನು ಪೊಲೀಸರು ಸಮಾಧಾನಪಡಿಸುತ್ತಿರುವುದು –ಪ್ರಜಾವಾಣಿ ಚಿತ್ರ

ಬೆಂಗಳೂರು: ಕೋಡಿಹಳ್ಳಿ ಚಂದ್ರಶೇಖರ್ ವಿರುದ್ಧದ ಭ್ರಷ್ಟಾಚಾರ ಆರೋಪ ವಿಚಾರವಾಗಿ ರೈತ ಸಂಘದ ಕಾರ್ಯಕರ್ತರು ಮತ್ತು ಜೆಡಿಎಸ್ ಕಾರ್ಯಕರ್ತರ ನಡುವೆ ಮಾರಾಮಾರಿ ನಡೆದಿದೆ. ಈ ಸಂಬಂಧ ಜೆಡಿಎಸ್‌ನ ಎಂಟು ಕಾರ್ಯಕರ್ತರನ್ನು ಬಂಧಿಸಿದ ಪೊಲೀಸರು, ಠಾಣೆ ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದಾರೆ.

ಪ್ರೆಸ್‌ಕ್ಲಬ್ ಎದುರು ಶನಿವಾರ ನಡೆದ ಘಟನೆ ಸಂಬಂಧ ರೈತ ಸಂಘದ ಕಾರ್ಯಕರ್ತ ಸತೀಶ್ ಅವರು ಕಬ್ಬನ್ ಪಾರ್ಕ್ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಪೊಲೀಸರು ಜೆಡಿಎಸ್ ಕಾರ್ಯಕರ್ತ ನರಸಿಂಹಮೂರ್ತಿ ಸೇರಿ 8 ಮಂದಿಯನ್ನು ಬಂಧಿಸಿದ್ದರು.

ಕೋಡಿಹಳ್ಳಿ ಚಂದ್ರಶೇಖರ್ ಮತ್ತು ಅವರ ಬೆಂಬಲಿಗರು ಪತ್ರಿಕಾಗೋಷ್ಠಿ ನಡೆಸಲು ಪ್ರೆಸ್‌ಕ್ಲಬ್‌ಗೆ ಬಂದಿದ್ದರು. ಅದೇ ಸಮಯಕ್ಕೆ ಸ್ಥಳಕ್ಕೆ ಬಂದ ಜೆಡಿಎಸ್ ಕಾರ್ಯಕರ್ತರು, ‘ಕೋಡಿಹಳ್ಳಿ ಚಂದ್ರಶೇಖರ್ ಕಳ್ಳ’ ಎಂದು ಘೋಷಣೆ ಕೂಗಿದರು. ಇದಕ್ಕೆ ಪ್ರತಿಯಾಗಿ ಕೋಡಿಹಳ್ಳಿ ಬೆಂಬಲಿಗರು ಕೂಡ ಜೆಡಿಎಸ್ ವಿರುದ್ಧ ಘೋಷಣೆ ಕೂಗಿದರು.

ಮಾತಿಗೆ ಮಾತು ಬೆಳೆದು ಎರಡು ಗುಂಪುಗಳ ನಡುವೆ ತಳ್ಳಾಟ, ಗುದ್ದಾಟ ನಡೆಯಿತು. ಚಂದ್ರಶೇಖರ್ ಬೆಂಬಲಿಗರ ಮೇಲೆ ಜೆಡಿಎಸ್ ಕಾರ್ಯಕರ್ತರು ಮಸಿ ಎರಚಿದರು. ಸ್ಥಳಕ್ಕೆ ಬಂದ ಪೊಲೀಸರು ಎರಡು ಗುಂಪುಗಳನ್ನು ಸಮಾಧಾನಪಡಿಸಲು ಯತ್ನಿಸಿದರು.

‘ರೈತರ ಹೆಸರಿನಲ್ಲಿ ಸಂಘಟನೆ ಕಟ್ಟಿಕೊಂಡಿರುವ ಕೋಡಿಹಳ್ಳಿ ಚಂದ್ರಶೇಖರ್ ಅವರು ಬಿಎಂಟಿಸಿ, ಕೆಎಸ್‌ಆರ್‌ಟಿಸಿಯಲ್ಲಿ ಕೆಲಸ ಮಾಡುತ್ತಿರುವ ರೈತರ ಮಕ್ಕಳಿಗೆ ಮೋಸ ಮಾಡಿದ್ದಾರೆ. ಅಲ್ಲದೇ ಎಚ್.ಡಿ.ಕುಮಾರಸ್ವಾಮಿ ವಿರುದ್ಧ ಲಘುವಾಗಿ ಮಾತನಾಡಿದ್ದಾರೆ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕೋಡಿಹಳ್ಳಿ, ‘ನಾನು ತಪ್ಪು ಮಾಡಿದ್ದರೆ ಕ್ಷಮೆ ಕೇಳುತ್ತೇನೆ. ಆದರೆ, ಕುಮಾರಸ್ವಾಮಿ ಅವರು ರೈತರ ಮೇಲೆ ಈ ರೀತಿಯ ದೌರ್ಜನ್ಯ ಮಾಡಿಸಬಾರದು. ಇದು ಸರಿಯಾದ ಬೆಳವಣಿಗೆ ಅಲ್ಲ’ ಎಂದರು.

ಚಕ್ರತೀರ್ಥ ವಜಾಕ್ಕೆ ಒಕ್ಕಲಿಗರ ಸಂಘ ಆಗ್ರಹ

ಒಂದನೇ ಪುಟದಿಂದ

‘ಕುವೆಂಪು ದೇವರು ಮತ್ತು ಧರ್ಮವನ್ನು ಸ್ವಾರ್ಥಕ್ಕೆ ಬಳಸುವವರ ವಿರುದ್ಧ ತಮ್ಮ ಕೃತಿಗಳಲ್ಲಿ ಖಂಡಿಸಿದ್ದರು. ವೈಚಾರಿಕತೆ ಮತ್ತು ಜ್ಞಾನಕ್ಕೆ ಅಪಾರ ಗೌರವ ನೀಡುತ್ತಿದ್ದರು. ರೋಹಿತ್ ಚಕ್ರತೀರ್ಥ ಅವರು ನಾಡಗೀತೆಗೆ ತೋರಿಸಿರುವ ಅಗೌರವಕ್ಕೆ ದೇಶ-ವಿದೇಶಗಳಲ್ಲಿ ವ್ಯಾಪಕ ಖಂಡನೆ ವ್ಯಕ್ತವಾಗಿದೆ. ಇದನ್ನು ಸರ್ಕಾರ ಗಮನಿಸಬೇಕು’ ಎಂದರು.

‘2019ರಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಇವರಿಗೆ ನೋಟಿಸ್ ನೀಡಿತ್ತು. ಆದರೂ, ಆ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಇಂದಿಗೂ ಹರಿದಾಡುತ್ತಿದೆ. ಈ ಸಂಬಂಧ ಮುಖ್ಯಮಂತ್ರಿ ಅವರಿಗೆ ಪತ್ರ ಬರೆದಿದ್ದೇವೆ. ಸರ್ಕಾರ ಏನು ಉತ್ತರ ನೀಡುತ್ತದೆ ಎಂಬುದನ್ನು ಗಮನಿಸಿ ಮುಂದಿನ ಹೆಜ್ಜೆ ಇಡುತ್ತೇವೆ’ ಎಂದರು.

‘ಮುಖ್ಯಮಂತ್ರಿ ಮತ್ತು ಸಂಬಂಧಪಟ್ಟ ಸಚಿವರು ಈ ಕೃತ್ಯವನ್ನು ಖಂಡಿಸಬೇಕು. ಸತ್ಯಾಸತ್ಯತೆ ಪರಿಶೀಲಿಸಿ ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಬೇಕು. ಚಕ್ರತೀರ್ಥ ಅವರು ಕೂಡಲೇ ನಾಡಿನ ಜನರ ಕ್ಷಮೆ ಯಾಚಿಸಬೇಕು’ ಎಂದು ಒತ್ತಾಯಿಸಿದರು.

‘ಪುಸ್ತಕ ಪರಿಷ್ಕರಣೆ: ಸಚಿವರ ಜತೆ ಚರ್ಚೆ’

‘ಪಠ್ಯಪುಸ್ತಕ ಪರಿಷ್ಕರಣೆ ಕುರಿತಾಗಿ ಎದ್ದಿರುವ ವಿವಾದದ ಬಗ್ಗೆ ಶಿಕ್ಷಣ ಸಚಿವರ ಜತೆ ಚರ್ಚೆ ನಡೆಸುತ್ತೇನೆ’ ಎಂದು ಮುಖ್ಯಮಂತ್ರಿ ಬೊಮ್ಮಾಯಿ ಹೇಳಿದರು.

‘ರೋಹಿತ್ ಚಕ್ರತೀರ್ಥ ಅವರನ್ನು ಪಠ್ಯಪುಸ್ತಕ ಪರಿಷ್ಕರಣೆ ಸಮಿತಿ ಅಧ್ಯಕ್ಷ ಸ್ಥಾನದಿಂದ ವಜಾಗೊಳಿಸಬೇಕು ಎಂಬ ಬೇಡಿಕೆ ಹೆಚ್ಚಾಗುತ್ತಿದೆಯಲ್ಲ’ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ‘ಈ ಬೇಡಿಕೆ ಬಗ್ಗೆ ಸಚಿವರ ಜತೆ ಚರ್ಚಿಸುವೆ. ವಸ್ತುಸ್ಥಿತಿ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುತ್ತೇನೆ’ ಎಂದರು.

ಚಿಂತಕ ಸುಧೀಂದ್ರ ಕುಲಕರ್ಣಿ ಅಭಿಮತ

‘ಮೋದಿಯನ್ನೂ ಸೋಲಿಸಲಿದ್ದಾರೆ’

ಪ್ರಜಾವಾಣಿ ವಾರ್ತೆ



ದಾವಣಗೆರೆ: ‘ಇಂದಿರಾ ಗಾಂಧಿಯಂಥ ಮಹಾನ್ ನಾಯಕಿಯನ್ನು ಸೋಲಿಸಿದ ಭಾರತ ಇದು. ಹಾಗಾಗಿ ಪ್ರಧಾನಿ ನರೇಂದ್ರ ಮೋದಿಯನ್ನೂ ಜನ ಸೋಲಿಸಿಯೇ ಸೋಲಿಸುತ್ತಾರೆ’ ಎಂದು ಮಾಜಿ ಪ್ರಧಾನಿ, ದಿವಂಗತ ಅಟಲ್‌ಬಿಹಾರಿ ವಾಜಪೇಯಿ ಅವರ ಆಪ್ತರಾಗಿದ್ದ ಸುಧೀಂದ್ರ ಕುಲಕರ್ಣಿ ಹೇಳಿದರು.

ದಾವಣಗೆರೆಯಲ್ಲಿ ಶನಿವಾರ ನಡೆದ ಮೇ ಸಾಹಿತ್ಯ ಮೇಳದಲ್ಲಿ ‘ಬಹುತ್ವ ಭಾರತ’ದ ಬಗ್ಗೆ ಅವರು ಮಾತನಾಡಿದರು.

‘ನಾನು ಕಮ್ಯುನಿಸ್ಟ್ ಪಕ್ಷದಲ್ಲಿದ್ದೆ. ಬಳಿಕ ಬಿಜೆಪಿಗೆ ಹೋಗಿ ವಾಜಪೇಯಿ, ಆಡ್ವಾಣಿ ಅವರಿಗೆ ಆತ್ಮೀಯನಾಗಿದ್ದೆ. ವಾಜಪೇಯಿ ನನ್ನ ನೆಚ್ಚಿನ ನಾಯಕ. ಅವರೆಂದಿಗೂ ಕೋಮುವಾದಿ ಆಗಿರಲಿಲ್ಲ. ಅವರ ನಂತರ ಬಿಜೆಪಿಯ ಜತೆಗಿನ ಸೈದ್ಧಾಂತಿಕ ಭಿನ್ನಾಭಿಪ್ರಾಯದಿಂದಾಗಿ ಹೊರಗೆ ಬಂದಿದ್ದೇನೆ. ಮೋದಿಯ ಈ ಆಡಳಿತ ಹೆಚ್ಚು ಸಮಯ ಉಳಿಯುವುದಿಲ್ಲ’ ಎಂದರು.

‘ಜಾತ್ಯತೀತ ಮತ್ತು ಸಮಾಜವಾದ ಎಂಬುದು ಸಂವಿಧಾನದಲ್ಲಷ್ಟೇ ಉಳಿದಿದೆ. ಜಾತ್ಯತೀತ ಎಂಬುದರ ಬಗ್ಗೆ ಕನಿಷ್ಠ ಚರ್ಚೆಗಳಾಗುತ್ತಿವೆ. ಆದರೆ ಸೋಶಿಯಲಿಸಂ ವಿಚಾರಕ್ಕೆ ತಿಲಾಂಜಲಿ ಇಟ್ಟಿದ್ದೇವೆ’ ಎಂದು ವಿಷಾದಿಸಿದರು.

‘ಜಾತೀಯತೆ, ಶೋಷಣೆ ಹೀಗೆ ಅನೇಕ ಸಮಸ್ಯೆಗಳಿವೆ. ಆದರೆ, ಹಿಂದೂ ಮತ್ತು ಮುಸ್ಲಿಮರ ನಡುವೆ ಏಕತೆ ಇಲ್ಲದಿರುವುದು ಬಹುದೊಡ್ಡ ಸಮಸ್ಯೆ’ ಎಂದು ವಿಶ್ಲೇಷಿಸಿದರು.

‘ವೈಚಾರಿಕ ಭಿನ್ನತೆ ಇರುವ ಜನರಲ್ಲಿ ಸಂವಾದ ನಡೆಯಬೇಕೆ ಹೊರತು ವಿವಾದವಲ್ಲ. ಆಗ ಮಾತ್ರ ಸಹಕಾರದ ಸಂಬಂಧ ಹುಟ್ಟಿಕೊಳ್ಳುತ್ತದೆ. ವೈಚಾರಿಕವಾಗಿ ಮೇಲ್ಮಟ್ಟದ ವಿರೋಧಿಗಳ ನಡುವೆ ಸಂವಾದ ನಡೆಯಬೇಕು. ಗಾಂಧಿ-ಅಂಬೇಡ್ಕರ್, ಅಂಬೇಡ್ಕರ್ - ಕಮ್ಯುನಿಸ್ಟ್, ಕಮ್ಯುನಿಸ್ಟ್-ಗಾಂಧಿ ನಡುವೆ ಅಷ್ಟೇ ಅಲ್ಲ, ವೈಚಾರಿಕವಾಗಿ ವಿರೋಧಿಗಳ ನಡುವೆಯೂ ನಡೆಯಬೇಕು. ದೀನ್ ದಯಾಳ್ ಉಪಾಧ್ಯಾಯರ ಸಿದ್ಧಾಂತಗಳ ನಡುವೆಯೂ ನಡೆಯಬೇಕು’ ಎಂದು ಸಲಹೆ ನೀಡಿದರು.

‘ಎಲ್ಲ ಮಹಾನ್ ವ್ಯಕ್ತಿಗಳನ್ನು ಚಿಕಿತ್ಸಕ ದೃಷ್ಟಿಯಿಂದ ನೋಡಬೇಕಿದೆ. ಯಾರನ್ನೂ ನಾವು ದೇವರನ್ನಾಗಿ ಮಾಡುವುದು ಬೇಡ. ಇಲ್ಲದೇ ಹೋದರೆ ವೈಚಾರಿಕ ತಳಹದಿಯಲ್ಲಿಯೇ ಮಡಿವಂತಿಕೆ, ಅಸ್ಪೃಶ್ಯತೆ ಬರುತ್ತದೆ’ ಎಂದು ಅಭಿಪ್ರಾಯಪಟ್ಟರು.

ಪೊಲೀಸ್ ಭದ್ರತೆಯಲ್ಲಿ ದೇಗುಲ ಪ್ರವೇಶ

ಪ್ರಜಾವಾಣಿ ವಾರ್ತೆ



ಕೆಂಭಾವಿ ಸಮೀಪದ ಅಮಲಿಹಾಳ ಗ್ರಾಮದಲ್ಲಿ ಶನಿವಾರ ಹನುಮಾನ್ ದೇಗುಲ ಪ್ರವೇಶಿಸಲು ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಪೊಲೀಸರು ಭದ್ರತೆ ಒದಗಿಸಿದರು

ಕೆಂಭಾವಿ (ಯಾದಗಿರಿ ಜಿಲ್ಲೆ): ಅಮಲಿಹಾಳ ಗ್ರಾಮದಲ್ಲಿ ಶನಿವಾರ ಪರಿಶಿಷ್ಟ ಜಾತಿ ಮತ್ತು ಪಂಗಡದ 10 ಜನರು ಪೊಲೀಸ್ ಭದ್ರತೆಯಲ್ಲಿ ಹನುಮಾನ್ ದೇವಸ್ಥಾನ ಪ್ರವೇಶಿಸಿ, ಪೂಜೆ ಸಲ್ಲಿಸಿದರು.

ಪರಿಶಿಷ್ಟ ಜಾತಿ ಮತ್ತು ಪಂಗಡದವರು ದೇವಾಲಯ ಪ್ರವೇಶಿಸುವುದಕ್ಕೆ ಲಿಂಗಾಯತ ಸಮುದಾಯದವರ ವಿರೋಧವಿತ್ತು. ಇದರಿಂದ ಅಮಲಿಹಾಳ ಮತ್ತು ಪಕ್ಕದ ಹೂವಿನಹಳ್ಳಿಯಲ್ಲಿ ಕೆಲ ದಿನಗಳಿಂದ ಸಂಘರ್ಷಮಯ ವಾತಾವರಣ ಇತ್ತು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವೇದಮೂರ್ತಿ ಶುಕ್ರವಾರ ಗ್ರಾಮಗಳಿಗೆ ಭೇಟಿ ನೀಡಿ, ಗ್ರಾಮಸ್ಥರ ಮನವೊಲಿಕೆಗೆ ಪ್ರಯತ್ನಿಸಿದ್ದರು. ಶನಿವಾರ ಪರಿಸ್ಥಿತಿ ವಿಕೋಪಕ್ಕೆ ಹೋಗುವ ಸಾಧ್ಯತೆಯಿದ್ದ ಕಾರಣ ಜಿಲ್ಲಾಡಳಿತ ಎರಡೂ ಗ್ರಾಮಗಳಲ್ಲಿ ನಿಷೇಧಾಜ್ಞೆ ಜಾರಿಗೊಳಿಸಿತ್ತು.

ಎರಡೂ ಗ್ರಾಮಗಳಲ್ಲಿ ಪರಿಸ್ಥಿತಿ ಇನ್ನೂ ಬೂದಿಮುಚ್ಚಿದ ಕೆಂಡದಂತಿದ್ದು, ಪೊಲೀಸ್ ಬಿಗಿ ಬಂದೋಬಸ್ತ್ ಇದೆ.

ಮಂಗಳೂರು ವಿ.ವಿ: ‘ಹಿಜಾಬ್ ಧರಿಸಿದವರಿಗೆ ಪ್ರವೇಶ ಇಲ್ಲ’

ಮಂಗಳೂರು: ಮಂಗಳೂರು ವಿಶ್ವವಿದ್ಯಾಲಯದ ವ್ಯಾಪ್ತಿಯ ನಗರದ ವಿಶ್ವವಿದ್ಯಾಲಯ ಕಾಲೇಜಿನಲ್ಲಿ ಶನಿವಾರ ಹಿಜಾಬ್ ಧರಿಸಿ ಬಂದಿದ್ದ ವಿದ್ಯಾರ್ಥಿನಿಯರನ್ನು ವಾಪಸ್ ಕಳುಹಿಸಲಾಯಿತು.

ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭೆಯ ನಿರ್ಣಯದಂತೆ ವಿಶ್ವವಿದ್ಯಾಲಯ ಕಾಲೇಜಿನಲ್ಲಿ ಹಿಜಾಬ್ ಧರಿಸುವುದನ್ನು ನಿಷೇಧಿಸಲಾಗಿದೆ. ಕೆಲವು ವಿದ್ಯಾರ್ಥಿನಿಯರು ಈ ನಿಯಮ ಪಾಲಿಸಿ ಕಾಲೇಜಿಗೆ ಬಂದಿದ್ದರು. 12 ವಿದ್ಯಾರ್ಥಿನಿಯರು ಹಿಜಾಬ್ ಧರಿಸಿ ತರಗತಿ ಪ್ರವೇಶಕ್ಕೆ ಅವಕಾಶ ನೀಡಬೇಕು ಎಂದು ಪಟ್ಟು ಹಿಡಿದರು. ಇದಕ್ಕೆ ಒಪ್ಪದ ಕಾಲೇಜಿನ ಪ್ರಾಂಶುಪಾಲೆ ಡಾ. ಅನಸೂಯಾ ರೈ, ವಿದ್ಯಾರ್ಥಿಗಳನ್ನು ವಾಪಸ್ ಕಳುಹಿಸಿದರು. ಅವರಿಗೆ ವಾಚನಾಲಯಕ್ಕೆ ಹೋಗಲು ಕೂಡ ಅವಕಾಶ ನಿರಾಕರಿಸಲಾಯಿತು ಎಂಬ ಮಾಹಿತಿ ಲಭ್ಯವಾಗಿದೆ.

ತರಗತಿಯಲ್ಲಿ ಹಿಜಾಬ್ ಧರಿಸಲು ಅವಕಾಶ ನೀಡುವಂತೆ ವಿದ್ಯಾರ್ಥಿನಿಯರು ಒತ್ತಾಯಿಸಿದ್ದ ಹಿನ್ನೆಲೆಯಲ್ಲಿ ಕಾಲೇಜಿನ ವಿಭಾಗ ಮುಖ್ಯಸ್ಥರ ಸಮಿತಿ ಸಭೆ ನಡೆಸಿ, ವಿದ್ಯಾರ್ಥಿನಿಯರು ಹಿಜಾಬ್ ಅನ್ನು ಮಹಿಳಾ ವಿಶ್ರಾಂತಿ ಕೊಠಡಿಯಲ್ಲಿ ತೆಗೆದಿಟ್ಟು ತರಗತಿಗೆ ಬರುವಂತೆ ತಿಳಿಸಿತ್ತು.

ಶಾಸಕ ವೇದವ್ಯಾಸ ಕಾಮತ್ ಮತ್ತು ಮಂಗಳೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಪಿ.ಎಸ್. ಯಡಪಡಿತ್ತಾಯ ಅವರ ನೇತೃತ್ವದಲ್ಲಿ ಶುಕ್ರವಾರ ನಡೆದ ಸಿಡಿಸಿ ಸಭೆಯಲ್ಲಿ, ಹಿಜಾಬ್ ಧರಿಸಿ ಕಾಲೇಜು ಪ್ರವೇಶವಿಲ್ಲ ಎಂದು ನಿರ್ಧಾರವಾಗಿತ್ತು. ವಿದ್ಯಾರ್ಥಿನಿಯರು ಬೇರೆ ಕಾಲೇಜಿಗೆ ತೆರಳುವುದಿದ್ದರೆ ವ್ಯವಸ್ಥೆ ಮಾಡುವುದಾಗಿ ನಿರ್ಣಯಿಸಲಾಗಿತ್ತು.

ಹು–ಧಾ ಪಾಲಿಕೆ : ಈರೇಶ ಮೇಯರ್

ಹುಬ್ಬಳ್ಳಿ: ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ 21ನೇ ಆಡಳಿತ ಮಂಡಳಿಯ ಅವಧಿಗೆ ಈರೇಶ ಅಂಚಟಗೇರಿ ಮೇಯರ್, ಉಮಾ ಮುಕುಂದ ಉಪಮೇಯರ್ ಆಗಿ ಆಯ್ಕೆಯಾಗಿದ್ದಾರೆ.

ಪಾಲಿಕೆ ಸಭಾಭವನದಲ್ಲಿ ಶನಿವಾರ ನಡೆದ ಚುನಾವಣೆಯಲ್ಲಿ ಬಿಜೆಪಿಯ ಈರೇಶ ಅಂಚಟಗೇರಿ 50 ಮತ ಪಡೆದರೆ, ಪ್ರತಿಸ್ಪರ್ಧಿ ಕಾಂಗ್ರೆಸ್ ಅಭ್ಯರ್ಥಿ ಮಯೂರ ಮೋರೆ 35 ಮತ ಪಡೆದರು. ಎಐಎಂಐಎಂ ಅಭ್ಯರ್ಥಿ ನಜೀರ್‌ಅಹ್ಮದ್ ಹೊನ್ಯಾಳ ಮೂರು ಮತ ಪಡೆದರು.

ಉಪಮೇಯರ್ ಸ್ಥಾನದ ಬಿಜೆಪಿಯ ಉಮಾ ಮುಕುಂದ ಅವರು ಪ್ರತಿಸ್ಪರ್ಧಿ ಕಾಂಗ್ರೆಸ್‌ನ ದೀಪಾ ನೀರಕಟ್ಟಿ ಅವರನ್ನು 16 ಮತಗಳ ಅಂತರದಿಂದ ಸೋಲಿಸಿದರು. ಉಮಾ ಅವರು 51 ಮತಗಳನ್ನು ಪಡೆದರು.

70 ಕೆ.ಜಿ. ಹಲಸಿನ ಹಣ್ಣು



ಶಿವಮೊಗ್ಗ: ಜಿಲ್ಲೆಯ ಹೊಳೆಹೊನ್ನೂರು ಸಮೀಪದ ಮಲ್ಲಾಪುರ ಗ್ರಾಮದ ಬಸವರಾಜಪ್ಪ (ಎಡಬದಿಯಲ್ಲಿರುವವರು) ಎಂಬುವವರ ತೋಟದಲ್ಲಿ 70 ಕೆ.ಜಿ. ತೂಕದ ಅಪರೂಪದ ಹಲಸಿನ ಹಣ್ಣು ದೊರೆತಿದ್ದು, ಗಮನಸೆಳೆದಿದೆ. ತೋಟದ ಸುತ್ತಲೂ 20ಕ್ಕೂ ಹೆಚ್ಚು ಹಲಸಿನ ಹಣ್ಣಿನ ಮರಗಳಿದ್ದು, ಎಲ್ಲ ಮರಗಳಲ್ಲಿನ ಹಣ್ಣುಗಳು 7ರಿಂದ 8 ಕೆ.ಜಿ. ತೂಗುತ್ತವೆ. ಒಂದು ಮರದಲ್ಲಿ ಮಾತ್ರ 70 ಕೆ.ಜಿ. ಹಣ್ಣು ಸಿಕ್ಕಿದೆ. ಇದರ ಮಾರುಕಟ್ಟೆ ಮೌಲ್ಯ ₹ 4 ಸಾವಿರ ಎಂದು ಅಂದಾಜಿಸಲಾಗಿದೆ.

ಮತ್ತೆ ಬಂದಿದೆ ಜೀವ ಬೆದರಿಕೆ ಪ್ರೇಮಪತ್ರ: ಕುಂ.ವೀ

ದಾವಣಗೆರೆ: ‘ಸತ್ಯ ಮಾತನಾಡಿದರೆ, ಜಾತಿ ತಾರತಮ್ಯ, ಅಸಮಾನತೆಯ ಬಗ್ಗೆ, ಕೋಮು ಹಿಂಸೆಯ ಬಗ್ಗೆ ಮಾತನಾಡುವವರಿಗೆ ಜೀವ ಬೆದರಿಕೆಯ ಪ್ರೇಮ ಪತ್ರಗಳು ಬರುತ್ತಿರುತ್ತವೆ. ಈಗ ಮತ್ತೆ ಅಂಥ ಪತ್ರ ನನಗೆ ಬಂದಿದೆ’ ಎಂದು ಸಾಹಿತಿ ಕುಂ.ವೀರಭದ್ರಪ್ಪ ಹೇಳಿದರು.

ಶನಿವಾರ ನಡೆದ ಮೇ ಸಾಹಿತ್ಯ ಮೇಳದ ಸಮಾರೋಪದಲ್ಲಿ ಮಾತನಾಡಿದ ಅವರು, ‘ಇದಕ್ಕಿಂತ ಹಿಂದೆ 61 ಮಂದಿಗೆ ಬೆದರಿಕೆ ಪತ್ರ ಬಂದಾಗ ‘ಈ 61ರಲ್ಲಿ ಏಳೆಂಟು ಮಂದಿ ಮುಗಿಸಿದರೆ ಬುದ್ಧಿ ಬರುತ್ತದೆ’ ಎಂದು ಒಬ್ಬ ಪ್ರತಿಕ್ರಿಯಿಸಿದ್ದು ಇವರನ್ನು ಪೊಲೀಸರು ಇನ್ನೂ ಬಂಧಿಸಿಲ್ಲ’ ಎಂದು ದೂರಿದರು.

ಮೀಸಲಾತಿ ಹೆಚ್ಚಳ: ಸಿಎಂ ಬಸವರಾಜ ಬೊಮ್ಮಾಯಿ ಹೇಳಿಕೆ

‘ನ್ಯಾ. ಅಡಿ ಸಮಿತಿ ವರದಿ ಬಳಿಕ ತೀರ್ಮಾನ’

ಪ್ರಜಾವಾಣಿ ವಾರ್ತೆ



ವಾಲ್ಮೀಕಿ ಸಮುದಾಯದ ಮೀಸಲಾತಿ ಹೆಚ್ಚಳಕ್ಕೆ ಆಗ್ರಹಿಸಿ ಅನಿರ್ದಿಷ್ಟ ಸತ್ಯಾಗ್ರಹ ನಡೆಸುತ್ತಿರುವ ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದ ಪುರಿ ಸ್ವಾಮೀಜಿ ಅವರನ್ನು ಶನಿವಾರ ಭೇಟಿ ಮಾಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಶ್ರೀಗಳಿಗೆ ನಮಸ್ಕರಿಸಿದರು. –ಪ್ರಜಾವಾಣಿ ಚಿತ್ರ

ಬೆಂಗಳೂರು: ಪರಿಶಿಷ್ಟ ಪಂಗಡದವರ ಮೀಸಲಾತಿ ಪ್ರಮಾಣವನ್ನು ಶೇಕಡ 7.5ಕ್ಕೆ ಹೆಚ್ಚಿಸಬೇಕೆಂಬ ಬೇಡಿಕೆ ಕುರಿತು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಸುಭಾಷ್ ಬಿ. ಅಡಿ ನೇತೃತ್ವದ ತ್ರಿಸದಸ್ಯ ಸಮಿತಿ ವರದಿ ಬಂದ ಬಳಿಕ ತೀರ್ಮಾನ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಎಸ್‌.ಟಿ ಮೀಸಲಾತಿ ಹೆಚ್ಚಳಕ್ಕೆ ಆಗ್ರಹಿಸಿ ಸ್ವಾತಂತ್ರ್ಯ ಉದ್ಯಾನದಲ್ಲಿ ಧರಣಿ ನಡೆಸುತ್ತಿರುವ ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದ ಪುರಿ ಸ್ವಾಮೀಜಿ ಅವರನ್ನು ಶನಿವಾರ ಭೇಟಿಮಾಡಿದ ಮುಖ್ಯಮಂತ್ರಿ, ಕೆಲಕಾಲ ಚರ್ಚೆ ನಡೆಸಿದರು. ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ತ್ರಿಸದಸ್ಯ ಸಮಿತಿಯು ಸಲ್ಲಿಸುವ ಅಧ್ಯಯನ ವರದಿಯನ್ನು ಪರಿಶೀಲಿಸಿದ ಬಳಿಕ ಸರ್ಕಾರ ಮುಂದಿನ ಹೆಜ್ಜೆ ಇಡಲಿದೆ’ ಎಂದರು.

‘ಮೀಸಲಾತಿಯ ಒಟ್ಟು ಪ್ರಮಾಣ ಶೇ 50ರಷ್ಟನ್ನು ಮೀರಬಾರದು ಎಂದು ಸುಪ್ರೀಂಕೋರ್ಟ್ ಇಂದಿರಾ ಸಹಾನಿ ಪ್ರಕರಣದಲ್ಲಿ ಸ್ಪಷ್ಟವಾಗಿ ಹೇಳಿದೆ. ಇಂತಹ ಕಾನೂನಾತ್ಮಕ ಅಂಶಗಳನ್ನು ಗಮನದಲ್ಲಿ ಇರಿಸಿಕೊಂಡೇ ಸರ್ಕಾರ ತೀರ್ಮಾನಕ್ಕೆ ಬರಬೇಕಾಗುತ್ತದೆ. ಈ ಕುರಿತು ವಿರೋಧ ಪಕ್ಷಗಳ ನಾಯಕರ ಜತೆಗೆ ಈಗಾಗಲೇ ಚರ್ಚೆ ನಡೆಸಲಾಗಿದೆ’ ಎಂದು ಹೇಳಿದರು.

ಮೀಸಲಾತಿ ಹೆಚ್ಚಳಕ್ಕೆ ಆಗ್ರಹಿಸಿ ಕೆಲವು ವರ್ಷಗಳಿಂದ ಹೋರಾಟ ನಡೆಯುತ್ತಿದೆ. ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎಚ್‌.ಎನ್‌. ನಾಗಮೋಹನ ದಾಸ್ ನೇತೃತ್ವದ ಸಮಿತಿ ಈ ಕುರಿತು ಪರಿಶೀಲನೆ ನಡೆಸಿ ಈಗಾಗಲೇ ವರದಿ ಸಲ್ಲಿಸಿದೆ. ಶಿಕ್ಷಣ, ಉದ್ಯೋಗ ಮತ್ತು ಆರ್ಥಿಕ ಕ್ಷೇತ್ರದಲ್ಲಿ ಪರಿಶಿಷ್ಟ ಪಂಗಡಗಳ ಜನರ ಪರಿಸ್ಥಿತಿ ಕುರಿತ ಮಾಹಿತಿಗಳು ವರದಿಯಲ್ಲಿವೆ. ಈ ಸಮುದಾಯಗಳಿಗೆ ಒಳ್ಳೆಯದನ್ನು ಮಾಡಬೇಕೆಂಬ ಸದುದ್ದೇಶ ಸರ್ಕಾರಕ್ಕೆ ಇದೆ. ಅವರಿಗೆ ಎಲ್ಲ ರೀತಿಯ ಸಹಕಾರ ನೀಡಲಾಗುವುದು ಎಂದರು.

ಕುರುಬರಿಗೆ ಎಸ್‌.ಟಿ ಮೀಸಲು: ಈಶ್ವರಪ್ಪಗೆ ಸಿದ್ದರಾಮಯ್ಯ ಸವಾಲು

ಪ್ರಜಾವಾಣಿ ವಾರ್ತೆ

ತುಮಕೂರು: ‘ಕೆ.ಎಸ್‌. ಈಶ್ವರಪ್ಪನವರೇ ನಿಮಗೆ ಸಮುದಾಯದ ಬಗ್ಗೆ ನಿಜವಾದ ಕಾಳಜಿ ಇದ್ದರೆ ಕುರುಬರಿಗೆ ಮೊದಲು ಎಸ್‌.ಟಿ ಮೀಸಲಾತಿ ಕೊಡಿಸಿ. ನಿಮ್ಮ ಕೈಯಲ್ಲೇ ಅಧಿಕಾರವಿದೆ. ಬೂಟಾಟಿಕೆ, ನಾಟಕ ಬಿಟ್ಟು ನಿಮ್ಮ ಸಾಮರ್ಥ್ಯ ತೋರಿಸಿ’ ಎಂದು ವಿಧಾನ ಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಬಿಜೆಪಿ ಶಾಸಕ ಕೆ.ಎಸ್‌. ಈಶ್ವರಪ್ಪ ಅವರಿಗೆ ಸವಾಲು ಹಾಕಿದ್ದಾರೆ.

ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಕುರುಬರ ಜಿಲ್ಲಾ ಮಟ್ಟದ ಜಾಗೃತಿ ಸಭೆಯಲ್ಲಿ ಮಾತನಾಡಿ, ‘ಕುರುಬ ಸಮುದಾಯಕ್ಕೆ ಪರಿಶಿಷ್ಟ ಪಂಗಡ (ಎಸ್‌ಟಿ) ಮೀಸಲಾತಿ ಕೊಡಬೇಕು. ಮೀಸಲಾತಿ ಸಿಗುವವರೆಗೂ ಹೋರಾಟ ನಿಲ್ಲಬಾರದು’ ಎಂದು ಅವರು ಕುರುಬ ಸಮುದಾಯಕ್ಕೆ ಕರೆ ನೀಡಿದರು.

ಮಹೀಂದ್ರ ಲಾಭ ₹ 1,192 ಕೋಟಿಗೆ ಏರಿಕೆ

ಮುಂಬೈ (ಪಿಟಿಐ): ಮಹೀಂದ್ರ ಆ್ಯಂಡ್ ಮಹೀಂದ್ರ ಕಂಪನಿಯು 2022ರ ಮಾರ್ಚ್ ತ್ರೈಮಾಸಿಕದಲ್ಲಿ ₹ 1,192 ಕೋಟಿ ಲಾಭ ಗಳಿಸಿದೆ.

ಹಿಂದಿನ ಹಣಕಾಸು ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ಕಂಪನಿಯು ₹ 245 ಕೋಟಿ ನಿವ್ವಳ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ ಲಾಭವು ಐದು ಪಟ್ಟು ಹೆಚ್ಚಾಗಿದೆ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ವರಮಾನ ಶೇ 28ರಷ್ಟು ಹೆಚ್ಚಾಗಿದ್ದು ₹ 17,124 ಕೋಟಿಗೆ ತಲುಪಿದೆ. ಹಿಂದಿನ ಹಣಕಾಸು ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ₹ 13,356 ಕೋಟಿ ವರಮಾನ ಗಳಿಸಿತ್ತು.

ಮುಂಬೈ ಧಾರಣೆ

ಶೇಂಗಾ

28-5-2022

ಜಾವಾ 70/80(ಹೊಸ)	10750-10800
ಜಾವಾ 80/90(ಹೊಸ)	10350-10400
ದಪ್ಪ ಮಧ್ಯಪ್ರದೇಶ(ಹೊಸ)	11150-11200
ದಪ್ಪ ಗುಜರಾತ್(ಹೊಸ)	10350-10400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1625 (1590)
ಒಂದು ವಾರದ ಡೆಲಿವರಿ	1620 (1585)
ಸೋಯಾ ಕಚ್ಚಾ	1500 (1505)
ಪಾಮ್ ವಾರದ ಡೆಲಿವರಿ	1518 (1523)
ಸೂರ್ಯಕಾಂತಿ ಎಣ್ಣೆ ಕಚ್ಚಾ	1780 (1780)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
50,900 (51,000)
ಬೆಳ್ಳಿ ಕೆ.ಜಿ 62,000 (62,550)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಚಿನ್ನ, ಬೆಳ್ಳಿ (ಬೆಂಗಳೂರು)

ಸ್ಟ್ಯಾಂಡರ್ಡ್ ಚಿನ್ನ (10 ಗ್ರಾಂ)	₹52,620
ಆಭರಣ ಚಿನ್ನ (1 ಗ್ರಾಂ)	₹4,893
ಬೆಳ್ಳಿ (ಕೆ.ಜಿಗೆ)	₹64,000

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1615 (1580)
ಸೋಯಾ (ರಿಫೈನ್ಡ್)	₹1540 (1542)
ಸೂರ್ಯಕಾಂತಿ (ರಿಫೈನ್ಡ್)	₹1840 (1850)
ಪಾಮೋಲಿನ್	₹1520 (1525)

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹485
12 ಮೊಟ್ಟೆಗೆ	₹65
ಮೈಸೂರು	
100 ಮೊಟ್ಟೆಗೆ	₹490

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹300-566
ದ್ವಿತಳಿ (ಬಿ.ವಿ)	₹255-823

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹172
ಆರ್‌ಎಸ್‌ಎಸ್-5	₹165
ಗುಡ್ ಲಾಟ್	₹160

ಅಡುಗೆ ಎಣ್ಣೆಗಳ ಮೇಲಿನ ಆಮದು ಸುಂಕ ಇಳಿಕೆ ಪರಿಣಾಮ

ಕುಸಿಯುತ್ತಿದೆ ಕೊಬ್ಬರಿ ಧಾರಣೆ

• ಎಚ್.ಬಿ. ಸುಪ್ರತೀಕ್

ತಿಪಟೂರು (ತುಮಕೂರು): ಒಂದೂವರೆ ವರ್ಷದ ಬಳಿಕ ಉಂಡೆ ಕೊಬ್ಬರಿ ಬೆಲೆ ದಾಖಲೆಯ ಕುಸಿತ ಕಂಡಿದ್ದು, ಕ್ವಿಂಟಲ್ ಕೊಬ್ಬರಿ ಧಾರಣೆ ₹13,500ಕ್ಕೆ ತಲುಪಿದೆ.

ಕೆಲವು ತಿಂಗಳ ಹಿಂದೆ ದಾಖಲೆಯ ₹17,400 ತಲುಪಿದ್ದ ಕೊಬ್ಬರಿಯ ಬೆಲೆ 45 ದಿನಗಳಿಂದ ಸತತವಾಗಿ ಕುಸಿತ ಕಾಣುತ್ತಿದೆ. ಇದೇ ವೇಗದಲ್ಲಿ ಸಾಗಿದರೆ ಕನಿಷ್ಠ ಬೆಂಬಲ ಬೆಲೆ ₹11 ಸಾವಿರಕ್ಕಿಂತಲೂ ಕಡಿಮೆಯಾಗುವ ಆತಂಕ ಬೆಳೆಗಾರರಿಗೆ ಎದುರಾಗಿದೆ.

ಕೇಂದ್ರ ಸರ್ಕಾರವು ವಿದೇಶಗಳಿಂದ ಆಮದು ಮಾಡಿಕೊಳ್ಳುತ್ತಿದ್ದ ಅಡುಗೆ ಎಣ್ಣೆಗಳ ಮೇಲಿನ ಆಮದು ಸುಂಕ ಕಡಿತಗೊಳಿಸಿರುವುದು ಕೊಬ್ಬರಿ ಬೆಲೆ ಇಳಿಕೆಗೆ ಕಾರಣವಾಗಿದೆ ಎನ್ನುತ್ತಾರೆ ಮಾರುಕಟ್ಟೆ ತಜ್ಞರು.

ತಾಳೆ, ಸೋಯಾ, ಸೂರ್ಯಕಾಂತಿ ಸೋಯಾದ ಕಚ್ಚಾ ಹಾಗೂ ರೀಫೈನ್ಡ್ ಎಣ್ಣೆ ಆಮದು ಮಾಡಿಕೊಳ್ಳಲಾಗುತ್ತದೆ. ಫೆಬ್ರುವರಿಯಿಂದ ಆಮದು ಸುಂಕ ಕಡಿಮೆ ಮಾಡಲಾಗಿದೆ. ಹೀಗಾಗಿ ಮಾರುಕಟ್ಟೆಯಲ್ಲಿ ಕೊಬ್ಬರಿ ಎಣ್ಣೆಯ ಬೇಡಿಕೆ ಕುಸಿದಿದೆ. ಇದು ಕೊಬ್ಬರಿ ಧಾರಣೆ ಮೇಲೆ ಪರಿಣಾಮ ಬೀರಿದೆ.



ರೈತರು ಬೆಳೆಯುವ ಎಣ್ಣೆ ಕಾಳುಗಳನ್ನು ಗಣನೆಗೆ ತೆಗೆದುಕೊಂಡು ಆಮದನ್ನು ಪರಿಗಣಿಸಬೇಕು. ಇಲ್ಲವಾದಲ್ಲಿ ರೈತರ ಬೆಳೆಗೆ ಬೆಲೆ ಸಿಗುವುದಿಲ್ಲ
ಶ್ರೀಕಾಂತ್ ಕೆಳಹಟ್ಟಿ, ಬೆಲೆ ಕಾವಲು ಸಮಿತಿ, ತಿಪಟೂರು



ಕೇಂದ್ರ ಸರ್ಕಾರ ಕೊಬ್ಬರಿ ಬೆಳೆಗಾರರ ಕಷ್ಟಗಳಿಗೆ ಸ್ಪಂದಿಸಿ ಕ್ವಿಂಟಲ್ ಕೊಬ್ಬರಿಯ ಕನಿಷ್ಠ ಬೆಂಬಲ ಬೆಲೆಯನ್ನು ₹15 ಸಾವಿರಕ್ಕೆ ನಿಗದಿ ಪಡಿಸಬೇಕು.
ಮಧುಸೂದನ್, ಎಪಿಎಂಸಿ ನಿರ್ದೇಶಕ, ತಿಪಟೂರು

ಕಬ್ಬಿಣದ ಅದಿರು ಉತ್ಪಾದನೆ ಹೆಚ್ಚಳ: ಎನ್‌ಎಂಡಿಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸರ್ಕಾರಿ ಸ್ವಾಮ್ಯದ ರಾಷ್ಟ್ರೀಯ ಖನಿಜ ಅಭಿವೃದ್ಧಿ ನಿಗಮವು (ಎನ್‌ಎಂಡಿಸಿ), 2021–22ನೇ ಹಣಕಾಸು ವರ್ಷದಲ್ಲಿ 4.21 ಕೋಟಿ ಟನ್ ಕಬ್ಬಿಣದ ಅದಿರು ಉತ್ಪಾದನೆ ಮಾಡಿದ್ದು, 4.05 ಕೋಟಿ ಟನ್ ಮಾರಾಟ ಮಾಡಿದೆ.

2020–21ನೇ ಹಣಕಾಸು ವರ್ಷಕ್ಕೆ ಹೋಲಿಸಿದರೆ ಉತ್ಪಾದನೆಯಲ್ಲಿ ಶೇ 24 ರಷ್ಟು ಮತ್ತು ಮಾರಾಟದಲ್ಲಿ ಶೇ 22 ರಷ್ಟು ಬೆಳವಣಿಗೆ ಸಾಧ್ಯವಾಗಿದೆ ಎಂದು ಕಂಪನಿಯು ತಿಳಿಸಿದೆ.

2021–22ನೇ ಹಣಕಾಸು ವರ್ಷಕ್ಕೆ ಒಟ್ಟಾರೆ ವಹಿವಾಟು ₹ 25,882 ಕೋಟಿಗೆ ತಲುಪಿದೆ. 2020–21ನೇ ಹಣಕಾಸು ವರ್ಷದಲ್ಲಿ ಒಟ್ಟಾರೆ ವಹಿವಾಟಿನ ಮೊತ್ತವು ₹ 15,370 ಕೋಟಿ ಇತ್ತು ಎಂದು ಮಾಹಿತಿ ನೀಡಿದೆ.

'ಮಾರಾಟಕ್ಕೆ ಅವಕಾಶ ಕೊಟ್ಟರೆ ಭಾರತದಲ್ಲಿ ಟೆಸ್ಲಾ ತಯಾರಿಕೆ'

ನವದೆಹಲಿ (ಪಿಟಿಐ): ಭಾರತದಲ್ಲಿ ಟೆಸ್ಲಾ ಕಾರುಗಳ ಮಾರಾಟ ಮತ್ತು ಸೇವೆಗಳಿಗೆ ಅವಕಾಶ ನೀಡದ ಹೊರತು ದೇಶದಲ್ಲಿ ತನ್ನ ಉತ್ಪನ್ನಗಳನ್ನು ತಯಾರು ಮಾಡುವುದಿಲ್ಲ ಎಂದು ಕಂಪನಿಯ ಸಿಇಒ ಇಲಾನ್ ಮಸ್ಕ್ ಸ್ಪಷ್ಟಪಡಿಸಿದ್ದಾರೆ.

ಭಾರತದಲ್ಲಿ ತಯಾರಿಕಾ ಘಟಕ ಸ್ಥಾಪಿಸುವ ಕುರಿತು ಟ್ವಿಟರ್ ಬಳಕೆದಾರರೊಬ್ಬರ ಪ್ರಶ್ನೆಗೆ ಮಸ್ಕ್ ಈ ಪ್ರತಿಕ್ರಿಯೆ ನೀಡಿದ್ದಾರೆ. ಭಾರತದಲ್ಲಿ ವಿದ್ಯುತ್ ಚಾಲಿತ ವಾಹನಗಳನ್ನು ತಯಾರು ಮಾಡಲು ಟೆಸ್ಲಾ ಸಿದ್ಧವಿದ್ದರೆ ಅದರಿಂದ ಯಾವುದೇ ಸಮಸ್ಯೆ ಇಲ್ಲ. ಆದರೆ, ಚೀನಾದಿಂದ ಆಮದು ಮಾಡಿಕೊಳ್ಳಬಾರದು ಎಂದು ಕೇಂದ್ರ ಸಚಿವ ನಿತಿನ್ ಗಡ್ಕರಿ ಕಳೆದ ತಿಂಗಳು ಹೇಳಿದ್ದರು.

ಸುದ್ದಿ 2 ನಿಮಿಷ

ಚಿನ್ನ ಖರೀದಿ ಹೆಚ್ಚಿಸಿದ ಆರ್‌ಬಿಐ

ಮುಂಬೈ (ಪಿಟಿಐ): ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) 2021–22ನೇ ಹಣಕಾಸು ವರ್ಷದಲ್ಲಿ 65.11 ಟನ್ ಚಿನ್ನ ಖರೀದಿ ಮಾಡಿದೆ. ಇದರಿಂದಾಗಿ ಒಟ್ಟಾರೆ ಚಿನ್ನದ ಮೀಸಲು ಸಂಗ್ರಹವು 760.42 ಟನ್‌ಗಳಿಗೆ ತಲುಪಿದೆ.

2020–21ನೇ ಹಣಕಾಸು ವರ್ಷದಲ್ಲಿ ಆರ್‌ಬಿಐ ಬಳಿ 695.11 ಟನ್ ಚಿನ್ನದ ಸಂಗ್ರಹ ಇತ್ತು. ಚಿನ್ನದ ಮೌಲ್ಯವು ₹ 1.43 ಲಕ್ಷ ಕೋಟಿಯಿಂದ ₹ 1.96 ಲಕ್ಷ ಕೋಟಿಗೆ ಶೇ 37.11ರಷ್ಟು ಏರಿಕೆ ಆಗಿದೆ ಎಂದು ಆರ್‌ಬಿಐ ಹೇಳಿದೆ.

ಚಿನ್ನದ ಬೆಲೆ ಹೆಚ್ಚಳ ಆಗಿರುವುದು ಮತ್ತು ಡಾಲರ್ ಎದುರು ರೂಪಾಯಿ ಮೌಲ್ಯ ಇಳಿಕೆ ಆಗಿರುವುದು ಚಿನ್ನದ ಮೌಲ್ಯ ಮತ್ತು ಸಂಗ್ರಹ ಹೆಚ್ಚಳಕ್ಕೆ ಕಾರಣ ಎಂದು ವರದಿಯು ತಿಳಿಸಿದೆ.

ಮೇ 20ಕ್ಕೆ ಕೊನೆಗೊಂಡ ವಾರದಲ್ಲಿ ಆರ್‌ಬಿಐ ಬಳಿ ಇರುವ ಚಿನ್ನದ ಮೀಸಲು ಸಂಗ್ರಹವು ₹ 3.14 ಲಕ್ಷ ಕೋಟಿಗೆ ಏರಿಕೆ ಆಗಿದೆ.

ವಿದೇಶಿ ವಿನಿಮಯ ಮೀಸಲು ಸಂಗ್ರಹವು ₹ 32,571 ಕೋಟಿ ಹೆಚ್ಚಾಗಿ ₹ 46 ಲಕ್ಷ ಕೋಟಿಗಳಿಗೆ ಏರಿಕೆ ಆಗಿದೆ. ಮೇ 13ಕ್ಕೆ ಕೊನೆಗೊಂಡ ವಾರದಲ್ಲಿ ಮೀಸಲು ಸಂಗ್ರಹದಲ್ಲಿ ಇಳಿಕೆ ಕಂಡಿತ್ತು.

ಮೀಸಲು ಸಂಗ್ರಹದಲ್ಲಿ ಅತಿ ಹೆಚ್ಚಿನ ಪಾಲು ಹೊಂದಿರುವ ವಿದೇಶಿ ಕರೆನ್ಸಿಗಳ ಸಂಗ್ರಹವು ₹ 41.04 ಲಕ್ಷ ಕೋಟಿಗಳಿಗೆ ಏರಿಕೆ ಆಗಿದೆ ಎಂದು ತಿಳಿಸಿದೆ.



ಅಂತರರಾಷ್ಟ್ರೀಯ ಹಣಕಾಸು ನಿಧಿಯಲ್ಲಿ (ಐಎಂಎಫ್) ಭಾರತದ ಮೀಸಲು ಸಂಗ್ರಹವು ₹ 392 ಕೋಟಿ ಏರಿಕೆ ಕಂಡು ₹ 38,500 ಕೋಟಿಗೆ ಏರಿಕೆ ಆಗಿದೆ ಎಂದು ಆರ್‌ಬಿಐ ಮಾಹಿತಿ ನೀಡಿದೆ.


ರಾಮ್ಕೊ ಸಿಮೆಂಟ್ಸ್ ಅಧ್ಯಕ್ಷರಾಗಿ ಫಾರೂಕಿ ಆಯ್ಕೆ

ಪ್ರಜಾವಾಣಿ ವಾರ್ತೆ


ಬೆಂಗಳೂರು: ರಾಮ್ಕೊ ಸಿಮೆಂಟ್ ಲಿಮಿಟೆಡ್‌ನ ಅಧ್ಯಕ್ಷ ಮತ್ತು ವ್ಯವಸ್ಥಾಪಕ (ಸಿಎಂಡಿ) ಹುದ್ದೆಯನ್ನು ಪ್ರತ್ಯೇಕಿಸಲಾಗಿದ್ದು, ಸ್ವತಂತ್ರ ನಿರ್ದೇಶಕ ಎಂ.ಎಫ್. ಫಾರೂಕಿ ಅವರನ್ನು ಕಂಪನಿಯ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿದೆ.

ಜೂನ್ 4 ರಿಂದ ಇದು ಜಾರಿಗೆ ಬರಲಿದೆ ಎಂದು ಕಂಪನಿ ಪ್ರಕಣೆಯಲ್ಲಿ ತಿಳಿಸಿದೆ. ಸೆಬಿಯ ಕಾರ್ಪೊರೇಟ್ ಆಡಳಿತಕ್ಕೆ ಸಂಬಂಧಿಸಿದ ಸಮಿತಿಯ ಶಿಫಾರಸಿನ ಅನ್ವಯ ಈ ನಿರ್ಧಾರ ತೆಗೆದುಕೊಂಡಿರುವುದಾಗಿ ಕಂಪನಿ ತಿಳಿಸಿದೆ.

ಫಾರೂಕಿ (67 ವರ್ಷ) ಅವರು ನಿವೃತ್ತ ಐಎಎಸ್ ಅಧಿಕಾರಿ ಆಗಿದ್ದಾರೆ. ದೂರಸಂಪರ್ಕ ಮತ್ತು ಬೃಹತ್ ಕೈಗಾರಿಕೆಗಳ ಕಾರ್ಯದರ್ಶಿ, ಆರ್ಥಿಕ ವ್ಯವಹಾರಗಳ ಕಾರ್ಯದರ್ಶಿ ಸೇರಿದಂತೆ ಇನ್ನೂ ಹಲವು ಸರ್ಕಾರಿ ಹುದ್ದೆಗಳಲ್ಲಿ ಅವರು ಕರ್ತವ್ಯ ನಿರ್ವಹಿಸಿದ್ದಾರೆ.



ಎಂ.ಎಫ್. ಫಾರೂಕಿ



ವೆಂಕಟರಾಮ ರಾಜ

ಪಿ.ಆರ್. ವೆಂಕಟರಾಮ ರಾಜ ಅವರು ವ್ಯವಸ್ಥಾಪಕ ನಿರ್ದೇಶಕರಾಗಿ ಮುಂದುವರಿಯಲಿದ್ದಾರೆ. ಇವರ ಅಧಿಕಾರಾವಧಿಯು ಜೂನ್ 3ಕ್ಕೆ ಅಂತ್ಯವಾಗಲಿದ್ದು, ಜೂನ್ 4 ರಿಂದ ಜಾರಿಗೆ ಬರುವಂತೆ ಇನ್ನೂ ಐದು ವರ್ಷಗಳ ಅವಧಿಗೆ ವ್ಯವಸ್ಥಾಪ ನಿರ್ದೇಕರಾಗಿ ಮುಂದುವರಿಸಲು ನಿರ್ದೇಶಕರ ಮಂಡಳಿ ಒಪ್ಪಿಗೆ ನೀಡಿದೆ. ಈ ನೇಮಕ್ಕೆ ಷೇರುದಾರರ ಒಪ್ಪಿಗೆ ದೊರೆಯಬೇಕಿದೆ ಎಂದು ತಿಳಿಸಿದೆ.

ಯುಎಸ್‌ಎಲ್‌ನ 32 ಬ್ರ್ಯಾಂಡ್‌ಗಳು ಇನ್‌ಬ್ರೀವ್ ಬೆವರೇಜಸ್‌ಗೆ

ನವದೆಹಲಿ (ಪಿಟಿಐ): ಡಿಯಾಜಿಯೊ ಒಡೆತನದ ಯುನೈಟೆಡ್ ಸ್ಪಿರಿಟ್ಸ್ ಲಿಮಿಟೆಡ್ (ಯುಎಸ್‌ಎಲ್) ತನ್ನ 32 ಜನಪ್ರಿಯ ಬ್ರ್ಯಾಂಡ್‌ಗಳನ್ನು ಸಿಂಗಪುರದ ಇನ್‌ಬ್ರೀವ್ ಬೆವರೇಜಸ್‌ಗೆ ₹ 820 ಕೋಟಿಗೆ ಮಾರಾಟ ಮಾಡುವುದಾಗಿ ಭಾನುವಾರ ಹೇಳಿದೆ.

ಈ ಕುರಿತು ಎರಡೂ ಕಂಪನಿಗಳು ಜಂಟಿ ಹೇಳಿಕೆ ನೀಡಿವೆ. ಹೇವಾರ್ಡ್ಸ್, ಓಲ್ಡ್ ಟ್ಯಾವರ್ನ್, ವೈಟ್-ಮಿಸ್ಚಿಫ್, ಹನಿಬೀ, ಗ್ರೀನ್ ಲೇಬಲ್ ಮತ್ತು ರೊಮನೋವ್ ಸೇರಿದಂತೆ ಒಟ್ಟಾರೆ 32 ಬ್ರ್ಯಾಂಡ್‌ಗಳನ್ನು ಯುಎಸ್‌ಎಲ್ ಮಾರಾಟ ಮಾಡಲಿದೆ. ಮೆಕ್‌ಡೊನಾಲ್ಡ್ಸ್ ಅಥವಾ ಡೈರೆಕ್ಟರ್ಸ್ ಸ್ಪೆಷಲ್ ಬ್ರ್ಯಾಂಡ್‌ಗಳಲ್ಲಿ ಒಂದನ್ನು ಯುಎಸ್‌ಎಲ್ ತನ್ನಲ್ಲಿಯೇ ಉಳಿಸಿಕೊಳ್ಳಲಿದೆ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಅಲ್ಲದೆ, ಬ್ಯಾಗ್‌ಪೈಪರ್ ಒಳಗೊಂಡು 11 ಬ್ರ್ಯಾಂಡ್‌ಗಳ ಬಗ್ಗೆ ಯುಎಸ್‌ಎಲ್ ಮತ್ತು ಇನ್‌ಬ್ರೀವ್ 5 ವರ್ಷಗಳ ಫ್ರಾಂಚೈಸಿ ಒಪ್ಪಂದವನ್ನೂ ಮಾಡಿಕೊಂಡಿವೆ.

ಸೆಪ್ಟೆಂಬರ್ 30ಕ್ಕೆ ಕೊನೆಗೊಳ್ಳುವ ತ್ರೈಮಾಸಿಕದ ಅಂತ್ಯದ ವೇಳೆಗೆ ಮಾರಾಟದ ಪ್ರಕ್ರಿಯೆಗಳು ಪೂರ್ಣಗೊಳ್ಳುವ ನಿರೀಕ್ಷೆ ಮಾಡಲಾಗಿದೆ.

ಮತ್ತೆ 3 ಅರ್ಜಿ; ಸಹಾಯಕ ಅಡ್ವೊಕೇಟ್ ಕಮಿಷನರ್ ನೇಮಕಕ್ಕೆ ಮನವಿ

ಮಥುರಾ: ಯಥಾಸ್ಥಿತಿಗೆ ಮನವಿ

ಮಥುರಾ (ಪಿಟಿಐ): ಕೃಷ್ಣ ಜನ್ಮಸ್ಥಾನ-ಶಾಹಿ ಈದ್ಗಾ ವಿವಾದ ಪ್ರಕರಣದಲ್ಲಿ, ಮಸೀದಿ ಆವರಣದಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ಕೋರಿ ಇಲ್ಲಿನ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಮೂರು ಅರ್ಜಿಗಳು ಸಲ್ಲಿಕೆಯಾಗಿವೆ.

ಶ್ರೀಕೃಷ್ಣನ ವಂಶಸ್ಥ ಎಂದು ಹೇಳಿಕೊಂಡಿರುವ ಮನೀಶ್ ಯಾದವ್ ಎಂಬುವರು ಮಸೀದಿಯನ್ನು ಸ್ಥಳಾಂತರಿಸಲು ಕೋರಿ ಈ ಮೊದಲು ಅರ್ಜಿ ಸಲ್ಲಿಸಿದ್ದಾರೆ. ಶ್ರೀಕೃಷ್ಣ ವಿರಾಜಮಾನ ಹೆಸರಿನಲ್ಲಿ 2020ರಲ್ಲಿ ಅರ್ಜಿಗಳು ಸಲ್ಲಿಕೆಯಾಗಿದ್ದವು. ಈ ಅರ್ಜಿಗಳಿಗೆ ಪೂರಕವಾಗಿ ಶನಿವಾರ ಮತ್ತೆ ಮೂರು ಅರ್ಜಿಗಳನ್ನು ಸಲ್ಲಿಸಲಾಗಿದೆ.

ಕಟ್ರಾ ಕೇಶವದೇವ ದೇವಸ್ಥಾನಕ್ಕೆ ಸೇರಿದ 13.37 ಎಕರೆ ಪ್ರದೇಶದ ಒಂದು ಭಾಗದಲ್ಲಿ ಮಸೀದಿ ನಿರ್ಮಾಣವಾಗಿದೆ ಎಂದು ಅರ್ಜಿದಾರರು ಈ ಹಿಂದೆ ಪ್ರತಿಪಾದಿಸಿದ್ದರು. ಈ ಮಸೀದಿಯನ್ನು ಸಮೀಕ್ಷೆಗೆ ಒಳಪಡಿಸಲು ಆಗ್ರಹಿಸಿ ಕೋರ್ಟ್ ಮೊರೆ ಹೋಗಲಾಗಿತ್ತು. ನ್ಯಾಯಾಲಯದ ಬೇಸಿಗೆ ರಜೆಯ ಬಳಿಕ, ಜುಲೈ 1ರಂದು ವಿಚಾರಣೆ ಆರಂಭಿಸುವುದಾಗಿ ಕೋರ್ಟ್ ಸಮಯ ನಿಗದಿಪಡಿಸಿತ್ತು.

ಅರ್ಜಿದಾರರು ಮೂರು ಬೇಡಿಕೆಗಳನ್ನು ಮುಂದಿಟ್ಟಿದ್ದಾರೆ. ಯಥಾಸ್ಥಿತಿ ಕಾಯ್ದುಕೊಳ್ಳುವುದು, ನ್ಯಾಯಾಲಯದಿಂದ ಇಬ್ಬರು ಸಹಾಯಕ ಅಡ್ವೊಕೇಟ್ ಕಮಿಷನರ್‌ಗಳನ್ನು ನೇಮಿಸುವುದು ಹಾಗೂ ಈ ಸಹಾಯಕ ಅಡ್ವೊಕೇಟ್ ಕಮಿಷನರ್‌ಗಳು ಸಮೀಕ್ಷೆ ನಡೆಸುವ ಸಮಯದಲ್ಲಿ ಜಿಲ್ಲಾಮಟ್ಟದ ಅಧಿಕಾರಿಗಳ ಉಪಸ್ಥಿತಿ ಇರುವಂತೆ ಆದೇಶಿಸಬೇಕು ಎಂದು ಮನವಿ ಮಾಡಲಾಗಿದೆ.

ಮಸೀದಿಯ ಒಳಗೆ ಹಿಂದೂ ದೇವಸ್ಥಾನಗಳಿಗೆ ಸಂಬಂಧಿಸಿದ ಕೆಲವು ಮಹತ್ವದ ಚಿಹ್ನೆಗಳು ಅಡಗಿವೆ ಎಂದು ಅರ್ಜಿದಾರರು ಪ್ರತಿಪಾದಿಸಿದ್ದಾರೆ. ಬೇಸಿಗೆ ರಜೆಯ ಕಾರಣಕ್ಕೆ ವಿಳಂಬ ಮಾಡಿದರೆ, ಈ ಕುರುಹುಗಳನ್ನು ವಿರೂಪಗೊಳಿಸುವ ಅಥವಾ ಅವುಗಳನ್ನು ಸ್ಥಳದಿಂದ ತೆಗೆದುಹಾಕುವ ಸಾಧ್ಯತೆಯಿದೆ ಎಂದು ಅರ್ಜಿದಾರರ ಪರ ವಕೀಲರು ಕಳವಳ ವ್ಯಕ್ತಪಡಿಸಿದ್ದಾರೆ. ಹೀಗಾಗಿ ಸ್ಥಳದಲ್ಲಿ ಯಥಾಸ್ಥಿತಿಯನ್ನು ಕಾಯ್ದುಕೊಳ್ಳುವುದೊಂದೇ ಸದ್ಯಕ್ಕಿರುವ ಪರಿಹಾರ ಎಂದು ಅರ್ಜಿಯಲ್ಲಿ ಕೋರಲಾಗಿದೆ.

ಸ್ಥಳ ಪರಿಶೀಲನೆ ವೇಳೆ ಹಿರಿಯ ಅಡ್ವೊಕೇಟ್ ಕಮಿಷನರ್‌ಗಳಿಗೆ ಸಹಾಯಕರಾಗಿ ಇಬ್ಬರು ಸಹಾಯಕ ಅಡ್ವೊಕೇಟ್ ಕಮಿನರ್‌ಗಳನ್ನು ನೇಮಿಸಬೇಕು ಎಂದು ಎರಡನೇ ಅರ್ಜಿಯಲ್ಲಿ ಮನವಿ ಮಾಡಲಾಗಿದೆ. ಸಮೀಕ್ಷೆಯ ಸಮಯದಲ್ಲಿ ಜಿಲ್ಲಾಧಿಕಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಮಥುರಾ ಮುಖ್ಯ ವೈದ್ಯಕೀಯ ಅಧಿಕಾರಿ ಹಾಗೂ ಮೇಯರ್ ಅವರು ಹಾಜರಿರಲು ಸೂಚಿಸುವಂತೆ ಕೊನೆಯ ಅರ್ಜಿಯಲ್ಲಿ ಆಗ್ರಹಿಸಲಾಗಿದೆ.

'ಆಗ್ರಾ ಕೋಟೆ: ನಮಾಜ್ ನಿರ್ಬಂಧಿಸಿ'

ಆಗ್ರಾದ ಪ್ರಸಿದ್ಧ ಕೋಟೆಯಲ್ಲಿರುವ ಬೇಗಂ ಮಸೀದಿಯಲ್ಲಿ ನಮಾಜ್‌ಗೆ ನಿರ್ಬಂಧ ವಿಧಿಸಬೇಕು ಎಂದು ಕೋರಿ ಅರ್ಜಿಯೊಂದು ಸಲ್ಲಿಕೆಯಾಗಿದೆ. ಈ ಮಸೀದಿಯ ಮೆಟ್ಟಿಲುಗಳ ಅಡಿಯಲ್ಲಿ ಹಿಂದೂ ದೇವರ ವಿಗ್ರಹಗಳನ್ನು ಹುದುಗಿಸಲಾಗಿದೆ ಎಂದು ಅರ್ಜಿದಾರರು ಪ್ರತಿಪಾದಿಸಿದ್ದಾರೆ.

ಮಹೇಂದ್ರ ಪ್ರತಾಪ್ ಸಿಂಗ್ ಹಾಗೂ ಇತರರು ಸಲ್ಲಿಸಿರುವ ಅರ್ಜಿಯಲ್ಲಿ 'ಮೊಘಲ್ ಚಕ್ರವರ್ತಿ ಔರಂಗಜೇಬನು ಮಥುರಾದ ಶ್ರೀಕೃಷ್ಣ ಜನ್ಮಭೂಮಿ ದೇವಾಲಯವನ್ನು ಧ್ವಂಸಗೊಳಿಸಿ, ಪೂಜಾ ವಿಗ್ರಹಗಳನ್ನು ಆಗ್ರಾ ಕೋಟೆಯ ಮಸೀದಿಯಲ್ಲಿ ಮುಚ್ಚಿಹಾಕಿದ್ದಾನೆ' ಎಂದು ಪ್ರತಿಪಾದಿಸಲಾಗಿದೆ.


'ಪ್ರತೀ ದಿನ ನಮಾಜ್ ಮಾಡಲು ತೆರಳುವವರು ಈ ಮೆಟ್ಟಿಲುಗಳನ್ನು ಹತ್ತಿ ಮಸೀದಿ ಒಳಗೆ ಹೋಗುತ್ತಾರೆ. ಇದರಿಂದ ಹಿಂದೂಗಳ ಭಾವನೆಗಳಿಗೆ ನೋವಾಗುತ್ತಿದೆ. ಹೀಗಾಗಿ ಪ್ರಾರ್ಥನೆಯನ್ನು ನಿಲ್ಲಿಸಬೇಕು' ಎಂದು ಮನವಿ ಸಲ್ಲಿಸಲಾಗಿದೆ. ಆದರೆ ಈ ಮನವಿಯನ್ನು ಕೋರ್ಟ್ ಪುರಸ್ಕರಿಸಲಿಲ್ಲ.

ಪೂಜಾ ಸ್ಥಳಗಳ ಕಾಯ್ದೆ ಪ್ರಶ್ನಿಸಿ 'ಸುಪ್ರೀಂ'ಗೆ ಅರ್ಜಿ

ನವದೆಹಲಿ (ಪಿಟಿಐ): ಪೂಜಾ ಸ್ಥಳಗಳ (ವಿಶೇಷ ಅವಕಾಶಗಳು) ಕಾಯ್ದೆ 1991ರ ಕೆಲವು ಸೆಕ್ಷನ್‌ಗಳ ಸಿಂಧುತ್ವವನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿಯೊಂದು ಸಲ್ಲಿಕೆಯಾಗಿದೆ. ಕಾನೂನಿನ ಮುಂದೆ ಎಲ್ಲರೂ ಸಮಾನರು ಮತ್ತು ಧರ್ಮ, ಜನಾಂಗ, ಜಾತಿ, ಲಿಂಗ ಹಾಗೂ ಹುಟ್ಟಿದ ಸ್ಥಳದ ಆಧಾರದಲ್ಲಿ ತಾರತಮ್ಯ ನಿಷೇಧದಂತಹ ಸಾಂವಿಧಾನಿಕ ಅವಕಾಶಗಳನ್ನು ಈ ಸೆಕ್ಷನ್‌ಗಳು ಉಲ್ಲಂಘಿಸುತ್ತವೆ ಎಂದು ಅರ್ಜಿಯಲ್ಲಿ ಹೇಳಲಾಗಿದೆ.

ದೇಶದಲ್ಲಿರುವ ಪೂಜಾ ಸ್ಥಳಗಳು ಮತ್ತು ತೀರ್ಥಯಾತ್ರೆಯ ಸ್ಥಳಗಳು 1947ರ ಆಗಸ್ಟ್ 15ರಂದು ಹೇಗಿತ್ತೋ ಅದೇ ಸ್ಥಿತಿಯಲ್ಲಿ ಮುಂದುವರಿಯುತ್ತವೆ ಮತ್ತು ಅದರ ಸ್ವರೂಪವನ್ನು ಬದಲಾಯಿಸುವುದಕ್ಕಾಗಿ ಯಾವುದೇ ನ್ಯಾಯಾಲಯದಲ್ಲಿ ದಾವೆ ಹೂಡುವುದಕ್ಕೆ ಅವಕಾಶ ಇಲ್ಲ ಎಂದು ಕೇಂದ್ರವು ಘೋಷಿಸಿದೆ ಎಂದು ಅರ್ಜಿಯಲ್ಲಿ ಹೇಳಲಾಗಿದೆ.

ಮಥುರಾ ನಿವಾಸಿ ದೇವಕೀನಂದನ ಠಾಕೂರ್ ಎಂಬವರು ಅರ್ಜಿ ಸಲ್ಲಿಸಿದ್ದಾರೆ. ಕಾಯ್ದೆಯ 2, 3 ಮತ್ತು 4ನೇ ಸೆಕ್ಷನ್‌ಗಳ ಸಿಂಧುತ್ವವನ್ನು ಪ್ರಶ್ನಿಸಲಾಗಿದೆ. ತಮ್ಮ ಪೂಜಾ ಸ್ಥಳಗಳು, ತೀರ್ಥಯಾತ್ರೆ ಸ್ಥಳಗಳು ಮತ್ತು ತಮ್ಮ ದೇವರ ಆಸ್ತಿಯನ್ನು ನ್ಯಾಯಾಂಗದ ಮೂಲಕ ಹಿಂದಕ್ಕೆ ಪಡೆದುಕೊಳ್ಳುವ ಅವಕಾಶವನ್ನು ಹಿಂದೂಗಳು, ಜೈನರು, ಬೌದ್ಧರು ಮತ್ತು ಸಿಖ್ಖರಿಗೆ ನಿರಾಕರಿಸಲಾಗಿದೆ ಎಂದು ಅರ್ಜಿಯಲ್ಲಿ ದೂರಲಾಗಿದೆ.



'ಹಿಂದೂಗಳು, ಜೈನರು, ಬೌದ್ಧರು ಮತ್ತು ಸಿಖ್ಖರಿಗೆ ಆಗಿರುವ ನಷ್ಟವು ಬಹಳ ದೊಡ್ಡದು. ಏಕೆಂದರೆ, ಕಾಯ್ದೆಯ 2, 3, ಮತ್ತು 4ನೇ ಸೆಕ್ಷನ್‌ನಿಂದಾಗಿ ನ್ಯಾಯಾಂಗದ ಮೂಲಕ ಪರಿಹಾರ ಪಡೆದುಕೊಳ್ಳುವ ಅವಕಾಶವೇ ಇಲ್ಲದಂತಾಗಿದೆ' ಎಂದು ಅರ್ಜಿಯಲ್ಲಿ ಹೇಳಲಾಗಿದೆ.

ಪೂಜಾ ಸ್ಥಳಗಳ ಸ್ವರೂಪ ಬದಲಾವಣೆಯನ್ನು ಸೆಕ್ಷನ್ 3 ನಿಷೇಧಿಸುತ್ತದೆ.

ಮುಖ್ಯಾಂಶಗಳು

- 1991ರ ಕಾಯ್ದೆಯ 2, 3, 4ನೇ ಸೆಕ್ಷನ್ ಅಸಾಂವಿಧಾನಿಕ ಎಂಬ ಪ್ರತಿಪಾದನೆ
- ಕೇಂದ್ರವು ಶಾಸನ ರೂಪಿಸುವ ಅಧಿಕಾರ ಉಲ್ಲಂಘಿಸಿರುವ ಆರೋಪ

1947ರ ಆಗಸ್ಟ್ 15ರಂದು ಇದ್ದ ಪೂಜಾ ಸ್ಥಳಗಳ ಸ್ವರೂಪವನ್ನು ಪ್ರಶ್ನಿಸಿ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸುವ ಅವಕಾಶವನ್ನು ಸೆಕ್ಷನ್ 4 ನಿಷೇಧಿಸುತ್ತದೆ.

ನ್ಯಾಯಾಂಗದ ಪರಿಶೀಲನೆಯ ಅವಕಾಶವನ್ನೇ ನಿಷೇಧಿಸುವ ಮೂಲಕ ಕೇಂದ್ರ ಸರ್ಕಾರವು ತನ್ನ ಶಾಸನ ರೂಪಿಸುವಿಕೆ ಅಧಿಕಾರವನ್ನು ಉಲ್ಲಂಘಿಸಿದೆ. ನ್ಯಾಯಾಂಗದ ಪರಿಶೀಲನೆಯ ಅವಕಾಶವು ಸಂವಿಧಾನದ ಮೂಲ ಸ್ವರೂಪವಾಗಿದೆ ಎಂದು ಅರ್ಜಿಯಲ್ಲಿ ವಾದಿಸಲಾಗಿದೆ.

'ಕೃಷ್ಣ ಜನ್ಮಸ್ಥಾನದ ಪುನರುತ್ಥಾನಕ್ಕಾಗಿ ಹಿಂದೂಗಳು ನೂರಾರು ವರ್ಷಗಳಿಂದ ಹೋರಾಡುತ್ತಿದ್ದಾರೆ. ಶಾಂತಿಯುತವಾದ ಚಳವಳಿ ನಡೆಸುತ್ತಿದ್ದಾರೆ. ಆದರೆ, ಈ ಕಾಯ್ದೆ ರೂಪಿಸುವಾಗ ಕೇಂದ್ರವು ಅಯೋಧ್ಯೆಯ ರಾಮ ಜನ್ಮಭೂಮಿ ಪ್ರಕರಣವನ್ನು ಕಾಯ್ದೆಯ ವ್ಯಾಪ್ತಿಯಿಂದ ಹೊರಗೆ ಇರಿಸಿತು. ಆದರೆ, ಕೃಷ್ಣ ಕೂಡ ವಿಷ್ಣುವಿನ ಅವತಾರವಾಗಿದ್ದರೂ ಕೃಷ್ಣ ಜನ್ಮಸ್ಥಾನವಾದ ಮಥುರಾವನ್ನು ಹೊರಗೆ ಇರಿಸಲಿಲ್ಲ' ಎಂದು ಅರ್ಜಿಯಲ್ಲಿ ಹೇಳಲಾಗಿದೆ.

ಕಾಯ್ದೆಯು ಹಲವು ಕಾರಣಗಳಿಂದಾಗಿ ಅಸಾಂವಿಧಾನಿಕ; ಹಿಂದೂ, ಜೈನ, ಬೌದ್ಧ ಮತ್ತು ಸಿಖ್ಖರ ಪೂಜಾ ಸ್ಥಳಗಳು ಮತ್ತು ತೀರ್ಥಯಾತ್ರೆ ಸ್ಥಳಗಳನ್ನು ನಿರ್ವಹಿಸುವ ಹಕ್ಕನ್ನು ಈ ಕಾಯ್ದೆಯು ಮೊಟಕುಗೊಳಿಸಿದೆ ಎಂದು ಅರ್ಜಿಯಲ್ಲಿ ವಾದಿಸಲಾಗಿದೆ.

1991ರ ಪೂಜಾ ಸ್ಥಳಗಳ (ವಿಶೇಷ ಅವಕಾಶಗಳು) ಕಾಯ್ದೆಯಲ್ಲಿರುವ ವಿವಿಧ ಅವಕಾಶಗಳ ಸಿಂಧುತ್ವವನ್ನು ಪ್ರಶ್ನಿಸಿ ಬಿಜೆಪಿ ಮುಖಂಡ ಅಶ್ವಿನಿ ಉಪಾಧ್ಯಾಯ ಮತ್ತು ಇತರರು ಹಲವು ಅರ್ಜಿಗಳನ್ನು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದ್ದಾರೆ.

ಬಿಹಾರದ ಜಮುಯಿ ಚಿನ್ನದ ನಿಕ್ಷೇಪ ಶೀಘ್ರ ಅನ್ವೇಷಣೆ

ಪಟ್ನಾ (ಪಿಟಿಐ): ಬಿಹಾರದ ಜಮುಯಿ ಜಿಲ್ಲೆಯ 'ದೇಶದ ಅತಿದೊಡ್ಡ' ಚಿನ್ನದ ನಿಕ್ಷೇಪದ ಅನ್ವೇಷಣೆಗೆ ಅನುಮತಿ ನೀಡಲು ಬಿಹಾರ ಸರ್ಕಾರ ನಿರ್ಧರಿಸಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಜಿಎಸ್‌ಐ ಸಮೀಕ್ಷೆ ಪ್ರಕಾರ ಜಮುಯಿ ಜಿಲ್ಲೆಯಲ್ಲಿ 37.6 ಟನ್ ಖನಿಜಯುಕ್ತ ಅದಿರು ಸೇರಿದಂತೆ 222.88 ದಶಲಕ್ಷ ಟನ್ ಚಿನ್ನದ ಸಂಗ್ರಹವಿದೆ. ರಾಜ್ಯದ ಗಣಿ ಮತ್ತು ಭೂವಿಜ್ಞಾನ ಇಲಾಖೆಯು ಜಮುಯಿಯಲ್ಲಿನ ಚಿನ್ನದ ನಿಕ್ಷೇಪಗಳ ಅನ್ವೇಷಣೆಗಾಗಿ ಜಿಎಸ್‌ಐ ಮತ್ತು ಎನ್‌ಎಂಡಿಸಿ ಸೇರಿದಂತೆ ಅನ್ವೇಷಣೆಯಲ್ಲಿ ತೊಡಗಿರುವ ಇತರ ಏಜೆನ್ಸಿಗಳ ಜತೆ ಸಮಾಲೋಚನೆಯಲ್ಲಿ ತೊಡಗಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ ಸಕಲೇಶಪುರ

ಕೂಳೆ	430-450
ನಡುಗೋಲು	500-550
ರಾಶಿ	600-650
ರಾಶಿ ಉತ್ತಮ	650-700
ಜರಡಿ	750-800
ಹೆರಕಿದ್ದು	1100-1150
ಹಸಿರು ಸಾಧಾರಣ	600-700
ಹಸಿರು ಉತ್ತಮ	900-950
ಹಸಿರು ಅತಿ ಉತ್ತಮ	1200-1250
ಕಾಳು ಮೆಣಸು	470

ತಿಪಟೂರು ಕೊಬ್ಬರಿ

ಕನಿಷ್ಠ	13200
ಗರಿಷ್ಠ	13500
ಮಾದರಿ	13500
ಒಟ್ಟು ಆವಕ (ಕ್ವಿಂಟಲ್)	650

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16500	16300	16000	229.45 ಸೆಂಟ್ಸ್
ಎಸಿ	8960	8600	8675	
ಆರ್‌ಪಿ	9600	9900	10000	ಲಂಡನ್
ಆರ್‌ಸಿ	4700	4400	4475	2097ಡಾಲರ್ಸ್



ಗುಜರಾತ್‌ಗೆ ಮೊದಲ ಸಲ, ರಾಜಸ್ಥಾನಕ್ಕೆ 14 ವರ್ಷದ ನಂತರ ಪ್ರಶಸ್ತಿ ಗೆಲ್ಲುವ ಕನಸು

ಟೈಟನ್ಸ್‌ಗೆ 'ರಾಯಲ್' ಸವಾಲು

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಪದಾರ್ಪಣೆ ಆವೃತ್ತಿಯಲ್ಲೇ ಚಾಂಪಿಯನ್ ಆಗುವ ಹುಮ್ಮಸ್ಸಿನಲ್ಲಿರುವ ಗುಜರಾತ್ ಟೈಟನ್ಸ್ ಮತ್ತು 14 ವರ್ಷಗಳ ನಂತರ ಪ್ರಶಸ್ತಿ ಸುತ್ತು ಪ್ರವೇಶಿಸಿರುವ ರಾಜಸ್ಥಾನ ರಾಯಲ್ಸ್ ತಂಡಗಳು ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯ ಫೈನಲ್‌ನಲ್ಲಿ ಭಾನುವಾರ ಮುಖಾಮುಖಿಯಾಗಲಿವೆ.

ಆಸ್ಟ್ರೇಲಿಯಾದ ಸ್ಪಿನ್ ಮಾಂತ್ರಿಕ ಶೇನ್ ವಾರ್ನ್ ಅವರು ನಾಯಕನಾಗಿದ್ದ ಮೊದಲ ಆವೃತ್ತಿಯಲ್ಲಿ ರಾಜಸ್ಥಾನ ರಾಯಲ್ಸ್ ಚಾಂಪಿಯನ್ ಆಗಿತ್ತು. ಈಗ ಶೇನ್ ವಾರ್ನ್ ಇಲ್ಲ. ಎರಡು ತಿಂಗಳ ಹಿಂದೆ ಸಾವಿಗೀಡಾದ ಅವರಿಗೆ ಪ್ರಶಸ್ತಿ ಗೆದ್ದು ಗೌರವ ಸಲ್ಲಿಸುವ ಇರಾದೆಯೂ ರಾಜಸ್ಥಾನ ತಂಡಕ್ಕಿದೆ.

ಟೂರ್ನಿಯುದ್ದಕ್ಕೂ ಅಮೋಘ ಬ್ಯಾಟಿಂಗ್ ಮಾಡಿರುವ ಜೋಸ್ ಬಟ್ಲರ್, ರಾಜಸ್ಥಾನ ತಂಡದ ಕೈ ಹಿಡಿದಿದ್ದಾರೆ. ತಲಾ 4 ಶತಕ ಮತ್ತು ಅರ್ಧಶತಕ ಸಿಡಿಸಿರುವ ಅವರು ಎರಡನೇ ಕ್ವಾಲಿಫೈಯರ್ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡದ ವಿರುದ್ಧ ಸುಲಭ ಜಯಕ್ಕೆ ಕಾರಣರಾಗಿದ್ದರು. ಆರ್‌ಸಿಬಿ ಬೌಲರ್‌ಗಳು ಅವರ ಮುಂದೆ ಕಂಗಾಲಾಗಿದ್ದರು.

ಆರ್‌ಸಿಬಿ ವಿರುದ್ಧ ಅಜೇಯ 106 ರನ್ ಗಳಿಸಿದ ಅವರು ಒಂದೇ ಆವೃತ್ತಿಯಲ್ಲಿ ಅತಿ ಹೆಚ್ಚು ಶತಕ ಸಿಡಿಸಿದ ವಿರಾಟ್ ಕೊಹ್ಲಿ ದಾಖಲೆಯನ್ನು ಸರಿಗಟ್ಟಿದ್ದಾರೆ. ಟೂರ್ನಿಯಲ್ಲಿ ಅತಿ ಹೆಚ್ಚು ರನ್ ಗಳಿಸಿರುವ ಆಟಗಾರರನೂ ಆಗಿದ್ದಾರೆ.

ಹಾರ್ದಿಕ್ ಪಾಂಡ್ಯ ನಾಯಕತ್ವದ ಗುಜರಾತ್ ಎದುರು ನಡೆದ ಮೊದಲ ಕ್ವಾಲಿಫೈಯರ್ ಪಂದ್ಯದಲ್ಲಿ ರಾಜಸ್ಥಾನ 7 ವಿಕೆಟ್‌ಗಳಿಂದ ಸೋತಿತ್ತು. ಆ ಸೋಲಿಗೆ ಸೇಡು ತೀರಿಸಿಕೊಳ್ಳುವ ಬಯಕೆಯೂ ಸಂಜು ಸ್ಯಾಮ್ಸನ್ ನೇತೃತ್ವದ ರಾಜಸ್ಥಾನ ತಂಡಕ್ಕಿದೆ. ಗುಜರಾತ್ ತಂಡಕ್ಕೆ ತವರಿನ ಅಂಗಣದಲ್ಲಿ ಸ್ಥಳೀಯ ಬೆಂಬಲಿಗರ ಪ್ರೋತ್ಸಾಹ ಇದೆ.

ಮಿಲ್ಲರ್, ರಾಹುಲ್, ರಶೀದ್...

'ಕಿಲ್ಲರ್' ಎಂದೇ ಅಡ್ಡಹೆಸರು ಹೊಂದಿರುವ ದಕ್ಷಿಣ ಆಫ್ರಿಕಾದ ಡೇವಿಡ್ ಮಿಲ್ಲರ್ ಅವರೊಂದಿಗೆ ಭಾರತದ ರಾಹುಲ್ ತೇವಾಟಿಯಾ ಗುಜರಾತ್ ತಂಡದ ಮಧ್ಯಮ ಕ್ರಮಾಂಕದ ಶಕ್ತಿಯಾಗಿದ್ದು, ಅಫ್ಗಾನಿಸ್ತಾನದ ಸ್ಪಿನ್ನರ್ ರಶೀದ್ ಖಾನ್ ಬೌಲಿಂಗ್‌ನಲ್ಲೂ ಬ್ಯಾಟಿಂಗ್‌ನಲ್ಲೂ ಮಿಂಚಬಲ್ಲ ಪ್ರತಿಭೆ. ವೇಗದ ಬೌಲಿಂಗ್‌ನಲ್ಲಿ ಮೊಹಮ್ಮದ್ ಶಮಿ ಬಲವೂ ತಂಡಕ್ಕಿದೆ.

ಸಂಜು ಸ್ಯಾಮ್ಸನ್, ದೇವದತ್ತ ಪಡಿಕ್ಕಲ್, ಶಿಮ್ರೊನ್ ಹೆಟ್ಮೆಯರ್ ಮುಂತಾದವರು ರಾಜಸ್ಥಾನ ತಂಡದ ಬ್ಯಾಟಿಂಗ್ ಬಳಗದ ಭರವಸೆಯಾಗಿದ್ದು ಪ್ರಸಿದ್ಧ ಕೃಷ್ಣ, ಟ್ರೆಂಟ್ ಬೌಲ್ಟ್, ಯಜುವೇಂದ್ರ ಚಾಹಲ್ ಮತ್ತು ರವಿಚಂದ್ರನ್ ಅಶ್ವಿನ್ ಯಾವುದೇ ಬ್ಯಾಟರ್‌ಗಳನ್ನು ಕಟ್ಟಿಹಾಕಬಲ್ಲ ಸಾಮರ್ಥ್ಯ ಹೊಂದಿದ್ದಾರೆ.



ಸಂಜು ಸ್ಯಾಮ್ಸನ್ –ಪಿಟಿಐ ಚಿತ್ರ

ಹಾರ್ದಿಕ್ ಪಾಂಡ್ಯ

ಗರಿಷ್ಠ ರನ್ ಗಳಿಸಿದವರು

ಬ್ಯಾಟರ್	ತಂಡ	ಪಂದ್ಯ	ರನ್	ಶ್ರೇಷ್ಠ	ಶತಕ	ಅರ್ಧಶತಕ
ಜೋಸ್ ಬಟ್ಲರ್	ರಾಜಸ್ಥಾನ	16	824	116	4	4
ಹಾರ್ದಿಕ್ ಪಾಂಡ್ಯ	ಗುಜರಾತ್	14	453	87*	-	4
ಡೇವಿಡ್ ಮಿಲ್ಲರ್	ಗುಜರಾತ್	15	449	94*	-	2
ಸಂಜು ಸ್ಯಾಮ್ಸನ್	ರಾಜಸ್ಥಾನ	16	444	55	-	2
ಶುಭಮನ್ ಗಿಲ್	ಗುಜರಾತ್	15	438	96	-	4
ದೇವದತ್ತ ಪಡಿಕ್ಕಲ್	ರಾಜಸ್ಥಾನ	16	374	54	-	1

ಹೆಚ್ಚು ವಿಕೆಟ್ ಗಳಿಸಿದವರು

ಬೌಲರ್	ತಂಡ	ಪಂದ್ಯ	ವಿಕೆಟ್	ಶ್ರೇಷ್ಠ
ಯಜುವೇಂದ್ರ ಚಾಹಲ್	ರಾಜಸ್ಥಾನ	16	26	40ಕ್ಕೆ5
ಮೊಹಮ್ಮದ್ ಶಮಿ	ಗುಜರಾತ್	15	19	25ಕ್ಕೆ3
ರಶೀದ್ ಖಾನ್	ಗುಜರಾತ್	15	18	24ಕ್ಕೆ4
ಪ್ರಸಿದ್ಧ ಕೃಷ್ಣ	ರಾಜಸ್ಥಾನ	16	18	22ಕ್ಕೆ3
ಟ್ರೆಂಟ್ ಬೌಲ್ಟ್	ರಾಜಸ್ಥಾನ	15	15	18ಕ್ಕೆ2
ಲಾಕಿ ಫರ್ಗ್ಯುಸನ್	ಗುಜರಾತ್	12	12	28ಕ್ಕೆ4

ಬಲಾಬಲ

ಗುಜರಾತ್ ಟೈಟನ್ಸ್		ರಾಜಸ್ಥಾನ ರಾಯಲ್ಸ್
15	ಪಂದ್ಯ	16
11	ಜಯ	10
4	ಸೋಲು	6

ಮುಖಾಮುಖಿ 2 ಪಂದ್ಯಗಳಲ್ಲಿ

ತಂಡ	ಜಯ	ಗರಿಷ್ಠ ಸ್ಕೋರ್	ಕನಿಷ್ಠ ಸ್ಕೋರ್
ಗುಜರಾತ್	2	192	191
ರಾಜಸ್ಥಾನ	0	188	155

ಪಂದ್ಯ ಆರಂಭ: ರಾತ್ರಿ 8.00
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್ ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಹಸರಂಗ	ಬೆಂಗಳೂರು	26
ಯಜುವೇಂದ್ರ	ರಾಜಸ್ಥಾನ	26
ಕಗಿಸೊ	ಪಂಜಾಬ್	23

ಆರೆಂಜ್ ಕ್ಯಾಪ್ (ಹೆಚ್ಚು ರನ್ ಗಳಿಸಿದವರು)

ಆಟಗಾರ	ತಂಡ	ರನ್
ಜೋಸ್ ಬಟ್ಲರ್	ರಾಜಸ್ಥಾನ	824
ರಾಹುಲ್	ಲಖನೌ	616
ಕ್ವಿಂಟನ್ ಡಿಕಾಕ್	ಲಖನೌ	508



ಪ್ರಶಸ್ತಿ ಗೆದ್ದ ಸೂಪರ್‌ನೋವಾಸ್ ಆಟಗಾರ್ತಿಯರ ಸಂಭ್ರಮ– ಐಪಿಎಲ್ ವೆಬ್‌ಸೈಟ್ ಚಿತ್ರ

ಸೂಪರ್‌ನೋವಾಸ್ ತಂಡಕ್ಕೆ ಪ್ರಶಸ್ತಿ

ಪುಣೆ (ಪಿಟಿಐ) : ಲೌರಾ ವೊಲ್ವಾರ್ಟ್ (ಔಟಾಗದೆ 65) ಅವರ ಹೋರಾಟಕ್ಕೆ ಜಯ ಒಲಿಯಲಿಲ್ಲ. ಸೂಪರ್‌ನೋವಾಸ್ ತಂಡವು ವೆಲೋಸಿಟಿಯನ್ನು 4 ರನ್ ಗಳಿಂದ ಮಣಿಸಿ ಮಹಿಳಾ ಟಿ20 ಚಾಲೆಂಜ್ ಟೂರ್ನಿಯಲ್ಲಿ ಪ್ರಶಸ್ತಿ ಜಯಿಸಿತು.

ಐಪಿಎಲ್ ಅಂಗವಾಗಿ ಮಹಾರಾಷ್ಟ್ರ ಕ್ರಿಕೆಟ್ ಸಂಸ್ಥೆಯ ಅಂಗಣದಲ್ಲಿ ನಡೆದ ಟೂರ್ನಿಯ ಫೈನಲ್ ಪಂದ್ಯದಲ್ಲಿ ಶನಿವಾರ ಟಾಸ್ ಗೆದ್ದ ವೆಲೋಸಿಟಿ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಬ್ಯಾಟ್ ಮಾಡಿದ ಸೂಪರ್‌ನೋವಾಸ್ 20 ಓವರ್‌ಗಳಲ್ಲಿ ಏಳು ವಿಕೆಟ್‌ಗೆ 165 ರನ್ ಗಳಿಸಿತು. ಗುರಿ ಬೆನ್ನತ್ತಿದ ವೆಲೋಸಿಟಿ ಎಂಟು ವಿಕೆಟ್ ಕಳೆದುಕೊಂಡು 161 ರನ್ ಕಲೆ ಹಾಕಿತು. ವೆಲೋಸಿಟಿ ತಂಡದ ವೊಲ್ವಾರ್ಟ್ 40 ಎಸೆತಗಳಲ್ಲಿ 5 ಬೌಂಡರಿ, ಮೂರು ಸಿಕ್ಸರ್ ಸಿಡಿಸಿದರು. ಅಲಾನ ಕಿಂಗ್ (32ಕ್ಕೆ 3), ಸೋಫಿ ಎಕ್ಲೆಸ್ಟೋನ್ (28ಕ್ಕೆ 2) ಮತ್ತು ಡಿಯಾಂಡ್ರ ದೊತಿನ್ (28ಕ್ಕೆ 2) ಸೂಪರ್‌ನೋವಾಸ್ ಪರ ಬೌಲಿಂಗ್‌ನಲ್ಲಿ ಮಿಂಚಿದರು.

ಅಗ್ರ ಕ್ರಮಾಂಕದ ಪ್ರಿಯಾ ಪೂನಿಯಾ, ಡಿಯಾಂಡ್ರ ದೊತಿನ್ ಮತ್ತು ಹರ್ಮನ್ ಪ್ರೀತ್ ಕೌರ್ ಸೂಪರ್‌ನೋವಾ ಪರ ಅಮೋಘ ಬ್ಯಾಟಿಂಗ್ ಮಾಡಿದರು. ಪ್ರಿಯಾ ಮತ್ತು ಡಿಯಾಂಡ್ರ ಮೊದಲ ವಿಕೆಟ್‌ಗೆ ಇಬ್ಬರೂ 73 ರನ್ ಸೇರಿಸಿದರು. ಡಿಯಾಂಡ್ರ 4 ಸಿಕ್ಸರ್ ಮತ್ತು 1 ಬೌಂಡರಿಯೊಂದಿಗೆ 44 ಎಸೆತಗಳಲ್ಲಿ 62 ರನ್ ಗಳಿಸಿದರೆ, ಹರ್ಮನ್‌ಪ್ರೀತ್ ಕೌರ್ 3 ಸಿಕ್ಸರ್ ಸಿಡಿಸಿದರು. 29 ಎಸೆತಗಳಲ್ಲಿ 43 ರನ್ ಗಳಿಸಿದರು. ಸೂಪರ್‌ನೋವಾಸ್ ತಂಡವು ಮೂರನೇ ಬಾರಿ ಟೂರ್ನಿಯ ಪ್ರಶಸ್ತಿ ಜಯಿಸಿದ ಸಾಧನೆ ಮಾಡಿತು.

ಸ್ಕೋರ್ ಕಾರ್ಡ್

ಸೂಪರ್‌ನೋವಾಸ್ 7ಕ್ಕೆ 165 (20 ಓವರ್)
ಪ್ರಿಯಾ ಸಿ ವೊಲ್ವಾರ್ಟ್ ಬಿ ಸಿಮ್ರನ್ 28 (29 ಎ, 4x2), ಡಿಯಾಂಡ್ರ ಬಿ ದೀಪ್ತಿ 62 (44 ಎ, 4x1, 6x4), ಹರ್ಮನ್‌ಪ್ರೀತ್ ಸಿ ಶಫಾಲಿ ಬಿ ಕ್ರಾಸ್ 43 (29 ಎ, 4x1, 6x3), ಪೂಜಾ ಬಿ ಅಯಬೊಂಗ 5 (5 ಎ), ಸೋಫಿ ಸಿ ಯಸ್ತಿಕಾ ಬಿ ಕ್ರಾಸ್ 2 (3 ಎ), ಸೂನ್ ಲೂಜ್ ಸಿ ರಾಧಾ ಬಿ ದೀಪ್ತಿ 3 (4 ಎ), ಹರ್ಲೀನ್ ಸಿ ದೀಪ್ತಿ ಬಿ ಸಿಮ್ರನ್ 7 (8 ಎ), ಅಲಾನ ಔಟಾಗದೆ 6 (2 ಎ)
ಇತರೆ (ಲೆಗ್‌ಬೈ 1, ನೋಬಾಲ್ 4, ವೈಡ್ 4) 9
ವಿಕೆಟ್ ಪತನ: 1-73 (ಪ್ರಿಯಾ ಪೂನಿಯಾ, 9.3), 2-131 (ಡಿಯಾಂಡ್ರ ದೊತಿನ್, 14.6), 3-144 (ಪೂಜಾ ವಸ್ತ್ರಕಾರ್, 16.4), 4-148 (ಹರ್ಮನ್‌ಪ್ರೀತ್ ಕೌರ್, 17.3), 5-149 (ಸೋಫಿ ಎಕ್ಲೆಸ್ಟೋನ್, 17.5), 6-155 (ಸೂನ್ ಲೂಜ್, 18.6), 7-165 (ಹರ್ಲೀನ್ ಡಿಯೋಲ್, 19.6)
ಬೌಲಿಂಗ್: ಕೇಟ್ ಕ್ರಾಸ್ 4-0-29-2, ದೀಪ್ತಿ ಶರ್ಮಾ 4-0-20-2, ಅಯಬೊಂಗ ಖಾಕ 4-0-27-1, ಸ್ನೇಹ್ ರಾಣಾ 2-0-27-0, ಸಿಮ್ರನ್ ಬಹದ್ದೂರ್ 4-0-30-2, ರಾಧಾ ಯಾದವ್ 2-0-31-0

ವೆಲೋಸಿಟಿ 8ಕ್ಕೆ 161 (20 ಓವರ್)
ಶಫಾಲಿ ಸಿ ತಾನಿಯಾ ಬಿ ಡಿಯಾಂಡ್ರ 15 (8ಎ, 4X3), ಯಸ್ತಿಕಾ ಸಿ ಮತ್ತು ಬಿ ಎಕ್ಲೆಸ್ಟೋನ್ 13 (9ಎ, 4X3), ಕಿರಣ್ ಬಿ ಎಕ್ಲೆಸ್ಟೋನ್ 0 (13ಎ), ಚಾಂಥಮ್ ಎಲ್‌ಬಿಡಬ್ಲ್ಯು ಪೂಜಾ 6 (13ಎ), ಲೌರಾ ಔಟಾಗದೆ 65 (40ಎ, 4X5, 6X3), ದೀಪ್ತಿ ಸಿ ಪೂಜಾ ಬಿ ಅಲಾನ 2 (5ಎ), ಸ್ನೇಹ್ ಬಿ ಅಲಾನ 15 (15ಎ, 4X2), ರಾಧಾ ಸಿ ಕೌರ್ ಬಿ ಅಲಾನ 0 (1ಎ), ಕೇಟ್ ಸಿ ತಾನಿಯಾ ಬಿ ಡಿಯಾಂಡ್ರ 13 (7ಎ, 4X2), ಸಿಮ್ರನ್ ಔಟಾಗದೆ 20 (10ಎ, 4X3, 6X1)
ಇತರೆ (ಬೈ 1, ಲೆಗ್‌ಬೈ 1, ನೋಬಾಲ್ 1, ವೈಡ್ 9) 12
ವಿಕೆಟ್ ಪತನ: 1-29 (ಶಫಾಲಿ ವರ್ಮಾ, 2.1), 2-36 (ಯಸ್ತಿಕಾ ಭಾಟಿಯಾ, 3.3), 3-38 (ಕಿರಣ್ ಪ್ರಭು ನವ್‌ಗಿರೆ, 5.4), 4-58 (ನಥಕನ್ ಚಾಂಥಮ್, 8.6), 5-64 (ದೀಪ್ತಿ ಶರ್ಮಾ, 10.6), 6-104 (ಸ್ನೇಹ್ ರಾಣಾ, 15.3), 7-104 (ರಾಧಾ ಯಾದವ್, 15.4), 8-117 (ಕೇಟ್ ಕ್ರಾಸ್, 16.5)
ಬೌಲಿಂಗ್: ಮಾನಸಿ ಜೋಷಿ 1-0-17-0, ಸೋಫಿ ಎಕ್ಲೆಸ್ಟೋನ್ 4-0-28-2, ಡಿಯಾಂಡ್ರ ದೊತಿನ್ 4-1-28-2, ಪೂಜಾ ವಸ್ತ್ರಕಾರ್ 3-0-32-1, ರಾಶಿ ಕನೋಜಿಯಾ 4-0-22-0, ಅಲಾನ ಕಿಂಗ್ 4-0-32-3

ಫಲಿತಾಂಶ: ಸೂಪರ್‌ನೋವಾಸ್‌ಗೆ 4 ರನ್ ಜಯ ಮತ್ತು ಪ್ರಶಸ್ತಿ

ಫ್ರೆಂಚ್ ಓಪನ್ ಟೆನಿಸ್: ಸ್ವೆಟೆಕ್, ಮೆಡ್ವೆಡೆವ್ ಮುನ್ನಡೆ

ಪ್ಯಾರಿಸ್ (ಎಎಫ್‌ಪಿ/ರಾಯಿಟರ್ಸ್): ಸತತ 31ನೇ ಪಂದ್ಯದಲ್ಲಿ ಗೆಲುವು ಸಾಧಿಸಿದ ಪೋಲೆಂಡ್‌ನ ಇಗಾ ಸ್ವೆಟೆಕ್ ಮತ್ತು ಡೇನಿಯಲ್ ಮೆಡ್ವೆಡೆವ್ ಅವರು ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ ಮಹಿಳಾ ಮತ್ತು ಪುರುಷರ ಸಿಂಗಲ್ಸ್ ವಿಭಾಗದ ಪ್ರೀಕ್ವಾರ್ಟರ್‌ಫೈನಲ್‌ಗೆ ಲಗ್ಗೆಯಿಟ್ಟರು.

ವಿಶ್ವ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನದಲ್ಲಿರುವ, 2020ರ ಆವೃತ್ತಿಯ ಚಾಂಪಿಯನ್ ಸ್ವೆಟೆಕ್ ಮೂರನೇ ಸುತ್ತಿನ ಪಂದ್ಯದಲ್ಲಿ 6-3, 7-5ರಿಂದ ಮಾಂಟೆನೆಗ್ರೊದ ಡಂಕಾ ಕೊವಿನಿಚ್ ಅವರನ್ನು ಪರಾಭವಗೊಳಿಸಿದರು. ಮೆಡ್ವೆಡೆವ್ ಮೂರನೇ ಸುತ್ತಿನ ಪಂದ್ಯದಲ್ಲಿ 6-2, 6-4, 6-2ರಿಂದ ಸರ್ಬಿಯಾದ ಮಿಯೊಮಿರ್ ಕೆಸ್ಮೊನೊವಿಚ್ ಸವಾಲು ಮೀರಿದರು.ಪುರುಷರ ಸಿಂಗಲ್ಸ್ ವಿಭಾಗದ ಮೂರನೇ ಸುತ್ತಿನ ಇನ್ನುಳಿದ ಪಂದ್ಯಗಳಲ್ಲಿ ಇಟಲಿಯ ಜಾನಿಕ್ ಸಿನ್ನರ್ 6-3, 7-6 (8/6), 6-3ರಿಂದ ಅಮೆರಿಕದ ಮೆಕೆಂಜಿ ಮೆಕ್‌ಡೊನಾಲ್ಡ್ ಎದುರು, ಆ್ಯಂಡ್ರೆ ರುಬ್ಲೆವ್ 6-4, 3-6, 6-2, 7-6 (13/11)ರಿಂದ ಚಿಲಿಯ ಕ್ರಿಸ್ಟಿಯನ್ ಗರಿನ್ ಎದುರು ಜಯ ಗಳಿಸಿದರು.

ಕ್ವಾರ್ಟರ್‌ಫೈನಲ್‌ಗೆ ಬೋಪಣ್ಣ ಜೋಡಿ: ಭಾರತದ ರೋಹನ್ ಬೋಪಣ್ಣ ಮತ್ತು ನೆದರ್ಲೆಂಡ್ಸ್‌ನ ಮ್ಯಾಟ್ವೆ ಮಿಡಲ್ ಕೂಪ್ ಜೋಡಿಯು ವಿಂಬಲ್ಡನ್ ಚಾಂಪಿಯನ್ ಆಟಗಾರರಿಗೆ ಆಘಾತ ನೀಡಿ ಪುರುಷರ ಡಬಲ್ಸ್ ವಿಭಾಗದಲ್ಲಿ ಟೂರ್ನಿಯ ಕ್ವಾರ್ಟರ್‌ಫೈನಲ್ ಪ್ರವೇಶಿಸಿತು. ಬೋಪಣ್ಣ ಜೋಡಿ 6-7 (5) 7-6(3) 7-6 (10)ರಿಂದ ಕ್ರೊವೇಷ್ಯಾದ ಮೇಟ್ ಪಾವಿಚ್ ಮತ್ತು ನಿಕೋಲ್ ಮೆಕ್ಟಿಚ್ ವಿರುದ್ಧ ಗೆದ್ದರು.

ಬಡೋಸಾ ಹೊರಕ್ಕೆ: ಸ್ಪೇನ್ ಆಟಗಾರ್ತಿ, ಮೂರನೇ ಶ್ರೇಯಾಂಕದ ಪೌಲಾ ಬಡೋಸಾ ಗಾಯದ ಹಿನ್ನೆಲೆಯಲ್ಲಿ ಮೂರನೇ ಸುತ್ತಿನ ಪಂದ್ಯದಿಂದ ಹಿಂದೆ ಸರಿದರು.



ಇಗಾ ಸ್ವೆಟೆಕ್– ಎಎಫ್‌ಪಿ ಚಿತ್ರ


ರಾಜ್ಯ ಈಜು ಕೂಟ: ನಾಲ್ಕು ದಾಖಲೆ

• ಇಮಾಮ್‌ಹುಸೇನ್ ಗೂಡುನವರ

ಬೆಳಗಾವಿ: ವಿಹಿಥಾ ನಯನಾ, ರಿಧಿಮಾ ವೀರೇಂದ್ರಕುಮಾರ, ಹಾಷಿಕಾ ರಾಮಚಂದ್ರ, ಧೀನಿಧಿ ದೇಸಿಂಗು ಅವರು ರಾಜ್ಯ ಈಜು ಸಂಸ್ಥೆ, ಕೆಎಲ್‌ಇ ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಅಕಾಡೆಮಿ ಸಹಯೋಗದಲ್ಲಿ ಇಲ್ಲಿನ ಸುವರ್ಣ ಜೆಎನ್‌ಎಂಸಿ ಕೊಳದಲ್ಲಿ ನಡೆಯುತ್ತಿರುವ ರಾಜ್ಯ ಜೂನಿಯರ್ ಈಜು ಚಾಂಪಿಯನ್‌ಷಿಪ್‌ನಲ್ಲಿ ಶನಿವಾರ ದಾಖಲೆ ಬರೆದರು.

4x100 ಮೆಡ್ಲೆಯಲ್ಲಿ ಬಸವನಗುಡಿ ಈಜು ಕೇಂದ್ರದ 'ಎ' ತಂಡ (4:39.05ಸೆ.), ಕೆಎಆರ್ ತಂಡದ (4:32.69ಸೆ.) ಹೆಸರಿನಲ್ಲಿದ್ದ ದಾಖಲೆ ಮುರಿಯಿತು. ಬಾಲಕಿಯರ (ಜೂನಿಯರ್ ಗುಂಪು–2) 50 ಮೀ. ಬ್ಯಾಕ್‌ಸ್ಟ್ರೋಕ್‌ನಲ್ಲಿ ಬಸವನಗುಡಿ ಈಜು ಕೇಂದ್ರದ ವಿಹಿಥಾ (34.96ಸೆ.), ಆಲಿಯಾಯ್ ಸಿಂಗ್ (35.41ಸೆ.) ಅವರ ದಾಖಲೆ ಮುರಿದರು. (ಜೂನಿಯರ್ ಗುಂಪು–1) 200 ಮೀ. ಬ್ಯಾಕ್‌ಸ್ಟ್ರೋಕ್‌ನಲ್ಲಿ ಬಸವನಗುಡಿ ಈಜು ಕೇಂದ್ರದ ರಿಧಿಮಾ (2:25.21ಸೆ.), ಮಾನಾ ಪಟೇಲ್ (2:21.14ಸೆ.) ಅವರ ದಾಖಲೆ ಮುರಿದರು. ಈ ಮೂಲಕ 3ನೇ ದಿನವೂ ಚಿನ್ನದ ಪದಕಕ್ಕೆ ಮುತ್ತಿಕ್ಕಿದರು. ಬಾಲಕಿಯರ (ಜೂನಿಯರ್ ಗುಂಪು–2) 100 ಮೀ. ಫ್ರೀಸ್ಟೈಲ್‌ನಲ್ಲಿ ಡಾಲ್ಫಿನ್ ಈಜುಕೇಂದ್ರದ ಧೀನಿಧಿ ದೇಸಿಂಗು (59.64ಸೆ.), ಮಾನಾ ಪಟೇಲ್ (59.12ಸೆ.) ಅವರ ದಾಖಲೆ ಹಿಂದಿಕ್ಕಿದರು.

ನಾಲ್ಕನೇ ದಿನದ ಫಲಿತಾಂಶಗಳು: ಬಾಲಕರ ವಿಭಾಗ(ಜೂನಿಯರ್): ಗುಂಪು–1ರ 50 ಮೀ. ಬ್ರೆಸ್ಟ್‌ಸ್ಟ್ರೋಕ್: ವಿದಿಥ್ ಶಂಕರ(ಡಾಲ್ಫಿನ್ ಈಜು ಕೇಂದ್ರ;30.65ಸೆ)–1, ಆದಿಥ್ ಓಲೇಟಿ(31.70ಸೆ.)–2, ಶುಭಾಂಗ ಕುಬೇರ್(ಇಬ್ಬರೂ ಬಸವನಗುಡಿ ಈಜು ಕೇಂದ್ರ;32.10ಸೆ.)–3; ಗುಂಪು–2ರ 50 ಮೀ. ಬ್ರೆಸ್ಟ್‌ಸ್ಟ್ರೋಕ್: ಆರ್.ನವನೀತ ಗೌಡ(ಡಾಲ್ಫಿನ್ ಈಜು ಕೇಂದ್ರ;34.02ಸೆ.)–1, ದಕ್ಷ ಎಂ.(34.66ಸೆ.)–2, ಸಪ್ತಶ್ವ ಬ್ಯಾನರ್ಜಿ(ಇಬ್ಬರೂ ಬಸವನಗುಡಿ ಈಜು ಕೇಂದ್ರ;35.60ಸೆ.)–3; ಗುಂಪು–1ರ 200 ಮೀ. ಬ್ಯಾಕ್‌ಸ್ಟ್ರೋಕ್: ಉತ್ಕರ್ಷ ಪಾಟೀಲ(ಬಸವನಗುಡಿ ಈಜು ಕೇಂದ್ರ;2:07.59ಸೆ.)–1, ಅಕ್ಷಯ ಶೇತ್(ಗ್ಲೋಬಲ್ ಈಜು ಕೇಂದ್ರ;2.15.46ಸೆ.)–2, ಆಕಾಶ ಮಾಣಿ(-ಬಸವನಗುಡಿ ಈಜು ಕೇಂದ್ರ;2.18.77)–3. ಸಬ್ ಜೂನಿಯರ್ ವಿಭಾಗ: ಗುಂಪು–3ರ 50 ಮೀ. ಬ್ರೆಸ್ಟ್‌ಸ್ಟ್ರೋಕ್: ಜಾಸ್ ಸಿಂಗ್(ಮತ್ಸ್ಯ ಐಎನ್‌ಸಿ;36.45ಸೆ.)–1, ವೈ.ರೆಯಾಂಶ ಕಂಠಿ(ಬಸವನಗುಡಿ ಈಜು ಕೇಂದ್ರ;39.55ಸೆ.)–2, ಅಥರ್ವ್ ಪಾಲ್‌ಸಿಂಗ್ ರಾಥೋಡ್(ಡಾಲ್ಫಿನ್ ಈಜು ಕೇಂದ್ರ;41.39ಸೆ.)–3; ಬಾಲಕಿಯರ ವಿಭಾಗ(ಜೂನಿಯರ್): ಗುಂಪು–2ರ 50 ಮೀ. ಬ್ರೆಸ್ಟ್‌ಸ್ಟ್ರೋಕ್: ವಿಹಿಥಾ ನಯನಾ(34.96ಸೆ.)–1, ಮಾನವಿ ವರ್ಮಾ(35.39ಸೆ.)–2, ಹಿಯಾ ಮಚಂಡಾ(ಇಬ್ಬರೂ ಡಾಲ್ಫಿನ್ ಈಜು ಕೇಂದ್ರ;37.34ಸೆ.)–3; ಗುಂಪು–1ರ 50 ಮೀ. ಬ್ರೆಸ್ಟ್‌ಸ್ಟ್ರೋಕ್: ಎಸ್.ಲಕ್ಷ್ಯ(ಬಸವನಗುಡಿ ಈಜು ಕೇಂದ್ರ; 35.84ಸೆ.)–1, ದಿಯಾ ಮಧುಕರ(ಡಾಲ್ಫಿನ್ ಈಜು ಕೇಂದ್ರ; 36.08ಸೆ.)–2, ಲಿನೇಯ್ಯಾ ಅನಿಲಕುಮಾರ(ಗ್ಲೋಬಲ್ ಈಜು ಕೇಂದ್ರ;36.10ಸೆ.)–3; ಗುಂಪು–1ರ 200 ಮೀ. ಬ್ಯಾಕ್‌ಸ್ಟ್ರೋಕ್: ರಿಧಿಮಾ ವೀರೇಂದ್ರಕುಮಾರ(ಬಸವನಗುಡಿ ಈಜು ಕೇಂದ್ರ;2:25.21ಸೆ.)–1, ಶಾಲಿನಿ ದೀಕ್ಷಿತ(ಡಾಲ್ಫಿನ್ ಈಜು ಕೇಂದ್ರ;2:30.10ಸೆ.)–2, ರಿತು ಭರಮರೆಡ್ಡಿ(ಬಸವನಗುಡಿ ಈಜು ಕೇಂದ್ರ;2:36.12ಸೆ.)–3. ಸಬ್ ಜೂನಿಯರ್ ವಿಭಾಗ: ಗುಂಪು–3ರ 50 ಮೀ. ಬ್ರೆಸ್ಟ್‌ಸ್ಟ್ರೋಕ್: ಸಾನ್ವಿ ಮೈಗೂರ(ಡಿಕೆವಿ ಈಜು ಕೇಂದ್ರ;41.10ಸೆ.)–1, ಶೆಲಿನ್ ಸುನೀಲ(ಡಾಲ್ಫಿನ್ ಈಜು ಕೇಂದ್ರ;43.15ಸೆ.)–2, ಸ್ಪರ್ಶ ಹರೀಷ್(ಪೂಜಾ ಈಜು ಕೇಂದ್ರ;43.44ಸೆ.)–3; ಗುಂಪು ವಿಭಾಗ: ಬಾಲಕರ 4x50 ಫ್ರೀಸ್ಟೈಲ್: ಬಸವನಗುಡಿ ಈಜು ಕೇಂದ್ರ 'ಎ'–1, ಮತ್ಸ್ಯ ಐಎನ್‌ಸಿ1–2, ಡಾಲ್ಫಿನ್ ಈಜು ಕೇಂದ್ರದ 'ಎ'–3. 4x100 ಮೀ. ಮೆಡ್ಲೆ: ಬಸವನಗುಡಿ ಈಜು ಕೇಂದ್ರ 'ಎ'–1, ಡಾಲ್ಫಿನ್ ಈಜು ಕೇಂದ್ರ 'ಎ'–2, ಬಿಸಿಎ 'ಬಿ'–3; ಬಾಲಕಿಯರ ವಿಭಾಗ: 4x50 ಮೀ ಫ್ರೀಸ್ಟೈಲ್: ಡಾಲ್ಫಿನ್ ಈಜು ಕೇಂದ್ರ 'ಎ'–1, ಡಾಲ್ಫಿನ್ ಈಜು ಕೇಂದ್ರ 'ಬಿ'–2, ಡಿಕೆವಿ ಈಜು ಕೇಂದ್ರ–3; 4x100 ಮೆಡ್ಲೆ: ಬಸವನಗುಡಿ ಈಜು ಕೇಂದ್ರ 'ಎ'–1, ಡಾಲ್ಫಿನ್ ಈಜು ಕೇಂದ್ರ 'ಎ'–2, ಡಾಲ್ಫಿನ್ ಈಜು ಕೇಂದ್ರ ಬಿ–3.



50 ಮೀ. ಬ್ರೆಸ್ಟ್‌ಸ್ಟ್ರೋಕ್‌ನಲ್ಲಿ ಮೊದಲ ಮೂರು ಸ್ಥಾನ ಗಳಿಸಿದವರು. (ಎಡದಿಂದ): ಲಿನೇಯ್ಯಾ ಅನಿಲಕುಮಾರ, ಎಸ್.ಲಕ್ಷ್ಯ, ದಿಯಾ ಮಧುಕರ –ಪ್ರಜಾವಾಣಿ ಚಿತ್ರ

ಹಾಕಿ: ಭಾರತ ಜಯಭೇರಿ

ಜಕಾರ್ತ (ಪಿಟಿಐ): ಎರಡು ಅಮೋಘ ಫೀಲ್ಡ್‌ಗೋಲುಗಳನ್ನು ಗಳಿಸಿದ ಭಾರತ ತಂಡ ಏಷ್ಯಾಕಪ್ ಹಾಕಿ ಟೂರ್ನಿಯ ಸೂಪರ್–4ರ ಹಂತದ ಮೊದಲ ಪಂದ್ಯದಲ್ಲಿ ಜಯಭೇರಿ ಮೊಳಗಿಸಿತು. ಶನಿವಾರ ನಡೆದ ಹಣಾಹಣಿಯಲ್ಲಿ ಜಪಾನ್ ತಂಡವನ್ನು ಭಾರತ 2–1ರಲ್ಲಿ ಮಣಿಸಿತು. ಈ ಮೂಲಕ ಗುಂಪು ಹಂತದಲ್ಲಿ ಅನುಭವಿಸಿದ್ದ ಸೋಲಿಗೆ ಪ್ರತೀಕಾರ ತೀರಿಸಿತು.

8ನೇ ನಿಮಿಷದಲ್ಲಿ ಮಂಜೀತ್ ಗಳಿಸಿದ ಸುಂದರ ಗೋಲಿನೊಂದಿಗೆ ಭಾರತ ಮುನ್ನಡೆ ಸಾಧಿಸಿತು. ಪವನ್ ರಾಜ್‌ಭರ್ ಅವರಿಂದ ಪಾಸ್ ಪಡೆದು ಎಡಭಾಗದಲ್ಲಿ ಚೆಂಡನ್ನು ನಿಯಂತ್ರಿಸಿದ ಅವರು ಏಕಾಂಗಿಯಾಗಿ ಮುನ್ನುಗ್ಗಿದರು. ನಾಲ್ವರು ಡಿಫೆಂಡರ್‌ಗಳನ್ನು ವಂಚಿಸಿ ಮುಂದೆ ಸಾಗಿದ ಅವರು ಮಿಂಚಿನ ವೇಗದಲ್ಲಿ ಗುರಿಮುಟ್ಟಿಸಿದರು. ಗೋಲ್‌ಕೀಪರ್ ಟಕಶಿ ಯೊಶಿಕವ ನೋಡುತ್ತಿದ್ದಂತೆಯೇ ಚೆಂಡು ಗೋಲುಪೆಟ್ಟಿಗೆಯ ಒಳಗೆ ಸೇರಿತು.

13ನೇ ನಿಮಿಷದಲ್ಲಿ ಭಾರತಕ್ಕೆ ಪೆನಾಲ್ಟಿ ಕಾರ್ನರ್ ಅವಕಾಶ ಲಭಿಸಿತು. ಆದರೆ ನೀಲಂ ಸಂಜೀವ್ ಕ್ಸೆಸ್ ಅವರ ಪ್ರಯತ್ನಕ್ಕೆ ಫಲ ಸಿಗಲಿಲ್ಲ. 18ನೇ ನಿಮಿಷದಲ್ಲಿ ತಾಕುಮಾ ನಿವಾ ಗೋಲು ಗಳಿಸಿ ಜಪಾನ್‌ಗೆ ಸಮಬಲ ಗಳಿಸಿಕೊಟ್ಟರು. ಪೆನಾಲ್ಟಿ ಕಾರ್ನರ್ ಅವಕಾಶದಲ್ಲಿ ಕೆನ್ ನಗಯೋಶಿ ಅವರ ಫ್ಲಿಕ್ ಯಶಸ್ಸು ಕಾಣಲಿಲ್ಲ. ಗೋಲ್‌ಕೀಪರ್ ಸೂರಜ್ ಕರ್ಕೇರಾ ಅವರ ಸ್ಟಿಕ್‌ಗೆ ಬಡಿದು ವಾಪಸಾದ ಚೆಂಡನ್ನು ತಾಕುಮಾ ಸುಲಭವಾಗಿ ಗುರಿಯತ್ತ ತಳ್ಳಿದರು. ಈ ನಡುವೆ ಕಾರ್ತಿ ಸೆಲ್ವಂ ಅವರು ಚಿನ್ನದಂಥ ಅವಕಾಶವನ್ನು ಕೈಚೆಲ್ಲಿದರು. 35ನೇ ನಿಮಿಷದಲ್ಲಿ ಪವನ್ ರಾಜಭರ್ ಅವರು ಭಾರತವನ್ನು ಮತ್ತೆ ಮುನ್ನಡೆಯ ಹಾದಿಯಲ್ಲಿ ನಡೆಸಿದರು. ಉತ್ತಮ್ ಸಿಂಗ್ ಚಾಣಾಕ್ಷತನ ಮೆರೆದು ತಂದುಕೊಟ್ಟ ಚೆಂಡನ್ನು ಪವನ್ ಮಿಂಚಿನ ವೇಗದಲ್ಲಿ ಗುರಿಯತ್ತ ಹೊಡೆದರು.

ಐದು ನಿಮಿಷಗಳ ನಂತರ ಭಾರತ ಮತ್ತೊಮ್ಮೆ ಪೆನಾಲ್ಟಿ ಕಾರ್ನರ್ ಅವಕಾಶ ಬಿಟ್ಟುಕೊಟ್ಟಿತು. ಆದರೆ ಜಪಾನ್ ಯಶಸ್ಸು ಸಾಧಿಸಲಿಲ್ಲ. ಸಮಬಲಕ್ಕಾಗಿ ಹೋರಾಡಿದ ಜಪಾನ್ ಆಟಗಾರರು ಭಾರತದ ಮೇಲೆ ಸತತ ಒತ್ತಡ ಹೇರಲು ಪ್ರಯತ್ನಿಸಿತು.

ಸೂಪರ್–4 ಹಂತದ ಇಂದಿನ ಪಂದ್ಯಗಳು

ಜಪಾನ್–ಕೊರಿಯಾ	
ಆರಂಭ	ಮಧ್ಯಾಹ್ನ 2.30
ಭಾರತ–ಮಲೇಷ್ಯಾ	
ಆರಂಭ	ಸಂಜೆ 5.00
ಸಮಯ	ಭಾರತೀಯ ಕಾಲಮಾನ

ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಡಾನ್‌ಬಾಸ್ ಸಂಪೂರ್ಣ ವಿಮೋಚನೆಗೆ ದಾಳಿ ತೀವ್ರಗೊಳಿಸಿದ ರಷ್ಯಾ ಪಡೆ

ಲೈಮೆನ್ ನಗರ ರಷ್ಯಾ ವಶಕ್ಕೆ

ಕೀವ್(ಎಪಿ/ರಾಯಿಟರ್ಸ್/ಎಎಫ್‌ಪಿ): ಉಕ್ರೇನ್ ಮೇಲೆ 3 ತಿಂಗಳಿನಿಂದ ಸೇನಾ ಕಾರ್ಯಾಚರಣೆ ನಡೆಸುತ್ತಿರುವ ರಷ್ಯಾ, ಉಕ್ರೇನ್ ಪೂರ್ವದಲ್ಲಿನ ಮತ್ತೊಂದು ನಗರ ಲೈಮೆನ್ ವಶಪಡಿಸಿಕೊಂಡಿದೆ.

ಡೊನೆಟ್‌ಸ್ಕ್ ಪೀಪಲ್ಸ್ ರಿಪಬ್ಲಿಕ್ ಮತ್ತು ರಷ್ಯಾ ಸೇನೆಯ ಜಂಟಿ ಕಾರ್ಯಾಚರಣೆಯಲ್ಲಿ ಪ್ರಮುಖ ಆಯಕಟ್ಟಿನ ನಗರವನ್ನು ಉಕ್ರೇನ್ ಹಿಡಿತದಿಂದ ವಿಮೋಚನೆಗೊಳಿಸಲಾಗಿದೆ ಎಂದು ರಷ್ಯಾ ಸೇನೆ ಶನಿವಾರ ಹೇಳಿದೆ.

ಡಾನ್‌ಬಾಸ್ ವಶಕ್ಕೆ ಸೆವೆರೊಡೊನೆಟ್‌ಸ್ಕ್ ಮತ್ತು ಲಿಸಿಚನ್‌ಸ್ಕ್ ಕಡೆಗೆ ರಷ್ಯಾ ಪಡೆಗಳು ನುಗ್ಗುತ್ತಿದ್ದು, ಉಕ್ರೇನ್‌ನ ಪೂರ್ವದ ಬಾಖ್‌ಮಟ್‌ನಲ್ಲಿ ದಾಳಿ ತೀವ್ರಗೊಳಿಸುವ ಎಚ್ಚರಿಕೆ ನೀಡಿವೆ. ರಷ್ಯಾ ಸೇನೆಯಿಂದ ಕ್ಷಿಪಣಿ ಮತ್ತು ಶೆಲ್ ದಾಳಿಯಿಂದ ಆತಂಕಗೊಂಡಿರುವ ಜನರು ಮನೆ ತೊರೆಯುತ್ತಿದ್ದಾರೆ.

ಇದೇ ವೇಳೆ ಬರೆಂಟ್ ಸಮುದ್ರದಲ್ಲಿ ಅಡ್ಮಿರಲ್ ಗೋರ್ಶ್ಕೋವ್ ಯುದ್ಧನೌಕೆ ಮೂಲಕ ಜಿರ್ಕಾನ್ ಹೈಪರ್‌ಸಾನಿಕ್ ಕ್ರೂಸರ್ ಕ್ಷಿಪಣಿ ಪ್ರಯೋಗಿಸಿದ್ದು, 1,000 ಕಿ.ಮೀ. ದೂರದಲ್ಲಿ ಆರ್ಕ್ಟಿಕ್ ಶ್ವೇತ ಸಮುದ್ರದಲ್ಲಿ ನಿಗದಿಪಡಿಸಿದ್ದ ಗುರಿಯನ್ನು ಯಶಸ್ವಿಯಾಗಿ ಹೊಡೆದುರುಳಿಸಿದೆ. ರಷ್ಯಾ ಅಧ್ಯಕ್ಷ ಪುಟಿನ್, ಈ ಕ್ಷಿಪಣಿಯನ್ನು ಹೊಸ ಪೀಳಿಗೆಯ 'ಅಪ್ರತಿಮ ಅಸ್ತ್ರ' ಎಂದು ಬಣ್ಣಿಸಿದ್ದಾರೆ.

ಈ ನಡುವೆ ಡೆನ್ಮಾರ್ಕ್‌ನಿಂದ ಹಡಗು ನಿಗ್ರಹಿಸುವ ಹಾರ್ಪೂನ್ ಕ್ಷಿಪಣಿಗಳು ಮತ್ತು ಅಮೆರಿಕದ ಹೋವಿಟ್ಜರ್ ಫಿರಂಗಿಗಳು ಶನಿವಾರ ಉಕ್ರೇನ್ ಸೇನಾ ಬತ್ತಳಿಕೆ ಸೇರಿರುವುದನ್ನು ಉಕ್ರೇನ್ ರಕ್ಷಣಾ ಸಚಿವಾಲಯ ಖಚಿತಪಡಿಸಿದೆ.

ಉಕ್ರೇನ್‌ಗೆ ಶಸ್ತ್ರಾಸ್ತ್ರ ಪೂರೈಸದಂತೆ ಜರ್ಮನಿ ಮತ್ತು ಫ್ರಾನ್ಸ್‌ಗೆ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಶನಿವಾರ ಎಚ್ಚರಿಸಿದ್ದಾರೆ. ಶಸ್ತ್ರಾಸ್ತ್ರ ಪೂರೈಕೆ ಪರಿಸ್ಥಿತಿಯನ್ನು ಮತ್ತಷ್ಟು ಅಸ್ಥಿರಗೊಳಿಸಳಿಸಲಿದೆ ಎಂದು ಎಚ್ಚರಿಸಿರುವುದಾಗಿ ಕ್ರೆಮ್ಲಿನ್ ಹೇಳಿದೆ.

ಉಕ್ರೇನ್‌ನಿಂದ ಸೇನೆ ಹಿಂತೆಗೆದುಕೊಳ್ಳಲು ರಷ್ಯಾದ ಕಮ್ಯುನಿಸ್ಟ್ ನಾಯಕರೊಬ್ಬರು ಒತ್ತಾಯಿಸಿದ್ದಾರೆ. 'ಸೇನಾ ಕಾರ್ಯಾಚರಣೆ ನಿಲ್ಲಿಸದಿದ್ದರೆ ರಷ್ಯಾದಲ್ಲಿ ಅನಾಥರ ಸಂಖ್ಯೆ ಹೆಚ್ಚಲಿದೆ' ಎಂದು ಲಿಯೊನಿಡ್ ವಾಸ್ಯುಕೆವಿಚ್ ಕಳವಳ ವ್ಯಕ್ತಪಡಿಸಿದ್ದಾರೆ.

ಗೆಲುವು ನಮ್ಮದೇ– ಝೆಲೆನ್‌ಸ್ಕಿ: 'ರಷ್ಯಾ ಸೇನೆ ಅಸಾಧಾರಣ ಶಕ್ತಿ ಹೊಂದಿದೆ ಎಂಬ ಕಟ್ಟುಕತೆಯನ್ನು ಜಗತ್ತಿನೆದುರು ಬಿಚ್ಚಿಟ್ಟ ದೇಶ ಉಕ್ರೇನ್. ಇಡೀ ಉಕ್ರೇನ್ ಆಕ್ರಮಿಸಲು ರಷ್ಯಾ ಪ್ರಯ ತ್ನಿಸುತ್ತಿದೆ. ರಷ್ಯಾ ವಿರುದ್ಧ ಗೆಲುವು ನಮ್ಮದೇ' ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಹೇಳಿದ್ದಾರೆ.

ಸಂಕ್ಷಿಪ್ತ ಸುದ್ದಿ

ಶ್ರೀಲಂಕಾ: 50ನೇ ದಿನಕ್ಕೆ ಪ್ರತಿಭಟನೆ

ಕೊಲಂಬೊ (ಪಿಟಿಐ): ದೇಶವು ತೀವ್ರ ಆರ್ಥಿಕ ಬಿಕ್ಕಟ್ಟಿಗೆ ಸಿಲುಕಿರುವುದಕ್ಕೆ ಶ್ರೀಲಂಕಾ ಅಧ್ಯಕ್ಷ ಗೊಟಬಯ ರಾಜಪಕ್ಸ ಅವರ ರಾಜೀನಾಮೆಗೆ ಒತ್ತಾಯಿಸಿ ಸರ್ಕಾರದ ವಿರುದ್ಧ ಜನತೆ ನಡೆಸುತ್ತಿರುವ ಪ್ರತಿಭಟನೆ ಶನಿವಾರ 50ನೇ ದಿನಕ್ಕೆ ಕಾಲಿಟ್ಟಿದೆ.

ಇನ್ನಷ್ಟು ಹೆಚ್ಚಿನ ಜನರು ಇದರಲ್ಲಿ ಪಾಲ್ಗೊಳ್ಳುವ ಮೂಲಕ ಪ್ರತಿಭಟನೆ ತೀವ್ರಗೊಳಿಸಲಾಗುವುದು ಎಂದು ಸಂಘಟಕರು ಹೇಳಿದ್ದಾರೆ.

'ರಾಜಪಕ್ಸ ಕುಟುಂಬ ರಾಜಕೀಯ ಕ್ಷೇತ್ರ ತೊರೆದಾಗ ಮಾತ್ರ ನಮ್ಮ ಹೋರಾಟ ಕೊನೆಯಾಗಲಿದೆ. ಅವರ ಎಲ್ಲ ತಪ್ಪುಗಳಿಗಾಗಿ ಅವರನ್ನು ಜನತಾ ನ್ಯಾಯಾಲಯದ ಮುಂದೆ ನಿಲ್ಲಿಸಲಾಗುವುದು' ಎಂದು ಪ್ರತಿಭಟನಕಾರ ಚಮೀರಾ ಜೀವಂತ ಹೇಳಿದರು.

ಆರ್ಥಿಕ ಬಿಕ್ಕಟ್ಟು ದೇಶದಲ್ಲಿ ರಾಜಕೀಯ ಅಶಾಂತಿ ಸೃಷ್ಟಿಸಿದೆ. ಮಹಿಂದಾ ರಾಜಪಕ್ಸ ಅವರು ಪ್ರಧಾನಿ ಹುದ್ದೆಗೆ ರಾಜೀನಾಮೆ ನೀಡಿದಂತೆ, ಅವರ ತಮ್ಮ ಗೊಟಬಯ ರಾಜಪಕ್ಸ ಕೂಡ ಅಧ್ಯಕ್ಷ ಸ್ಥಾನಕ್ಕೆ ರಾಜೀ ನಾಮೆ ಸಲ್ಲಿಸಬೇಕು ಎಂದು ಪ್ರತಿಭಟನಕಾರರು ಪಟ್ಟುಹಿಡಿದಿದ್ದಾರೆ. ಆದರೆ, ರಾಜೀನಾಮೆಗೆ ಗೊಟಬಯ ನಿರಾಕರಿಸಿದ್ದಾರೆ.

ಚೀನಾದಲ್ಲಿ ಭಾರಿ ಮಳೆ: 15 ಸಾವು

ಬೀಜಿಂಗ್ (ಎಪಿ): ದಕ್ಷಿಣ ಚೀನಾದಲ್ಲಿ ಸುರಿಯುತ್ತಿರುವ ಧಾರಾಕಾರ ಮಳೆ ಸಂಬಂಧಿತ ಅವಘಡಗಳಲ್ಲಿ ಕನಿಷ್ಠ 15 ಮಂದಿ ಮೃತಪಟ್ಟಿದ್ದಾರೆ ಹಾಗೂ ಮೂವರು ನಾಪತ್ತೆಯಾಗಿದ್ದಾರೆ.

ಚೀನಾದ ಪೂರ್ವ ಕರಾವಳಿಯ ಫುಜಿಯಾನ್ ಪ್ರಾಂತ್ಯದಲ್ಲಿ ಮಳೆಯಿಂದ ಭೂಕುಸಿತ ಉಂಟಾಗಿದ್ದು, 2 ಕಟ್ಟಡಗಳು ಉರುಳಿಬಿದ್ದಿವೆ. ಈ ಘಟನೆಗಳಲ್ಲಿ 8 ಮಂದಿ ಮೃತಪಟ್ಟಿದ್ದಾರೆ. ಯುನ್ನನ್ ಪ್ರಾಂತ್ಯದಲ್ಲಿ ಐವರು ಮೃತ ಪಟ್ಟಿದ್ದು, ಮೂವರು ನಾಪತ್ತೆಯಾಗಿದ್ದಾರೆ.

ಗುವಾಂಗ್‌ಕ್ಸಿ ಪ್ರಾಂತ್ಯದ ಕ್ಸಿಂಚೆಂಗ್ ಕೌಂಟಿಯಲ್ಲಿ ಶುಕ್ರವಾರ ಪ್ರವಾಹದ ನೀರಿನಲ್ಲಿ ಕೊಚ್ಚಿಹೋದ ಮೂವರು ಮಕ್ಕಳ ಪೈಕಿ ಇಬ್ಬರು ಮೃತಪಟ್ಟಿದ್ದು, ಒಂದು ಮಗುವನ್ನು ರಕ್ಷಿಸಲಾಗಿದೆ. ಚೀನಾದ ಹಲವು ಭಾಗಗಳಲ್ಲಿ ಗುರುವಾರದಿಂದ ಭಾರಿ ಮಳೆ ಯಾಗುತ್ತಿದೆ.

ಇಂಡೊನೇಷ್ಯಾ: ದೋಣಿ ಮುಳುಗಿ 26 ಮಂದಿ ನಾಪತ್ತೆ

ಜಕಾರ್ತ(ಎಎಫ್‌ಪಿ): ಇಂಡೊನೇಷ್ಯಾದ ಕರಾವಳಿಯಲ್ಲಿ ಹವಾಮಾನ ವೈಪರೀತ್ಯ ಮತ್ತು ಇಂಧನ ಖಾಲಿಯಾದ ಪರಿಣಾಮ ದೋಣಿ ಮುಳುಗಿ, 26 ಮಂದಿ ಶನಿವಾರ ಕಾಣೆಯಾಗಿದ್ದಾರೆ.

43 ಮಂದಿ ಪ್ರಯಾಣಿಕರಿದ್ದ ದೋಣಿ ಸುಲವೇಸಿ ಮತ್ತು ಬೊರ್ನಿಯೊ ದ್ವೀಪಗಳನ್ನು ಪ್ರತ್ಯೇಕಿಸುವ ಮಕಸ್ಸಾರ್ ಜಲಸಂಧಿಯಲ್ಲಿ ಗುರುವಾರವೇ ಮುಳುಗಿತ್ತು. ಆದರೆ, ಈ ಮಾಹಿತಿ ರಕ್ಷಣಾ ಅಧಿಕಾರಿಗಳಿಗೆ ಶನಿವಾರ ಲಭಿಸಿದೆ.

ದಕ್ಷಿಣ ನೈಜೀರಿಯಾ: ಕಾಲ್ತುಳಿತಕ್ಕೆ 31 ಸಾವು

ಅಬುಜಾ (ಎಎಫ್‌ಪಿ): ದಕ್ಷಿಣ ನೈಜೀರಿಯಾದಲ್ಲಿ ಚರ್ಚ್ ಚಾರಿಟಿ ಕಾರ್ಯಕ್ರಮವೊಂದರಲ್ಲಿ ಶನಿವಾರ ಆಹಾರ ವಿತರಿಸುವಾಗ ಉಂಟಾದ ಕಾಲ್ತುಳಿತದಲ್ಲಿ 31 ಜನರು ಸಾವನ್ನಪ್ಪಿದ್ದಾರೆ. ನೈಜೀರಿಯಾದ ನದಿಗಳ ರಾಜ್ಯವೆನಿಸಿದ ಪೋರ್ಟ್ ಹಾರ್ಕೋರ್ಟ್ ನಗರದಲ್ಲಿ ಈ ದುರಂತ ಸಂಭವಿಸಿದೆ ಎಂದು ಸ್ಥಳೀಯ ಪೊಲೀಸ್ ವಕ್ತಾರ ತಿಳಿಸಿದ್ದಾರೆ.



ಚೆನ್ನೈನಲ್ಲಿ ಶನಿವಾರ ಕರುಣಾನಿಧಿ ಪ್ರತಿಮೆಯನ್ನು ಉಪರಾಷ್ಟ್ರಪತಿ ವೆಂಕಯ್ಯ ನಾಯ್ಡು ಅನಾವರಣಗೊಳಿಸಿದರು. ಸಿಎಂ ಎಂ.ಕೆ.ಸ್ಟಾಲಿನ್ ಇದ್ದರು – ಪಿಟಿಐ ಚಿತ್ರ

ಕರುಣಾನಿಧಿ ಪ್ರತಿಮೆ ಅನಾವರಣ

ಚೆನ್ನೈ (ಪಿಟಿಐ): ತಮಿಳುನಾಡಿನಲ್ಲಿ ಐದು ಬಾರಿ ಮುಖ್ಯಮಂತ್ರಿಯಾಗಿದ್ದ ದಿವಂಗತ ಎಂ.ಕರುಣಾನಿಧಿ ಅವರ 16 ಅಡಿ ಎತ್ತರದ ಕಂಚಿನ ಪ್ರತಿಮೆಯನ್ನು ಉಪರಾಷ್ಟ್ರಪತಿ ಎಂ. ವೆಂಕಯ್ಯನಾಯ್ಡು ಅವರು ಶನಿವಾರ ಇಲ್ಲಿ ಅನಾವರಣಗೊಳಿಸಿದರು.

ನಗರದ ಅಣ್ಣಾಸಲೈನ ಒಮಂದುರಾರ್ ಎಸ್ಟೇಟ್‌ನಲ್ಲಿರುವ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಆವರಣದಲ್ಲಿ ಈ ಪ್ರತಿಮೆ ನಿರ್ಮಿಸಲಾಗಿದೆ. 35 ವರ್ಷಗಳ ಹಿಂದೆ ಎಐಎಡಿಎಂಕೆಯ ಸಂಸ್ಥಾಪಕ ಎಂ.ಜಿ. ರಾಮಚಂದ್ರನ್ ಅವರ ಸಾವಿನ ಬಳಿಕ ಕರುಣಾನಿಧಿ ಅವರ ಪ್ರತಿಮೆಯನ್ನು ಧ್ವಂಸಗೊಳಿಸಲಾಗಿತ್ತು. ಅಂದು ಪ್ರತಿಮೆ ಇದ್ದ ಸ್ಥಳದಿಂದ 100 ಮೀಟರ್ ದೂರದಲ್ಲಿ ಈ ಪ್ರತಿಮೆ ಸ್ಥಾಪಿಸಲಾಗಿದೆ.

ಪೆರಿಯಾರ್ ಅವರೇ ಕರುಣಾನಿಧಿ ಪ್ರತಿಮೆ ಸ್ಥಾಪನೆಗೆ ಮುಂದಾಗಿ ದ್ದರು. ಆದರೆ, ಪೆರಿಯಾರ್ ಅವರ ಸಾವಿನ ಬಳಿಕ ಅವರ ಪತ್ನಿ ಅವರು ಕರುಣಾನಿಧಿ ಅವರ ಪ್ರತಿಮೆ ಸ್ಥಾಪಿಸಿದ್ದರು. ಆದರೆ ಈ ಪ್ರತಿಮೆಯನ್ನು ಎಂ.ಜಿ.ಆರ್ ಅವರ ಸಾವು ಸಂಭವಿಸಿದ್ದಾಗ ರಾಜಕೀಯ ಕಾರಣಗಳಿಗಾಗಿ ಕೆಲ ದುಷ್ಟ ಶಕ್ತಿಗಳು ಕೆಡವಿ ಹಾಕಿದ್ದವು ಎಂದು ಸ್ಟಾಲಿನ್ ಹೇಳಿದ್ದರು.

ಕೋವಿಡ್ ಬಳಿಕ ಮಕ್ಕಳ ನಾಪತ್ತೆ ಹೆಚ್ಚಳ: ಎನ್‌ಜಿಒಗಳ ಆತಂಕ

ನವದೆಹಲಿ (ಪಿಟಿಐ): ಕೋವಿಡ್ ಪಿಡುಗಿನ ಸಾಮಾಜಿಕ ಪ್ರಭಾವದಿಂದಾಗಿ ಎರಡು ವರ್ಷಗಳಲ್ಲಿ ಕಾಣೆಯಾದ ಮಕ್ಕಳ ಸಂಖ್ಯೆ ತೀವ್ರಗತಿಯಲ್ಲಿ ಏರಿಕೆಯಾಗಿದೆ ಎಂದು ಮಕ್ಕಳ ಹಕ್ಕುಗಳ ಎನ್‌ಜಿಒಗಳು ಆತಂಕ ವ್ಯಕ್ತಪಡಿಸಿವೆ.

ತುರ್ತಾಗಿ ಗ್ರಾಮ ಮಟ್ಟದಲ್ಲಿ ಮಕ್ಕಳ ರಕ್ಷಣಾ ಸಮಿತಿಗಳನ್ನು ಬಲಪಡಿಸಬೇಕಿದೆ. ಅಲ್ಲದೆ ಪೋಷಕರನ್ನು ಈ ನಿಟ್ಟಿನಲ್ಲಿ ಜಾಗೃತಗೊಳಿಸುವುದರ ಜತೆಗೆ ತರಬೇತಿಯನ್ನೂ ನೀಡಬೇಕು. ಹೀಗಾಗಿ ಈ ಕಾರ್ಯಕ್ಕೆ ಸರ್ಕಾರ ಬಜೆಟ್ ಹಂಚಿಕೆ ಮಾಡಬೇಕು ಎಂದು ಎನ್‌ಜಿಒಗಳು ಆಗ್ರಹಿಸಿವೆ.

ರಾಷ್ಟ್ರೀಯ ಅಪರಾಧಗಳ ದಾಖಲೆ ಬ್ಯೂರೊದ (ಎನ್‌ಸಿಆರ್‌ಬಿ) ಇತ್ತೀಚಿನ ಅಂಕಿ ಅಂಶಗಳ ಪ್ರಕಾರ, 2020ರಲ್ಲಿ ಭಾರತದಲ್ಲಿ 59,262 ಮಕ್ಕಳು ಕಾಣೆಯಾಗಿದ್ದಾರೆ. ಹಿಂದಿನ ವರ್ಷಗಳಲ್ಲಿ ನಾಪತ್ತೆಯಾಗಿದ್ದ 48,972 ಮಕ್ಕಳು ಇನ್ನೂ ಪತ್ತೆಯಾಗಿಲ್ಲ. ಅಂದರೆ ಒಟ್ಟಾರೆ ಕಾಣೆಯಾದ ಮಕ್ಕಳ ಸಂಖ್ಯೆ 1,08,234ಕ್ಕೆ ಏರಿದೆ. 2008ರಿಂದ 2020ರವರೆಗಿನ ಅಂಕಿ ಅಂಶಗಳನ್ನು ಗಮನಿಸಿದರೆ ಮಕ್ಕಳು ಕಾಣೆಯಾದ ಪ್ರಕರಣಗಳ ಸಂಖ್ಯೆ 13 ಪಟ್ಟು ಹೆಚ್ಚಳವಾಗಿದೆ. 2008ರಲ್ಲಿ ಮಕ್ಕಳು ಕಾಣೆಯಾದ 7,650 ಪ್ರಕರಣಗಳು ವರದಿಯಾಗಿತ್ತು.

ಕೈಲಾಶ್ ಸತ್ಯಾರ್ಥಿ ಫೌಂಡೇಶನ್‌ನ ಸಹೋದರ ಸಂಸ್ಥೆಯಾದ ಬಚ್ಪನ್ ಬಚಾವೋ ಆಂದೋಲನ (ಬಿಬಿಎ) ದೇಶದಾದ್ಯಂತ ಸುಮಾರು 12,000 ಮಕ್ಕಳನ್ನು ರಕ್ಷಿಸಿದೆ ಎಂದು ಅದರ ಕಾರ್ಯನಿರ್ವಾಹಕ ನಿರ್ದೇಶಕ ಧನಂಜಯ್ ಟಿಂಗಾಲ್ ಅವರು ಹೇಳಿದ್ದಾರೆ.

'ಕೋವಿಡ್ ಪಿಡುಗಿನ ಬಳಿಕ ಮಕ್ಕಳ ಕಳ್ಳಸಾಗಣೆ ಹಲವು ಪಟ್ಟು ಹೆಚ್ಚಾಗಿದೆ ಎಂಬುದನ್ನು ಇವು ತೋರಿಸುತ್ತವೆ' ಎಂದು ಅವರು ಸುದ್ದಿ ಸಂಸ್ಥೆಗೆ ಪ್ರತಿಕ್ರಿಯಿಸಿದ್ದಾರೆ.

ಕರಾವಳಿ ಭದ್ರತೆ ಅಭೇದ್ಯಕ್ಕೆ ಪ್ರಯತ್ನ: ಅಮಿತ್ ಶಾ

ದ್ವಾರಕಾ (ಗುಜರಾತ್) (ಪಿಟಿಐ): ಅತ್ಯಾಧುನಿಕ ತಂತ್ರಜ್ಞಾನ ಬಳಕೆಯೊಂದಿಗೆ ಕರಾವಳಿ ಭ್ರದ್ರತಾ ಪಡೆಯನ್ನು ಬಲಿಷ್ಠ ಮತ್ತು ಅಭೇದ್ಯಗೊಳಿಸುವತ್ತ ಕೇಂದ್ರ ಸರ್ಕಾರ ಕೆಲಸ ಮಾಡುತ್ತಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಶನಿವಾರ ಹೇಳಿದರು.

ಗುಜರಾತ್‌ನ ದ್ವಾರಕಾ ಜಿಲ್ಲೆಯ ದೇವ್‌ಭೂಮಿಯಲ್ಲಿರುವ ನ್ಯಾಷನಲ್ ಅಕಾಡೆಮಿ ಆಫ್ ಕೋಸ್ಟಲ್ ಪೊಲೀಸಿಂಗ್‌ಗೆ (ಎನ್‌ಎಸಿಪಿ) ಭೇಟಿ ನೀಡಿ ಅವರು ಮಾತನಾಡಿದರು.

ಪ್ರತಿಕೂಲ ಹವಾಮಾನ ಮತ್ತು ಭೌಗೋಳಿಕ ಸವಾಲುಗಳ ನಡುವೆಯೂ ಸಂಸ್ಥೆಯನ್ನು ಸ್ಥಾಪಿಸಿದ ಬಿಎಸ್‌ಎಫ್ ಗುಜರಾತ್ ಕ್ರಮವನ್ನು ಅಮಿತ್ ಶಾ ಶ್ಲಾಘಿಸಿದರು.

'ಪ್ರಧಾನಿ ನರೇಂದ್ರ ಮೋದಿ ಅವರ ಮಾರ್ಗದರ್ಶನದಲ್ಲಿ ಹೊಸ ಹೊಸ ತಂತ್ರಜ್ಞಾನವನ್ನು ಬಳಸಿಕೊಂಡು ಕರಾವಳಿ ಭದ್ರತಾಪಡೆಯನ್ನು ಅಭೇದ್ಯಗೊಳಿಸಲು ಕೆಲಸ ಮಾಡುತ್ತಿದ್ದೇವೆ. ಕಡಲಿನಲ್ಲಿ ಕರಾವಳಿ ಭದ್ರತಾ ಪಡೆಗಳು ಎದುರಿಸುವ ಸವಾಲುಗಳನ್ನು ಗಂಭೀರವಾಗಿ ಪರಿಗಣಿಸಿದ್ದೇವೆ' ಎಂದು ಅವರು ಹೇಳಿದರು.

ಕಾಲವನ್ನೇ ಬಗ್ಗಿಸೋರು!

ಡಾ. ಕೆ.ಎಸ್. ಪವಿತ್ರ

ನೀವು ಹೇಗೆ? ಸಮಯಕ್ಕೆ ಸರಿಯಾಗಿ ಆಫೀಸಿಗೆ ಹೋಗುವ, ಐದು ನಿಮಿಷ ಮೊದಲೇ ಇದ್ದು ಬೀಗ ತೆರೆಯಲೆಂದು ಕಾಯುವ 'ಪಂಕ್ಚುವಲ್' ಜಾತಿಯವರಾ? ಅಥವಾ ಯಾರೇನೆಂದರೂ ತಲೆಕೆಡಿಸಿಕೊಳ್ಳದೆ, 'ಲೇಟ್ ಲತೀಫ್' ಎಂದರೂ ನಗುತ್ತಲೇ, ಊಟ/ಕಾರ್ಯಕ್ರಮ/ಆಫೀಸು ಎಲ್ಲದಕ್ಕೂ ತಡವಾಗಿಯೇ ಹೋಗುವವರಾ? ನಾನು ಮೊದಲನೆಯ ಜಾತಿಗೆ ಸೇರಿದವಳು. ಸ್ನೇಹಿತರಿಂದ-ಮನೆಯ ಜನರಿಂದ ಸಾಮಾನ್ಯವಾಗಿ 'ನೀನೇ ಮೊದಲು ಹೋಗಿ ಕಸಗುಡಿಸಬೇಕಾಗುತ್ತೆ ನೋಡು/ ಹಿಂದಿನ ರಾತ್ರಿನೇ ಹೋಗಿ ನೀನು ಅಲ್ಲೇ ಮಲಗಿಕೊಳ್ಳೋದೇ ವಾಸಿ' ಎಂದು ಬೈಸಿಕೊಳ್ಳುವವಳು. ಹಾಗಾಗಿಯೇ ಈ ಎರಡನೇ ಜಾತಿಯ 'ಲೇಟ್ ಲತೀಫ್'ಗಳ (ಬೇಕಾದ್ರೆ 'ಲೇಟ್ ಲತಾ' ಇಲ್ಲವೆ 'ಲೇಟ್ ಲೋಕಪ್ಪ' ಅಂತಲೂ ಹೇಳೋಣ) ಬಗ್ಗೆ ನನಗೆ ಒಂಥರಾ ತಾತ್ಸಾರ-ಕೋಪ ಮಿಶ್ರಿತ ಭಾವನೆ. ನನ್ನ ಕುಟುಂಬ-ಸುತ್ತಮುತ್ತ ಇರುವ 'ಲೇಟ್ ಲತಾ-ಲೇಟ್ ಲೋಕಪ್ಪ'ಗಳನ್ನು ಗಮನಿಸುವುದು, ತಿದ್ದಲು ಪ್ರಯತ್ನಿಸುವುದು – ಇದು ನಾನು ಆಗಾಗ್ಗೆ ಮಾಡುವ ಕೆಲಸವೇ.

ಸಮಯ ಪ್ರಜ್ಞೆ-ಕಾಲಬದ್ಧತೆ ಇಂತಹ ವಿಷಯಗಳ ಬಗ್ಗೆ ಮಕ್ಕಳಿಗೆ ಭಾಷಣ ಮಾಡುವುದು, ವೇಳಾಪಟ್ಟಿಯಿಲ್ಲದೆ ಯಾವ ಕೆಲಸವನ್ನೂ ಮಾಡದಿರುವುದು, ಯಾರಾದರೂ ಲೇಖನ ಬರೆದುಕೊಡಲು ಕೇಳಿದರೆ, ಒಂದು ದಿನ ಮೊದಲೇ ಬರೆದು ಸರಿಯಾದ ಸಮಯಕ್ಕೆ ಅವರಿಗೆ ಮುಟ್ಟಿಸುವುದು, ಆಗಾಗ್ಗೆ ಇತರರು ಕೇಳುವ 'ನಿಮಗೆ ಹೇಗೆ ಇಷ್ಟೆಲ್ಲಾ ಟೈಂ ಸಿಗುತ್ತೆ' ಎಂಬ ಪ್ರಶ್ನೆಗೆ ಒಳಗೊಳಗೇ ಸಂತೋಷಿಸುತ್ತ 'It's a busy woman who finds time' ಎಂದು ಉತ್ತರಿಸುವುದು, ಇವೆಲ್ಲ ನನಗೆ ಪ್ರಿಯವಾದ ಸಂಗತಿಗಳು. ಇಂತಹ ಸಮಯ ಪ್ರಜ್ಞೆಯ ನಾನು ಇತ್ತೀಚೆಗೆ 'ಲೇಟ್ ಲೋಕಪ್ಪ', 'ಲೇಟ್ ಲತಾ'ಗಳ ಬಗ್ಗೆ ಮನೋವೈಜ್ಞಾನಿಕ ಅಧ್ಯಯನಗಳನ್ನು ಕುತೂಹಲದಿಂದ ಗಮನಿಸಿದಾಗ ನನಗೆ ಎದುರಾದದ್ದು ಕಾಲಬದ್ಧತೆ-ಸಮಯ ಪ್ರಜ್ಞೆಯೇ ಎಲ್ಲವೂ ಅಲ್ಲ ಎಂಬ ಸತ್ಯ!

ನಮ್ಮೆಲ್ಲರ ಆತ್ಮೀಯ ವಲಯಗಳಲ್ಲಿಯೂ ಯಾರಾದರೊಬ್ಬರು ಇಂಥ ಲೇಟ್ ಲತಾ-ಲೋಕಪ್ಪ ಇದ್ದೇ ಇರುತ್ತಾರೆ. ಪ್ರತಿ ಡೆಡ್‌ಲೈನ್ ಅನ್ನು ತಪ್ಪುವ ಸಹೋದ್ಯೋಗಿ, ಅರ್ಧಗಂಟೆ ತಡವಾಗಿಯೇ ಊಟಕ್ಕೆ ಬರುವ ಪತಿ, 'ಬಂದೆ ಬಂದೆ, ಇಲ್ಲೇ ಇದ್ದೇನೆ' ಎನ್ನುತ್ತಲೇ ಎಷ್ಟು ಹೊತ್ತಾದರೂ ಬರದೆ ಬೇಸರ ತರಿಸುವ ಸ್ನೇಹಿತೆ. 'ಇಲ್ಲ, ನಮ್ಮ ಮಧ್ಯೆ ಯಾರೂ ಹಾಗಿರುವವರನ್ನು ನಾನು ನೋಡಿಯೇ ಇಲ್ಲವಲ್ಲ' ಎಂದು ನೀವೆಂದರೆ, ಆ ವ್ಯಕ್ತಿ ನೀವೇ ಆಗಿರಲೂಬಹುದು! 'ಲೇಟ್ ಲೋಕಪ್ಪ-ಲತಾ'ರ ಬಗ್ಗೆ ಅಧ್ಯಯನಗಳನ್ನು ವಿವರವಾಗಿ ಮನೋವಿಜ್ಞಾನಿಗಳು ದಾಖಲಿಸುತ್ತಿದ್ದಾರೆ. ಹೀಗೆ ಅಧ್ಯಯನಗಳನ್ನು ಮಾಡುತ್ತಿರುವ ವಿಜ್ಞಾನಿಗಳಲ್ಲಿಯೂ 'ತಡವಾಗಿ ತಲುಪುವ' ಗುಣ ಇದ್ದದ್ದೇ ಅವರನ್ನು ಈ ಬಗ್ಗೆ ಸಂಶೋಧಿಸಲು ಪ್ರೇರೇಪಿಸಿತು ಎನ್ನುವುದು ಸ್ವಾರಸ್ಯಕರ ಅಂಶ. ಮನೋವಿಜ್ಞಾನ ಇಂಥ ವ್ಯಕ್ತಿಗಳನ್ನು 'Time benders' 'ಕಾಲವನ್ನು ಬಗ್ಗಿಸುವವರು' ಎಂದು ಗುರುತಿಸುತ್ತದೆ. ಸಮಯಕ್ಕೆ ಸರಿಯಾಗಿ ತಲುಪಲೇಬೇಕೆಂಬ ಹಟವಾದಿಗಳನ್ನು 'ಕಾಲವನ್ನು ಕಾಯುವವರು' Time keepers ಎನ್ನುತ್ತದೆ.





ಚಿತ್ರ: ತಾಜುದ್ದೀನ್ ಆಜಾದ್

ಸಾಮಾನ್ಯವಾಗಿ ತಡವಾಗಿ ಬರುವುದು ಒಂದು 'ಕೆಟ್ಟಚಾಳಿ', 'ಕೆಟ್ಟಗುಣ' 'ಮುಂದುವರಿಯಬಾರದ ನಡವಳಿಕೆ' ಎಂದೇ ನಮ್ಮೆಲ್ಲರ ಗ್ರಹಿಕೆ. ನಮ್ಮ ಸ್ನೇಹಿತ/ ಸ್ನೇಹಿತೆ ಮತ್ತೆ ಮತ್ತೆ ಪಾರ್ಟಿಗೆ ತಡವಾಗಿ ಬಂದಾಗ ನಮಗೆ ಅನ್ನಿಸುವುದೇನು? 'ಇವರು ನಮ್ಮ ಭಾವನೆಗಳನ್ನು ಲಕ್ಷಿಸುವುದಿಲ್ಲ. ಉದ್ದೇಶಪೂರ್ವಕವಾಗಿಯೇ ತಡವಾಗಿ ಬರುತ್ತಾರೆ' ಎಂದಲ್ಲವೆ? ಆದರೆ ಅಧ್ಯಯನಗಳ ಪ್ರಕಾರ, ನಮ್ಮ ಭಾವನೆಗಳನ್ನು ಲಕ್ಷಿಸುವುದಕ್ಕೂ, ಸಮಯಕ್ಕೆ ಸರಿಯಾಗಿ ಬರುವುದಕ್ಕೂ ಯಾವ ಸಂಬಂಧವೂ ಇಲ್ಲ! ಸಾಮಾನ್ಯವಾಗಿ ಹೇಳುವುದಾದರೆ ಯಾವ ವ್ಯಕ್ತಿಯೂ ಉದ್ದೇಶಪೂರ್ವಕವಾಗಿ ತಡವಾಗಿ ಬರುವುದಿಲ್ಲ. ಈ ವಿಷಯದಲ್ಲಂತೂ ಅದು ಪೂರ್ತಿ ಉಲ್ಟಾ. ಅಂದರೆ ಉದ್ದೇಶಪೂರ್ವಕವಾಗಿ ಸಮಯಕ್ಕೆ ಸರಿಯಾಗಿ ಬರುವುದೇ ಹೆಚ್ಚು ಸಾಧ್ಯ. ತಡವಾಗಿ ಬರುವವರು ತಮ್ಮ ಕೆಲಸ-ಕಾರ್ಯಗಳನ್ನು ಒಳ್ಳೆಯ ಕ್ಷಮತೆಯಿಂದ ಮಾಡುವುದರಲ್ಲೇನೂ ಕಡಿಮೆಯಿಲ್ಲ.

ನೀವು ಆಫೀಸಿನಲ್ಲಿ ಯಾರು ತಡವಾಗಿ ಬರುವ ಪ್ರವೃತ್ತಿಯವರು ಎಂಬುದನ್ನು ಕಂಡು ಹಿಡಿಯಲು ಒಂದು ಸುಲಭ ಉಪಾಯವಿದೆ. ಆಫೀಸಿನ ಒಳಕ್ಕೆ ಹೋಗಿ ಅಲ್ಲಿ ಯಾರ ಮೇಜು ಹೆಚ್ಚು ಅಸ್ತವ್ಯಸ್ತ ಎಂದು ಗಮನಿಸಿದರೆ ಆ ವ್ಯಕ್ತಿಯೇ ನಮ್ಮ 'ಲೇಟ್ ಲೋಕಪ್ಪ'! ಒಂದು ಕೆಲಸ ಮುಗಿಸುವ ಮುನ್ನ ಮತ್ತೊಂದಕ್ಕೆ ತಡವಾಗಿ, ಅವರು ಅದಕ್ಕಾಗಿ ಓಡಬೇಕಲ್ಲ! ಆದರೆ, ಅದರ ಬಗೆಗೆ ಅವರಿಗೇನೂ ಬೇಸರವಿಲ್ಲ. ಆತ್ಮವಿಶ್ವಾಸದಿಂದ ತಮ್ಮ 'ತಡವಾಗಿ ಹೋಗುವ' ಪ್ರವೃತ್ತಿಯನ್ನು ಅವರು ಅಪ್ಪಿಕೊಳ್ಳುತ್ತಾರೆ! ಕಾನ್ಯೆ ವೆಸ್ಟ್ ಎಂಬ ಸಂಗೀತಗಾರ ತನ್ನ ಟ್ರ್ಯಾಕ್ ಒಂದರಲ್ಲಿ ತನ್ನ ಕೇಳುಗರಿಗೆ ಹೇಳಿದ್ದು ಏನು ಗೊತ್ತೆ? 'ನನ್ನ ತಡಮಾಡುವಿಕೆಯಿಂದ ನಾನು ನಿಮಗೆಲ್ಲಾ ಗೌರವ ನೀಡಿದ್ದೇನೆ' ಎಂದೇ! ಈ ವ್ಯಕ್ತಿಗಳು ಸ್ವಸಂತೋಷದಲ್ಲಿ, ತಾವೇನು ಮಾಡುತ್ತಿದ್ದೇವೋ ಅದರಲ್ಲಿ ಮುಳುಗಿ ಹೋಗುವ ಆತ್ಮತೃಪ್ತರು. ಹಾಗಾಗಿಯೇ ಬೇರೆಯವರು ಏನೇ ಅಂದುಕೊಳ್ಳಲಿ, ಇವರಿಗೆ ತಮ್ಮ ಪ್ರವೃತ್ತಿಯನ್ನು ಬದಲಿಸಲು ಆಸಕ್ತಿಯೂ ಇರಲಾರದು.

ತಡವಾಗಿ ಬರುವ ಪ್ರವೃತ್ತಿ ಸ್ವತಃ ವ್ಯಕ್ತಿಗೆ 'ದೊಡ್ಡದು' ಎನಿಸಲಾರದು. ಸರಿ, ಆದರೆ ಆತನ/ ಆಕೆಯ ಹತ್ತಿರದ ಆತ್ಮೀಯರಿಗೆ ಕಿರಿಕಿರಿಯುಂಟು ಮಾಡಬಹುದು, ನೋವುಂಟು ಮಾಡಬಹುದು, ಸಂಬಂಧಗಳನ್ನೇ ಕಡಿದು ಹಾಕಬಹುದು ಅಥವಾ ದಾಂಪತ್ಯ ಕಲಹಗಳನ್ನು ಹೆಚ್ಚಿಸಬಹುದು. ಕುಟುಂಬದವರೇ ಅಲ್ಲವೆ ಈ ಪ್ರವೃತ್ತಿಯ ನಿತ್ಯ ಬಲಿಪಶುಗಳು! ಅವರವರ ವ್ಯಕ್ತಿತ್ವಕ್ಕೆ ಅನುಗುಣವಾಗಿ ಈ ಪ್ರವೃತ್ತಿಯನ್ನು ಆತ್ಮೀಯರು ಒಪ್ಪಿಕೊಂಡು ಬಿಡಬಹುದು (ಅವರು ಯಾವಾಗಲೂ ತಡತಾನೆ! ಬಿಟ್ಟುಬಿಡು) ಅಥವಾ ಅವರಿಂದ ದೂರವಾಗಲೂಬಹುದು (ಇನ್ನು ಈ ರೀತಿಯ ಅಶಿಸ್ತು - ನಿರ್ಲಕ್ಷ್ಯವನ್ನು ಸಹಿಸಲಾರೆ!).

ಇಂಥ ಸಮಸ್ಯೆಗಳು ಎದುರಾಗುವಾಗ, ಈ ವ್ಯಕ್ತಿಗಳನ್ನು ನಾವು punctually-challenged ಅಂದರೆ 'ವಿಕಲಚೇತನ'ರಂತೆ, ವಿಕಲ ಸಮಯ ಪ್ರಜ್ಞೆಯುಳ್ಳವರು ಎಂದೇ ಕರೆಯಬೇಕಾಗುತ್ತದೆ. ವಿಕಲ ಸಮಯಪ್ರಜ್ಞೆಯುಳ್ಳ ವ್ಯಕ್ತಿಗಳ ಸಮಯದ ಗ್ರಹಿಕೆಯೇ ವಿಭಿನ್ನ. ಜೆಫ್ ಕಾಂಟೆ ಎಂಬ ಪ್ರೊಫೆಸರ್ ಸ್ಯಾಂಡಿಯಾಗೋ ವಿಶ್ವವಿದ್ಯಾಲಯದಲ್ಲಿ ಒಂದು ಅಧ್ಯಯನ ಕೈಗೊಂಡ. ತುಂಬಾ ಆತುರದಲ್ಲಿರುವ, ಸಮಯಕ್ಕೆ ಮೊದಲೇ/ ಸರಿಯಾಗಿ ಧಾವಿಸುವ ವ್ಯಕ್ತಿಗಳದ್ದು ಒಂದು ಗುಂಪು; ಆರಾಮವಾಗಿ, ನಿಧಾನವಾಗಿ ತಮ್ಮದೇ ಸಮಯಕ್ಕೆ ಬರುವವರದ್ದು ಮತ್ತೊಂದು ಗುಂಪು. ಗಡಿಯಾರಗಳಿಲ್ಲದೆ ಅವರನ್ನು ಒಂದು ನಿಮಿಷ ಮುಗಿದ ಸಮಯ ಗುರುತಿಸಲು ಕೇಳಲಾಯಿತು. ಮೊದಲ ಗುಂಪು ಅಂದಾಜು 58 ಸೆಕೆಂಡುಗಳು ಮುಗಿಯುವ ವೇಳೆಗೆ ಒಂದು ನಿಮಿಷವಾಯಿತು ಎಂದು ಗುರುತಿಸಿದರೆ, ಎರಡನೇ ಗುಂಪು 77 ಸೆಕೆಂಡುಗಳು ಮುಗಿದಮೇಲೆ ಒಂದು ನಿಮಿಷ ಕಳೆಯಿತು ಎಂದು ಗುರುತಿಸಿತು!

12ನೇ ಪುಟಕ್ಕೆ...

ಹೊಳೆವ ಮುಖದ ಬಣ್ಣದ ಪ್ರಶ್ನೆ

ಮೈಕಪ್ಪಿನ ಕೀಳರಿಮೆಯನ್ನು ಮೇಕಪ್ಪಿನ ಬಲದಿಂದ ಮೆಟ್ಟಿ ನಿಲ್ಲುವ ಮನೋಭಾವವನ್ನೇ ಅಲುಗಾಡಿಸಿದ ಪ್ರಶ್ನೆ ಇದಾಗಿದೆ



ಚಿದಾನಂದ ಸಾಲಿ

ಗಡಿಯಾರ ಬಿಟ್ಟು ಬೇರೇನೂ ಆಭರಣ ಧರಿಸದ, ಮುಖಕ್ಕೆ ಕನಿಷ್ಠ ಪೌಡರ್ ಅನ್ನೂ ಹಾಕಿಕೊಳ್ಳದ ಕೇರಳದ ಮಲಪ್ಪುರಂ ಜಿಲ್ಲೆಯ ಜಿಲ್ಲಾಧಿಕಾರಿಣಿ ರಾಣಿ ಸೋಯಾಮೋಯಿ ಅವರು ಯಾಕೆ ತಾವು ಮೇಕಪ್ ಹಾಕಿಕೊಳ್ಳುವುದಿಲ್ಲ ಎಂದು ವಿವರಿಸಿದ ಸಂದರ್ಶನದ ತುಣುಕೊಂದು ಇತ್ತೀಚೆಗೆ ವೈರಲ್ ಆಗಿತ್ತು. ಅವರದಕ್ಕೆ ನೀಡಿದ ವಿವರಣೆ ಹೀಗಿತ್ತು:

ಜಾರ್ಖಂಡ್ ರಾಜ್ಯದ ಕೋಡರ್ಮಾ ಜಿಲ್ಲೆಯ ಗುಡ್ಡಗಾಡು ಪ್ರದೇಶದಲ್ಲಿನ 'ಮೈಕಾ' ಗಣಿನಿಬಿಡ ಪ್ರದೇಶದ ಗುಡಿಸಲೊಂದರಲ್ಲಿ ಹುಟ್ಟಿದ ಅವರಿಗೆ ತಂದೆ, ತಾಯಿ, ಇಬ್ಬರು ಅಣ್ಣಂದಿರು ಮತ್ತು ಒಬ್ಬ ತಂಗಿಯಿದ್ದರು. ಅಲ್ಲಿ ಶಾಲೆ, ಆಸ್ಪತ್ರೆ, ಶೌಚಾಲಯ, ಕರೆಂಟ್ ಮುಂತಾದ ಯಾವ ಸೌಲಭ್ಯಗಳೂ ಇರಲಿಲ್ಲ. ಹೆಂಗಸರು ಮೈಕಾ ಗಣಿಗಳಲ್ಲಿ ರಾಶಿಯಾಗಿ ಬಿದ್ದಿರುವ ಮಣ್ಣಿನ ಗುಡ್ಡೆಯನ್ನು ಬರಿಗೈಯಿಂದ ಬೆದಕಿ, ಬೆದಕಿ ಮೈಕಾದ ಅದಿರನ್ನು ತೆಗೆದರೆ; ಗಂಡಸರು ಇಕ್ಕಟ್ಟಾದ ಸುರಂಗಗಳೊಳಗೆ ಹೋಗಿ ಹಾರೆ-ಸುತ್ತಿಗೆಯಿಂದ ಗೋಡೆ ಒಡೆದು ಅದಿರು ತರುತ್ತಿದ್ದರು. ತೀವ್ರ ಅನಾರೋಗ್ಯ ಮತ್ತು ಹಸಿವಿನಿಂದ ಸೋದರರು ತೀರಿಕೊಂಡ ಮೇಲೆ ಆರು ವರ್ಷದ ರಾಣಿ ಮತ್ತವರ ತಂಗಿ ಕೂಡ ಅನಿವಾರ್ಯವಾಗಿ ಆಳ ಸುರಂಗದ ಕೊರಕಲುಗಳಲ್ಲಿ ವಿಷಪೂರಿತ ದೂಳು ಕುಡಿಯುತ್ತ ಅದಿರು ಸಂಗ್ರಹಿಸಲು ಹೊರಡಬೇಕಾಯಿತು.

ಹೀಗೊಮ್ಮೆ ವಿಪರೀತ ಜ್ವರದ ಕಾರಣವಾಗಿ ರಾಣಿಯವರು ಗಣಿಗೆ ಹೋಗದ ದಿನ, ಗಣಿ ಕುಸಿತದಿಂದಾಗಿ ಅಪ್ಪ, ಅಮ್ಮ, ತಂಗಿ ಮೂವರೂ ಜೀವಂತ ಸಮಾಧಿಯಾದರು. ಅಂಥಾ ರಾಣಿ ಅವರು ಸರ್ಕಾರಿ ಅನಾಥಾಶ್ರಮಕ್ಕೆ ಸೇರಿ, ಓದಿಕೊಂಡು ಈಗ ಜಿಲ್ಲಾಧಿಕಾರಿಯಾಗಿದ್ದಾರೆ. 'ಸುರಂಗಗಳಲ್ಲಿ ಸಿಲುಕಿದ ಶಿಶು ಕನಸುಗಳು ಮತ್ತು ಛಿದ್ರವಾದ ಬಡವರ ಬದುಕುಗಳು- ನಮ್ಮ ಕೆನ್ನೆಗೆ, ಚರ್ಮಕ್ಕೆ ಬಣ್ಣ ತುಂಬುತ್ತಿವೆ ಎಂದು ನನಗರಿವಾದ ದಿನವೇ ನಾನು ಈ ಪ್ರಸಾಧನಗಳಿಂದ ದೂರ ಸರಿದೆ' ಎನ್ನುವ ರಾಣಿ ಸೋಯಾಮೋಯಿ ಅವರು ಎತ್ತಿರುವ ಪ್ರಶ್ನೆ ಬದುಕಿನದ್ದಕ್ಕಿಂತ ಮುಖ್ಯವಾಗಿ ಬಣ್ಣದ್ದು ಅಂತ ನನಗೆ ತೀವ್ರವಾಗಿ ಅನಿಸಿತು.

ಆಮೇಲೆ ಫ್ಯಾಕ್ಟ್ ಚೆಕ್ ಮಾಡಿದಾಗ ತಿಳಿದ ವಿಷಯವೆಂದರೆ ಅಸಲಿಗೆ ಮಲಪ್ಪುರಂ ಜಿಲ್ಲೆಯಲ್ಲಿ ರಾಣಿ ಸೋಯಾಮೋಯಿ ಎಂಬ ಜಿಲ್ಲಾಧಿಕಾರಿಣಿಯೇ ಆಗಿಹೋಗಿಲ್ಲ ಎಂಬುದು. ಇಲ್ಲಿಯೇ ಇರೋದು ಮಜಾ. ವಾಸ್ತವದಲ್ಲಿ ಈ ವಿಡಿಯೊದಲ್ಲಿದ್ದದ್ದು ಶೈನಾಮೋಳ್ ಎಂಬ ಜಿಲ್ಲಾಧಿಕಾರಿಣಿ. ಇನ್ನು ರಾಣಿ ಸೋಯಾಮೋಯಿ ಎಂಬುದು ಮಲಯಾಳಂ ಕಥೆಗಾರ ಹಕೀಮ್ ಮೊರಯೂರ್ ಅವರ `ಮೂರು ಪೆಣ್ಣುಗಳ್' ಎಂಬ ಕಥಾಸಂಕಲನದಲ್ಲಿರುವ 'ಶೈನಿಂಗ್ ಫೇಸಸ್' ಎಂಬ ಕಥೆಯಲ್ಲಿರುವ ಒಂದು ಕಲ್ಪಿತ ಪಾತ್ರ. ಹೀಗೆ ಕಲ್ಪಿತ ಪಾತ್ರವೊಂದು ನಿಜಜೀವನದ ವ್ಯಕ್ತಿಯಾಗಿ ಬಿಂಬಿತವಾಗುವುದರ ಹಿಂದೆ ಇರುವುದು ಮಾತ್ರ ತನ್ನ ಮೈಕಪ್ಪಿನ ಕೀಳರಿಮೆಯನ್ನು ಸಾಧನೆಯ ಬಲದಿಂದ ಮೆಟ್ಟಿ ನಿಲ್ಲಬೇಕೆಂಬ ತಹತಹಿಕೆಯ ಲಕ್ಷಾಂತರ ಜನರಿಂದ ರೂಪಿತವಾದ ಒಂದು ಸಾಮಾಜಿಕ ನಿರೀಕ್ಷೆಯೇ ಹೊರತು ಬೇರೇನಲ್ಲ.

ಈಗ ಈ ನಿಜವಾದ ವ್ಯಕ್ತಿಯಾಗಿ ಬದಲಾದ ಕಲ್ಪಿತ ಪಾತ್ರದ ಕಥೆಯ ಇತರೆ ಮಗ್ಗುಲುಗಳತ್ತ ಕಣ್ಣು ಹಾಯಿಸೋಣ. `ಹೊಳೆವ ಖನಿಜ' 'ವಿವಾದಿತ ಖನಿಜ' ಎಂದು ಕರೆಯಲ್ಪಡುವ `ಮೈಕಾ'ವನ್ನು ಮುಖ್ಯವಾಗಿ ಫೇಸ್ ಪೌಡರ್, ಐ ಶಾಡೋ, ನೇಲ್ ಪಾಲಿಶ್, ಲಿಪ್‌ಸ್ಟಿಕ್ ಮೊದಲಾದ ಪ್ರಸಾಧನ ಸಾಮಗ್ರಿಗಳ ತಯಾರಿಯಲ್ಲಿ ಬಳಸಲಾಗುತ್ತದೆ. ಮೈಕಾ ನಿಕ್ಷೇಪವು ಪ್ರಪಂಚದಲ್ಲೇ ಅತಿ ಹೆಚ್ಚು ಇರುವುದು ಭಾರತದಲ್ಲಿ. 1980ರವರೆಗೆ 700 ಗಣಿಗಳು, 20 ಸಾವಿರ ಕಾರ್ಮಿಕರಿಂದ ಪ್ರಪಂಚದ ಅತಿ ಹೆಚ್ಚು ಮೈಕಾ ಉತ್ಪಾದಕ ರಾಷ್ಟ್ರವಾಗಿತ್ತು ಭಾರತ. ಆನಂತರ ಹೊಸ ಲೀಸ್‌ಗಳನ್ನು ಮಂಜೂರು ಮಾಡುವುದನ್ನು ನಿಲ್ಲಿಸಿ, ನೂತನ ಅರಣ್ಯ ಸಂರಕ್ಷಣಾ ಕಾಯ್ದೆ ಮೂಲಕ ಬಿಗಿ ಕಾನೂನು ಕ್ರಮಗಳನ್ನು ಜಾರಿಗೆ ತಂದ ಪರಿಣಾಮವಾಗಿ 2000ನೇ ಇಸವಿ ಹೊತ್ತಿಗೆ ಜಾರ್ಖಂಡಿನ ನೂರಾರು ಗಣಿಗಳು ಸ್ಥಗಿತಗೊಂಡು, ಸಾವಿರಾರು ಕಾರ್ಮಿಕರು ಬೀದಿಪಾಲಾದರು.

11ನೇ ಪುಟಕ್ಕೆ...

ಮರಳಿನ ಸಮಾಧಿಗೆ ಬೂಕರ್

ಸುಮಂಗಲಾ

'ಇಲ್ಲ, ನಾ ಏಳಲ್ಲ. ನಾನೇಳೋದಿಲ್ಲ'

ಮುದ್ದೆಯಾಗಿದ್ದ ರಗ್ಗಿನೊಳಗಿಂದ ಮುಲುಕಿದ್ದು ಕೇಳಿತು.

'ಇಲ್ಲ, ಈಗಂತೂ ನಾ ಏಳೋದಿಲ್ಲ'

ಈ ಮಾತು ಅವರನ್ನು ಅಲುಗಾಡಿಸಿತು. ಮಕ್ಕಳು ಇನ್ನಷ್ಟು ಒತ್ತಾಯಿಸತೊಡಗಿದರು. ಅವರಿಗೆ ಭಯವಾಯಿತು. ಅವರ ಪ್ರೀತಿಯ ಅಮ್ಮ, ಅಪ್ಪ ತೀರಿಕೊಂಡ, ಜೊತೆಗೆ ಅವಳ ಉಸಿರನ್ನೂ ತೆಗೆದುಕೊಂಡು ಹೋದ.

'ನಿದ್ರೆ ಮಾಡ್ತಾನೆ ಇರಬೇಡ, ಏಳಮ್ಮ'

'ನಿದ್ರೆ ಮಾಡ್ತಾನೆ ಇರತಾಳೆ. ಮಲ್ಕೊಂಡೇ ಇರತಾಳೆ. ಕಣ್ಣು ಮುಚ್ಚಿಕೊಂಡು. ಅವರಿಗೆ ಬೆನ್ನು ಹಾಕಿ' ಪಿಸಿಪಿಸಿ ಮಾತು ಶುರು.

ಅಪ್ಪ ಇದ್ದಾಗ, ಅವರನ್ನು ನೋಡಿಕೊಳ್ಳೋದರಲ್ಲೆ ಮುಳುಗಿದ್ದಳು. ಎಷ್ಟೇ ಸುಸ್ತಾಗಿದ್ದರೂ ಲಗುಬಗೆಯಿಂದ ಓಡಾಡುತ್ತ, ಕೆಲಸ ಮಾಡುತ್ತ, ಜೀವಂತಿಕೆಯಿಂದ ಪುಟಿಯುತ್ತ, ಕಿರಿಕಿರಿ ಮಾಡುತ್ತ, ಸಮಾಧಾನಿಸುತ್ತ, ಉಸಿರಿನ ಮೇಲೆ ಉಸಿರು ತೆಗೆದುಕೊಳ್ಳುತ್ತ ನಿಭಾಯಿಸುತ್ತಿದ್ದಳು.

ಯಾಕಂದ್ರೆ ಎಲ್ಲರ ಉಸಿರು ಅವಳೊಳಗೆ, ಎಲ್ಲರ ಉಸಿರಾಟವೂ ಅವಳ ಎದೆಬಡಿತದಲ್ಲಿತ್ತು.

ಮತ್ತೆ ಈಗ ಹೇಳ್ತಿದಾಳೆ, 'ನಾ ಏಳಲ್ಲ' ಅಂತ. ಅವಳ ಬದುಕಿನ ಉದ್ದೇಶವೇ ಅಪ್ಪನಾಗಿದ್ದ. ಅವನು ಹೋಗಿದ್ದೇ ಅದೂ ಹೋಯಿತು.

'ಇಲ್ಲಮ್ಮಾ', ಮಕ್ಕಳು ಹಟ ಮಾಡತೊಡಗಿದರು, 'ಹೊರಗೆ ನೋಡು, ಬಿಸಿಲು ಚೆನ್ನಾಗಿದೆ, ಏಳು, ಅಲ್ಲೇ ಇದೆ ನಿನ್ನ ಕೋಲು, ಏಳು, ತಗೋ ಅದನ್ನು, ಚೂಡಾ ತಿನ್ನು, ಬಟಾಣಿ ಹಾಕಿದಾರೆ. ಬಹುಶಃ ಭೇದಿಯಾಗ್ತಿದೆಯೇನೋ, ಸಾಸಿವೆ ಪುಡಿ ಕೊಡಿ'.

'ಇಲ್ಲ... ನಾನೇಳಲ್ಲ... ಇಲ್ಲಪ್ಪಾ ಇಲ್ಲ...' ಅಮ್ಮ ಕುಸುಕುಸು ಮಾಡಿದಳು.

ಪಾಪ, ದಣಿದು ಹೋಗಿದಾಳೆ, ಒಬ್ಬಳೇ ಸೋತು ಹೋಗಿದಾಳೆ. ಅವಳನ್ನ ಎಬ್ಬಿಸಿ, ಮಾತಾಡಿಸಿ, ಅವಳ ಮನಸ್ಸು ತಿರುಗಿಸಿ. ಎಲ್ಲರ ಅನುಕಂಪವು ಗಂಗೆಯ ಹಾಗೆ ಹರಿಯುತ್ತ, ಅಮ್ಮನ್ನ ಬೆನ್ನನ್ನು ತೋಯಿಸಲಾರಂಭಿಸಿತು.

***

ಇದು ಗೀತಾಂಜಲಿ ಶ್ರೀಯವರು 'ರೆತ್ ಸಮಾಧಿ' ಕಾದಂಬರಿಯಲ್ಲಿ ಚಿತ್ರಿಸಿದ ಅಜ್ಜಿ. ಭಾರತ ಹಾಗೂ ಅದರ ವಿಭಜನೆಯ ಹಲವು ಪದರದ ಕಥಾನಕವನ್ನು ಹೆಣೆದಿರುವ 'ರೆತ್ ಸಮಾಧಿ' ಕಾದಂಬರಿಯನ್ನು ಅಷ್ಟೇ ಸಮರ್ಥವಾಗಿ ಇಂಗ್ಲಿಷಿಗೆ (Tomb of Sand) ಅನುವಾದಿಸಿದವರು ಡೈಸಿ ರಾಕ್‌ವೆಲ್.

'ಈ ಅಜ್ಜಿ ಹಾಸಿಗೆ ಹಿಡಿದಿದ್ದಾಳೆ, ಬದುಕುವ ಇಚ್ಛೆಯೇ ಇಲ್ಲದೇ ಇನ್ನಷ್ಟು ಗೋಡೆಯತ್ತ ಸರಿದು, ಗೋಡೆಯೊಳಗೇ ಸೇರಿಹೋಗುತ್ತಾಳೇನೋ ಎಂಬಂತೆ ಮಲಗಿದ ಅಜ್ಜಿಯ ಚಿತ್ರ ನಿಧಾನಕ್ಕೆ ನನ್ನೊಳಗನ್ನು ಆವರಿಸಿತು. ಕುತೂಹಲ ಹುಟ್ಟಿಸಿತು. ಅವಳಿಗೆ ಬದುಕು ಸಾಕಪ್ಪಾ ಎನ್ನಿಸಿದೆ, ಹಿಂಗಾಗಿ ಎಲ್ಲರಿಗೆ ಬೆನ್ನು ತಿರುಗಿಸಿದ್ದಾಳೆ. ಅಥವಾ ಬದುಕಿನ ಬೇರೊಂದು ಇನ್ನಿಂಗ್ಸ್‌ಗೆ ತನ್ನನ್ನು ತಾನು ಸಜ್ಜುಗೊಳಿಸುತ್ತಿದ್ದಾಳಾ... ಗೋಡೆಯೊಳಗೆ ಮರೆಯಾಗಿಬಿಡುವ ಬಯಕೆಯಿರುವಂತೆ ಕಾಣಿಸಿದರೂ, ಅವಳು ಎಲ್ಲವನ್ನು ಕೊನೆಗಾಣಿಸಲು ಬಯಸಿದ್ದಾಳಾ ಅಥವಾ ಗೋಡೆಯೊಳಗೆ ತೂರಿ, ಇನ್ನೊಂದು ಕಡೆಯಿಂದ ಹೊರಬರೋದಕ್ಕೆ ಬಯಸಿದಾಳಾ?' ಈ ಪ್ರಶ್ನೆಯ ಜಾಡು ಹಿಡಿದು ಹೊರಟ ಗೀತಾಂಜಲಿ ಹಿಂದಿಯಲ್ಲಿ ರಚಿಸಿದ್ದ ರೆತ್ ಸಮಾಧಿ ಕಾದಂಬರಿಯನ್ನು ಇದೀಗ ಪ್ರತಿಷ್ಠಿತ ಬೂಕರ್ ಪ್ರಶಸ್ತಿ ಅರಸಿಬಂದಿದೆ.

11ನೇ ಪುಟಕ್ಕೆ...



ಗೀತಾಂಜಲಿ ಶ್ರೀ

ಭಾರತದ ಲಂಡನ್ ಈ ಕೋಲ್ಕತ್ತ

ಸಿದ್ದು ಯಾಪಲಪರವಿ

ಬ್ರಿಟಿಷರು ನಮ್ಮನ್ನು ಆಳುವಾಗ ಬಂದರು ಸೌಲಭ್ಯ ಹೊಂದಿದ ನಗರಗಳನ್ನು ಗಾಢವಾಗಿ ಪ್ರೀತಿಸುತ್ತಿದ್ದರು. ಇದೇ ಕಾರಣದಿಂದ ಮದ್ರಾಸ್, ಕೋಲ್ಕತ್ತ ಮತ್ತು ಮುಂಬೈ ಕೇಂದ್ರಿತ ಆಡಳಿತ ಅವರದಾಗಿತ್ತು.

ಈ ಪೈಕಿ ಕೋಲ್ಕತ್ತ ಅತ್ಯಂತ ಪ್ರಾಚೀನ ಐತಿಹಾಸಿಕ ನಗರ. ಸಾಹಿತ್ಯ, ಸಂಸ್ಕೃತಿ, ಶಿಕ್ಷಣ, ರಾಜಕೀಯ, ಸ್ವಾತಂತ್ರ್ಯ ಹೋರಾಟ ಹೀಗೆ ಎಲ್ಲಾ ರಂಗಗಳಲ್ಲಿ ಈ ನಗರ ತನ್ನ ಹಿರಿಮೆ ಮೆರೆದಿದೆ. ನೋಬೆಲ್ ಪುರಸ್ಕೃತ ಕವಿ ರವೀಂದ್ರನಾಥ ಟ್ಯಾಗೋರ್ ಅವರ ಕಾರಣದಿಂದ ಕೋಲ್ಕತ್ತ ಜಾಗತಿಕ ಮನ್ನಣೆ ಪಡೆಯಿತು. ಅವರು ಆರಂಭಿಸಿದ ವಿಶ್ವಭಾರತಿ ವಿಶ್ವವಿದ್ಯಾಲಯ, ಶಾಂತಿನಿಕೇತನ ಜಾಗತಿಕ ಪ್ರವಾಸಿ ತಾಣವಾಗಿದೆ. ಅಂತರರಾಷ್ಟ್ರೀಯ ಸಂಬಂಧಗಳು ಮತ್ತು ಸಾಂಸ್ಕೃತಿಕ ಗಟ್ಟಿತನ ಭಾರತಕ್ಕೆ ಲಭಿಸಲು ಮಹರ್ಷಿ ರವೀಂದ್ರನಾಥರು ಕಾರಣರಾದರು.

ಇದರ ಜೊತೆಗೆ ಸುಭಾಶ್ಚಂದ್ರ ಬೋಸ್ ಅವರ ಸ್ವಾತಂತ್ರ್ಯ ಚಳವಳಿಯ ಸ್ವರೂಪದಿಂದ ಪಶ್ಚಿಮ ಬಂಗಾಳ ತನ್ನ ಚಳವಳಿಯ ಆಳವನ್ನು ವಿಸ್ತರಿಸಿಕೊಂಡಿತು. ಸಿನಿಮಾ ರಂಗದ ಭೀಷ್ಮ ಸತ್ಯಜಿತ್ ರೇ, ವೈದ್ಯಕೀಯ ಕ್ಷೇತ್ರದಲ್ಲಿ ಮದರ್ ತೆರೇಸಾರಂತಹ ಮಹನೀಯರ ಜೊತೆಗೆ ಈ ಊರನ್ನೇ ಕರ್ಮಭೂಮಿ ಮಾಡಿಕೊಂಡ ರಾಮಕೃಷ್ಣ ಪರಮಹಂಸರು ಮತ್ತು ಸ್ವಾಮಿ ವಿವೇಕಾನಂದರು ಆಧ್ಯಾತ್ಮಿಕ ಸಾಧನೆ ಮೂಲಕ ಲೋಕದ ಗಮನ ಸೆಳೆದರು. 'ವಿಶ್ವದ ಎಲ್ಲ ಹಾದಿಗಳು ಬಂಗಾಲದೆಡೆಗೆ' ಎಂಬ ಮಾತು ಜನಜನಿತವಾಯಿತು.

> ಎಲ್ಲಾ ರಂಗಗಳಲ್ಲಿ ಕೋಲ್ಕತ್ತ ತನ್ನ ಹಿರಿಮೆ ಮೆರೆದಿದೆ. ಈ ಊರನ್ನೇ ತಮ್ಮ ಕರ್ಮಭೂಮಿ ಮಾಡಿಕೊಂಡವರು ಹಲವರು. ಬಂಗಾಳದವರ ಇತಿಹಾಸ ಪ್ರಜ್ಞೆಯ ಪ್ರತೀಕವಾಗಿ ಇಲ್ಲಿ ಹಲವು ಸ್ಮಾರಕಗಳು ಕಣ್ಮುಂದೆ ನಿಲ್ಲುತ್ತವೆ...



ವಿಶ್ವಭಾರತಿ ವಿಶ್ವವಿದ್ಯಾಲಯ ಸ್ಥಾಪನೆಯಾದ ಶಾಂತಿನಿಕೇತನದ ನೋಟ

ಈ ಹಿಂದೆ 2006ರಲ್ಲಿ ಸಂಶೋಧನಾ ಅಧ್ಯಯನ ಕಾರಣದಿಂದ ಒಬ್ಬನೇ ಕೋಲ್ಕತ್ತಕ್ಕೆ ಹೋಗಿ ಬಂದಿದ್ದೆ, ಈಗ ಮತ್ತೊಮ್ಮೆ ವೃತ್ತಿಯ ಮಿತ್ರರು ಹಾಗೂ ಅವರ ಪರಿವಾರದ ಜೊತೆಗೆ ಶಾಂತಿನಿಕೇತನ ಮತ್ತು ಕೋಲ್ಕತ್ತ ಪ್ರವಾಸವನ್ನು ಮುಗಿಸಿಬಂದೆ.

ಶಾಂತಿನಿಕೇತನ ಮತ್ತು ಟ್ಯಾಗೋರ್ ಅವರ ಕೋಲ್ಕತ್ತ ಮನೆಯ ಭೇಟಿ ಅವಿಸ್ಮರಣೀಯ.

ಪ್ರವಾಸ

ಇದರ ಜೊತೆಗೆ ಬೇಲೂರು ರಾಮಕೃಷ್ಣ ಮಠದ ಭೇಟಿ ಬಹುದಿನಗಳ ಕನಸಾಗಿತ್ತು. ಗದುಗಿನ ರಾಮಕೃಷ್ಣ-ವಿವೇಕಾನಂದ ಆಶ್ರಮದ ಪೂಜ್ಯ ನಿರ್ಭಯಾನಂದರು ಬೇಲೂರು ಮಠದ ಕುರಿತು ಪ್ರಸ್ತಾಪ ಮಾಡಿದ್ದ ನೆನಪು ಮಾಸುವ ಮೊದಲು ಅಲ್ಲಿಗೆ ಹೋಗಿ ದರ್ಶನ ಪಡೆದೆ.

ಶತಮಾನದ ಇತಿಹಾಸ ಹೊಂದಿರುವ ಕೇಂದ್ರೀಯ ವಿಶ್ವವಿದ್ಯಾಲಯ ಶಾಂತಿನಿಕೇತನ ಈಗಲೂ ತನ್ನ ಗುಣಮಟ್ಟ ಕಾಪಾಡಿಕೊಂಡಿದೆ. ವಿಶೇಷವಾಗಿ ಸಂಗೀತ ಮತ್ತು ಲಲಿತಕಲಾ ವಿಭಾಗಗಳಿಗೆ ಜಾಗತಿಕ ಮನ್ನಣೆ ಇದೆ. ಸಾವಿರ ಎಕರೆ ವಿಶಾಲವಾದ ಸುಂದರ ಪರಿಸರದಲ್ಲಿ ನಿರ್ಮಾಣವಾದ ಗುರುಕುಲವಿದು. ಆಧ್ಯಾತ್ಮಿಕ ಹಿನ್ನೆಲೆಯ ಮಹರ್ಷಿ ರವೀಂದ್ರರು ದೇಶವಿದೇಶಗಳಲ್ಲಿ ನೆಲೆಸಿದ್ದ ಪ್ರತಿಭಾವಂತ ಪ್ರಾಧ್ಯಾಪಕರನ್ನು ಕರೆತಂದು ವಿಶ್ವವಿದ್ಯಾಲಯದ ಘನತೆ ಹೆಚ್ಚಿಸಿದರು.

ಮಹಾತ್ಮ ಗಾಂಧಿ, ಆಲ್ಬರ್ಟ್ ಐನ್‌ಸ್ಟೈನ್, ನೆಹರೂ, ಅಮೆರಿಕ ಮತ್ತು ಯುರೋಪಿಯನ್ ಬರಹಗಾರರು ರವೀಂದ್ರನಾಥರ ಪ್ರಭಾವಕ್ಕೆ ಒಳಗಾಗಿದ್ದರು. ಗೀತಾಂಜಲಿ ಮತ್ತು ಇತರ ಕೃತಿಗಳನ್ನು ರಚಿಸಿದ ಶಾಂತಿನಿಕೇತನದಲ್ಲಿ ಅದೇನೋ ವೈಬ್ರೇಶನ್ ಅನುಭವಕ್ಕೆ ದಕ್ಕುತ್ತದೆ. ಅಮರ್ತ್ಯ ಸೇನ್ ಅವರ ತಂದೆ ಎ.ಟಿ.ಸೇನ್ ಇಲ್ಲಿ ಪ್ರಾಧ್ಯಾಪಕರಾಗಿದ್ದರು. ಇಲ್ಲಿನ ಹೆಮ್ಮೆಯ ವಿದ್ಯಾರ್ಥಿ ಅಮರ್ತ್ಯ ಸೇನ್ ಈಗ ಜಗದ್ವಿಖ್ಯಾತ, ನೋಬೆಲ್ ಪುರಸ್ಕೃತ ಅರ್ಥಶಾಸ್ತ್ರಜ್ಞರು. ಹೀಗೆಯೇ ಪ್ರತಿಭಾನ್ವಿತರ ಪಡೆಯನ್ನು ನಿರ್ಮಾಣ ಮಾಡಿದ ಶೈಕ್ಷಣಿಕ ಮಂದಿರವಿದು.

ಕೋಲ್ಕತ್ತ ಈಗ ತುಂಬಾ ಬದಲಾದರೂ ತನ್ನ ಐತಿಹಾಸಿಕ ಮೌಲ್ಯ ಉಳಿಸಿಕೊಂಡಿದೆ. ಇಲ್ಲಿನವರ ಇತಿಹಾಸ ಪ್ರಜ್ಞೆ ಅನುಕರಣೀಯ. ಟ್ಯಾಗೋರ್ ಅವರ ಮನೆ ನೋಡುವಾಗ ಅವರ ಬದುಕಿನ ಪುಟಗಳು ಮೆರವಣಿಗೆ ಹೊರಟವು. ಎಷ್ಟೇ ಸಾಧನೆ ಮಾಡಿದ್ದರೂ, ಜನ ಬೇಗ ಮರೆತು ಬಿಡುತ್ತಾರೆ. ಆದರೆ ಸ್ಮಾರಕಗಳು ಮತ್ತು ಮ್ಯೂಸಿಯಂಗಳು ಇತಿಹಾಸವನ್ನು ಕಟ್ಟಿಕೊಡಲು ಯಶಸ್ವಿಯಾಗುತ್ತವೆ.

ಬೇಲೂರು ಮಠದ ಮ್ಯೂಸಿಯಂ ಮೂಲಕ ರಾಮಕೃಷ್ಣ ಪರಮಹಂಸ, ಮಾತೆ ಶಾರದಾ ದೇವಿ ಮತ್ತು ಸ್ವಾಮಿ ವಿವೇಕಾನಂದರ ಅಪರೂಪದ ಇತಿಹಾಸವನ್ನು ಪುನರ್ ನಿರ್ಮಾಣ ಮಾಡಿದ್ದಾರೆ. ಇದು ಬಂಗಾಳದವರ ಇತಿಹಾಸ ಪ್ರಜ್ಞೆಯ ಪ್ರತೀಕ. ವಿಕ್ಟೋರಿಯಾ ಮ್ಯೂಸಿಯಂ ಈಗ ಹೊಸ ಸ್ವರೂಪ ಪಡೆದಿದೆ. ಆಂಗ್ಲರ ಭಾರತದ ಮೇಲಿನ ವ್ಯಾಮೋಹಕ್ಕೆ ಅವರು ನಿರ್ಮಿಸಿದ ಅನೇಕ ಭವ್ಯ ಕಟ್ಟಡಗಳೇ ಸಾಕ್ಷಿ. ಹಾಗೆನೇ ಹೌರಾ ಸೇತುವೆ ಮತ್ತು ವಿಕ್ಟೋರಿಯಾ ಮ್ಯೂಸಿಯಂ ಸಾಂಕೇತಿಕ ಉದಾಹರಣೆಗಳು.


ನಮ್ಮ ರಾಜ್ಯದ ಸಾಂಸ್ಕೃತಿಕ ಹಿರಿಮೆಯನ್ನು ಕಾಪಾಡಲು ನಾವು ವಿಫಲರಾಗಿದ್ದೇವೆ ಎಂಬ ನೋವು ಕಾಡಿದ್ದು ಸಹಜ. ಕನ್ನಡದ ಬರಹಗಾರರು ಮತ್ತು ಸಾಹಿತ್ಯಾಸಕ್ತರು ಕೋಲ್ಕತ್ತಕ್ಕೆ ಭೇಟಿ ನೀಡಿ ಕನ್ನಡದ ಅಸ್ಮಿತೆಗೊಂದು ಆಯಾಮ ನೀಡುವುದನ್ನು ಕಲಿಯಬೇಕು. ವಿಶ್ವವಿದ್ಯಾಲಯಗಳೆಂದರೆ ಕೇವಲ ಭವ್ಯ ಕಟ್ಟಡಗಳಲ್ಲ ಎಂಬುದನ್ನು ನಮ್ಮ ಕುಲಪತಿಗಳು, ಶಿಕ್ಷಣ ತಜ್ಞರು ಅರಿಯುವ ಅಗತ್ಯ ತುಂಬಾ ಇದೆ.

ಸಾಹಿತ್ಯ, ಶಿಕ್ಷಣ ಮತ್ತು ಸಂಸ್ಕೃತಿಯ ಮರು ವ್ಯಾಖ್ಯಾನವಾದಾಗ ಬದಲಾವಣೆ ಸಾಧ್ಯ. ಹೊಸ ಹೊಸ ಶೈಕ್ಷಣಿಕ ನೀತಿಗಳು ಯುವಕರ ಜ್ಞಾನ ಹೆಚ್ಚಿಸಿ, ಉದ್ಯೋಗಾವಕಾಶಗಳನ್ನು ಕಲ್ಪಿಸಿದಾಗ ಮಾತ್ರ ನಿಜವಾದ ಅಭಿವೃದ್ಧಿ ಸಾಧ್ಯ ಎಂಬ ಭಾವನೆ ಸ್ಥಾಯಿ ರೂಪ ಪಡೆಯಿತು. ಮೈ ಬೆವರು, ಉರಿಬಿಸಿಲು ಮತ್ತು ಆಹಾರದ ರುಚಿಯನ್ನು ಲೆಕ್ಕಿಸದೆ ನಾಲ್ಕಾರು ದಿನ ಸುತ್ತಾಡಿ ಜ್ಞಾನದ ಹಸಿವನ್ನು ನೀಗಿಸಿಕೊಂಡ ಸಾರ್ಥಕ ಭಾವ. ಇಲ್ಲಿ ಸುತ್ತಾಡುವ ಹೊತ್ತಿನಲ್ಲಿ ಅನೇಕ 'ಸಾಹಿತ್ಯ ಸಂಗಾತಿಗಳು' ನೆನಪಾದದ್ದು ಸಹಜ. ❖



ಕೋಲ್ಕತ್ತದಲ್ಲಿರುವ ರವೀಂದ್ರನಾಥ ಟ್ಯಾಗೋರ್ ಅವರ ನಿವಾಸ

ಹೊಳೆವ ಮುಖದ...



10ನೇ ಪುಟದಿಂದ...

ಹಾಗೆ ಸ್ಥಗಿತವಾದ ಈ ಗಣಿಗಳನ್ನು ಪಡೆದುಕೊಂಡ ಸ್ಥಳೀಯರು ಕಾನೂನುವಿರೋಧಿಯಾಗಿ ಗಣಿಗಾರಿಕೆ ಆರಂಭಿಸಿದರು. ಯಾರು ತುಸು ತಪ್ಪು ಮಾಡಿದರೂ, ಎಲ್ಲರೂ ಜೀವಸಮಾಧಿಯಾಗಬಹುದಾದ ಈ ಸುರಂಗಗಳೇ ಅಲ್ಲಿನ ಬಡಜನರ ಪಾಲಿನ ಅನ್ನದ ಬಟ್ಟಲುಗಳಾಗಿವೆ. ಈ ಗಣಿಗಾರಿಕೆಯೇ ಕಾನೂನುವಿರೋಧಿಯಾದ್ದರಿಂದ ಇಲ್ಲಿ ಘಟಿಸುವ ಸಾವುಗಳಿಗೆ ಪರಿಹಾರವೂ ಸಿಗುವುದಿಲ್ಲ. ಹೀಗೆ ತೆಗೆದ ಅದಿರಿನ ಪ್ರತಿ ಕೆ.ಜಿ.ಗೆ ₹ 7ರಂತೆ ಒಬ್ಬರಿಗೆ ದಿನಕ್ಕೆ ಗರಿಷ್ಠ ಸಿಗುವುದು ನೂರರಿಂದ ನೂರೈವತ್ತು ರೂಪಾಯಿ ಮಾತ್ರ. ಇವತ್ತಿಗೂ ಅಲ್ಲಿ ಪ್ರತಿ ತಿಂಗಳು 40ರಿಂದ 50 ಹೊಸ ಕ್ಷಯರೋಗದ ಕೇಸುಗಳು, 15–20 ಸಾವುಗಳು ಮತ್ತು ಲೆಕ್ಕವಿಲ್ಲದಷ್ಟು ರಕ್ತಹೀನತೆಯ ಪ್ರಕರಣಗಳು ವರದಿಯಾಗುತ್ತವೆ. ಜೀವಹಾನಿಯೇ ಈ ಮಟ್ಟದಲ್ಲಿರುವಾಗ ಗಣಿ ವಿಸ್ತರಣೆಗಾಗಿ ನಡೆಯುವ ಅಪಾರ ಪ್ರಮಾಣದ ಅರಣ್ಯನಾಶ, ಅಪರೂಪದ ವನ್ಯಜೀವಿಗಳ ಅಳಿವು ಮತ್ತು ಶಾಲೆಯಿಂದ ಹೊರಗುಳಿದ ಸಾವಿರಗಟ್ಟಲೆ ಬಾಲಕಾರ್ಮಿಕರ ಬಗ್ಗೆ ಹೇಳುವಂತೆಯೇ ಇಲ್ಲ. ಬಿಳಿಬಣ್ಣದ ಮೋಹದ ಸಂಕೇತವಾಗಿ ನಮ್ಮ ಮುಖಗಳ ಮೇಲೆ ಮೆತ್ತಿಕೊಂಡಿರುವ ಪ್ರಸಾಧನ ಸಾಮಗ್ರಿಗಳ ಹಿಂದೆ ಇಂಥ ಕರುಣಾರ್ದ್ರವಾದ ಭೀಕರ ವಾಸ್ತವವಿದೆ ಎಂಬುದು ಬಹುಜನರಿಗೆ ತಿಳಿದಿಲ್ಲ.

ಇಂದು ಪ್ರಸಾಧನ ಸಾಮಗ್ರಿಗಳ ವ್ಯವಹಾರವು ಮಿಲಿಯನ್ ಡಾಲರ್‌ಗಳ ಗಡಿ ದಾಟಿದೆ. ಹಾಗೆ ನೋಡಿದರೆ ವಿಕಾಸವಾದದ ಪ್ರಕಾರ ಮಿಲಿಯಾಂತರ ವರ್ಷಗಳ ಹಿಂದೆ ಈ ಭೂಮಿ ಮೇಲೆ ಮೊದಲ ಮಾನವ ಕಾಣಿಸಿಕೊಂಡಿದ್ದೇ ಆಫ್ರಿಕಾದಲ್ಲಿ. ಬ್ರಿಟಿಷರು ತಮ್ಮ ವಸಾಹತುಗಳನ್ನು ಜಗತ್ತಿನಾದ್ಯಂತ ಸ್ಥಾಪಿಸಿಕೊಂಡ ಮೇಲೆ 'ಆಳುವವರ ಬಣ್ಣವೇ ಶ್ರೇಷ್ಠವೆಂಬ ಬಲವಂತದ ಹೇರಿಕೆಯಲ್ಲಿ ಮತ್ತು ಅನಿವಾರ್ಯ ಒಪ್ಪಿಗೆಯಲ್ಲಿ' ಬಿಳಿಗೆ ಮಹತ್ವ ಬಂತು. ಹಾಗೆ ಸೌಂದರ್ಯ ನಿರ್ಧಾರಕ್ಕೆ ಒಂದು ಅಪಮಾರ್ಗ ಹಾಕಿಕೊಟ್ಟ ರಾಜಕಾರಣವು ಕಾಲಾನುಕ್ರಮದಲ್ಲಿ ಅದುವೇ ಸರಿಯಾದುದೆಂದು ಬಿಂಬಿಸಿ, ನಂಬಿಸಿ ಜಗತ್ತಿನ ಸೌಂದರ್ಯಕಲ್ಪನೆಯನ್ನೇ ಬುಡಮೇಲಾಗಿಸಿಬಿಟ್ಟಿತು. ಭಾರತದಂಥ ವಸಾಹತಿನಲ್ಲಿಯಂತೂ ಲಾಗಾಯ್ತಿನಿಂದ ಇದ್ದ ಜಾತಿಪದ್ಧತಿಯ ಮೇಲರಿಮೆಯೂ ಸೇರಿಕೊಂಡು ಗೌರವರ್ಣಕ್ಕೆ ಇನ್ನಿಲ್ಲದ ಪ್ರಾಶಸ್ತ್ಯ ಮತ್ತು ಪ್ರತಿಷ್ಠೆ ದೊರಕಿಬಿಟ್ಟಿತು. ಹಾಗೆ ಮನಸ್ಸಿಗೆ ಹೇಗೆ ನೋಡಬೇಕೆಂದು ಕಲಿಸಲಾಯಿತೋ, ಆ ದೃಷ್ಟಿಕೋನದಿಂದಲೇ ಕಣ್ಣುಗಳು ಬಣ್ಣವನ್ನು ನೋಡತೊಡಗಿ ಕಪ್ಪು ಕೀಳಾಯಿತು. ಮೇಕಪ್ಪು ಮೇಲಾಯಿತು. ಮೈಬಣ್ಣ ಸಹಜ, ಮೇಕಪ್ಪು ಕೃತಕ ಎಂಬುದನ್ನು ಮರೆತ ಅರ್ಥಹೀನ ಹುಸಿ ಮೇಲರಿಮೆಯ ವರ್ಣಬೇಧ ನೀತಿಯಿಂದಾಗಿ ಇಡೀ ಪ್ರಪಂಚ ಕೀಳ್ತನದ ಭಾರದಲ್ಲಿ ನಲುಗುವಂತಾಯಿತು.

21ನೇ ಶತಮಾನದ ಆಧುನಿಕ ಕಾಲದಲ್ಲೂ ಕಪ್ಪೆಂಬ ಕಾರಣಕ್ಕೆ ಜಾರ್ಜ್ ಫ್ಲಾಯ್ಡ್ ಹಾಡಹಗಲೇ ನಡುರಸ್ತೆಯಲ್ಲಿ ಅದೂ ಪ್ರಭುತ್ವ ಪ್ರತಿನಿಧಿಯಿಂದಲೇ ಕೊಲೆಯಾದರು. ಸ್ತ್ರೀಯರ ಕಥೆಯಂತೂ ಇನ್ನೂ ಗಂಭೀರವಾಗಿದೆ. ಇದರ ಬಗ್ಗೆ 1960ರಲ್ಲೇ ರಾಮಮನೋಹರ ಲೋಹಿಯಾ ಅವರು `ಸೌಂದರ್ಯ ಮತ್ತು ಮೈಬಣ್ಣ' (ಅನು: ಕೆ.ವಿ.ಸುಬ್ಬಣ್ಣ) ಎಂಬ ವಿಚಾರಪ್ರಚೋದಕ ಲೇಖನ ಬರೆದರು. ತಮ್ಮ ಕಾಲಕ್ಕಿಂತ ಮುಂದೆ ನಿಂತು ಯೋಚಿಸಬಲ್ಲವರಾಗಿದ್ದ ಲೋಹಿಯಾರವರು ಅದೇ ಲೇಖನದಲ್ಲಿ ಮುಂದುವರಿದು 'ಕಪ್ಪು-ಬಿಳಿಗಳ ನಡುವೆ ಬಡತನ-ಶ್ರೀಮಂತಿಕೆಗಳ ನಡುವಿರುವಂತೆ ಅಸಂಖ್ಯಾತ ಮೆಟ್ಟಿಲುಗಳಿವೆ. ಕಡುಗಪ್ಪಿನಿಂದ ಶುರುವಾಗಿ ಕಡುಕಂದು, ಕಂದು, ಕೌಲು, ಎಣ್ಣೆಗೆಂಪು, ಗೋಧಿಗೆಂಪು, ತಿಳಿಹಳದಿ, ಗೌರವರ್ಣ, ಅಚ್ಚ ಬಿಳುಪುಗಳವರೆಗೆ ಈ ವ್ಯಾಪ್ತಿ ಹರಡಿದೆ. ಪ್ರತಿ ಮೆಟ್ಟಿಲೂ ತನ್ನನ್ನು ಮೇಲಿನವನಿಗೆ ಹತ್ತಿರವೆಂದು ಭಾವಿಸಿಕೊಂಡು ಇಲ್ಲದ ಮೇಲರಿಮೆಯಲ್ಲಿ ಮೆರೆಯಲು ತವಕಿಸುತ್ತದೆ. ಮೈಬಣ್ಣ ಮತ್ತು ಸೌಂದರ್ಯ ಅಂತರಗಳನ್ನು ಗುರುತಿಸುವಲ್ಲಿ ರಸಪ್ರಜ್ಞೆಯ ಒಂದು ಹೊಸಕ್ರಾಂತಿಯೇ ನಡೆಯಬೇಕು' ಎಂದು ಕರೆ ನೀಡಿದ್ದು ಇಂದಿಗೂ ಹೊಂದುವಂತಿದೆ.

ರಾಜಕಾರಣದ ನಂತರ ವೇದಿಕೆಗೆ ಪ್ರವೇಶಿಸಿದ ಮಾರುಕಟ್ಟೆಯು ಈ ವ್ಯತ್ಯಾಸ ಮತ್ತು ಕೀಳರಿಮೆಗಳನ್ನೇ ಬಂಡವಾಳವಾಗಿಸಿಕೊಂಡು ಬಹುದೊಡ್ಡ ಮಾರುಕಟ್ಟೆಯಾಗಿರುವ ತೃತೀಯ ಜಗತ್ತಿನ ರಾಷ್ಟ್ರಗಳನ್ನು ಗುರಿಯಾಗಿಸಿಕೊಂಡು, ತನ್ನ ಗುರಿ ಸಾಧನೆಗಾಗಿ ಇಲ್ಲಿನವರ ಬದುಕನ್ನೇ ಪಣಕ್ಕೊಡ್ಡಿತು. ಮೈಯ ಬಣ್ಣಕ್ಕಿರುವ ವೈಜ್ಞಾನಿಕ ಕಾರಣ ಮತ್ತು ಅದನ್ನು ಮರೆಮಾಚುವಂತೆ ವ್ಯವಸ್ಥಿತವಾಗಿ ನಡೆದಿರುವ ಮಾರುಕಟ್ಟೆ ಪ್ರಣೀತ ರಾಜಕಾರಣದ ಅಬ್ಬರ- ಇವುಗಳ ಬಗ್ಗೆ ಪ್ರಭುತ್ವಗಳಿಗೆ, ಜನಸಾಮಾನ್ಯರಿಗೆ ತಿಳಿಹೇಳಬೇಕಾದ ಕೆಲಸವು ಪ್ರಸಾಧನ ಸಾಮಗ್ರಿಗಳ ಜಾಹೀರಾತುಗಳಷ್ಟು ವ್ಯವಸ್ಥಿತವಾಗಿ ಹಾಗೂ ಪ್ರಭಾವಶಾಲಿಯಾಗಿ ನಡೆಯಲೇ ಇಲ್ಲ.

ವೈಜ್ಞಾನಿಕವಾಗಿ ನೋಡಿದರೆ ನಮ್ಮ ಚರ್ಮ, ಕಣ್ಣು ಮತ್ತು ಕೂದಲುಗಳಿಗೆ ಬಣ್ಣ ಕೊಡುವುದು ಮೆಲನಿನ್ ಎಂಬ ದ್ರವ್ಯ. ಪ್ರತಿ ವ್ಯಕ್ತಿಯ ಚರ್ಮದಲ್ಲಿರುವ ಮೆಲನಿನ್ ಪ್ರಮಾಣವು ಅವರ ಜೀನ್ಸ್‌ಗಳಿಂದ ನಿರ್ಧಾರವಾಗುತ್ತದಾದ್ದರಿಂದ ಇದರಲ್ಲಿ ಆ ವ್ಯಕ್ತಿಯ ಪಾತ್ರವೇನಿಲ್ಲ. ಹಾಗಾಗಿ ಬಿಳುಪಿನವನ ಮೇಲರಿಮೆಯು ಕಪ್ಪಿನವನ ಕೀಳರಿಮೆಯಷ್ಟೇ ಅರ್ಥಹೀನವಾದುದು, ಅಕಾರಣವಾದುದು ಮತ್ತು ಬಾಲಿಶವಾದುದು. ಹಾಗೆ ನೋಡಿದರೆ ಮೆಲನಿನ್ ಸಾಂದ್ರವಾಗಿರುವ ಕಪ್ಪು ಬಣ್ಣವು ತಕ್ಕ ಮಟ್ಟಿಗೆ ಸುಕ್ಕುಗಳಿಂದ, ಕ್ಯಾನ್ಸರಿನ ಸಾಧ್ಯತೆಗಳಿಂದ ನಮ್ಮನ್ನು ರಕ್ಷಿಸುತ್ತದೆ. ಅಂದರೆ ಕಪ್ಪಿನ ಕೀಳಿಗೆ ಕಾರಣ ಆರೋಗ್ಯಸಂಬಂಧಿ ವಾಸ್ತವದೊಳಗೂ ಇಲ್ಲವೆಂದಾಯಿತು.

ನಮ್ಮ ಆತ್ಮಗೌರವವನ್ನು ಅಣಕಿಸುವ, ಕಪ್ಪಿನ ಕುರಿತ ಅಸೂಕ್ಷ್ಮ ಜೋಕುಗಳು ಆಳದಲ್ಲಿ ಇಂಥ ಸುಪ್ತ ಜನಾಂಗೀಯ ದ್ವೇಷದ ಪೂರ್ವಗ್ರಹ ಧೋರಣೆಯಿಂದ ಪ್ರಭಾವಿತವಾದಂಥವು ಎಂದು ನಾವು ಅರಿಯಬೇಕಾದ ಅಗತ್ಯವಿದೆ. ಸಾಯಿಪಲ್ಲವಿ ಎಂಬ ಭಾರತೀಯ ನಟಿ 2 ಕೋಟಿ ರೂಪಾಯಿಯ ಫೇರ್‌ನೆಸ್ ಕ್ರೀಮ್ ಬ್ರ್ಯಾಂಡ್‌ನ ಜಾಹೀರಾತನ್ನು ನಿರಾಕರಿಸಿದ್ದರು. ಆಕೆ 'ಸುಂದರ ತ್ವಚೆಯೇ ಸೌಂದರ್ಯದ ಮಾನದಂಡ ಎಂಬುದೇ ಒಂದು ಅಸಂಬದ್ಧ' ಎಂದಾಗ ಜನ ಹುಬ್ಬೇರಿಸಿದ್ದರು. ರಣಬೀರ್ ಕಪೂರ್ ಕೂಡ ಇದೇ ಥರದ ಕಾರಣ ನೀಡಿ 9 ಕೋಟಿ ರೂಪಾಯಿಯ ಜಾಹೀರಾತಿನಲ್ಲಿ ನಟಿಸಲು ನಿರಾಕರಿಸಿದ್ದರು. 'ಸೌಂದರ್ಯವರ್ಧಕ ಜಾಹೀರಾತುಗಳಿಂದ ಲಕ್ಷಾಂತರ ಯುವತಿಯರು ಕೀಳರಿಮೆ, ಹಿಂಜರಿಕೆ ಅನುಭವಿಸುತ್ತಿದ್ದಾರೆ' ಎನ್ನುವ ನಟಿ ನಂದಿತಾ ದಾಸ್ ಅವರು 'ಡಾರ್ಕ್ ಈಸ್ ಬ್ಯೂಟಿಫುಲ್' ಎಂಬ ಆಂದೋಲನವನ್ನೇ ನಡೆಸುತ್ತಿದ್ದಾರೆ.

ಹಾಗೆ ನೋಡಿದರೆ 'ಸೌಂದರ್ಯವರ್ಧಕ' ಎಂಬ ಪದವೇ ತಪ್ಪು. ಅದು ಉದ್ದೇಶಪೂರ್ವಕವಾಗಿ, ಪ್ರಜ್ಞಾಪೂರ್ವಕವಾಗಿ ಟಂಕಿಸಲಾದ ಒಂದು ಮಹಾಮೋಸದ ಪದಪುಂಜ. ಅವೇನಿದ್ದರೂ ಕೇವಲ ಪ್ರಸಾಧನ ಸಾಮಗ್ರಿಗಳಷ್ಟೇ ಎಂಬುದು ನಮಗೆ ತಿಳಿಯಬೇಕು. ತಾಪ್ಸಿ ಪನ್ನು, ಕಲ್ಕಿ, ಸೋನಾ ಮೊಹಾಪಾತ್ರಾ, ಅನುಷ್ಕಾ ಶರ್ಮಾ, ಸೋನಾಲ್ ಸೆಹಗಲ್ (ಡ್ಯಾನ್ಸಿಂಗ್ ಇನ್ ದ ಡಾರ್ಕ್ ಖ್ಯಾತಿ) ಮುಂತಾದ ಎಷ್ಟೋ ಜನ ಬೇರೆ ಬೇರೆ ವಿಧದಲ್ಲಿ ಈ ಅತಿ ಸೂಕ್ಷ್ಮ ಕ್ರೌರ್ಯದ ವಿರುದ್ಧ ದನಿಯೆತ್ತಿದ್ದನ್ನು ಗುರುತಿಸಿ ಗೌರವಿಸಬೇಕು. ಇದಕ್ಕೊಂದು ತಕ್ಕಮಟ್ಟಿಗಿನ ಪರಿಹಾರವೆಂದರೆ ಎಲ್ಲ ರಂಗದಲ್ಲಿರುವ ಭಾರತೀಯ ಸೆಲೆಬ್ರಿಟಿಗಳು ಮೊದಲು 'ನಮ್ಮ ಮೈಬಣ್ಣ, ನಮ್ಮ ಅಸ್ಮಿತೆ' ಎಂದು ಗಟ್ಟಿಯಾಗಿ ಹೇಳುವಂತಾಗಬೇಕು. ಇದು ಅವರ ಮಿಲಿಯಗಟ್ಟಲೆ ಅಭಿಮಾನಿಗಳ ಮನಃಸ್ಥಿತಿಯನ್ನು ನಿಧಾನವಾಗಿಯಾದರೂ ಬದಲಿಸಬಹುದು. ಆಗ ಚಿತ್ರರಂಗಗಳು ಕೂಡ ನಟರ ಮೈಬಣ್ಣದ ವಿಚಾರದಲ್ಲಿ ತೋರಿರುವ ಉದಾರಭಾವವನ್ನು ನಟಿಯರಿಗೂ ವಿಸ್ತರಿಸಲು ಕಲಿಯುತ್ತವೇನೋ. ಸೆಲೆಬ್ರಿಟಿಗಳು, ನಟರಲ್ಲದೆ; ಅಧಿಕಾರಿಗಳು, ಶಿಕ್ಷಕರು ಮತ್ತು ಮಾಧ್ಯಮಗಳಂಥ ಅಭಿಪ್ರಾಯ ಮುಖಂಡರ ಮೂಲಕವೂ ಈ ಅಭಿಯಾನವು ಎಲ್ಲ ರಂಗಗಳಲ್ಲಿ, ಎಲ್ಲ ದಿಕ್ಕುಗಳಲ್ಲಿ ಹರಡಬೇಕು. ಹಾಗಾದಾಗಲೇ ಅತಿ ಮೇಕಪ್ಪಿನಲ್ಲಿರುವ ಒಬ್ಬ ಅಪ್ರಬುದ್ಧ ವ್ಯಕ್ತಿಯು, ಮೈಕಾ ಗಣಿಗಳಲ್ಲಿ ಮಣ್ಣಾದವರ ರಕ್ತವನ್ನು ಮೆತ್ತಿಕೊಂಡ ರಾಕ್ಷಸನಂತೆ ನಮಗೆ ಕಾಣಿಸಬಹುದು. ಅದೇ ಸಂದರ್ಭಕ್ಕೆ ಸಹಜ ಅಂತಃಶಕ್ತಿಯಿಂದ, ವಿದ್ವತ್ ಪ್ರತಿಭೆಯಿಂದ, ಉದಾತ್ತ ಗುಣದಿಂದ ಭೂಷಿತರಾದವರು ಕಪ್ಪಾದರೂ ತ್ರಿಭುವನ ಸುಂದರರೆಂದು ಅರಿತು ಪಾಲಿಸುವಷ್ಟು ನಮ್ಮ ದೃಷ್ಟಿಕೋನ ಸೂಕ್ಷ್ಮವಾಗಬಹುದು. ಆಗ ಮಾತ್ರ ಕಥೆ ಪುಸ್ತಕಗಳಲ್ಲಿ ಪಾತ್ರವಾಗಿರುವ ರಾಣಿಯಂಥವರು ನಿಜದ ವ್ಯಕ್ತಿತ್ವಗಳೇ ಆಗಿ ಉದಿಸುವಂಥ ಹಾದಿ ಇನ್ನಷ್ಟು ಸುಗಮವಾಗಿ 'ರಸಪ್ರಜ್ಞೆಯ ಹೊಸ ಕ್ರಾಂತಿ' ನಡೆಯಬಹುದು. ❖

...ಬೂಕರ್

10ನೇ ಪುಟದಿಂದ...

ಈ ಎಂಬತ್ತು ವರ್ಷದ ಅಜ್ಜಿ, ಗಂಡ ಸತ್ತ ನಂತರ ಖಿನ್ನತೆಗೆ ಜಾರಿದವಳು, ಮನೆ, ಮಕ್ಕಳಿಗೆ ಬೆನ್ನುಮಾಡಿ ಗೋಡೆಗೆ ಮುಖಮಾಡಿದವಳು, ಗೋಡೆಯಿಂದ ತೂರಿಬಂದಳೇನೋ ಎಂಬಂತೆ ಪುಟಿದೇಳುತ್ತಾಳೆ, ಆದರೆ ಅವಳದೀಗ ಬೇರೆಯದೇ ಚಹರೆ. ಎಲ್ಲ ಗಡಿಗಳನು ಮೀರಿದವಳಂತೆ ತನ್ನ ಮೂಲನೆಲೆಯಾಗಿದ್ದ ಪಾಕಿಸ್ತಾನಕ್ಕೆ ಹೋಗುತ್ತಾಳೆ. ಅವಳೊಂದಿಗೆ ಕಾದಂಬರಿಯೂ, ಅಜ್ಜಿ ಮತ್ತು ಅವಳ ಹಲವು ಬಾಂಧವ್ಯಗಳನ್ನು ಶೋಧಿಸುತ್ತ ಹೋಗುತ್ತದೆ.

ಬೂಕರ್‌ನ ಹದಿನೇಳು ವರ್ಷಗಳ ಇತಿಹಾಸದಲ್ಲಿ ಹಿಂದಿ ಕಾದಂಬರಿಗೆ ದಕ್ಕಿದ ಮೊತ್ತಮೊದಲ ಪ್ರಶಸ್ತಿ ಇದು, ಗೀತಾಂಜಲಿ, ಬೂಕರ್ ಪಡೆದ ಮೊದಲ ಭಾರತೀಯರು ಕೂಡ. ಈ ಕಾದಂಬರಿಯ ಇನ್ನೊಂದು ವಿಶೇಷವೆಂದರೆ ಕಥೆಯ ಕೆಲವು ಭಾಗಗಳನ್ನು ಯಾರಾದರೂ, ಯಾವುದಾದರೂ ವಸ್ತು ನಿರೂಪಿಸಿರುವುದು... ಹಕ್ಕಿ, ಚಿಟ್ಟೆ, ಗೋಡೆ, ಬಾಗಿಲು, ರಸ್ತೆ ಎಲ್ಲವೂ ಕಥೆಯನ್ನು ನಿರೂಪಿಸುತ್ತವೆ. ಅಷ್ಟೇಕೆ ಕಥಾಪಾತ್ರಗಳಲ್ಲಿ ಒಂದಲ್ಲ, ಕಥೆಗೆ ಸೇರಿಯೇ ಇಲ್ಲ, ಆದರೂ ಆ ಕ್ಷಣಕ್ಕೆ ಘಟನೆ ನಡೆದ ಕ್ಷಣಕ್ಕೆ ಅಲ್ಲಿದ್ದೆ ಎಂದು ಕಥೆ ನಿರೂಪಿಸುತ್ತ, ಹೀಗೆ ಸೇರಿಕೊಂಡಿದ್ದಕ್ಕೆ ಮನ್ನಿಸಿ ಎಂದು ಕೇಳುವ ಪಾತ್ರವೂ ಕಾದಂಬರಿಯಲ್ಲಿದೆ.

ತುಂಬ ಅನನ್ಯವಾದ ನಿರೂಪಣಾ ಶೈಲಿ, ಹಿಂದಿ ಭಾಷೆಯನ್ನು ಮುರಿದು ಕಟ್ಟಿರುವ ವಿಧಾನ, ರೂಪಕಗಳಲ್ಲಿ ಚಿತ್ರವತ್ತಾಗಿ ಕಟ್ಟಿಕೊಟ್ಟಿರುವ ರೀತಿ, ಹಲವು ಪದರಗಳಲ್ಲಿ ಸಾಗುವ ಕಥನವನ್ನು ಹಿಡಿದಿಟ್ಟಿರುವ ಬಿಗಿಯಾದ ಬಂಧ ಮೂಲ ಹಿಂದಿ ಕಾದಂಬರಿಯ ವಿಶೇಷ. ಹಿಂದಿಯ ಪುಟ್ಟ ಪುಟ್ಟ ವಾಕ್ಯಗಳು ನೇರವಾಗಿ ಹೃದಯಕ್ಕೆ ಇಳಿಯುತ್ತವೆ. ಅನುವಾದದಲ್ಲಿ ಆ ಸೊಬಗು ಇಲ್ಲ. ಇಂಗ್ಲಿಷ್‌ನಲ್ಲಿ ಸುಮಾರು 700 ಪುಟಗಳ ಈ ಸುದೀರ್ಘ ಕಾದಂಬರಿ ಸುತ್ತಲ ಜಗತ್ತಿನ ಸಮೃದ್ಧ ಬಹುತ್ವವನ್ನು, ಹಲವಾರು ಸಂಗತಿಗಳು ಏಕತ್ರವಾಗಿ ಬೆರೆತು ಒಂದಾಗಿರುವುದನ್ನು ಹೇಳುತ್ತಲೇ, ದೇಶಗಳ ನಡುವಣ ಗಡಿಗಳ ಭ್ರಮೆಯನ್ನು, ಅಸಂಗತತೆಯನ್ನು ಚಿತ್ರಿಸುತ್ತದೆ.

ತಮಗೆ ಈ ಕಾದಂಬರಿ ಬರೆಯಲು ಮೊದಲು ಸ್ಫೂರ್ತಿಯಾಗಿದ್ದು ಏನು ಎಂಬುದಕ್ಕೆ ಗೀತಾಂಜಲಿ ಹೇಳಿದ್ದು, 'ಎ.ಕೆ. ರಾಮಾನುಜನ್ ಒಂದು ಕಡೆ ಹೇಳಿದ್ದಾರೆ, ನೀವು ನಿಮ್ಮ ಕವನಗಳನ್ನು ಆರಿಸಿಕೊಂಡು, ಬೆನ್ನಟ್ಟುವುದಿಲ್ಲ. ನೀವೊಂದು ಕಡೆಗಿದ್ದಾಗ, ಅದು ತನ್ನಷ್ಟಕ್ಕೆ ಜರುಗುತ್ತೆ ಅಂತ. ನೀವು ಬರಹಗಾರರಾಗಿದ್ದರೆ, ಎಲ್ಲಾ ಸಮಯದಲ್ಲಿಯೂ ಕಥೆಗಳು ನಿಮ್ಮ ಇಂದ್ರಿಯಗಳನ್ನು ಆವರಿಸಿಕೊಂಡಿರುತ್ತವೆ. ಎಲ್ಲವೂ ಕಥೆಯೇ ಹಾಗೂ ಪ್ರತಿಯೊಂದೂ ಏನೋ ಕಥೆಯನ್ನು ಹೇಳುತ್ತೆ ಅಂತ ನಿಮಗರಿವಾಗುತ್ತದೆ. ನಿಮಗೆ ಅದು ಉಸಿರಾಟದಷ್ಟೇ ಸಹಜವಾಗುತ್ತೆ, ಅಥವಾ ಅದೇ ನಿಮ್ಮ ಉಸಿರಾಗುತ್ತೆ. ಆಮೇಲೆ ನೀವು ಕಾಯ್ತೀರಿ... ನೀವು ಏಕಾಂಗಿಯಾಗಿ, ಸ್ವೀಕರಿಸಲು ಸಿದ್ಧವಾಗಿದ್ದಾಗ ಸ್ಫೂರ್ತಿದೇವತೆ ನಿಮ್ಮೊಳಗನ್ನು ಆವರಿಸಿಕೊಳ್ತಾಳೆ... ಯಾವುದೋ ಸಂಗತಿ ಪ್ರಚೋದಿಸುತ್ತೆ... ಕಥೆ ನಿಧಾನವಾಗಿ, ನಿಶ್ಚಿತವಾಗಿ ಬಿಚ್ಚಿಕೊಳ್ತಾ ಹೋಗುತ್ತೆ'.

ಉತ್ತರಪ್ರದೇಶದ ಮೈನ್‌ಪುರಿಯಲ್ಲಿ 1957ರಲ್ಲಿ ಹುಟ್ಟಿದ ಗೀತಾಂಜಲಿಯವರು ಬೆಳೆದಿದ್ದು ಅದೇ ರಾಜ್ಯದ ವಿವಿಧ ನಗರಗಳಲ್ಲಿ. ತಂದೆ ಸರ್ಕಾರಿ ಅಧಿಕಾರಿ. ಓದಿದ್ದು ಇಂಗ್ಲಿಷ್ ಮಾಧ್ಯಮದ ಶಾಲೆಗಳಲ್ಲಾದರೂ ಆ ಕಾಲಕ್ಕೆ ಇಂಗ್ಲಿಷ್‌ನಲ್ಲಿ ಮಕ್ಕಳ ಪುಸ್ತಕಗಳು ಹೆಚ್ಚು ಸಿಗುತ್ತಿರಲಿಲ್ಲವಾದ್ದರಿಂದ ಹಿಂದಿ ಪುಸ್ತಕಗಳನ್ನು ಓದುತ್ತಿದ್ದರು. ಜೊತೆಗೆ ಕಿವಿಯ ಮೇಲೆ ಬೀಳುತ್ತಿದ್ದ ಆಡುನುಡಿಯ ಹಿಂದಿ. ಹೀಗಾಗಿ ಹಿಂದಿಯಲ್ಲೇ ಬರವಣಿಗೆ ಆರಂಭಿಸಿದ ಗೀತಾಂಜಲಿಯವರ ಮೊದಲ ಕಥಾ ಸಂಕಲನ ಅನುಗೂಂಜ್ ಪ್ರಕಟವಾಗಿದ್ದು 1991ರಲ್ಲಿ.

ಉತ್ತರಭಾರತದ ಮಧ್ಯಮ ವರ್ಗದ ಕುಟುಂಬವೊಂದರ ಮೂರು ತಲೆಮಾರುಗಳ ಹೆಂಗಸರು, ಅವರ ಸುತ್ತಲಿರುವ ಗಂಡಸರ ಸುತ್ತ ಹೆಣೆದ ಮೊದಲ ಕಾದಂಬರಿ 'ಮಾಯಿ' ತುಂಬ ಪ್ರಸಿದ್ಧವಾಯಿತಲ್ಲದೇ, ಫ್ರೆಂಚ್, ಜರ್ಮನ್, ಸೆರ್ಬಿಯನ್, ಕೊರಿಯನ್ ಸೇರಿದಂತೆ ಹಲವಾರು ಭಾಷೆಗಳಿಗೆ ಅನುವಾದವಾಯಿತು. ಅದರ ಇಂಗ್ಲಿಷ್ ಅನುವಾದಕ್ಕೆ ಸಾಹಿತ್ಯ ಅಕಾಡೆಮಿ ಅನುವಾದ ಪ್ರಶಸ್ತಿಯೂ ದಕ್ಕಿದೆ. 2006ರಲ್ಲಿ ಪ್ರಕಟಗೊಂಡ ಇನ್ನೊಂದು ಕಾದಂಬರಿ 'ಖಾಲಿ ಜಗಹ್' ಕೂಡ ಹಲವು ಭಾಷೆಗಳಿಗೆ ಅನುವಾದಗೊಂಡಿದೆ.

ಬೂಕರ್ ಎಂಬ ತೂಕದ ಪ್ರಶಸ್ತಿ!

'ಮ್ಯಾನ್ ಗ್ರೂಪ್'ನಿಂದ ಕೊಡಲಾಗುತ್ತಿದ್ದ ಈ ಪ್ರಶಸ್ತಿಯನ್ನು 2005ರಿಂದ 2015ರಿಂದ ಪ್ರತಿ ಎರಡು ವರ್ಷಕ್ಕೊಮ್ಮೆ ಇಂಗ್ಲಿಷ್‌ನಲ್ಲಿ ಪ್ರಕಟಿತವಾದ ಅಥವಾ ಇಂಗ್ಲಿಷ್‌ನಲ್ಲಿ ಲಭ್ಯವಿರುವ ಯಾವುದೇ ಲೇಖಕರ ಒಂದು ಕೃತಿಗೆ ಕೊಡುತ್ತಿದ್ದರು. ಈಗ ಪ್ರತಿ ವರ್ಷ ಕೊಡುತ್ತಿದ್ದಾರೆ. ಜಗತ್ತಿನ ಯಾವುದೇ ಭಾಷೆಯಲ್ಲಿ ರಚಿತವಾದ ಸಾಹಿತ್ಯಕೃತಿಯು ಇಂಗ್ಲಿಷ್‌ಗೆ ಅನುವಾದಗೊಂಡು, ಇಂಗ್ಲೆಂಡ್ ಹಾಗೂ ಐರ್ಲೆಂಡಿನಲ್ಲಿ ಪ್ರಕಾಶನಗೊಂಡಿರಬೇಕು. ಈ ಪ್ರತಿಷ್ಠಿತ ಪ್ರಶಸ್ತಿಯ ಮೊತ್ತವೂ ಕಡಿಮೆಯೇನಲ್ಲ, 50,000 ಪೌಂಡ್ (ಸುಮಾರು 49 ಲಕ್ಷ ರೂಪಾಯಿ) ಹಣವನ್ನು ಮೂಲಲೇಖಕ ಹಾಗೂ ಅನುವಾದಕ ಇಬ್ಬರ ನಡುವೆ ಸಮನಾಗಿ ಹಂಚುತ್ತಾರೆ. ಈ ಸಲದಿಂದ ಶಾರ್ಟ್ ಲಿಸ್ಟ್ ಆಗಿರುವ ಎಲ್ಲಾ ಲೇಖಕರು ಹಾಗೂ ಅನುವಾದಕರು 2,500 ಪೌಂಡ್ ಪಡೆಯುತ್ತಾರೆ.

ಈ ಪ್ರಶಸ್ತಿ ಇಂಗ್ಲಿಷ್ ಅನುವಾದಕ್ಕೆ ಬಂದಿದ್ದರೂ, ಅದು ಗೀತಾಂಜಲಿಯವರ ಈವರೆಗಿನ ಸಾಹಿತ್ಯ ಕೃಷಿಯ ಮೇಲೆ ಹೊಸ ಬೆಳಕು ಚೆಲ್ಲಿದಂತೆ, ಮೂಲ ಹಿಂದಿ ಕೃತಿಗೆ ಇನ್ನಷ್ಟು ವಿಶಾಲವಾದ ಓದುಗ ವರ್ಗವನ್ನು ಗಳಿಸಿಕೊಡುತ್ತದೆ. 'ಈ ಪ್ರಶಸ್ತಿ ನನಗೊಬ್ಬಳಿಗೇ ಬಂದಿದೆ ಎನ್ನಿಸುವುದಿಲ್ಲ, ನಾನು ಒಂದು ಭಾಷೆಯನ್ನು, ಸಂಸ್ಕೃತಿಯನ್ನು ಪ್ರತಿನಿಧಿಸುತ್ತೇನೆ. ಇದು ವಿಶೇಷವಾಗಿ ಹಿಂದಿ ಸಾಹಿತ್ಯಕ್ಕೆ ಮತ್ತು ಒಟ್ಟಾರೆಯಾಗಿ ಭಾರತೀಯ ಸಾಹಿತ್ಯಕ್ಕೆ ವಿಶಾಲವೇದಿಕೆಯಲ್ಲಿ ಮನ್ನಣೆ ನೀಡಿದಂತೆ ಅಂತ ನನ್ನ ಅನ್ನಿಸಿಕೆ. ತುಂಬ ಸಮೃದ್ಧ ಪರಂಪರೆಯಿರುವ ಬೃಹತ್ ಸಾಹಿತ್ಯ ಜಗತ್ತನ್ನು ಇನ್ನೂ ನಾವು ಶೋಧಿಸಬೇಕಿದೆ. ನಂಗೆ ಬಂದಿರೋ ಪ್ರಶಸ್ತಿ ಇದಕ್ಕೆ ನಾಂದಿಯಾಗಿದೆ ಅನ್ನೋದು ನಂಗೆ ಖುಷಿಯ ಸಂಗತಿ' ಎಂದು ನಮ್ರವಾಗಿ ಹೇಳುತ್ತ ಈ ಸಂತಸ ಒಂದು ಜವಾಬ್ದಾರಿಯ ಭಾವನೆಯನ್ನೂ ತುಂಬಿದೆ ಎನ್ನುತ್ತಾರೆ. ❖

ಮುನ್ನೋಟ 29-05-2022 ರಿಂದ 04-06-2022

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ಉನ್ನತ ಅಧಿಕಾರಿಗಳ ಅನುಗ್ರಹದಿಂದಾಗಿ ವೃತ್ತಿಯಲ್ಲಿ ಸಾಕಷ್ಟು ಅನುಕೂಲ ಒದಗುತ್ತದೆ. ಅನಿರೀಕ್ಷಿತ ಧನಾಗಮನದಿಂದ ನಿಮಗೆ ಅಚ್ಚರಿಯಾಗಬಹುದು. ಹಣದ ಹರಿವು ಉತ್ತಮವಾಗಿರುತ್ತದೆ. ವಿದ್ಯಾರ್ಥಿಗಳಿಗೆ ಅಧ್ಯಯನಕ್ಕೆ ಬೇಕಾದ ಸವಲತ್ತುಗಳು ದೊರೆಯುವುದರ ಜೊತೆಗೆ ಉತ್ತಮ ಫಲಿತಾಂಶ ಸಿಗುವ ಯೋಗವಿದೆ. ಬಂಧುಗಳ ಜೊತೆಗಿದ್ದ ಕೆಲವು ಜಂಜಾಟಗಳು ನಿವಾರಣೆಯಾಗಿ ಸಂತಸಪಡುವಿರಿ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ನೌಕರರು ಮಾಡುವ ತಪ್ಪಿಗೆ ಹಿರಿಯ ಅಧಿಕಾರಿಗಳು ಮುಜುಗರ ಪಡುವ ಸಂದರ್ಭವಿದೆ. ನಿಂತುಹೋಗಿರುವ ನಿಮ್ಮ ಕೆಲವು ಯೋಜನೆಗಳು ಪುನಃ ಚಾಲನೆ ಪಡೆಯುತ್ತವೆ. ಕೆಲವರಿಗೆ ಜನರಿಂದ ಪುರಸ್ಕಾರ ಪಡೆಯುವ ಯೋಗವಿದೆ. ಪ್ರಾಪ್ತ ವಯಸ್ಕರಿಗೆ ವಿವಾಹ ಸಂಬಂಧ ಒದಗುವ ಸಾಧ್ಯತೆ ಇದೆ. ಮಹಿಳೆಯರಿಗೆ ಆಭರಣ ಕೊಳ್ಳುವ ಯೋಗವಿದೆ. ಅತಿಯಾದ ಆತ್ಮಗೌರವ ನಿಮ್ಮನ್ನು ಕಾಡಬಹುದು.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ನಿರುದ್ಯೋಗಿಗಳಿಗೆ ಉದ್ಯೋಗ ದೊರೆಯುವ ಸಾಧ್ಯತೆಗಳು ಇವೆ. ಆಕಸ್ಮಿಕ ಧನ ಲಾಭವಾಗುವ ಸಾಧ್ಯತೆ ಕಾಣುತ್ತಿದೆ. ಗೃಹ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಳ್ಳಬಹುದು. ವಿದೇಶಿ ವ್ಯವಹಾರ ಮಾಡುವವರಿಗೆ ಹೆಚ್ಚಿನ ಲಾಭ ಬರುವ ಸಾಧ್ಯತೆ ಇದೆ. ನವೀನ ರೀತಿಯ ವಸ್ತ್ರವಿನ್ಯಾಸಕಾರರಿಗೆ ಬೇಡಿಕೆ ಹೆಚ್ಚಾಗುತ್ತದೆ. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಸ್ವಲ್ಪಮಟ್ಟಿನ ಹಿನ್ನಡೆ ಇರುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ನಿಮ್ಮ ಒಳ್ಳೆಯತನವನ್ನು ಕೆಲವರು ದುರುಪಯೋಗಪಡಿಸಿಕೊಳ್ಳುವರು. ಈ ಬಗ್ಗೆ ಎಚ್ಚರವಹಿಸಿರಿ. ನಿಮ್ಮ ನಿರೀಕ್ಷೆಯಷ್ಟು ಹಣದ ಒಳಹರಿವು ಇರುತ್ತದೆ. ಈ ಹಿಂದೆ ಬಂದಿದ್ದ ಅಪವಾದದಿಂದ ಪಾರಾಗುವಿರಿ. ಸರ್ಕಾರಿ ಮಟ್ಟದ ಕೆಲಸಗಳಲ್ಲಿ ಸಾಕಷ್ಟು ಯಶಸ್ಸನ್ನು ಕಾಣಬಹುದು. ಅನವಶ್ಯಕ ವ್ಯವಹಾರಗಳಿಂದ ಮುಕ್ತಿಯನ್ನು ಹೊಂದುವಿರಿ. ಹಿರಿಯರ ಆರೋಗ್ಯದಲ್ಲಿ ಸಾಕಷ್ಟು ಸುಧಾರಣೆಯನ್ನು ಈಗ ಕಾಣಬಹುದು.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ಉನ್ನತ ಅಧ್ಯಯನಕ್ಕಾಗಿ ವಿದೇಶಕ್ಕೆ ಹೋಗಿರುವವರಿಗೆ ಅಪೇಕ್ಷಿಸುತ್ತಿದ್ದ ಸೌಕರ್ಯಗಳು ಈಗ ದೊರೆಯುತ್ತವೆ. ಮಧ್ಯವರ್ತಿಗಳನ್ನು ಕೈಬಿಟ್ಟು ನೀವೇ ನೇರವಾಗಿ ಅಧಿಕಾರಿಗಳನ್ನು ಭೇಟಿಯಾದಲ್ಲಿ ನಿಮ್ಮ ಕೆಲಸಗಳು ಆಗುತ್ತವೆ. ಸಣ್ಣಮಕ್ಕಳ ಆರೋಗ್ಯದ ಬಗ್ಗೆ ಹೆಚ್ಚಿನ ಗಮನ ಕೊಡಲೇಬೇಕಾಗುತ್ತದೆ. ಸಗಟು ವಸ್ತ್ರಗಳನ್ನು ಮಾರಾಟ ಮಾಡುವವರಿಗೆ ವ್ಯವಹಾರ ವೃದ್ಧಿ ಆಗುತ್ತದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ರಕ್ತಸಂಬಂಧಿಗಳ ಸಹಾಯದಿಂದ ಕೆಲವು ಆರ್ಥಿಕ ಮುಗ್ಗಟ್ಟುಗಳನ್ನು ಪರಿಹಾರ ಮಾಡಿಕೊಳ್ಳುವಿರಿ. ಉದ್ಯೋಗದಲ್ಲಿ ಅತಿಯಾದ ಒತ್ತಡಗಳನ್ನು ಎದುರಿಸಬೇಕಾಗಬಹುದು. ತಾಳ್ಮೆಯಿಂದ ಇದ್ದಲ್ಲಿ ನಿಮಗೆ ಅನುಕೂಲವಾಗುತ್ತದೆ. ಯಾರ ಮೇಲೆಯೂ ಅತಿಯಾದ ನಂಬಿಕೆ ಇಡುವುದು ಒಳಿತಲ್ಲ. ಮಕ್ಕಳ ಪ್ರಗತಿಗಾಗಿ ಸಾಕಷ್ಟು ಶ್ರಮವಹಿಸುವಿರಿ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ಕ್ರೀಡಾಪಟುಗಳಿಗೆ ಉತ್ತಮ ಅವಕಾಶ ದೊರೆಯುತ್ತದೆ. ಕಳೆದುಕೊಂಡಿದ್ದ ಗೌರವ ಸ್ಥಾನ ಪುನಃ ದೊರೆಯುತ್ತವೆ. ನ್ಯಾಯಾಲಯದಲ್ಲಿನ ತೀರ್ಪು ನಿಧಾನವಾಗುವ ಸಾಧ್ಯತೆಗಳಿವೆ. ಮಹಿಳೆಯರಿಗೆ ರಾಜಕೀಯ ಪಕ್ಷಗಳಲ್ಲಿ ಯಶಸ್ಸು ದೊರೆಯುತ್ತದೆ. ಆರ್ಥಿಕ ಸ್ಥಿತಿಯು ಸಾಮಾನ್ಯ ಮಟ್ಟದಲ್ಲಿ ಇರುತ್ತದೆ. ಸಾಹಿತಿಗಳಿಗೆ ಮತ್ತು ಬರಹಗಾರರಿಗೆ ಶುಭಸಂದೇಶ ಬರುತ್ತದೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ

ಬಹುದಿನಗಳ ನಂತರ ಸಂಗಾತಿಯೊಡನೆ ವಿಹಾರಕ್ಕಾಗಿ ಹೋಗಿಬರುವ ಸಾಧ್ಯತೆಗಳಿವೆ. ಹಣದ ಒಳಹರಿವು ತೃಪ್ತಿದಾಯಕವಾಗಿ ಇರುತ್ತದೆ. ಹಿರಿಯ ಅಧಿಕಾರಿಗಳು ತಮ್ಮ ಕರ್ತವ್ಯದಲ್ಲಿ ಸರಿಯಾಗಿ ನಡೆದುಕೊಳ್ಳುವುದು ಬಹಳ ಉತ್ತಮ. ಸಾಮಾಜಿಕ ಕಾರ್ಯಗಳನ್ನು ಮಾಡುವ ಮಹಿಳೆಯರಿಗೆ ಗೌರವ ದೊರೆಯುತ್ತದೆ. ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಹೆಚ್ಚು ಹಣ ವಿನಿಯೋಗಿಸುವಿರಿ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ನಿಮಗೆ ಎದುರಾಗುವ ಸಮಸ್ಯೆಗಳನ್ನು ಸಮಾಧಾನವಾಗಿ ಸ್ವೀಕರಿಸಿರಿ. ಸೌಂದರ್ಯವರ್ಧಕಗಳನ್ನು ತಯಾರಿಸಿ ಮಾರುವವರ ವ್ಯವಹಾರ ವೃದ್ಧಿಸುತ್ತದೆ. ರಾಜಕೀಯ ವ್ಯಕ್ತಿಗಳಿಗೆ ಗಂಭೀರವಾಗಿ ಚಿಂತನೆ ಮಾಡುವ ಕಾಲ. ಕೃಷಿ ಕ್ಷೇತ್ರದಲ್ಲಿ ದುಡಿಯುವವರಿಗೆ ಹೆಚ್ಚು ಸಂಪಾದನೆಯಾಗುತ್ತದೆ. ಚಿಲ್ಲರೆ ವ್ಯಾಪಾರ ಮಾಡುವವರಿಗೆ ಹೆಚ್ಚು ವ್ಯವಹಾರ ನಡೆದು ಲಾಭ ಬರುತ್ತದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ವೈಯಕ್ತಿಕ ಕೆಲಸಗಳಲ್ಲಿ ಹೆಚ್ಚು ಯಶಸ್ಸನ್ನು ಕಾಣಬಹುದು. ವೈದ್ಯಕೀಯ ಕ್ಷೇತ್ರದಲ್ಲಿರುವವರಿಗೆ ವೃತ್ತಿಯಲ್ಲಿ ಯಶಸ್ಸು ಸಿಗುತ್ತದೆ ಹಾಗೂ ಉತ್ತಮ ಗೌರವ ದೊರೆಯುತ್ತದೆ. ಕುಟುಂಬದ ವ್ಯವಹಾರಗಳಲ್ಲಿ ಅಭಿವೃದ್ಧಿ ಇರುತ್ತದೆ. ರಾಜಕೀಯ ನಾಯಕರಿಗೆ ಹಿರಿಯ ನಾಯಕರೊಡನೆ ಉತ್ತಮ ಸಂಪರ್ಕ ದೊರೆಯುತ್ತದೆ. ಹಿರಿಯರಿಗೆ ಆರೋಗ್ಯದಲ್ಲಿ ಸ್ವಲ್ಪಮಟ್ಟಿನ ವ್ಯತ್ಯಾಸವಾಗಬಹುದು.


ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಸಮಾಜದ ಒಳಿತಿಗಾಗಿ ನೀವು ಮಾಡಿದ ಕೆಲಸಗಳು ಸಾಕಷ್ಟು ಫಲವನ್ನು ಕೊಡುತ್ತವೆ. ನಿವೇಶನ ಅಥವಾ ಸ್ಥಿರಾಸ್ತಿಯನ್ನು ಖರೀದಿ ಮಾಡುವ ಯೋಗವಿದೆ. ದಿನನಿತ್ಯದ ವ್ಯವಹಾರಗಳು ಎಂದಿನಂತೆ ನಡೆಯಲಿವೆ. ಆರ್ಥಿಕ ಸ್ಥಿತಿಯು ನಿಮ್ಮ ನಿರೀಕ್ಷೆಯಷ್ಟು ಇದ್ದೇ ಇರುತ್ತದೆ. ವಿದ್ಯಾರ್ಥಿಗಳಿಗೆ ಸಾಮಾನ್ಯವಾದ ಯಶಸ್ಸು ಇರುತ್ತದೆ. ಉದ್ದಿಮೆದಾರರು ಯಂತ್ರೋಪಕರಣಗಳ ಖರೀದಿಗಾಗಿ ಬಂಡವಾಳವನ್ನು ಹೂಡುವರು.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಸಾಕಷ್ಟು ಯಶಸ್ಸು ಇರುತ್ತದೆ. ಹಣದ ಒಳಹರಿವು ಉತ್ತಮವಾಗಿರುತ್ತದೆ. ಒಡಹುಟ್ಟಿದವರಿಂದ ನಿಮ್ಮ ಅಪೇಕ್ಷೆಯ ಸಹಾಯಗಳು ದೊರೆಯುತ್ತವೆ. ಮಹಿಳೆಯರಿಗೆ ಸಾಮಾಜಿಕ ಸ್ಥಾನಮಾನ ದೊರಕುವ ಸಾಧ್ಯತೆ ಇದೆ. ಲೇವಾದೇವಿ ವ್ಯವಹಾರವನ್ನು ಮಾಡುವವರಿಗೆ ನಿರೀಕ್ಷಿತ ಆದಾಯ ಬರುತ್ತದೆ.

ಪದಬಂಧ 2740



ಮೇಲಿನಿಂದ ಕೆಳಕ್ಕೆ

1. ಅತಿ ಕ್ರೂರ ಹಿಂಸೆ ಮತ್ತು ಕಷ್ಟ ತುಂಬಿದ ಸ್ಥಳ 5
2. ರಭಸದಲಿ ಬೀಸುವ ವಾಯು 5
3. ಅತಿ ಭಯ ಹುಟ್ಟಿಸುವ ಮಂದಿ 5
4. ಹಣದೊಡತಿಯ ಪ್ರಿಯ ಪತಿ 5
9. ಗಾಂಧಿಯಂತೆ ನಿಜವನ್ನು ಹುಡುಕುತ್ತಾ ಹೋದವ 5
11. ಆಯುರ್ವೇದ ಲೇಹ್ಯದ ಜೊತೆ ಸೇರಿರುವ ಮಹರ್ಷಿಯ ನಾಮ 3
13. ಮುಗ್ಧ ಹಳಿಯವನಿಗೆ ನಗರದವ ನೀಡಿರುವ ಹೆಸರು 3
14. ಅರಿವು ತಿಳುವಳಿಕೆಗಳನ್ನು ಕೇಳುಗರಿಗೆ ಹರಿಬಿಡುವ ಮಾಧ್ಯಮ 5
15. ನಾಕದಲ್ಲಿ ತ್ರಿಶೂಲವನ್ನು ಹಿಡಿದವ 5
16. ತುಳಸೀದಾಸರ ಮಾನಸದಿಂದ ರಚಿತವಾದ ಸೀತಾವಲ್ಲಭನ ಚರಿತ್ರೆ 5
17. ಸಂಪನ್ನನಾದವಗೆ ಬೇಕಾಗುವ ಎಲ್ಲಾ ನಡತೆ, ಸ್ವಭಾವ 5

ಎಡದಿಂದ ಬಲಕ್ಕೆ

1. ಝೇಂಕರಿಸುತ್ತಾ ಹಾರುವ ಪುಟ್ಟ ಜೇನ್ನೊಣ 4
3. ದ್ವಿತೀಯ ಪಾಂಡವನ ಅದ್ವಿತೀಯ ಶಕ್ತಿ 4
5. ಮಹಾಶಿವನ ನೆತ್ತಿಯನ್ನು ತಣ್ಣಗಾಗಿಸುವ ಮಹಾ ಸ್ನಾನ 5
6. ಅಳುವುದಕ್ಕಿಂತ ಹಾಸವೇ ಒಳಿತು 4
7. ಸೂರ್ಯವಂಶದ ಶ್ರೇಷ್ಠ 4
8. ಹಾಡುಗಾರಿಕೆಗೆ ಒಟ್ಟಾದ ಜನವ್ಯವಸ್ಥೆ 5
10. ನಗೆ ಮೂಡಿಸುವ ಸೂಕ್ಷ್ಮ ಸ್ಪರ್ಷ 4
12. ಆಕಾಶವನ್ನು ಅಲಂಕರಿಸಿರುವ ಸೂರ್ಯ, ಚಂದ್ರ, ತಾರೆ, ಗ್ರಹ ಇತ್ಯಾದಿಗಳ ಗುಂಪು 4
14. ಅರಿವನ್ನು ಎಲ್ಲೆಡೆ ಹರಡುವ ಶಿವರೂಪಿ ಇದೀಗ ಸುದ್ದಿಯಲ್ಲಿ 4
16. ದಶರಥಾತ್ಮಜನ ಹೆಸರಿನಲ್ಲಿ ತುಂಬಿರುವ ಸುಮಧುರ ದ್ರವ 4
18. ನೈಜತೆಯನ್ನು ಕಳೆದುಕೊಂಡ ಪ್ರೀತಿ ಮೋಹಗಳ ಪ್ರದರ್ಶನ 5
19. ಇದು ಕಾಲ್ಪನಿಕವಲ್ಲ, ವಸ್ತುಸ್ಥಿತಿ 4
20. ಕ್ಷಣ ಸಮಯದಲ್ಲಿ ಸಿಗುವ ಕಡಲೆ 4
21. ಬಿಳಿ ಹಿಮದ ಬೆಟ್ಟ 5
22. ಅಂತರವಿಲ್ಲದೇ ಸದಾ ಸಾಗುವಂತದ್ದು 4
23. ಕೂಡಲೇ ಬರುವ ನಿಮಿಷದ ಒಂದು ಭಾಗ 4

ಪದಬಂಧ ಉತ್ತರ -2739

ಮೇಲಿಂದ ಕೆಳಕ್ಕೆ

1. ಸುಗಂಧ 2.ಗಜ 3.ರಾಯ 4.ನಿಷಾದ 6.ಪವಿತ್ರ 8.ರಸನೇ 9.ಹಸೀನಾ 10.ಪರೀಕ್ಷಾದಿನ 11.ಕನಕಪುರ 12.ಭುವನ 14.ಕಥನ 16.ರಮಣಿ 18.ರುಸುಮು 20.ವಾದನ 21.ಕಳಸ 23.ಸುಪಥ 24.ಕಾಲ 25.ನಿಜ

ಎಡದಿಂದ ಬಲಕ್ಕೆ

1. ಸುಖಯೋಗ 3.ರಾಜಧಾನಿ 5.ಜಯಾಪಜಯ 7.ಧಕಾರ 9.ಹರಿದ್ರ 10.ಪತ್ರಕ 12.ಭುವನೇಶ್ವರೀ 13.ನವನಾಯಕ 15.ನಗರಬೀದಿ 17.ಪುನರುತ್ಥಾನ 19.ನವಾರ 21.ಕರುಣೆ 22.ಮುನಿಸು 24.ಕಾಮನಯನಿ 26.ಸಮಬಲ 27.ಜಗನ್ನಾಥ

ತೀ.ನಂ. ಎಂಬ ಅಪರಂಜಿ

ಕೇಶವ ಶರ್ಮ ಕೆ.


ಕೆಲವು ವರ್ಷಗಳ ಹಿಂದಿನ ಮಾತು. ಆಗ ಮೈಸೂರು ವಿಶ್ವವಿದ್ಯಾಲಯವು ಬಿ.ಆರ್. ಪ್ರಾಜೆಕ್ಟ್‌ನಲ್ಲಿ ಒಂದು ಸ್ನಾತಕೋತ್ತರ ಕೇಂದ್ರವನ್ನು ತೆರೆಯಿತು. ಅಲ್ಲಿ ಅರ್ಥಶಾಸ್ತ್ರ, ಕೈಗಾರಿಕಾ ರಸಾಯನಶಾಸ್ತ್ರ ಮತ್ತು ಕನ್ನಡ ವಿಭಾಗವನ್ನು ಶುರು ಮಾಡಲಾಗಿತ್ತು. ಕನ್ನಡದ ಸ್ನಾತಕೋತ್ತರ ಕೇಂದ್ರವನ್ನು ತೆರೆದಾಗ ಮೊದಲು ಬಂದವರು ಡಾ. ತೀ.ನಂ. ಶಂಕರನಾರಾಯಣ ಮತ್ತು ಶ್ರೀಕಂಠ ಕೂಡಿಗೆಯವರು. ಆಗ ಬಿ.ಆರ್. ಪ್ರಾಜೆಕ್ಟ್ ಪ್ರದೇಶದಲ್ಲಿ ಏನೊಂದು ಸೌಲಭ್ಯವೂ ಇರಲಿಲ್ಲ. ಸ್ನಾತಕೋತ್ತರ ಕನ್ನಡದ ತರಗತಿಗಳನ್ನು ಪ್ರಾಥಮಿಕ ಶಾಲೆಯ ಕೊಠಡಿಗಳಲ್ಲಿ ಮಾಡುತ್ತಿದ್ದರಂತೆ. ಅಲ್ಲಿಗೆ ಬಂದ ತೀ.ನಂ. ಮತ್ತು ಕೂಡಿಗೆಯವರು ಬೇರೆ ಬೇರೆ ಜವಾಬ್ದಾರಿಗಳನ್ನು ಹೊರಬೇಕಾಯಿತು. ಇಬ್ಬರು ಆಗಾಗ ಇದನ್ನು ನೆನಪಿಸಿಕೊಳ್ಳುತ್ತಿದ್ದರು.

ದಿನದಲ್ಲಿ ಈ ಇಬ್ಬರೂ ವಿದ್ವಾಂಸರು ಎಷ್ಟು ಗಂಟೆ ಪಾಠ ಮಾಡುತ್ತಿದ್ದರು ಎನ್ನುವುದಕ್ಕೆ ಲೆಕ್ಕವೇ ಇರಲಿಲ್ಲ. ಅನಂತರ ತಿಪ್ಪೇರುದ್ರಸ್ವಾಮಿ, ಸುಧಾಕರ್, ಲಕ್ಕಪ್ಪಗೌಡ ಬಂದರು. ವಿಭಾಗವು ಪೂರ್ಣ ಪ್ರಮಾಣದ್ದಾದ ಮೇಲೆ ವಿವಿಧ ಕಾರ್ಯಕ್ರಮಗಳು ನಡೆದವು. ಜಾನಪದ ಕಲಾಮೇಳಗಳು, ವಿಚಾರ ಸಂಕಿರಣಗಳು ಶುರುವಾದವು. ಈ ಕಾರ್ಯಕ್ರಮಗಳಲ್ಲಿ ತೀ.ನಂ. ಅವರು ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದರು. ಅಲ್ಲದೆ, ಸ್ಥಳೀಯ ಸಮುದಾಯದ ಜತೆ ಅವರು ನಿಕಟ ಸಂಪರ್ಕ ಇಟ್ಟುಕೊಂಡಿದ್ದರು.

ಸ್ನಾತಕೋತ್ತರ ಕೇಂದ್ರದಿಂದ ಜಾನಪದ ಕಲಾಮೇಳ ನಡೆದರೆ ಸುತ್ತಲಿನ ಹಳ್ಳಿಯವರು ಎತ್ತಿನ ಗಾಡಿಯಲ್ಲಿ ಬರುತ್ತಿದ್ದರು. ಈಚೆಗೆ ತೀ.ನಂ. ತೀರಿಹೋದಾಗ ಅವರನ್ನು ನೆನಪು ಮಾಡಿಕೊಂಡು, 'ಅಯ್ಯೋ ಹೋದರಾ? ತುಂಬಾ ಒಳ್ಳೆಯ ಮನುಷ್ಯ. ಅವರು ಭೇದಭಾವ ಮಾಡಿದ್ದನ್ನು ನಾವು ನೋಡಿಯೇ ಇಲ್ಲ. ಯಾರ ಜೊತೆಗಾದರೂ ಅಷ್ಟು ಚೆನ್ನಾಗಿ ಮಾತಾಡುತ್ತಿದ್ದರು' ಎಂದು ಜನ ಹೇಳುತ್ತಿದ್ದರು. ಇದು ಅವರ ಸರಳತೆಗೆ ಸಾಕ್ಷಿ. ವಿಶ್ವವಿದ್ಯಾಲಯದ ಪ್ರಾಧ್ಯಾಪಕರು ಅಹಂಕಾರ ಮತ್ತು ಮದದಲ್ಲಿ ಇರುತ್ತಾರೆ, ಹಳ್ಳಿಯವರ ಜೊತೆಗೆ ಮಾತಾಡಿದರೆ ಘನತೆಗೆ ಕಡಿಮೆ ಎಂದು ತಿಳಿಯುತ್ತಾರೆ ಎಂಬ ಮಾತಿದೆ. ಅಂಥ ಸ್ವಭಾವವನ್ನು ತೀ.ನಂ. ಅವರಲ್ಲಿ ನಾನು ಎಂದಿಗೂ ಕಂಡಿರಲಿಲ್ಲ.

ಕಾಡು ಕುಸುಮದಂತಹ ವ್ಯಕ್ತಿತ್ವದ ತೀ.ನಂ.ಶಂಕರನಾರಾಯಣ ನಾಡು ಕಂಡ ಬಹುಶ್ರುತ ವಿದ್ವಾಂಸ. ಕಳೆದ ವಾರ ಅವರು ತೀರಿಹೋದಾಗ ಕನ್ನಡಪ್ರಜ್ಞೆಯ ಅಧ್ಯಾಯವೊಂದು ಚರಿತ್ರೆಯ ಪುಟ ಸೇರಿತು...

ಕುವೆಂಪು ವಿಶ್ವವಿದ್ಯಾಲಯ ಶುರುವಾದಾಗ ಅಕಾಡೆಮಿಕ್ ಕೌನ್ಸಿಲ್, ಸಿಂಡಿಕೇಟ್ ಸಮಿತಿಗಳಲ್ಲಿ ಅವರು ಸದಸ್ಯರಾದರು. ಅಲ್ಲಿಯೂ ಅವರು ಅಧಿಕಾರ ಎನ್ನುವುದನ್ನು ಚಲಾಯಿಸಿದವರಲ್ಲ. ತೀ.ನಂ, ಉದಾರವಾದ ಸ್ವಭಾವವನ್ನು ಹೊಂದಿದವರು. ಯಾರ ಬಗ್ಗೆಯೂ ಕೆಟ್ಟ ಮಾತನ್ನು ಹೇಳಿದವರಲ್ಲ. ಸಿಡುಕುತನವೂ ಇರಲಿಲ್ಲ. ತಾವಾಯಿತು, ತಮ್ಮ ಕೆಲಸವಾಯಿತು ಎಂದು ಇದ್ದವರು.



ಭಿನ್ನಾಭಿಪ್ರಾಯವನ್ನು ಖಾಸಗಿ ಜೀವನಕ್ಕೆ ತಂದವರೂ ಅಲ್ಲ.

ತೀ.ನಂ. ಅವರಿಗೆ ಇಂಗ್ಲಿಷ್ ಗೊತ್ತಿತ್ತು. ಜಾನಪದಕ್ಕೆ ಸಂಬಂಧಪಟ್ಟ ಎಲ್ಲ ಚರ್ಚೆಗಳ ಅರಿವಿತ್ತು. ಹಾಗೆಯೇ ಯಾವುದೇ ವಾದಕ್ಕೆ ಕಟ್ಟು ಬೀಳುವುದಿಲ್ಲ ಎಂದೂ ಅವರು ಹೇಳುತ್ತಿದ್ದರು. ಅವರ ಸಂಶೋಧನಾಪ್ರಬಂಧ ಕಾಡುಗೊಲ್ಲರ ಸಂಸ್ಕೃತಿಗೆ ಸಂಬಂಧಪಟ್ಟದ್ದು. ಅದು ಬುಡಕಟ್ಟು ಸಂಸ್ಕೃತಿಯ ಅಧ್ಯಯನಕ್ಕೆ ಅತ್ಯಂತ ಮಹತ್ವದ ಕೊಡುಗೆ. ಯಾರು ಬುಡಕಟ್ಟು ಸಂಸ್ಕೃತಿಯನ್ನು ಅಧ್ಯಯನ ಮಾಡುತ್ತಾರೋ ಅವರು ಓದಲೇಬೇಕಾದ ಕೃತಿ ಇದು. ಆ ಕೃತಿಯಲ್ಲಿ ಒಂದು ಅಧ್ಯಯನದ ಶಿಸ್ತು ಇದೆ. ನಮಗೆ ಗೊತ್ತಿಲ್ಲದೆ ಹೋಗಿರುವ ಅನೇಕ ಸಂಗತಿಗಳೂ ಇವೆ. ವ್ಯಾಪಕ ಕ್ಷೇತ್ರಕಾರ್ಯವನ್ನು ಮಾಡಿದ್ದು ಕೂಡಾ ಆ ಕೃತಿಯ ಮೌಲ್ಯವನ್ನು ಹೆಚ್ಚಿಸಿದೆ.

ಜಾನಪದ ಸಿದ್ಧಾಂತದ ಅಧ್ಯಯನಕ್ಕೆ ಹೆಚ್ಚು ಗಮನವನ್ನು ಅವರು ಕೊಟ್ಟಿದ್ದರು. ರಾಜ್ಯದ ಕೆಲವೇ ಕೆಲವು ಜಾನಪದ ವಿದ್ವಾಂಸರಲ್ಲಿ ಅವರೂ ಒಬ್ಬರಾಗಿದ್ದರು. ಜಾನಪದ ಗೊತ್ತಿರುವ ಹಾಗೆಯೇ ಅವರಿಗೆ ಹಳೆಗನ್ನಡ ಮತ್ತು ಹೊಸಗನ್ನಡದ ಆಗುಹೋಗುಗಳು ಸಹ ಗೊತ್ತಿದ್ದವು. ಜ್ಞಾನ ರೂಪಗಳನ್ನು ಕಟ್ಟುವುದು ಹೇಗೆ ಎನ್ನುವುದರ ಅರಿವು ಅವರಿಗಿತ್ತು. ಅವರು ಪದವಿ ತರಗತಿಗಳ ಪಠ್ಯಪುಸ್ತಕಗಳ ಸಂಪಾದಕರಾಗಿದ್ದಾಗ ಒಳ್ಳೆಯ ಬರಹಗಳನ್ನು ಸಂಪಾದಿಸುವ ಕಡೆಗೆ ಗಮನವನ್ನು ಕೊಟ್ಟರು. ವಿಶ್ವವಿದ್ಯಾಲಯದೊಳಗೆ ಇರುವವರಿಗೆ ಅದರ ರಾಜಕಾರಣ ಚೆನ್ನಾಗಿ ಗೊತ್ತಿರುತ್ತದೆ. ಅತ್ಯಂತ ಕೆಟ್ಟ ಪದ್ಯವೂ ಪಠ್ಯವಾಗುವುದಿದೆ. ಟೇಬಲ್‌ಮೇಟ್‌ಗಳ ಋಣ ಸಂದಾಯಕ್ಕೆ ಪಠ್ಯಗಳು ಆಗುವುದು ಎಲ್ಲರಿಗೂ ಗೊತ್ತೇ ಇದೆ. ತೀ.ನಂ. ಅಂತಹ ಋಣದ ಹಂಗಿಗೆ ಈಡಾಗಲಿಲ್ಲ.

ವಿಶ್ವವಿದ್ಯಾಲಯಗಳ ಬಹಳ ದೊಡ್ಡ ಹಾಗೂ ವಾಸಿಯಾಗದ ರೋಗವೆಂದರೆ ಜಾತಿ ರಾಜಕಾರಣ. ಅದರ ಜೊತೆಗೆ ಮತ್ತೂ ಒಂದು ಇರುತ್ತದೆ. ಯಾರ ಕಾಲನ್ನು, ಯಾರು ಎಳೆಯಬೇಕು ಎಂದು ನಿರ್ಧರಿಸಿ ಕಾರ್ಯಪ್ರವೃತ್ತರಾಗುವುದು. ಗುಂಪು ರಾಜಕಾರಣವು ಒಂದು ಅಡ್ಡಗೋಡೆ. ಕೆಲವೊಮ್ಮೆ ಅಧ್ಯಾಪಕರು ಇದನ್ನು ಹುಟ್ಟು ಹಾಕುತ್ತಾರೆ. ಮತ್ತೆ ಕೆಲವೊಮ್ಮೆ ವಿದ್ಯಾರ್ಥಿಗಳೇ ಇದಕ್ಕೆ ಕುಮ್ಮಕ್ಕು ಕೊಡುತ್ತಾರೆ. ಇದರ ಅರಿವು ತೀ.ನಂ. ಅವರಿಗೆ ಇತ್ತು. ಆದರೆ, ಅವರೆಂದೂ ಅಂತಹ ಕೊಚ್ಚೆಯಲ್ಲಿ ಬಿದ್ದವರಲ್ಲ.

ತೀ.ನಂ. ದೆಹಲಿಗೆ ಹೋಗಿ ಯುಜಿಸಿಯಿಂದ ಕನ್ನಡ ವಿಭಾಗಕ್ಕೆ ವಿಶೇಷ ಅನುದಾನವನ್ನು ತಂದರು. ಒಂದು ವಿಶ್ವವಿದ್ಯಾಲಯದ ಹಳೆಯ ವಿಭಾಗ ಮತ್ತು ಕನಿಷ್ಠ ಆರು ಜನ ಪ್ರಾಧ್ಯಾಪಕರು ಇರುವ ವಿಭಾಗಕ್ಕೆ ಈ ಅನುದಾನ ಸಿಗುತ್ತದೆ. ತೀ.ನಂ. ಅವರು ತಂದ ಅನುದಾನದಿಂದ ಕನ್ನಡ ಭಾರತಿಯಲ್ಲಿ ಮೊದಲ ಹಂತದ ಕೆಲಸಗಳು ಆದವು. ಅನಂತರ ಏನಾಯಿತು ಎಂದು ಗೊತ್ತಾಗಲಿಲ್ಲ. ಯಥಾಪ್ರಕಾರ ವಿಶ್ವವಿದ್ಯಾಲಯದ ಕಾಣದ ಕೈಗಳು ಆ ಯೋಜನೆಯನ್ನು ಸಮಾಪ್ತಿ ಮಾಡಲು ಏನೇನು ಬೇಕೋ ಅಷ್ಟೂ ಕೆಲಸವನ್ನು ಮಾಡಿದವು ಎಂದು ಹೇಳುತ್ತಾರೆ. ಇದರ ಬಗ್ಗೆ ನನಗೆ ತಿಳಿಯದು.

ತೀ.ನಂ. ಅವರು ದೊಡ್ಡ ದೊಡ್ಡ ಮಾತುಗಳ ಹಿಂದೆ ಹೋದವರಲ್ಲ. ಆದರೆ, ವೈಯಕ್ತಿಕ ಜೀವನದಲ್ಲಿ ಹೆಚ್ಚು ಜಾತ್ಯತೀತರಾಗಿದ್ದರು. ಅವರು ಜಾತಿಯನ್ನು ನಂಬಿರಲಿಲ್ಲ. ಅದನ್ನು ಹಿಡಕೊಂಡು ಉನ್ನತ ಹುದ್ದೆಗೆ ಹೋಗಲು ಯತ್ನವನ್ನು ಮಾಡಲಿಲ್ಲ. ಪ್ರಶಸ್ತಿಗೆ ಲಾಬಿಯನ್ನು ಮಾಡಲಿಲ್ಲ. ತುಂಬಾ ತಿಳಿವಳಿಕೆ ಇದ್ದ ಮನುಷ್ಯ. ಅವರು ನಿವೃತ್ತಿ ಹೊಂದಿದ ಮೇಲೆ ತಮ್ಮ ಪಾಡಿಗೆ ತಾವಿದ್ದರು. ಅವರ ಜ್ಞಾನವನ್ನು ಕನ್ನಡ ಸಾರಸ್ವತ ಲೋಕ ಬಳಸಿಕೊಳ್ಳಲಿಲ್ಲ. ಅದಕ್ಕೂ ಅವರು ಬೇಸರ ವ್ಯಕ್ತಪಡಿಸಲಿಲ್ಲ.

ತೀ.ನಂ ಇದ್ದಾಗ ಕುವೆಂಪು ವಿಶ್ವವಿದ್ಯಾಲಯದ ಕನ್ನಡ ಭಾರತಿಯಲ್ಲಿ ಐಚ್ಛಿಕ ವಿಷಯಗಳನ್ನು ಹೆಚ್ಚು ಮಾಡಿದರು. ಅವರ ಉದ್ದೇಶ ವಿಭಾಗವನ್ನು ಬೆಳೆಸುವುದು. ಅದಕ್ಕಾಗಿ ಅವರು ತೌಲನಿಕ ಸಾಹಿತ್ಯ, ಸಾಹಿತ್ಯ ವಿಮರ್ಶೆ, ಭಾಷಾಂತರ, ಜಾನಪದ ಅಧ್ಯಯನ ಡಿಪ್ಲೊಮಾ ಕೋರ್ಸ್ ತರಬೇಕು ಎಂದು ಪ್ರಯತ್ನಪಟ್ಟರು. ಅದೂ ಆಗಲಿಲ್ಲ. ಆಗಲು ಸ್ಥಾಪಿತ ಹಿತಾಸಕ್ತಿಗಳು ಬಿಡಲಿಲ್ಲ.

ತೀ.ನಂ. ಅವರಂಥ ಒಬ್ಬ ಪ್ರಾಧ್ಯಾಪಕ ಅನೇಕ ವಿದ್ಯಾರ್ಥಿಗಳಿಗೆ ಪಾಠ ಮಾಡಿರುತ್ತಾರೆ. ಅವರಿಗೆ ಎಲ್ಲಾ ವಿದ್ಯಾರ್ಥಿಗಳನ್ನು ನೆನಪಿಟ್ಟುಕೊಳ್ಳುವುದು ಕಷ್ಟ. ಆದರೆ, ಅವರ ತರಗತಿಗಳ ಲಾಭ ಪಡೆದ ವಿದ್ಯಾರ್ಥಿಗಳು ಕೂಡಾ ಮರೆತುಹೋದ ಸ್ಥಿತಿಗೆ ತಲುಪಿದ್ದಾರೆ. 'ಅಧಿಕಾರ ಎಂದರೆ ನನಗೆ ರೇಜಿಗೆ ಹುಟ್ಟಿಸುತ್ತದೆ. ನನಗೆ ಅಂಥದ್ದು ಬೇಡ' ಎನ್ನುತ್ತಿದ್ದರು ತೀ.ನಂ.


ಒಂದು ಸುಪ್ರಸಿದ್ಧ ಮಾತಿದೆ. ಒಬ್ಬ ವ್ಯಕ್ತಿಯು ತೀರಿಹೋದರೆ ಅವರ ಜೊತೆಗೆ ಅವರ ಜ್ಞಾನವೂ ಸಾಯುತ್ತದೆ ಎಂದು. ಈ ಮಾತು ತೀ.ನಂ. ಅವರಿಗೆ ಹೆಚ್ಚು ಅನ್ವಯವಾಗುತ್ತದೆ. ಕೊನೆಯ ದಿನಗಳಲ್ಲಿ ಅವರು ಒಂಟಿಯಾಗಿದ್ದರು. ಅವರ ಪತ್ನಿ ತೀರಿಹೋದ ಮೇಲೆ ಕುಗ್ಗಿದಂತೆ ಕಾಣಿಸುತ್ತಿತ್ತು. ಏಕಾಕಿತನ ಎನ್ನುವುದೇ ದೊಡ್ಡ ಹಿಂಸೆ. ಮೇಲಾಗಿ ಅವರ ಜ್ಞಾನ ಮತ್ತು ಅವರ ವಿದ್ವತ್ತನ್ನು ಕನ್ನಡದ ಸಾಂಸ್ಕೃತಿಕ ಲೋಕ ಗುರುತಿಸದೇ ಹೋಯಿತು. ಜ್ಞಾನದ ದೀವಟಿಗೆ ಹಿಡಿದ ಇಂತಹ ಸಂತಸದೃಶ ಪ್ರಾಧ್ಯಾಪಕ ಇನ್ನು ನೆನಪು ಮಾತ್ರ ಎನ್ನುವುದನ್ನು ಅರಗಿಸಿಕೊಳ್ಳುವುದು ಕಷ್ಟ.

ದಲಿತ ಸಂಕಟಗಳಿಂದ ಬಿಡುಗಡೆಯ ಹಂಬಲ

ದಸ್ತಗೀರಸಾಬ್ ದಿನ್ನಿ

'ಮಹಾಬಿಂದು' ಎಚ್.ಟಿ.ಪೋತೆಯವರ ಕಾದಂಬರಿ. ಈ ಲೇಖಕರು ತಾವು ಅನುಭವಿಸಿದ ಮತ್ತು ದಲಿತ ಸಮುದಾಯ ಶತಶತಮಾನಗಳಿಂದ ಶೋಷಣೆಗೆ ಒಳಗಾಗಿ ಅನುಭವಿಸುತ್ತಿರುವ ಕಷ್ಟ, ಕಾರ್ಪಣ್ಯ, ಅವಮಾನ, ಬಿಕ್ಕಟ್ಟನ್ನೇ ಕಾದಂಬರಿಯ ಭಿತ್ತಿಯಾಗಿಸಿಕೊಂಡಿದ್ದಾರೆ. ಕೊರೊನಾ ಪಿಡುಗು ಜಗತ್ತಿನಲ್ಲಿ ಉಂಟುಮಾಡಿದ ಅಲ್ಲೋಲ ಕಲ್ಲೋಲದ ಪರಿಣಾಮ ಮನುಷ್ಯ ಸಂಬಂಧಗಳ ನಾಟಕೀಯತೆ, ಸ್ವಾರ್ಥ ಮನೋಭಾವ ನಿಚ್ಚಳವಾಗಿ ಎದ್ದುಕಂಡಿತು. ಇದೇ ವಿಷಯವನ್ನು ಒಂದು ನೆಪವಾಗಿಟ್ಟುಕೊಂಡು ಆರಂಭವಾಗುವ ಈ ಕಾದಂಬರಿ, ನಿಧಾನವಾಗಿ ಶಿಥಿಲಗೊಂಡ ಮನುಷ್ಯ ಸಂಬಂಧಗಳ ಬಗೆಗೆ, ಅಸಮಾನತೆಯ ಸಮಾಜದ ಕಟು ವಾಸ್ತವದ ಬಗೆಗೆ ಶೋಧನೆಗಿಳಿಯುತ್ತದೆ. ಕಥೆಯ ನಿರೂಪಕರಾದ ಪ್ರೊ.ರಾವ್ 'ಬುದ್ಧ ಮತ್ತು ಆತನ ಧಮ್ಮ' ಕೃತಿಯನ್ನು ಓದಿಗಾಗಿ ಎತ್ತಿಕೊಂಡಾಗ ಮನದಲ್ಲಿ ಏನೆಲ್ಲ ಆಲೋಚನೆಗಳು ಸುಳಿದು ಹೋಗುತ್ತವೆ.

ನಿರೂಪಕ ಬುದ್ಧನ ಬದುಕು ಮತ್ತು ವಿಚಾರ ಧಾರೆಗಳ ಕನಸು ಕಾಣುತ್ತಾನೆ. ಬುದ್ಧವಿಹಾರದ ಕಡೆ ಕಾರಿನಲ್ಲಿ ಹೋಗುವಾಗ ಕೊರೊನಾ ಸೃಷ್ಟಿಸಿದ ಭೀತಿಯೊಂದಿಗೆ ಬಹಳ ಮುಖ್ಯವಾಗಿ, ದಲಿತ ಸಮುದಾಯದ ಹಸಿವು, ಬಡತನ, ಅಸಹಾಯಕತೆ,



ಮಹಾಬಿಂದು
ಲೇ: ಎಚ್.ಟಿ.ಪೋತೆ
ಪ್ರ: ಅಂಕಿತ ಪುಸ್ತಕ
ಸಂ: 080-26617100
ಪು: 168 ₹195

ಸವಾಲುಗಳು ಇನ್ನಿಲ್ಲದಂತೆ ಕಾಡುತ್ತವೆ. ಇಲ್ಲಿ ತಥಾಗತರು ಮತ್ತು ನಿರೂಪಕನೊಂದಿಗೆ ಸುದೀರ್ಘ ಮಾತುಕತೆ ನಡೆಯುತ್ತದೆ.

ಬುದ್ಧ, ಬಸವ, ಕನಕ, ಗಾಂಧಿ, ಅಂಬೇಡ್ಕರ್ ಅವರು ಸಮಾನತೆ, ಜಾತ್ಯತೀತ ಪರಿಕಲ್ಪನೆ, ಹೊಸ ಸಮಾಜದ ನಿರ್ಮಾಣಕ್ಕಾಗಿ ಅವಿರತವಾಗಿ ಶ್ರಮಿಸಿದ ಬಗೆಗೆ, ಅವರ ಜೀವಪರ ಚಿಂತನೆಗಳ ಬಗೆಗೆ ನೆನಪಿನ ಸುರುಳಿ ಬಿಚ್ಚಿಕೊಳ್ಳುತ್ತ ಹೋಗುತ್ತದೆ. ಸಮಾಜ ಸುಧಾರಕರು ಏನೆಲ್ಲ ಬದಲಾವಣೆಯ ಕನಸು ಕಂಡಿದ್ದರೂ ಸಮಾಜದಲ್ಲಿ ಆ ರೀತಿಯ ಪಲ್ಲಟಗಳಾಗಿಲ್ಲ ಎನ್ನುವ ದಟ್ಟ ವಿಷಾದ ಕಾದಂಬರಿಯುದ್ದಕ್ಕೂ ಹರಿದಿದೆ. ಹಾಗೆಯೇ ಇಲ್ಲಿನ ಇಡೀ ಕಥೆ ಕನಸಿನಲ್ಲಿಯೇ ನಡೆಯುತ್ತದೆ ಎನ್ನುವುದು ಗಮನಾರ್ಹ.


ಕಾದಂಬರಿಯಲ್ಲಿ ಹನ್ನೆರಡು ಅಧ್ಯಾಯಗಳಿವೆ. ದಲಿತ ಸಮುದಾಯದ ವಿಭಿನ್ನ ಚಹರೆಗಳೊಂದಿಗೆ ಇದರ ಹರವು ಚಾಚಿಕೊಂಡಿದೆ. ಇಲ್ಲಿ ಚರಿತ್ರೆಯ ಅಂತಃಸತ್ವವನ್ನು ಪ್ರಶ್ನಿಸುವ, ಹೊಸ ನೆಲೆಯಲ್ಲಿ ಶೋಧಿಸುವ ಕೆಲಸವನ್ನು ಪೋತೆಯವರು ಮಾಡಿದ್ದಾರೆ. ದೇಶದ ದಲಿತ ಸಮುದಾಯದ ಸಂರಚನೆಗಳು ಇಂದಿಗೂ ಬದಲಾಗಿಲ್ಲ. ಮೇಲ್ವರ್ಗದ, ಅದರಲ್ಲೂ ಸನಾತನ ವ್ಯವಸ್ಥೆಯ ಅಸಹಿಷ್ಣುತೆ ದಲಿತರನ್ನು ಶೋಷಣೆಯ ಕೂಪಕ್ಕೆ ತಳ್ಳುತ್ತಲೇ ಇದೆ ಎನ್ನುವ ನಿಲುವನ್ನು ಲೇಖಕರು ಪ್ರಜ್ಞಾಪೂರ್ವಕವಾಗಿ ತಾಳಿದ್ದಾರೆ.

ಒಳನೋಟ

ಇಲ್ಲಿ ಗತವನ್ನು, ವರ್ತಮಾನದ ವೈರುಧ್ಯವನ್ನು ಒರೆಗೆ ಹಚ್ಚಿ ನೋಡಲಾಗಿದೆ. ಕೃತಿಯ ಪ್ರಧಾನ ಕಾಳಜಿ ಇರುವುದು ನಿರ್ಲಕ್ಷಿತ ದಲಿತ ಸಮುದಾಯವು ತಲ್ಲಣಗಳಿಂದ ಬಿಡುಗಡೆಯಾಗುವ ಬಗೆಗೆ. ಬುದ್ಧನ ಕರುಣೆ, ಬಸವನ ವೈಚಾರಿಕ ಪ್ರಜ್ಞೆ, ಗಾಂಧಿಯ ಸ್ವಾತಂತ್ರ್ಯ, ಅಂಬೇಡ್ಕರರ ಸಮಾನತೆಯ ಸಿದ್ಧಾಂತಗಳನ್ನು ಮರು ರೂಪಿಸುವ ಬಗೆಗೆ. ಸೌಹಾರ್ದ, ಸಹಬಾಳ್ವೆಯನ್ನು ಈ ನೆಲದಲ್ಲಿ ಸಾಂದ್ರವಾಗಿ ಕಟ್ಟುವ ಬಗೆಗೆ. ಎದೆ ಎದೆಗಳಲ್ಲಿ ಎಂದೂ ಆರದ ಪ್ರೀತಿಯ ಹಣತೆಗಳನ್ನು ಹಚ್ಚುವ ಬಗೆಗೆ. ಈ ತೆರನಾದ ಆಶಯಗಳು ಭಾರತದ ನೆಲದಲ್ಲಿ ಬೇಗ ಈಡೇರಿ, ಹಣ್ಣಾಗಲು ಕಾದಂಬರಿ ಒತ್ತಾಸೆಯಾಗಿ ನಿಲ್ಲುತ್ತದೆ.

ಇಲ್ಲಿ ಬರುವ ಕೆಲ ಪ್ರಸಂಗಗಳು ಮೆಲ್ಲನೆ ತಾಕುವಂತಿವೆ. ನಿಕಷಕ್ಕೆ ಈಡು ಮಾಡುವಂತಿವೆ. ಮಿತ್‌ಗಳನ್ನು ಬಳಸಿಕೊಂಡು ಸಮಕಾಲೀನವಾಗಿ ನೋಡಿದ್ದರಿಂದ ಕಾದಂಬರಿಗೆ ಒಂದು ಅಧಿಕೃತತೆ ಪ್ರಾಪ್ತವಾಗಿದೆ. ಇದು ಕೃತಿಯ ಸಾರ್ಥಕತೆ. ದೇವನೂರ ಮಹಾದೇವ, ಅರವಿಂದ ಮಾಲಗತ್ತಿಯವರ ನಂತರ ಪೋತೆಯವರು ದಲಿತ ಸಂವೇದನೆಗಳನ್ನು ದಿಟ್ಟವಾಗಿ ದಾಟಿಸುತ್ತಿದ್ದಾರೆ. ನೋವುಂಡ ಸಮುದಾಯದ ಬಗೆಗಿನ ಸಾಮಾಜಿಕ ಜವಾಬ್ದಾರಿಯನ್ನು, ನೈತಿಕ ಎಚ್ಚರವನ್ನು ಲೇಖಕರು ಇಲ್ಲಿ ಚೆನ್ನಾಗಿ ನಿಭಾಯಿಸಿದ್ದಾರೆ.

ಪಕ್ಷಿವೀಕ್ಷಣೆಯ ಆಯಾಮಗಳ ದರ್ಶನ



ಹ್ಯಾಂಡ್‌ಬುಕ್ ಫಾರ್ ಬರ್ಡ್ ಎಜ್ಯುಕೇಟರ್ಸ್
ಲೇ: ಗರಿಮ್ ಭಾಟಿಯಾ, ಅಭಿಷೇಕಕೃಷ್ಣ ಗೋಪಾಲ್, ಸುಹೇಲ್ ಖಾದರ್
ಚಿತ್ರಗಳು: ಸೌಮಿತ್ರ ದೇಶಮುಖ್
ಪ್ರ: ನೇಚರ್ ಕನ್ಸರ್ವೇಶನ್ ಫೌಂಡೇಶನ್
ಪು: 142 ₹150



ತನುಜಾ ಡಿ.ಎಚ್.

ಪಕ್ಷಿವೀಕ್ಷಣೆ ನಮ್ಮಲ್ಲಿ ಅನಾದಿ ಕಾಲದಿಂದಲೂ ನಡೆದುಬಂದಿದೆ. ಹೆಚ್ಚಿನ ಲಿಖಿತ ದಾಖಲಾತಿಯನ್ನು ಸ್ವಾತಂತ್ರ್ಯ ಪೂರ್ವದಲ್ಲಿ ಕಾಣಬಹುದಾಗಿದೆ. ನಮ್ಮಲ್ಲಿ ಕಳೆದ ದಶಕದವರೆಗೂ ಕೆಲವೇ ಆಸಕ್ತರು ಪಕ್ಷಿವೀಕ್ಷಣೆಯಲ್ಲಿ ತೊಡಗಿಸಿಕೊಂಡಿದ್ದರು. ನಮ್ಮ ದೇಶದಲ್ಲಿ ದಾಖಲಾಗಿರುವ ಪಕ್ಷಿಗಳ ವೈವಿಧ್ಯ ಮತ್ತು ಜನಸಂಖ್ಯೆಗೆ ಹೋಲಿಸಿದರೆ ಪಕ್ಷಿ ವೀಕ್ಷಕರ ಸಂಖ್ಯೆ ಕಡಿಮೆ ಎಂದೇ ಹೇಳಬಹುದು.

ದಿನದಿಂದ ದಿನಕ್ಕೆ ಹವ್ಯಾಸಿ ಪಕ್ಷಿವೀಕ್ಷಕರ ಸಂಖ್ಯೆ ಏರಿಕೆಯಾಗುತ್ತಿದೆ. ಅಧಿಕಗೊಳ್ಳುತ್ತಿರುವ ಹವ್ಯಾಸಕ್ಕೆ ಒಂದು ವೈಜ್ಞಾನಿಕ ಹಾಗೂ ನಿರ್ದಿಷ್ಟ ಮಾರ್ಗಸೂಚಿಯ ಅಗತ್ಯತೆ ಕಂಡು ಬಂದಿದೆ. ಇದೇ ವೇಳೆ ಮೈಸೂರಿನ ನೇಚರ್ ಕನ್ಸರ್ವೇಷನ್ ಫೌಂಡೇಷನ್ ಸಂಸ್ಥೆಯ, ಅರ್ಲಿ ಬರ್ಡ್ ತಂಡ 2017 ರಿಂದ ನಡೆಸಿಕೊಂಡು ಬಂದ How to be a Birding Buddy ಸರಣಿ ಕಾರ್ಯಾಗಾರದಿಂದ ಪಡೆದ ಅನುಭವದ ವಿವರವನ್ನು ಕೈಪಿಡಿ ರೂಪದಲ್ಲಿ ಹೊರತಂದಿದೆ.

'ಮುಂದಿನ ಪೀಳಿಗೆ ನಿಜವಾಗಿಯೂ ಸಬಲವಾಗ ಬೇಕು ಎಂದು ನಾವು ಬಯಸುವುದಾದರೆ ಭೂಮಿಯನ್ನು ಉಳಿಸುವಂತೆ ಅವರನ್ನು ಕೇಳುವ ಮೊದಲು ಅವರಿಗೆ ಅದನ್ನು ಪ್ರೀತಿಸಲು ಅನುವು ಮಾಡಿಕೊಡಬೇಕು', ಅಮೆರಿಕದ ಶಿಕ್ಷಣ ತಜ್ಞ ಡೆವಿಡ್ ಸೊಬೆಲ್ ಅವರ ಮೇಲಿನ ಅಭಿಪ್ರಾಯದೊಂದಿಗೆ Handbook for Bird Educators ಕೈಪಿಡಿ ಓದುಗರನ್ನು ಬರಮಾಡಿ ಕೊಳ್ಳುತ್ತದೆ. ಸೊಬೆಲ್ ಅವರ ಈ ಮನದಾಳದ ಮಾತು ಕೈಪಿಡಿಯ ಉದ್ದಕ್ಕೂ ಪ್ರತಿಧ್ವನಿಸುತ್ತದೆ.

ಶಾಲಾ ಶಿಕ್ಷಕರು, ಪರಿಸರ ಶಿಕ್ಷಕರು, ಪೋಷಕರು ಅಥವಾ ಯಾರಾದರೂ ಪರಿಸರದ ಬಗ್ಗೆ ಪ್ರೀತಿ ಇದ್ದಲ್ಲಿ ಹಾಗೂ ಅವರು ಅದನ್ನು ಮುಂದಿನ ಪೀಳಿಗೆಗೆ ದಾಟಿಸಲು ಇಚ್ಛಿಸಿದ್ದಲ್ಲಿ ಈ ಕೈಪಿಡಿ ಸಹಾಯ ಮಾಡುತ್ತದೆ. ಹೊಸಬರಿಗೆ ಹಾಗೂ ಪರಿಸರ/ಶಾಲಾ ಶಿಕ್ಷಕರಿಗೆ ಪಕ್ಷಿಗಳ ಹೆಸರು ಅಥವಾ ಅವುಗಳ ವೈಜ್ಞಾನಿಕ ಹೆಸರು ತಿಳಿಯಬೇಕೆಂಬ ಅವಶ್ಯಕತೆ ಇಲ್ಲ. ಬದಲಿಗೆ ಅವುಗಳ ಪರಿಸರದಲ್ಲಿನ ಪಾತ್ರ, ಅವುಗಳ ಚರ್ಯೆ ಬಗ್ಗೆ ತಿಳಿದುಕೊಂಡಿದ್ದರೆ ಸಾಕು ಎಂಬ ತಿಳಿವಳಿಕೆ ಕೈಪಿಡಿಯಲ್ಲಿ ಸ್ಪಷ್ಟವಾಗಿದೆ.

ಕೈಪಿಡಿಯನ್ನು ಪ್ರಮುಖವಾಗಿ ನಾಲ್ಕು ಭಾಗಗಳನ್ನಾಗಿ ವಿಂಗಡಿಸಲಾಗಿದೆ: 1. ಪಕ್ಷಿಗಳ ವೈವಿಧ್ಯ, 2. ಚಟುವಟಿಕೆಗಳು: ಪಕ್ಷಿ ನಡಿಗೆ, ಕ್ರಿಯಾತ್ಮಕ ಚಟುವಟಿಕೆ, ಆಟಗಳು ಇತ್ಯಾದಿ, 3. ಅನಿಸಿಕೆ ಮತ್ತು ಮೌಲ್ಯಮಾಪನ, 4. ದೀರ್ಘಾವಧಿ ಕಾರ್ಯಗಳು, ಯೋಜನೆಗಳು ಮತ್ತು ವಿಷಯ ವಿನಿಮಯ.

ಅವಲೋಕನ



4 ರಿಂದ 10 ವರ್ಷದ ಮಕ್ಕಳಿಗೆ ಒಳಾಂಗಣ ಹಾಗೂ ಹೊರಾಂಗಣಗಳಲ್ಲಿ ಅವರ ಆಸಕ್ತಿ ಹಾಗೂ ವಯಸ್ಸಿನ ಅನುಸಾರ ನಡೆಸಬಹುದಾದ 60ಕ್ಕೂ ಹೆಚ್ಚು ಚಟುವಟಿಕೆಗಳನ್ನು ವಿಸ್ತಾರವಾಗಿ ವಿವರಿಸಲಾಗಿದೆ. ಚಟುವಟಿಕೆಗಳಿಗೆ ಬೇಕಾದ ಸಾಮಗ್ರಿಗಳು ನಮ್ಮ ಅಕ್ಕಪಕ್ಕ ಸಿಗುವಂಥವು ಹಾಗೂ ಹೆಚ್ಚೇನೂ ವೆಚ್ಚ ಬೇಡದಂಥವು.

ಪಕ್ಷಿಗಳು ವಲಸೆ ಹೋಗುವುದು, ಆಹಾರವನ್ನು ಹುಡುಕಿ ತರುವುದು, ಗೂಡು ಕಟ್ಟುವುದು, ಮೊಟ್ಟೆಯಿಟ್ಟು ಕಾವು ಕೊಡುವುದು, ಮರಿಗಳನ್ನು ಮಾಡಿ ಪೋಷಣೆ ಮಾಡುವುದು – ಹೀಗೆ ನಡೆಯುವ ಹಕ್ಕಿಗಳ ಚಟುವಟಿಕೆಗಳ ಕುರಿತು ಹೇಗೆ ಅಧ್ಯಯನ ಮಾಡಬಹುದು, ಪಕ್ಷಿಗಳ ಕಾಲಿನ ಗುರುತುಗಳನ್ನು ಎಲ್ಲಿ ಹಾಗೂ ಹೇಗೆ ತೆಗೆಯಬಹುದು, ಪಕ್ಷಿವೀಕ್ಷಣೆಗೆ ಉತ್ತಮ ಸಮಯ ಯಾವುದು ಇತ್ಯಾದಿ ವಿಷಯಗಳ ಚರ್ಚೆ ಇಲ್ಲಿದೆ.

ವಯೋಮಿತಿಯನ್ನು ನಿರ್ದೇಶಿಸಲಾಗಿದ್ದರೂ ಎಲ್ಲಾ ವಯಸ್ಸಿನವರು ಕೈಪಿಡಿಯಲ್ಲಿ ತಿಳಿಸಿರುವ ಚಟುವಟಿಕೆಗಳನ್ನು ಸುಲಭವಾಗಿ ಅಳವಡಿಸಿಕೊಳ್ಳ ಬಹುದಾಗಿದೆ. ಅದರಲ್ಲೂ ಪಕ್ಷಿ ವೀಕ್ಷಣೆಯಲ್ಲಿ ಗಮನಿಸಬೇಕಾದ ಶಿಷ್ಟಾಚಾರ ತಿಳಿಸಿರುವುದು ಬಹುಮುಖ್ಯ. ಕೈಪಿಡಿಯ ತಿಳಿ ನೀಲಿಬಣ್ಣದ ರೇಖಾ ಚಿತ್ರಗಳು ಪಠ್ಯದಷ್ಟೇ ಆಕರ್ಷಕವಾಗಿವೆ.

ಐರಿಷ್ ಲೇಖಕ ರಾಬರ್ಟ್ ಲಿಂಡ್ ಹೇಳುವ ಹಾಗೆ 'ಹಕ್ಕಿಗಳನ್ನು ನೋಡಲು ಮೌನದ ಭಾಗವಾಗಬೇಕು', ಅದು ನಿಜವಷ್ಟೆ. ಕೈಪಿಡಿ ಕೊನೆಯವರೆಗೂ ಪ್ರಸಿದ್ಧ ವ್ಯಕ್ತಿಗಳ ಅಭಿಪ್ರಾಯಗಳನ್ನು ಸಂದರ್ಭಕ್ಕೆ ತಕ್ಕಂತೆ ಬಳಸಿರುವುದು ಓದುವಾಗ ಮನಸ್ಸಿನ ಮೇಲೆ ಛಾಪು ಬಿಡದೆ ಇರದು.

ಕೊರೊನಾ ಬಂದು ಇಡೀ ಪ್ರಪಂಚವೇ ಗೃಹಬಂಧನದಲ್ಲಿ ಇದ್ದಾಗ ಹಲವರು ಹೊಸ ಹೊಸ ಹವ್ಯಾಸಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರು. ಇಡೀ ಪ್ರಪಂಚದಲ್ಲಿ ತೋಟಗಾರಿಕೆಯ ನಂತರ ಜನಪ್ರಿಯ ಹವ್ಯಾಸವೆಂದರೆ ಪಕ್ಷಿವೀಕ್ಷಣೆ. ಪಕ್ಷಿವೀಕ್ಷಣೆಯು ಗೃಹಬಂಧನದಲ್ಲಿದ್ದ ಮನಸ್ಸುಗಳನ್ನು ಕುಳಿತಲ್ಲಿಂದಲೇ ಸ್ವಚ್ಛಂದವಾಗಿ ಹಾರಾಡುವಂತೆ ಮಾಡಿತ್ತು.

ವಿಶೇಷ ಚೇತನ ಮಕ್ಕಳಿಗೂ ಪರಿಸರವನ್ನು ಅರಿಯಲು ಪ್ರತ್ಯೇಕ ಪುಟಗಳನ್ನು ಮೀಸಲು ಇಡಲಾಗಿದೆ. ಪಕ್ಷಿವೀಕ್ಷಣೆಯ ಮೂಲಕ ಪರಿಸರವನ್ನು ಅನುಭವಿಸಿ, ಅರಿವನ್ನು ಹೆಚ್ಚಿಸಿಕೊಳ್ಳುವಂತೆ ಮಾಡುವಲ್ಲಿ ಈ ಕೈಪಿಡಿ ನೆರವು ನೀಡುತ್ತದೆ.

ಸದ್ಯಕ್ಕೆ ಈ ಕೈಪಿಡಿ ಇಂಗ್ಲಿಷಿನಲ್ಲಿದ್ದು ಮುಂದಿನ ದಿನಗಳಲ್ಲಿ ಪ್ರಾದೇಶಿಕ ಭಾಷೆಗಳಲ್ಲಿ ಹೊರತರುವ ಯೋಜನೆಯಿದೆ ಎಂದು ಪ್ರಕಾಶಕರು ತಿಳಿಸಿದ್ದಾರೆ. ಉಚಿತವಾಗಿ ಈ ಕೈಪಿಡಿಯನ್ನು ಪಿಡಿಎಫ್ ರೂಪದಲ್ಲಿ https://www.early-bird.in/handbookನಿಂದ ಡೌನ್ಲೋಡ್ ಮಾಡಿಕೊಳ್ಳಬಹುದು.

ಮೊದಲ ಓದು

'ಶ್ರೀಮಂತ' ನೆನಪುಗಳ ಮೆರವಣಿಗೆ

ದೇವಕಿ ಜೈನ್ ಎಂಬ ಹೆಸರು ಕನ್ನಡಿಗರಿಗೆ ಅಷ್ಟೇನೂ ಪರಿಚಿತವೇನಲ್ಲ. ಆದರೆ ಅರ್ಥಶಾಸ್ತ್ರಜ್ಞೆಯಾಗಿ, ಚಿಂತಕಿಯಾಗಿ, ಸ್ತ್ರೀವಾದಿ ಅಭಿಮತ ರೂಪಿಸುವಲ್ಲಿ ಅವರು ಮಾಡಿದ ಕೆಲಸಗಳನ್ನು ತಿಳಿದುಕೊಂಡರೆ, ಅವರು ಬೆಂಗಳೂರಿನವರು ಎಂಬ ಸಂಗತಿ ಹೆಮ್ಮೆಯನ್ನು ಹುಟ್ಟಿಸದೇ ಇರದು. 'ದಿ ಬ್ರಾಸ್ ನೋಟ್ ಬುಕ್' ಎಂಬುದು ದೇವಕಿ ಜೈನ್ ನೆನಪುಗಳನ್ನೊಳಗೊಂಡ ಪುಸ್ತಕದ ಹೆಸರು. ಅದನ್ನೇ ಕೋಡಿಬೆಟ್ಟು ರಾಜಲಕ್ಷ್ಮಿ ಅವರು 'ಹಿತ್ತಾಳೆ ಬಣ್ಣದ ಪುಸ್ತಕ' ಎಂಬ ಹೆಸರಿನಲ್ಲಿ ಕನ್ನಡಕ್ಕೆ ತಂದಿದ್ದಾರೆ. ಆ ಮೂಲಕ ದೇವಕಿ ಜೈನ್ ಅವರನ್ನು ಕನ್ನಡದ ಮನಸ್ಸುಗಳಿಗೆ ಪರಿಚಯಿಸಿದ್ದಾರೆ.




ಹಿತ್ತಾಳೆ ಬಣ್ಣದ ಪುಸ್ತಕ
ಲೇ: ದೇವಕಿ ಜೈನ್
ಕನ್ನಡಕ್ಕೆ: ಕೋಡಿಬೆಟ್ಟು ರಾಜಲಕ್ಷ್ಮಿ
ಪ್ರ: ಅಹರ್ನಿಶಿ ಪ್ರಕಾಶನ, ಶಿವಮೊಗ್ಗ
ಸಂ: 9449174662
ಪು: 224 ₹270

ದೇವಕಿ ಅವರ ತಂದೆ ಎಂ.ಎ. ಶ್ರೀನಿವಾಸನ್ ಅವರು ಮೈಸೂರು ರಾಜ್ಯದಲ್ಲಿ ಮೇಯರ್ ಹಾಗೂ ಸಂಪುಟ ಸಚಿವರಾಗಿದ್ದವರು. ಶ್ರೀಮಂತ ಬ್ರಾಹ್ಮಣ ಕುಟುಂಬದಲ್ಲಿ ಹುಟ್ಟಿ ಬೆಳೆದ ಅವರ ಬಾಲ್ಯದ ದಿನಗಳು ಅನುಭವದ ದೃಷ್ಟಿಯಿಂದಲೂ ಶ್ರೀಮಂತವಾಗಿಯೇ ಇದ್ದವು. ನಿರ್ಭಿಡೆ ಮತ್ತು ದಿಟ್ಟತನವನ್ನು ರಕ್ತದಲ್ಲಿಯೇ ಹೊಂದಿದ್ದ ಅವರು, ಈ ಗುಣಗಳಿಂದಾಗಿಯೇ, ಕುಟುಂಬ, ಸಮಾಜ ಹೇರುವ ಹಲವು ಕಟ್ಟುಪಾಡುಗಳನ್ನು ತುಂಬ ಸಲೀಸಾಗಿ ಮುರಿದವರು. ಪ್ರಭಾವ, ಪ್ರತಿಭೆಯನ್ನು ಬಳಸಿಕೊಂಡು ಜಗತ್ತೆಲ್ಲ ಸುತ್ತುತ್ತ, ಆ ಕ್ಷಣದ ಬದುಕನ್ನು ಪ್ರೀತಿಸುತ್ತ, ಮುಕ್ತವಾಗಿ ಅನುಭವಿಸುತ್ತ ಬೆಳೆದವರು.

ತಮ್ಮ ಎಂಬತ್ತೇಳನೇ ವಯಸ್ಸಿನಲ್ಲಿ ಬದುಕಿನ ನಡಿಗೆಯನ್ನು ಹಿಂತಿರುಗಿ ನೋಡಿ, ಆಗ ಕಂಡಿದ್ದನ್ನು 'ದಿ ಬ್ರಾಸ್ ನೋಟ್ ಬುಕ್' ಆಗಿ ಪ್ರಕಟಿಸಿದ್ದಾರೆ. ಇಲ್ಲಿರುವುದು ದೇವಕಿ ಅವರ ಬದುಕಿನ ವಿವರವೇ ಆಗಿದ್ದರೂ, ಅದು ಅವರದೇ ದೃಷ್ಟಿಕೋನದಿಂದಲೇ ನಿರೂಪಿತಗೊಂಡಿದ್ದರೂ ಆತ್ಮಕತೆಯ ಸ್ವರೂಪದಲ್ಲಿಲ್ಲ. ನೆನಪುಗಳನ್ನು ಅಚ್ಚುಕಟ್ಟಾಗಿ, ಹಲವು ವಿಭಾಗಗಳಲ್ಲಿ ವಿಂಗಡಿಸಿ, ಜೋಡಿಸಿ ನಮ್ಮ ಮುಂದೆ ಇಡುತ್ತಾರೆ. ಹಾಗಾಗಿಯೇ ಅದು ವಾಸ್ತವದ ಬದುಕಿನಲ್ಲಿ ಇರುವ ಹಾಗೇ ಒಂದಕ್ಕೊಂದು ಹೆಣೆದುಕೊಂಡಿಲ್ಲ, ಬದಲಿಗೆ ಒಂದಾದ ಮೇಲೆ ಒಂದು ವಿಂಗಡಣೆಗೊಂಡು ಶಿಸ್ತಾಗಿ ಕೂತಿವೆ. ಉದಾಹರಣೆಗೆ, ಅವರು ಆಕ್ಸ್‌ಫರ್ಡ್‌ನಲ್ಲಿರುವ ಹೊತ್ತಿನಲ್ಲಿ, ಶಿಕ್ಷಕಿಯಾಗಿ ಕೆಲಸ ಮಾಡಿದ ಅವಧಿಯಲ್ಲಿನ ನೆನಪುಗಳನ್ನು ಹೇಳುವಾಗ, ಅವರ ಬದುಕಿನ ಲೈಂಗಿಕ ಅನುಭವ ಹೇಳುವಾಗ, ಕುಟುಂಬದ ವಿವರಗಳು ಅಪ್ಪಿತಪ್ಪಿಯೂ ನುಸುಳುವುದಿಲ್ಲ. ಕೌಟುಂಬಿಕ ತಳಮಳಗಳ ಕುರಿತು ಬರೆಯುವಾಗ ಅದೇ ಕಾಲದಲ್ಲಿ ಅವರ ಬದುಕಿನ ಭಾಗವಾಗಿದ್ದ ಇತರ ವಿಷಯಗಳ ಕುರಿತು ಏನನ್ನೂ ಹೇಳುವುದಿಲ್ಲ. ಈ ವಿಂಗಡಣೆಯ ಕಾರಣಕ್ಕೇ ಈ ಪುಸ್ತಕ ನಮಗೆ ಬದುಕಿನ ಇಡೀತನವನ್ನು, ಅದರಲ್ಲಿ ಅಂತರ್ಗತವಾಗಿರುವ ದರ್ಶನವನ್ನೂ ಕಾಣಿಸಲು ವಿಫಲವಾಗುತ್ತದೆ.

ಬದುಕಿನ ನೆನಪುಗಳನ್ನು ತುಂಬ ಲವಲವಿಕೆಯಿಂದ ಹೇಳುತ್ತ ಹೋಗುವ ತಾಜಾತನ ಮತ್ತು ದೇವಕಿ ಒಡನಾಡಿದ ಆ ಕಾಲದ ಜಗತ್ತಿನ ಗಣ್ಯರನೇಕರ ಉಲ್ಲೇಖಗಳು, ಮತ್ತು ಅಂಥ ಗಣ್ಯರ ನಡುವೆಯೂ ದೇವಕಿ ತನ್ನ ಗಟ್ಟಿ ಮತ್ತು ದಿಟ್ಟಧ್ವನಿಯ ಮೂಲಕ ಎಂಥ ಛಾಪು ಮೂಡಿಸಿದ್ದರು ಎಂಬುದನ್ನು ತಿಳಿಯುವುದಕ್ಕೋಸ್ಕರ ಈ ಪುಸ್ತಕವನ್ನು ಓದಿ ಆನಂದಿಸಬಹುದು.

ಬೆಟ್ಟದೂರರ ವ್ಯಕ್ತಿತ್ವದ ದರ್ಶನ



ಬೆಟ್ಟದೂರು ಅಲ್ಲಮ
ಲೇ: ಡಾ.ಸಿ.ಬಿ.ಚಿಲ್ಕರಾಗಿ
ಪ್ರ: ಡಾ.ಎಂ.ಎಂ.ಕಲಬುರ್ಗಿ ಅಧ್ಯಯನ ಸಂಸ್ಥೆ
ಸಂ: 9448144419
ಪು: 144 ₹200

ಬಂಡಾಯ ಸಾಹಿತಿ, ಹೋರಾಟಗಾರ ಅಲ್ಲಮಪ್ರಭು ಬೆಟ್ಟದೂರು ಅವರ ಹೋರಾಟದ ಹೆಜ್ಜೆಗುರುತು 'ಬೆಟ್ಟದೂರು ಅಲ್ಲಮ'. 'ಡಾ.ಎಂ.ಎಂ. ಕಲಬುರ್ಗಿ ಅಧ್ಯಯನ ಸಂಸ್ಥೆ'ಯು ಲಿಂಗಾಯತ ಅಭಿನಂದನ ಸಾಹಿತ್ಯ ರತ್ನಮಾಲೆಯ 18ನೇ ಕೃತಿಯಾಗಿ ಇದನ್ನು ಪ್ರಕಟಿಸಿದೆ.

ಪ್ರಗತಿಪರ ವಿಚಾರಧಾರೆಯ ದಾರಿಯಲ್ಲಿ ಅಲ್ಲಮಪ್ರಭು ಅವರ ಹೋರಾಟ ಗೋಕಾಕ ಚಳವಳಿಯಿಂದ ಹಿಡಿದು ಕಪ್ಪತಗುಡ್ಡ ಹೋರಾಟದವರೆಗೂ ಇದೆ. ಈ ಹೋರಾಟದ ಹೆಜ್ಜೆಗಳನ್ನು ವೃತ್ತಿಯಲ್ಲಿ ಉಪನ್ಯಾಸಕರಾಗಿರುವ ಸಿ.ಬಿ.ಚಿಲ್ಕರಾಗಿ ಕಟ್ಟಿಕೊಟ್ಟಿದ್ದಾರೆ. 'ಸಾಂಪ್ರದಾಯಿಕ ಚೌಕಟ್ಟನ್ನು ಬಿಟ್ಟು, ಕವಿಯ ಸಾಹಿತ್ಯ ಸೃಷ್ಟಿಯ ಮೂಲಕವೇ ಅವರನ್ನು ಶೋಧಿಸುವುದು ಈ ಕೃತಿಯ ವೈಶಿಷ್ಟ್ಯ' ಎಂದು ಹೇಳಿದ್ದಾರೆ ಕೃತಿಗೆ ಮುನ್ನುಡಿ ಬರೆದಿರುವ ದಿವಂಗತ ಪ್ರೊ.ಚಂದ್ರಶೇಖರ ಪಾಟೀಲ. ಕೃತಿಯಲ್ಲಿ ಬಳಸಿದ ಭಾಷೆಯೂ ಕಾವ್ಯಮಯವಾಗಿದೆ. 'ಅನಂತ', 'ಹಿಂದಣ ಬೆಳಗು', 'ಕೊಪ್ಪಳದ ಪರಿಸರ', 'ಹೋರಾಟ', 'ವೈಚಾರಿಕತೆ' ಹೀಗೆ ಒಂಬತ್ತು ಅಧ್ಯಾಯಗಳಲ್ಲಿ ಬೆಟ್ಟದೂರರ ವ್ಯಕ್ತಿತ್ವ, ಜೀವನಕಥನವಿದೆ. ಛಾಯಾಚಿತ್ರಗಳೂ ಬೆಟ್ಟದೂರರ ಬದುಕನ್ನು ಚಿತ್ರಿಸಿವೆ.

ಕಾಲವನ್ನೇ ಬಗ್ಗಿಸೋರು

10ನೇ ಪುಟದಿಂದ...

ನಮಗೆ ಪ್ರಿಯರಾದವರ ಜೊತೆಯಲ್ಲಿದ್ದಾಗ/ಇಷ್ಟವಾದ ಕೆಲಸದಲ್ಲಿ ಮಗ್ನರಾದಾಗ ನಮಗೆ ಸಮಯ ಸರಿದದ್ದೇ ಗೊತ್ತಾಗುವುದಿಲ್ಲ ತಾನೆ! ಅದೇ ಟ್ರಾಫಿಕ್ ಸಿಗ್ನಲ್‌ನಲ್ಲಿ ಕಾಯುವಾಗ ಒಂದೊಂದು ಕ್ಷಣವೂ ಯುಗವಾದಂತೆ!


ಒಂದು ನಿಮಿಷಕ್ಕೆ 77 ಸೆಕೆಂಡುಗಳೆಂದು ಗುರುತಿಸುವುದಷ್ಟೇ ಅಲ್ಲ, ತಾವು ಎದುರಿಸುವ ಯಾವುದರ ಬಗೆಗೂ ಇಂತಹ ವ್ಯಕ್ತಿಗಳು ಬಹು ಆಶಾವಾದಿಗಳೂ ಆಗಿರುತ್ತಾರೆ. ಅಂದರೆ ತಾವು ತಡವಾಗಿ ಹೋದರೂ ಊಟ ಮುಗಿದಿರುವುದಿಲ್ಲ, ಊಟ ಒಂದೊಮ್ಮೆ ಮುಗಿದಿದ್ದರೂ ಪರವಾಗಿಲ್ಲ, ಮತ್ತೊಂದು ಹೋಟೆಲಿಗೆ ಹೋಗಿ ಊಟ ಮಾಡಿದರಾಯಿತು. ಮಧ್ಯೆ ಸಿಗುವ ವ್ಯಕ್ತಿಗಳೊಡನೆ ಸ್ವಲ್ಪ ಹರಟೆ ಹೊಡೆದೇ ಮುನ್ನಡೆದರಾಯಿತು... ಹೀಗೆ ಆತಂಕರಹಿತ ದಿನಚರಿ! ಅಚ್ಚರಿಯ ಮಾತೆಂದರೆ ಈ ಮನೋಭಾವ ಅನುಭವಗಳಿಗೆ ತೆರೆದುಕೊಳ್ಳುವ, ಚಿಕ್ಕ ಆಗುಹೋಗನ್ನೂ ಕುತೂಹಲದಿಂದ, ಸೂಕ್ಷ್ಮವಾಗಿ ಗಮನಿಸುವ ಗುಣದೊಂದಿಗೆ ಹೊಂದುತ್ತದೆ. ತಾನು ಹಿಡಿದ ಕೆಲಸದಲ್ಲಿ ಪೂರ್ತಿಯಾಗಿ ಮುಳುಗುವುದು, ಪರಿಶ್ರಮ ಪಡುವುದು ಇವು ಇಲ್ಲಿ ಮುಖ್ಯವಾಗಿಬಿಡುತ್ತವೆ. ಹಾಗಾಗಿಯೇ 'ತಡ ಮಾಡುವ', (ಅರ್ಥಾತ್ ಕಾರ್ಯವೊಂದರಲ್ಲಿ ಮುಳುಗಿ ಇತರ ಎಲ್ಲವನ್ನೂ ಮರೆಯುವ) ಗುಣವನ್ನು ವ್ಯಕ್ತಿತ್ವದ 'ಸೃಜನಶೀಲತೆ' ಎಂಬ ಅಂಶದೊಂದಿಗೆ ಮನೋವಿಜ್ಞಾನ ಬಹುವಾಗಿ ಗುರುತಿಸುತ್ತದೆ.

ನಿಸರ್ಗದತ್ತವಾದ ವ್ಯಕ್ತಿತ್ವವನ್ನೂ ಪರಿಸರ-ಕಲಿಕೆಗಳು ಮಾರ್ಪಡಿಸಬಹುದು ಎಂಬುದನ್ನು ವಿಜ್ಞಾನ ನಿರೂಪಿಸಿ ತೋರಿಸಿದೆ. ಆದ್ದರಿಂದ ತಡವಾಗಿ ಬರುವ ನಡವಳಿಕೆಯ ವ್ಯಕ್ತಿಗಳು ಮನಸ್ಸು ಮಾಡಿದರೆ, ತಮ್ಮ ಆರಾಮದ ಮನೋಭಾವವನ್ನು ಕಾಯ್ದುಕೊಂಡೇ, ಸ್ವಲ್ಪ ಗಮನವಿಟ್ಟು, 'ದೇಹದ ಅಲಾರಾಂ'ನಷ್ಟೇ ಗಮನಿಸದೆ, ಹೊರಗಿನ ಗಡಿಯಾರವನ್ನೂ ಆಗಾಗ್ಗೆ ನೋಡಿ, ಸಮಯಕ್ಕೆ ಕಿಂಚಿತ್ ಮಾತ್ರ ತಪ್ಪಿ, 'ಅರೆ, ಇಷ್ಟಾದರೂ ಬೇಗ ಬಂದರಲ್ಲ' ಎಂಬ ಸಂತಸವನ್ನು ಆತ್ಮೀಯರಲ್ಲಿ ಉಂಟು ಮಾಡಬಹುದು. ಕೌಟುಂಬಿಕ ಕಲಹಗಳನ್ನು ತಪ್ಪಿಸಬಹುದು. ತಡವಾಗಿ ಬರುವುದರಿಂದ ತಮಗಾಗುವ ನಷ್ಟ-ಪರಿಣಾಮಗಳನ್ನು ನೋಡಿ ರೈಲು ತಪ್ಪುವುದಕ್ಕಿಂತ, ಸಂಬಂಧಗಳು ಕಳೆದುಹೋದರೆ ಎಂದು ಸ್ವಲ್ಪ ಕಲ್ಪಿಸಿಕೊಂಡರೆ ಇದು ಸಾಧ್ಯವಾದೀತು.

ಲೇಟ್ ಲೋಕಪ್ಪ-ಲೇಟ್ ಲತಾರನ್ನು ಅರ್ಥ ಮಾಡಿಕೊಳ್ಳುವಾಗ, ಅವರ ತಡಮಾಡುವ ನಡವಳಿಕೆಯಿಂದ ಬೇಸರವಾಗುವಾಗ ಝೆನ್ ಕಥೆಯೊಂದನ್ನು ಅಗತ್ಯವಾಗಿ ನೆನಪಿಸಿಕೊಳ್ಳಬೇಕು. ಒಬ್ಬ ಬೌದ್ಧ ಭಿಕ್ಷು 10 ವರ್ಷಗಳ ಕಾಲ 'ಝೆನ್ ತತ್ವ' ಅಧ್ಯಯನ ಮಾಡಿ, 'ಗುರು' ಪದವಿಯನ್ನೇರಿದ ನಂತರ ಒಂದು ಮಳೆಯ ದಿನ ತನ್ನ 'ಮಾಸ್ಟರ್'ನನ್ನು ಕಾಣಲು ಬಂದ. ಭಿಕ್ಷು ಒಳ ಬರುತ್ತಿದ್ದಂತೆ ಮಾಸ್ಟರ್ ಕೇಳಿದ, 'ಚಪ್ಪಲಿ ಮತ್ತು ಕೊಡೆಯನ್ನು ವರಾಂಡದಲ್ಲಿ ಬಿಟ್ಟು ಬಂದೆಯಾ?', ಭಿಕ್ಷು 'ಹೌದು' ಎಂದ. ಮಾಸ್ಟರ್ ಮತ್ತೆ ಕೇಳಿದ 'ಕೊಡೆಯನ್ನು ಚಪ್ಪಲಿಯ ಬಲಭಾಗದಲ್ಲಿಟ್ಟೆಯೋ ಅಥವಾ ಎಡಭಾಗದಲ್ಲಿಟ್ಟೆಯೋ?' ಭಿಕ್ಷುವಿಗೆ ತನಗೆ ಉತ್ತರ ಗೊತ್ತಿಲ್ಲವೆಂದೂ, ತಾನಿನ್ನೂ ಸಂಪೂರ್ಣ ಅರಿವು ಸಂಪಾದಿಸಿಲ್ಲವೆಂದೂ ಗೊತ್ತಾಯಿತು. ಮತ್ತೆ 'ಮಾಸ್ಟರ್' ಬಳಿ ಕಲಿಯಲು ತೊಡಗಿದ. ಈ ಕಥೆ ಹೇಳುವುದಾದರೂ ಏನು? ಒಂದೊಂದು ನಿಮಿಷಕ್ಕೂ ಅವಸರಿಸುವವರು, ಸಮಯವೊಂದೇ ಎಲ್ಲವೂ ಎಲ್ಲ, ಪ್ರತಿ ನಿಮಿಷವನ್ನೂ ಮಗ್ನತೆಯಿಂದ, ಮುಗ್ಧತೆಯಿಂದ ಕಣ್ಣರಳಿಸಿ ಸವಿಯುವುದೂ ಕಲಿಯುವುದೂ ಅಷ್ಟೇ ಉಪಯುಕ್ತ ಎನ್ನುವುದನ್ನು ಅರಿಯಬೇಕು. ಹತ್ತು ವರ್ಷಗಳ ನಂತರವೂ ಮತ್ತೆ ಗುರುವಿನ ಬಳಿ ಅಧ್ಯಯನಕ್ಕೆ ಕುಳಿತ ಭಿಕ್ಷುವಿಗೆ ಉಂಟಾದ ಅರಿವು ಈ ಸೂಕ್ಷ್ಮತೆಯ ಗ್ರಹಿಕೆ.

ನಾವು-ನೀವು 'Time benders' ಕಾಲವನ್ನು ಬಗ್ಗಿಸುವವರನ್ನು ತಾತ್ಸಾರದಿಂದ ಕಾಣುವ ಬದಲು ಅವರಿಂದ ಕಲಿಯಬೇಕಾಗಿದೆ! ಇಡೀ ಜಗತ್ತೇ ಕಾಣದೆಡೆಗೆ ಓಡುತ್ತಿರುವ ಈ ಸಮಯದಲ್ಲಿ ನಮ್ಮಷ್ಟಕ್ಕೆ ನಾವೇ ಒಂದು ಹೂವನ್ನು, ಒಂದು ಕವಿತೆಯನ್ನು, ಮಳೆ ಸುರಿಯುವುದನ್ನು, ತಡವಾದರೂ ಪರವಾಗಿಲ್ಲ, ಆನಂದಿಸುವುದನ್ನು ನಾವು ಕಲಿಯಬೇಕಾಗಿದೆ. ಆರಾಮವನ್ನು - ಸೂಕ್ಷ್ಮತೆಯನ್ನು, ಅನುಭವ ಹೀರುವ ಕಲೆಯನ್ನು 'ಕಾಲ ಬಗ್ಗಿಸುವ' ಪರಿಣತರಿಂದ ಕಲಿತು, ಕಿಂಚಿತ್ ಮಾತ್ರ ಶಿಸ್ತನ್ನು ಅವರಿಗೆ ಕಲಿಸಬೇಕಾಗಿದೆ. ಸಮಾಜವನ್ನು 'ಸಮಯ ಸ್ವಸ್ಥ'ವಾಗಿಸಬೇಕಿದೆ!

ಮಜ ಮಜ ಮಜಕೂರ



• ಎಂ.ಎಸ್.ಪೂಜಾರ

ಗಣಿತದಲ್ಲಿ ಗರ್ದಿ ಗಮ್ಮತ್ತು

ಈ ಲೆಕ್ಕ ಹೀಗೂ ಮಾಡಿ ನೋಡಿ

ದೊಡ್ಡಾಟ

29	7154	23
18	3816	26
+ 26	+ 6754	+ 18
23	3209	29
	4876	
25809	25809	25809
	(ರೂಢಿ ವಿಧಾನ)	

ಇಲ್ಲಿ ಪ್ರತಿ ಕಂಬ ಸಾಲುಗಳಲ್ಲಿನ ಅಂಕಿಗಳನ್ನು ಕೂಡಿಸಿ

ಮೇಲಿನಂತೆ ಪ್ರತ್ಯೇಕ ಹಚ್ಚುತ್ತಾ ನಂತರ ಎಲ್ಲವನ್ನೂ ಕೂಡಿಸಿದರೆ ರೂಢಿಯಲ್ಲಿರುವ ವಿಧಾನದ ಉತ್ತರವೇ ದೊರಕುತ್ತದೆ. ಇಲ್ಲಿ ಕೈಲಾ ನೆನಪು ಹಾರುವ ಪ್ರಸಂಗವೇ ತಪ್ಪುತ್ತದೆ.

ಸಣ್ಣಾಟ

ಭಾಗ ಮಾಡು – ಮೋಜು ನೋಡು

ಇಲ್ಲಿ ಕೊಟ್ಟಿರುವ ಸಂಖ್ಯೆಯಲ್ಲಿ ಮೂರು ಭಾಗ ಮಾಡಿ ಗುಣ್ಯ, ಗುಣಕ, ಗುಣಲಬ್ಧವಾಗಿ ವಿಂಗಡಿಸಿ. (ಯಾವೊಂದು ಅಂಕಿಯೂ ಸ್ಥಾನಪಲ್ಲಟವಾಗುವ ಹಾಗಿಲ್ಲ)

7154632890

☐ x ☐ = ☐

(ವಿ.ಸೂ: ಹತ್ತೂ ಅಂಕಿಗಳು ಒಮ್ಮೆ ಮಾತ್ರ ಬಂದಿವೆ ಗಮನಿಸಿ)

ಪದ-ಪರಿಚಯ-ಪರೀಕ್ಷೆ

ಇಲ್ಲಿ ಕೊಟ್ಟಿರುವ ಮರ ಎಂಬ ಪದಗಳಿಗೆ ಅಕ್ಷರ ಪಟ್ಟಿಯಲ್ಲಿ ಸೂಕ್ತವಾದ ಎರಡಕ್ಷರ ತುಂಬಿ ನಾಲ್ಕಕ್ಷರದ ಪದ ರಚಿಸಿ

1 ಮ – – ರ
2 ಮ – – ರ
3 ಮ – – ರ
4 ಮ – – ರ
5 ಮ – – ರ
6 ಮ – – ರ
7 ಮ – – ರ
8 ಮ – – ರ
9 ಮ – – ರ
10 ಮ – – ರ
11 ಮ – – ರ

ಅಕ್ಷರ ಪಟ್ಟಿ


ನೋ	ಲ	ಧ್ಯ	ದ	ತಾ
ತ್ಯಾ	ಬಾ	ಶೂ	ತ	ಗಾ
ದ್ವಾ	ತ	ಕೂ	ಹ	ಮ
ನ್ವ	ಜ	ಹಾ	ಮ	ಹಾ
	ಹಾ	ಕಾ		

ಜಾಣಪದ ಆಟ

ಇಲ್ಲಿ ಹ, ರ ಮೂಲಾಕ್ಷರಗಳನ್ನು ಆಧರಿಸಿ ಪಕ್ಕದ ಸುಳಿವಿನಂತೆ ಎರಡು ಅಕ್ಷರಗಳ ಪದ ರಚಿಸಿ



	ಹ	ರ	ಸುಳಿವು
1			ದ್ರವವನ್ನು ಎಳೆದುಕೋ
2			ಒಂದು ತರಕಾರಿ ಬಳ್ಳಿ
3			ವಿಷ್ಣು
4			ಎಳೆಯ ಎತ್ತು
5			ರಕ್ಷಿಸು



ಡಸ್ಟ್ಗ ಚಕ್ರು ಕೇಶ್ರಪ್ಪ ಕಥೆಯ ಮಳೆಗಾಲದ ಯಲ್ಲಾಪುರ

• ಕಲೆ–ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ



ಇದು ಚಿತ್ರ ರಚನೆಯ ಕಥೆ. ಇದು ನಿರ್ದಿಷ್ಟ ಸ್ಥಳದಲ್ಲೇ ಕುಳಿತು ಅಲ್ಲಿನ ದೃಶ್ಯವನ್ನು ಜಲವರ್ಣದಲ್ಲಿ ಕಾಗದದ ಮೇಲೆ ಬರೆಯುವ ಕೆಲಸವಿದು. ನಾವು ಆಯ್ಕೆ ಮಾಡಿಕೊಂಡದ್ದು ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ



ಬಯಲುಸೀಮೆಯ ಗಡಿ ಮಲೆನಾಡಿನ ಗೇಟನಂತಿರುವ ಯಲ್ಲಾಪುರದ ಸುತ್ತಲಿನ ಸಣ್ಣ ಸಣ್ಣ ಹಳ್ಳಿಗಳು, ಅಡಿಕೆ ತೋಟಗಳು ಬಹಳ ಅಂದ– ಚಂದ. ಇಲ್ಲಿ ನೆರಳು-ಬೆಳಕು ಬದಲಾಗುವುದರೊಳಗೆ ಒಂದೂವರೆ ತಾಸಿನ ಒಳಗೆ ಚಿತ್ರ ಪೂರ್ಣವಾಗಬೇಕು



ಮಳೆಗಾಲದಲ್ಲಿ ಇಲ್ಲಿನ ಹಳ್ಳಿಗಳ ನೀರಿನ ಟ್ಯಾಂಕ್, ಮನೆ ಗೋಡೆಗಳ ಆವರಣದ ಮೇಲೆ ಹಸಿರು ಪಾಚಿಕಟ್ಟಿ ರಂಗೋಲಿಯಂಥ ಚಿತ್ತಾರ ಬರೆದಿರುತ್ತದೆ. ಇಂಥ ಅದೆಷ್ಟೋ ಚಿತ್ತಾರಗಳನ್ನು ಕಾಣಬಹುದು



ಮಲೆನಾಡಿನ ಹಳ್ಳಿಗಳಲ್ಲಿ ಮಳೆಗಾಲ ಮುಗಿಯುವವರೆಗೂ ಅಡುಗೆಗಾಗಿ ಉರುವಲಿನ ಕಟ್ಟಿಗೆ, ಕುಳ್ಳುಗಳನ್ನು ಸಂಗ್ರಹಿಸಿಡುತ್ತಾರೆ. ತೊಯ್ಯಲಾರದಂತೆ ಅವುಗಳನ್ನು ಶೆಡ್‌ಗಳ ಒಳಗೆ ಸಂಗ್ರಹಿಸಿ ಇಡುತ್ತಾರೆ



ಸತತ ಸುರಿಯುವ ಗಾಳಿ ಮಳೆಗೆ ಜಂಬಿಟ್ಟಿಗೆ, ಹೆಂಟೆ ಮಣ್ಣಿನ ಮನೆಯ ಗೋಡೆಗಳು ಕುಸಿಯುವುದು ಸಾಮಾನ್ಯ. ಆಗ ಮತ್ತೆ ಮನೆ, ಬದುಕು ಕಟ್ಟಿಕೊಳ್ಳುತ್ತಾ ಇಲ್ಲಿನ ಜನರು ಜೀವನ ಸಾಗಿಸುತ್ತಾರೆ. ಹೀಗೆ ಮಲೆನಾಡಿಗರ ಮಳೆಗಾಲದ ಬದುಕು ಸಾಗಿದೆ



ಯಲ್ಲಾಪುರದ ಸುತ್ತಮುತ್ತಲಿನ ಹಳ್ಳಿಗಳ ಗುಡಿಸಲುಗಳು ದೂರಕ್ಕೆ ಪುಟ್ಟ ಗೂಡುಗಳಂತೆ ಕಾಣುತ್ತವೆ. ಮೋಡದ ಕೆಳಗೆ ನಿಸರ್ಗದೇವಿಯು ಹಸಿರು ಸೀರೆಯ ಹೊದಿಕೆ ಹಾಸಿದಂತೆ ಕಾಣುತ್ತದೆ

ಅದಲು ಬದಲು ಕಂಚಿ ಕದಲು

1 ಮತ್ತೆ ಕರಿ = ________
2 ಸತುಮಾರಿ = ________
3 ಗುಟ್ಟುಮುರಿ = ________
4 ನೀಳನಾರಿ = ________



ಹಣ್ಣಿನ ಅಂಗಡಿ

ಬನ್ನಿರಿ ಮಕ್ಕಳೆ ತಿನ್ನಿರಿ ಮಕ್ಕಳೆ
ತೆರೆದಿದೆ ಹಣ್ಣಿನ ಅಂಗಡಿಯು
ಹಸಿವೆಯು ಹೆಚ್ಚಲು, ಕಸುವನು ಪಡೆಯಲು
ಖುಷಿಯಿಂದ ಕರೆವುದು ಕಲ್ಲಂಗಡಿಯು
ತಿಂಗಳ ಪಗಾರ ಮೊದಲನೆ ದಿನವೇ
ತುಂಬಿದೆ ಅಪ್ಪನ ಜೇಬು
ಅಂದಿನ ದಿನವೇ ಅಪ್ಪನು ತರುವನು
ಆರೋಗ್ಯ ಭಾಗ್ಯದ ಸೇಬು
ತುಂಟತನದಿ ತಂಟೆಯ ತೆಗೆಯಲು
ಆಂಟಿ ಕೊಡುವಳು ರೂಪಾಯಿ
ಹಸಿಬಿಸಿ ಖಾರ, ಚುರುಮುರಿ ಬದಲು
ತಿನ್ನಿರಿ ಹಣ್ಣಿದು ಪಪ್ಪಾಯಿ
ಹುಳಿ ಸಿಹಿ ಮಿಶ್ರಿತ ಇದು ನೋಡಿ
ಒಳಿತನು ಮಾಡುವ ದ್ರಾಕ್ಷಿಯು
ಮಲಬದ್ಧತೆಗೆ ಬಾಯಾರಿಕೆಗೆ
ಸಿದ್ಧೌಷಧಿಗಿದು ಸಾಕ್ಷಿಯು

ಮಧುಮೇಹಕ್ಕೆ ಇದು ಔಷಧಿಯು
ಕಪ್ಪು ಬಣ್ಣದ ನೀರಲ
ಪೇಟೆಯ ಒಳಗೆ ದಾಟುವ ಮೊದಲೇ
ಕಣ್ಣಿಗೆ ಕಾಣ್ವುದು ಪೇರಲ
ತಿನ್ನಲು ರುಚಿಯು ದೇಹಕೆ ಹಿತವು
ಹಣ್ಣಿನ ರಾಜ ಮಾವು
ಮಾವಿನ ರಸಕೆ ಸಿಹಿಯನು ಬೆರೆಸಿ
'ಸಿಹಿಕರಣಿ' ಸವಿಯಿರಿ ನೀವು
ದೇಹದ ತೂಕಕೆ ಹೆಚ್ಚಿನ ಬಲಕೆ
ತಿನ್ನಿರಿ ನೀವು ಬಾಳೆ
ಆರೋಗ್ಯರೆನಿಸಿ ನಿರೋಗಿಯಾಗಿ
ಕಾಲವ ಕಳೆಯಿರಿ ನಾಳೆ
ಉಕ್ಕಿನ ಬಲಕೆ ಸಕ್ಕರೆ ರುಚಿಯು
ಹಣ್ಣನು ತಿನ್ನಿರಿ ಚಿಕ್ಕು
ಚಿಕ್ಕದೆ ಆದರೂ ತಕ್ಕ ಹಣ್ಣಿದು
ಸವಿಯಿರಿ ನೀವು ನಕ್ಕು

ಬಾಯಲಿ ನೀರು ಬರಿಸುವ ಹಣ್ಣು
ಬಾಲರ ಮೆಚ್ಚಿನ ಬೋರೆ
ಬಾಲಕರಿರಲಿ ಮುದುಕರೆ ಇರಲಿ
ತಿನ್ನದೆ ಇರುವರು ಯಾರೇ?
ಪಚನದ ಕಾರ್ಯಕೆ ಸುಲಭೋಪಾಯ
ಎಲ್ಲರೂ ಬಲ್ಲರು ಈ ನಿಂಬೆ
ಹಲ್ಲಿನ ತೆರದಿ ಬೀಜವ ತೋರುತ
ಮನವನು ಸೆಳೆವುದು ದಾಳಿಂಬೆ
ಅಜ್ಜನ ಹಾಗೆ ಮೈಹುರಿಗೊಳಿಸಲು
ಸಜ್ಜಾಗಿಹುದು ಖರ್ಜೂರ
ಅಂಜದೆ ಅಳುಕದೆ ತಿನ್ನಿರಿ ನೀವು
ಬಾಯಿಗೆ ರುಚಿಯಿದು ಅಂಜೂರ
ವಾಸನೆ ನೋಡಿ ರಸವನು ಕುಡಿಯಿರಿ
ಘಮಘಮಿಸುತಿದೆ ಮೋಸಂಬಿ
ಕಾಯಿಲೆ ಬಿದ್ದರೆ ಕೂಡಲೆ ಬೇಕಿದು
ಶೀಘ್ರ ಶಕ್ತಿಗೆ ಇದನಂಬಿ

ಕಳೆದ ಸಂಚಿಕೆಯ ಸರಿ ಉತ್ತರ

'ಮೇ' ಪದಗಳು

1 ಮೇಕೆ 2 ಮೇಲೆ 3 ಮೇಘ 4 ಮೇಷ
5 ಮೇಲು 6 ಮೇಟಿ 7 ಮೇಳ 8 ಮೇಣ
9 ಮೇರು10 ಮೇಜು 11 ಮೇಡು
12 ಮೇಧ 13 ಮೇವು 14 ಮೇರೆ
15 ಮೇಸ್ತ್ರಿ

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ-20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಹಾರ್ಮೋನಿಕಾದ ಮೋಡಿಯಲ್ಲಿ...

ಸ್ಮಿತಾ ಶಿರೂರ



ಹಂಸನಾದ ಫೌಂಡೇಷನ್‌ನ ಗಾಯನ ತಂಡ

ಶೋಲೆ ಚಿತ್ರದಲ್ಲಿ ಅಮಿತಾಬ್ ಬಚ್ಚನ್ ಹಾರ್ಮೋನಿಕಾ ನುಡಿಸುತ್ತ ಕುಳಿತಿದ್ದ ದೃಶ್ಯ ಇನ್ನೂ ಸಿನಿಪ್ರಿಯರ ಮನಸ್ಸಿನಲ್ಲಿ ಅಚ್ಚೊತ್ತಿದಂತಿದೆ. ಕಾಣದಂತೆ ಮಾಯವಾದನೋ... ಹಾಡಿಗೂ ವಿಶಿಷ್ಟ ಮಾಧುರ್ಯ ಬೆರೆಸಿದ ಈ 'ಹಾರ್ಮೋನಿಕಾ'ದ ಮೋಡಿ ಹಿಂದಿ–ಕನ್ನಡ ಚಿತ್ರಗೀತೆಗಳಲ್ಲಿ ಆಗಾಗ ಮುನ್ನೆಲೆಗೆ ಬರುತ್ತಿರುತ್ತದೆ. ಇದೇ ವಾದ್ಯವನ್ನು ಕರ್ನಾಟಕ ಶಾಸ್ತ್ರೀಯ ಸಂಗೀತಕ್ಕೆ ಒಗ್ಗಿಸಿ ಸಂಗೀತ ಪ್ರಿಯರಿಗೆ ರಸದೌತಣ ನೀಡುತ್ತಿದ್ದಾರೆ ಬೆಂಗಳೂರಿನ ಸಂಗೀತ ಕಲಾವಿದ ಸಾಯಿತೇಜಸ್ ಚಂದ್ರಶೇಖರ್.

ಬಾಲ್ಯದಲ್ಲಿ ಜಾತ್ರೆಗಳಲ್ಲಿ ಸಿಗುವ ಮೌತ್ ಆರ್ಗನ್ ಖರೀದಿಸಿದ ನೆನಪು ಹಲವರಿಗೆ ಇರಬಹುದು. ಇದೊಂದು ಆಟಿಕೆ ಎಂಬ ಭಾವವೇ ಬಹುತೇಕರದ್ದು. ಆಡು ಭಾಷೆಯಲ್ಲಿ ಇದಕ್ಕೆ 'ರಾಗಮಾಲಿಕೆ' ಎಂದೂ ಕರೆಯುವುದುಂಟು. ಬೆಂಗಳೂರಿನ ವಿದ್ಯಾರಣ್ಯಪುರ ನಿವಾಸಿಯಾದ ಸಾಯಿತೇಜಸ್‌ಗೆ 10ನೇ ವಯಸ್ಸಿನಲ್ಲಿ ಮೌತ್ ಆರ್ಗನ್ ಸಿಕ್ಕಾಗ ಅವರು ಮೊದಲು ನುಡಿಸಿದ್ದು 'ಟ್ವಿಂಕಲ್ ಟ್ವಿಂಕಲ್ ಲಿಟಲ್ ಸ್ಟಾರ್....' ಎಂಬ ಶಿಶುಗೀತೆಯನ್ನು. ನಂತರ ರಾಷ್ಟ್ರಗೀತೆ 'ಜನಗಣಮನ' ನುಡಿಸಲು ಕಲಿತರು. ಆಗಾಗ ಕಾರ್ಯಕ್ರಮಗಳಲ್ಲಿ ಹಾಡುಗಳನ್ನು ನುಡಿಸುತ್ತಿದ್ದರು. 2006ರಲ್ಲಿ ಶಾಲೆಯ ಪ್ರಾಧ್ಯಾಪಕರೊಬ್ಬರು ನೀನ್ಯಾಕೆ ಕರ್ನಾಟಕ ಸಂಗೀತವನ್ನು ಈ ವಾದ್ಯದಲ್ಲಿ ನುಡಿಸಬಾರದು ಎಂದು ಕೇಳಿದರು. ಅದಕ್ಕೆ ಅವಕಾಶವನ್ನೂ ಮಾಡಿಕೊಟ್ಟರು. ಅಲ್ಲಿಂದ ಹಾರ್ಮೋನಿಕಾದೊಂದಿಗಿನ ಬಾಂಧವ್ಯ ಆರಂಭಗೊಂಡಿತು. ಇಂದು ಹಾರ್ಮೋನಿಕಾದಲ್ಲಿ ಕರ್ನಾಟಕ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ ನಡೆಸಿಕೊಡುವ ಜಗತ್ತಿನ ಏಕೈಕ ಕಲಾವಿದ ಸಾಯಿತೇಜಸ್. ಇವರ ಅಕ್ಕ ಸುಮನಾ ಚಂದ್ರಶೇಖರ್ ಘಟಂ ವಾದ್ಯ ಕಲಾವಿದೆ. ವಿದುಷಿ ರೂಪಾ ಶ್ರೀಧರ್, ಪಂಡಿತ್ ವಿಶ್ವನಾಥ ನಾಕೋಡ ಅವರು ಸಂಗೀತ ಗುರುಗಳು.

ಪಾಶ್ಚಾತ್ಯ ದೇಶಗಳಲ್ಲಿ ಪ್ರಮುಖ ವಾದ್ಯ ಎನಿಸಿದ ಹಾರ್ಮೋನಿಕಾ ವಾದ್ಯಕ್ಕೆ ಭಾರತದಲ್ಲಿ ಪ್ರಮುಖ ವಾದ್ಯದ ಸ್ಥಾನ ಇನ್ನೂ ಸಿಕ್ಕಿಲ್ಲ. ಈ ವಾದ್ಯದ ಶೇ 95ರಷ್ಟು ವಾದನ ಕೇಳಿ ಬರುವುದು ಹಿಂದಿ ಚಿತ್ರಗಳಲ್ಲಿ. ಅದೂ ತುಣುಕು–ತುಣುಕುಗಳಾಗಿ ಅಷ್ಟೆ. ಈ ವಾದ್ಯದ ಮೋಡಿಗೊಳಗಾದ ಸಾಯಿತೇಜಸ್ ಮಾತ್ರ ಸತತ ಪರಿಶ್ರಮದಿಂದ ಶಾಸ್ತ್ರೀಯ ವಾದ್ಯಗಳಂತೆ ಇದನ್ನೂ ಅಷ್ಟೇ ಅದ್ಭುತವಾಗಿ ನುಡಿಸುವುದನ್ನು ಅಭ್ಯಸಿಸಿಕೊಂಡಿದ್ದಾರಲ್ಲದೇ ಇದನ್ನು ಉತ್ತಮವಾಗಿ ನುಡಿಸಬಲ್ಲ 150 ಶಿಷ್ಯಂದಿರನ್ನೂ ತಯಾರು ಮಾಡಿದ್ದಾರೆ!



ಸಾಯಿತೇಜಸ್


ಹತ್ತು ವರ್ಷಗಳ ಹಿಂದೆ ಶಾಲೆಯೊಂದರಲ್ಲಿ ಸಂಗೀತ ಪಾಠ ಮಾಡುತ್ತಿದ್ದಾಗಿನ ಸಂದರ್ಭ. ಮಕ್ಕಳ ರಜಾ ಶಿಬಿರದಲ್ಲಿ ಮೌತ್ ಆರ್ಗನ್ ಅನ್ನು ಕಲಿಸಲು ಆರಂಭಿಸಿದರು. ಆರಂಭದಲ್ಲಿ 15ರಷ್ಟಿದ್ದ ಶಿಷ್ಯಂದಿರ ಸಂಖ್ಯೆ ನಿಧಾನಕ್ಕೆ ಬೆಳೆದು ಈಗ 150ಕ್ಕೆ ತಲುಪಿದೆ. 'ಹಂಸನಾದ ಫೌಂಡಷನ್' ಸ್ಥಾಪಿಸಿ ಹಾರ್ಮೋನಿಕಾ ತರಬೇತಿ ನಡೆಸತೊಡಗಿದರು. ಇವರಲ್ಲಿ ಒಂಬತ್ತು ವರ್ಷದ ಮಕ್ಕಳಿಂದ ಹಿಡಿದು 82ರವರೆಗಿನ ವೃದ್ಧರವರೆಗಿನವರೂ ಇರುವುದು ಹಾರ್ಮೋನಿಕಾ ಸೃಷ್ಟಿಸಿದ ಮೋಡಿಗೆ ಸಾಕ್ಷಿ. ಇವರು ಕಟ್ಟಿರುವ ತಂಡ ದೇಶದಲ್ಲೇ ಮೊದಲ 'ಯೂತ್ ಹಾರ್ಮೋನಿಕಾ ಗ್ರೂಪ್' ಎಂದು ಹೆಸರಾಗಿದೆ.

'75–80ರ ದಶಕದಲ್ಲಿ ಹಾರ್ಮೋನಿಕಾ ಖ್ಯಾತ ವಾದ್ಯ. ನಂತರದ ಕಾಲಘಟ್ಟದಲ್ಲಿ ಕೀ ಬೋರ್ಡ್ ಹಾಗೂ ಇತರ ಕೆಲವು ವಾದ್ಯಗಳು ಬಂದ ಬಳಿಕ ಇದು ಸ್ವಲ್ಪ ಹಿಂದೆ ಬಿತ್ತು. ಈಗ ಫೇಸ್‌ಬುಕ್, ಇನ್‌ಸ್ಟಾಗ್ರಾಂ, ಯೂಟ್ಯೂಬ್ ಹಾಗೂ ಇತರ ಸಾಮಾಜಿಕ ಮಾಧ್ಯಮಗಳ ಮೂಲಕ ಮತ್ತೆ ಜನಪ್ರಿಯತೆ ಗಳಿಸುತ್ತಿದೆ. ಈಗ ದೇಶದಲ್ಲೂ ಇದರ ಹಲವು ಕ್ಲಬ್‌ಗಳು ಇವೆ. ಸಂವಹನ ಜಾಲ ನಿರ್ಮಾಣವಾಗುತ್ತಿದೆ. ತಬಲಾ, ಹಾರ್ಮೋನಿಯಂಗೆ ಹೋಲಿಸಿದರೆ ಇದರ ಕಲಾವಿದರ ಸಂಖ್ಯೆ ಕಡಿಮೆಯೇ ಇದೆ. ಇಂಥ ಸುಂದರ ವಾದ್ಯವನ್ನು ಪ್ರಚಾರ ಮಾಡಬೇಕು. ಮುಂದಿನ ಪೀಳಿಗೆಗೆ ಅದನ್ನು ತಲುಪಿಸಬೇಕು ಎಂಬ ಧ್ಯೇಯ ನನ್ನದು' ಎನ್ನುತ್ತಾರೆ ಸಾಯಿತೇಜಸ್.

'ಸ್ಯಾಕ್ಸೋಫೋನ್‌ನಲ್ಲಿ ಕದ್ರಿ ಗೋಪಾಲನಾಥ್, ತಬಲಾದಲ್ಲಿ ಜಾಕೀರ್ ಹುಸೇನ್... ಹೀಗೆ ಪ್ರತಿ ವಾದ್ಯಗಳಲ್ಲೂ ಪ್ರಖ್ಯಾತ ಕಲಾವಿದರು ಇರುವಂತೆ ಹಾರ್ಮೋನಿಕಾದಲ್ಲೂ ಏಕಿರಬಾರದು ಎಂಬ ಯೋಚನೆ ಬಂತು. ಹೀಗಾಗಿ 'ರೀಡ್ಸ್ ಆ್ಯಂಡ್ ರಾಗಾಸ್' ಎಂಬ ಕಾರ್ಯಕ್ರಮ ನಡೆಸಲು ಆರಂಭಿಸಿದೆವು. ಈ ಕಾರ್ಯಕ್ರಮವನ್ನು ಹಾರ್ಮೋನಿಕಾ ಕಛೇರಿಗಾಗಿಯೇ ಮಾಡಲಾಗುತ್ತದೆ. ಕಲಾವಿದರು 45 ನಿಮಿಷಗಳವರೆಗೆ ವಾದ್ಯ ನುಡಿಸುತ್ತಾರೆ. ಆಗ ಕಲಾವಿದರ ಬಗ್ಗೆ ಜನರಿಗೆ ತಿಳಿಯುತ್ತದೆ. ಗೌರವ ಮೂಡುತ್ತದೆ. ಕಾರ್ಯಾಗಾರಗಳನ್ನೂ ನಡೆಸುತ್ತದೆ. ಇದರ ಸಮಾರೋಪ ಕಾರ್ಯಕ್ರಮಗಳಲ್ಲಿ ವಿದ್ಯಾರ್ಥಿಗಳಿಗೆ ಕಲಿತದ್ದನ್ನು ಪ್ರಸ್ತುತಪಡಿಸುವ ಅವಕಾಶ ನೀಡುತ್ತದೆ. ಇದೇ ಈಗ ಬೆಳೆದುಕೊಂಡು ಬಂದು ದೊಡ್ಡಮಟ್ಟದ ಕಾರ್ಯಕ್ರಮದ ಸ್ವರೂಪ ಪಡೆದಿದೆ. ಈ ವರ್ಷ ಹಿರಿಯ ಹಾರ್ಮೋನಿಕಾ ಕಲಾವಿದರಿಗೆ 'ರಾಗಮಾಲಿಕಾ' ಎಂಬ ಪ್ರಶಸ್ತಿ ನೀಡಲಾಗುತ್ತದೆ. ದೇಶದ ಪ್ರಸಿದ್ಧ ಹಾರ್ಮೋನಿಕಾ ಕಲಾವಿದರನ್ನೂ ಕರೆಸುವ ಯೋಜನೆ ಇದೆ' ಎಂದು ವಿವರಿಸುತ್ತಾರೆ.

ಭಕ್ತಿಗೀತೆ, ಜನಪದ ಸಂಗೀತ ಸೇರಿದಂತೆ ಸಂಗೀತದ ವಿವಿಧ ಪ್ರಕಾರಗಳನ್ನೂ ಹಾರ್ಮೋನಿಕಾ ವಾದ್ಯದಲ್ಲಿ ಪ್ರಯೋಗ ಮಾಡಿದ್ದೇವೆ. ಶಿಷ್ಯೆಯೊಬ್ಬಳು ನುಡಿಸಿದ್ದ ಭಾಗ್ಯದ ಲಕ್ಷ್ಮಿ ಬಾರಮ್ಮ ಹಾಡು ಸಾಮಾಜಿಕ ಮಾಧ್ಯಮಗಳಲ್ಲಿ ವೈರಲ್ ಆಗಿತ್ತು. ಕ್ರೋಮ್ಯಾಟಿಕ್ ಹಾರ್ಮೋನಿಕಾದ ಜೊತೆ ಕಾರ್ಡ್ ಹಾರ್ಮೋನಿಕಾ, ಬೇಸ್ ಹಾರ್ಮೋನಿಕಾ, ಮೆಲೊಡಿಕಾ ಸೇರಿದಂತೆ ಅಪರೂಪದ ವಾದ್ಯಗಳನ್ನು ಬಳಸಿಕೊಂಡು ಸಾಮೂಹಿಕ ಪ್ರಸ್ತುತಿ ನೀಡಿದ ಏಕೈಕ ತಂಡ 'ಹಂಸನಾದ ಫೌಂಡೇಷನ್'. ಕೋವಿಡ್ ಸಂದರ್ಭದಲ್ಲಿ ಆನ್‌ಲೈನ್ ತರಗತಿಗಳನ್ನೂ ನಡೆಸಿದ್ದರಿಂದ ದೇಶದಾದ್ಯಂತ ಕಲಾ ಚಟುವಟಿಕೆ ವಿಸ್ತರಿಸಿದೆ' ಎಂದು ಸಾಯಿತೇಜಸ್ ಮಾಹಿತಿ ನೀಡುತ್ತಾರೆ.

ಹಂಸನಾದ ಫೌಂಡೇಷನ್ ಬೆಂಗಳೂರಿನಲ್ಲಷ್ಟೇ ಅಲ್ಲದೇ ಮುಂಬೈ, ಜೈಪುರ, ಕೋಲ್ಕತ್ತ, ಹೈದರಾಬಾದ್‌ನಲ್ಲಿಯೂ ಕಾರ್ಯಕ್ರಮಗಳನ್ನು ನೀಡಿದೆ. ದೇಶದ ಮೊತ್ತಮೊದಲ ಹಾರ್ಮೋನಿಕಾ ಫ್ಲಾಶ್ ಮಾಬ್ ನಡೆಸಿಕೊಟ್ಟ ಹೆಗ್ಗಳಿಕೆಯೂ ಇದಕ್ಕಿದೆ.



ಹಾರ್ಮೋನಿಕಾ ವೈಭವ

ಬೆಂಗಳೂರಿನ ಮಲ್ಲೇಶ್ವರದ ಸೇವಾ ಸದನದಲ್ಲಿ ಜೂನ್ 3ರಂದು ಸಂಜೆ 4ಕ್ಕೆ 'ಹಾರ್ಮೋನಿಕಾ ವೈಭವ' ಹಾಗೂ 'ರಾಗಮಾಲಿಕಾ' ಪ್ರಶಸ್ತಿ ಪ್ರದಾನ ಸಮಾರಂಭ' ನಡೆಯಲಿದೆ. 75 ಕಲಾವಿದರು ಹಾರ್ಮೋನಿಕಾ ವಾದ್ಯ ನುಡಿಸಲಿದ್ದಾರೆ. ಬೆಂಗಳೂರು, ಪುಣೆ, ಚೆನ್ನೈ, ಕಾನ್ಪುರ ಸೇರಿದಂತೆ ವಿವಿಧ ಪ್ರದೇಶಗಳ ಕಲಾವಿದರು ಬರಲಿದ್ದಾರೆ. ಬೆಂಗಳೂರಿನ ಹೆಸರಾಂತ ಕಲಾವಿದರಾದ ಎ.ಕೆ. ಕೃಷ್ಣಪ್ರಸಾದ್, ಕಿರಣ್ ಮಂದಣ್ಣ ಹಾಗೂ ದೇಬಶಿಶ್ ದತ್ತ ಅವರಿಗೆ 2022ನೇ ವರ್ಷದ 'ರಾಗಮಾಲಿಕಾ' ಪ್ರಶಸ್ತಿಯನ್ನೂ ನೀಡಲಾಗುತ್ತಿದೆ. ಅತಿಥಿಗಳಾಗಿ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಅಧ್ಯಕ್ಷರಾದ ಆನೂರು ಅನಂತಕೃಷ್ಣ, ಹಿರಿಯ ಸಂಗೀತಗಾರರಾದ ವಿದುಷಿ ರೂಪಾ ಶ್ರೀಧರ್, ಸುಕನ್ಯಾ ರಾಮಗೋಪಾಲ್, ಪಂಡಿತ್ ವಿಶ್ವನಾಥ ನಾಕೋಡ ಆಗಮಿಸಲಿದ್ದಾರೆ.

ಟೇಬಲ್ ಟೆನಿಸ್: ತನಿಷ್ಕಾಗೆ ಬೆಳ್ಳಿ ಪದಕ

ಬೆಂಗಳೂರು: ಕರ್ನಾಟಕದ ತನಿಷ್ಕಾ ಕಪಿಲ್ ಕಾಳಭೈರವ್ ಅವರು ಇಂದೋರ್‌ನಲ್ಲಿ ನಡೆಯುತ್ತಿರುವ ಕೆಡೆಟ್ ಮತ್ತು ಸಬ್‌ಜೂನಿಯರ್ ರಾಷ್ಟ್ರೀಯ ಟೇಬಲ್ ಟೆನಿಸ್ ಟೂರ್ನಿಯ 11 ವರ್ಷದೊಳಗಿನ ಬಾಲಕಿಯರ ವಿಭಾಗದ ಬೆಳ್ಳಿ ಪದಕ ಗಳಿಸಿದರು.

ಅಭಯ್ ಪ್ರಶಾಲ್ ಕ್ರೀಡಾಂಗಣಲ್ಲಿ ಶನಿವಾರ ನಡೆದ ಫೈನಲ್ ಹಣಾಹಣಿಯಲ್ಲಿ ತನಿಷ್ಕಾ 10-12, 5-11, 4-11ರಲ್ಲಿ ಅಂಕೋಲಿಕಾ ಚಕ್ರವರ್ತಿ ವಿರುದ್ಧ ಸೋತರು.



ಸಿಂಚನಾ ಗೌಡ

ಸರ್ಫಿಂಗ್: ಫೈನಲ್‌ಗೆ ಇಶಿತಾ, ಸಿಂಚನಾ

ಮಂಗಳೂರು: ಆತಿಥೇಯ ಕರ್ನಾಟಕದ ಇಶಿತಾ ಮಾಳವಿಯಾ ಹಾಗೂ ಸಿಂಚನಾ ಗೌಡ, ಇಲ್ಲಿನ ಪಣಂಬೂರು ಬೀಚ್‌ನಲ್ಲಿ ನಡೆಯುತ್ತಿರುವ ಇಂಡಿಯನ್ ಓಪನ್ ಸರ್ಫಿಂಗ್ ಚಾಂಪಿಯನ್‌ಷಿಪ್‌ನ ಮೂರನೇ ಆವೃತ್ತಿಯ ಫೈನಲ್‌ಗೆ ಲಗ್ಗೆ ಇರಿಸಿದ್ದಾರೆ.

ಗೋವಾದ ಶುಗರ್ ಬನಾರ್ಸೆ ಹಾಗೂ ತಮಿಳುನಾಡಿನ ಸೃಷ್ಟಿ ಸೆಲ್ವಂ ಕೂಡ ಫೈನಲ್ ಪ್ರವೇಶಿಸಿದ್ದಾರೆ. ಪುರುಷರ ವಿಭಾಗದ ಮೊದಲ ಹೀಟ್ಸ್‌ನಲ್ಲಿ ಶ್ರೀಕಾಂತ್ ಡಿ, ಸತೀಶ್ ಸರವಣನ್, ಸೂರ್ಯ ಪಿ, ರುಬಾನ್ ವಿ ಹಾಗೂ ಎರಡನೇ ಹೀಟ್ಸ್‌ನಲ್ಲಿ ರಮೇಶ್ ಬೂದಿಹಾಳ, ಅಜೀಶ್ ಅಲಿ, ಸಂಜಯ ಕುಮಾರ್ ಎಸ್, ಮಣಿಕಂಠನ್ ಎಂ ಆಯ್ಕೆಯಾಗಿದ್ದಾರೆ.

‘ವಿಶ್ವ ಸರ್ಫ್ ಲೀಗ್‌ನಲ್ಲಿ ಸ್ಪರ್ಧಿಸುವ ಹುಮ್ಮಸ್ಸಿನಲ್ಲಿದ್ದೇನೆ’ ಎಂದು ಕೋವಳಂನ 22 ವರ್ಷದ ಸರ್ಫರ್ ರಮೇಶ್ ಬೂದಿಹಾಳ ಕನಸು ಹಂಚಿಕೊಂಡರು. ಭಾನುವಾರ ಪುರುಷರ ಸೆಮಿಫೈನಲ್ ಹಾಗೂ ಫೈನಲ್, ಬಾಲಕಿಯರ ಫೈನಲ್ ನಡೆಯಲಿವೆ.

ಸಂಕ್ಷಿಪ್ತ ಸುದ್ದಿ

ವಿಶ್ವಕಪ್ ಶೂಟಿಂಗ್: ರುದ್ರಾಂಕ್ಷ್ ಮುನ್ನಡೆ

ನವದೆಹಲಿ (ಪಿಟಿಐ): ಭಾರತದ ರುದ್ರಾಂಕ್ಷ್ ಬಾಳಾಸಾಹೇಬ್ ಪಾಟೀಲ್ ಐಎಸ್‌ಎಸ್‌ಎಫ್ ವಿಶ್ವಕಪ್ ಶೂಟಿಂಗ್‌ನಲ್ಲಿ ಎಂಟರಘಟ್ಟ ತಲುಪಿದ್ದಾರೆ.

ಅಜರ್‌ಬೈಜಾನ್‌ನ ಬಾಕುವಿನಲ್ಲಿ ನಡೆಯುತ್ತಿರುವ ಟೂರ್ನಿಯ 10 ಮೀಟರ್ಸ್ ಏರ್ ರೈಫಲ್ ಸ್ಪರ್ಧೆಯಲ್ಲಿ ಅವರು ಅಗ್ರ ಎಂಟು ಮಂದಿಯಲ್ಲಿ ಸ್ಥಾನ ಪಡೆದರು. ಅಂತಿಮ ಸುತ್ತಿನ ಪಂದ್ಯಗಳು ಭಾನುವಾರ ನಡೆಯಲಿವೆ.

ಜೂನಿಯರ್ ವಿಶ್ವಕಪ್‌ನಲ್ಲಿ ತೋರಿದ ಉತ್ತಮ ಲಯವನ್ನು ಇಲ್ಲಿಯೂ ಮುಂದುವರಿಸಿದ ರುದ್ರಾಂಕ್ಷ್ ಅರ್ಹತಾ ಸುತ್ತಿನಲ್ಲಿ ನಾಲ್ಕನೇ ಸ್ಥಾನ ಗಳಿಸಿದರು.

ಗೋವನ್ಸ್‌ಗೆ ಜಯ

ಬೆಂಗಳೂರು: ಸಂಘಟಿತ ಆಟವಾಡಿದ ಗೋವನ್ಸ್ ಎಫ್‌ಸಿ ತಂಡವು ಬಿಡಿಎಫ್‌ಎ ಬಿ ಡಿವಿಷನ್ ಲೀಗ್ ಫುಟ್‌ಬಾಲ್ ಟೂರ್ನಿಯಲ್ಲಿ ಜಯ ಗಳಿಸಿತು.

ಶನಿವಾರ ಇಲ್ಲಿ ನಡೆದ ಪಂದ್ಯದಲ್ಲಿ 3–2ರಿಂದ ಆರ್.ಎಸ್. ಸ್ಪೋರ್ಟ್ಸ್ ತಂಡವನ್ನು ಸೋಲಿಸಿತು. ವಿಜೇತ ತಂಡದ ಪ್ರದೀಯಮ್ ಸುಬ್ಬಾ (7ನೇ ನಿಮಿಷ), ಅಭಿನಯ್ ಚೆಟ್ರಿ (14ನೇ ನಿ.) ಮತ್ತು ಕರಣ್ ತಮಾಂಗ್ (2ನೇ ನಿ.) ಗೋಲು ದಾಖಲಿಸಿದರು. ಆರ್.ಎಸ್. ಸ್ಪೋರ್ಟ್ಸ್ ತಂಡಕ್ಕಾಗಿ ಸಂದೀಪ್ ಸಿ. (34 ಮತ್ತು 46ನೇ ನಿ.) ಗೋಲು ಹೊಡೆದರು. ಮತ್ತೊಂದು ಪಂದ್ಯದಲ್ಲಿ ಡಿವೈಇಎಸ್ ಎಫ್‌ಸಿ 2–2ರಿಂದ ಶ್ರೀಗಜಾನನ ಎಫ್‌ಸಿಯೊಂದಿಗೆ ಡ್ರಾ ಸಾಧಿಸಿತು.

ಚೆಸ್: 343 ತಂಡಗಳ ನೋಂದಣಿ

ಚೆನ್ನೈ(ಪಿಟಿಐ): ಜುಲೈನಲ್ಲಿ ಇಲ್ಲಿ ನಡೆಯಲಿರುವ 44ನೇ ಚೆಸ್ ಒಲಿಂಪಿಯಾಡ್‌ಗೆ 187 ದೇಶಗಳಿಂದ ದಾಖಲೆಯ 343 ತಂಡಗಳು ನೋಂದಾಯಿಸಿಕೊಂಡಿವೆ.

ಜುಲೈ 28ರಿಂದ ಆಗಸ್ಟ್ 10ರವರೆಗೆ ವಿಶ್ವಮಟ್ಟದ ಟೂರ್ನಿ ನಿಗದಿಯಾಗಿದ್ದು, ಮುಕ್ತ ಮತ್ತು ಮಹಿಳಾ ವಿಭಾಗದಲ್ಲಿ ತಂಡಗಳು ಸೆಣಸಲಿವೆ.ವಿಶ್ವ ಚಾಂಪಿಯನ್, ನಾರ್ವೆಯ ಮ್ಯಾಗ್ನಸ್ ಕಾರ್ಲ್‌ಸನ್ ಟೂರ್ನಿಯ ಪ್ರಮುಖ ಆಕರ್ಷಣೆಯಾಗಲಿದ್ದಾರೆ.

‘187 ದೇಶಗಳಿಂದ ಮುಕ್ತ ವಿಭಾಗದಲ್ಲಿ 189 ತಂಡಗಳು ಮತ್ತು ಮಹಿಳಾ ವಿಭಾಗದಲ್ಲಿ 154 ತಂಡಗಳು ನೋಂದಾಯಿಸಿಕೊಂಡಿವೆ’ ಎಂದು ಅಖಿಲ ಭಾರತ ಚೆಸ್ ಫೆಡರೇಷನ್ (ಎಐಸಿಎಫ್) ಕಾರ್ಯದರ್ಶಿ ಮತ್ತು ಟೂರ್ನಿಯ ನಿರ್ದೇಶಕ ಭರತ್ ಸಿಂಗ್ ಚೌಹಾನ್ ಹೇಳಿದ್ದಾರೆ.

ಬ್ಯಾಸ್ಕೆಟ್‌ಬಾಲ್: ಬೆಂಗಳೂರು ಸೌತ್ ಕ್ವಾರ್ಟರ್‌ಫೈನಲ್‌ಗೆ

ಬೆಂಗಳೂರು: ಅಮೋಘ ಆಟವಾಡಿದ ಬೆಂಗಳೂರು ಸೌತ್ ತಂಡ, ಭಾರತ ಬ್ಯಾಸ್ಕೆಟ್‌ಬಾಲ್ ಫೆಡರೇಷನ್ ಆಯೋಜಿಸಿರುವ ಐಎನ್‌ಬಿಎಲ್ 3x3 ಬ್ಯಾಸ್ಕೆಟ್‌ಬಾಲ್ ಲೀಗ್‌ನ 18 ವರ್ಷದೊಳಗಿನ ಮಹಿಳೆಯರ ವಿಭಾಗದ ಕ್ವಾರ್ಟರ್ ಫೈನಲ್ ಪ್ರವೇಶಿಸಿತು.

ಕಂಠೀರವ ಕ್ರೀಡಾಂಗಣದಲ್ಲಿ ಶನಿವಾರ ನಡೆದ 16ರ ಘಟ್ಟದ ಹಣಾಹಣಿಯಲ್ಲಿ ಗುವಾಹಟಿ ತಂಡವನ್ನು ಬೆಂಗಳೂರು 17–9ರಲ್ಲಿ ಮಣಿಸಿತು. ಭಾನುವಾರ ನಡೆಯಲಿರುವ 8ರ ಘಟ್ಟದ ಪಂದ್ಯದಲ್ಲಿ ಬೆಂಗಳೂರು, ಇಂದೋರ್ ವಿರುದ್ಧ ಸೆಣಸಲಿದೆ. ಚೆನ್ನೈ ಸೆಂಟ್ರಲ್ ತಂಡವನ್ನು ಇಂದೋರ್ 21–15ರಲ್ಲಿ ಸೋಲಿಸಿತು. ಡೆಲ್ಲಿಯನ್ನು ಲುಧಿಯಾನ 14–7ರಲ್ಲಿ, ಮುಂಬೈಯನ್ನು ಲಖನೌ 10–8ರಲ್ಲಿ, ಕೊಚ್ಚಿಯನ್ನು ಚೆನ್ನೈ 22–21ರಲ್ಲಿ ಸೋಲಿಸಿತು.